**ಕರ್ನಾಟಕ ವಿಧಾನ ಸಭೆ**

**ಬುಧವಾರ, 25ನೇ ನವೆಂಬರ್ 2015**

**ವಿಷಯಾನುಕ್ರಮಣಿಕೆ**

**(INDEX)**

**1.ಲೋಕಾಯುಕ್ತ ಬಗ್ಗೆ ಚರ್ಚೆ**

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)

**2. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಬಗ್ಗೆ ಮುಂದುವರೆದ ಚರ್ಚೆ.**

1. ವಿಷಯ:ರಾಜ್ಯದಲ್ಲಿನ ಬರಗಾಲ, ರೈತರ ಸಂಕಷ್ಟಗಳ ಬಗ್ಗೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (2-14)

2. ವಿಷಯ:ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ನಗರ ಅಭಿವೃದ್ಧಿ ಸಚಿವರು)
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಶ್ರೀ ಬಿ.ಝಡ್. ಜಮೀರ್ ಅಹ್ಮದ್‌ಖಾನ್
ಶ್ರೀ ಡಿ.ಎನ್.ಜೀವರಾಜ್
ಶ್ರೀ ವಿ.ಸುನೀಲ್ ಕುಮಾರ್
ಶ್ರೀ ಗೋವಿಂದ ಎಂ. ಕಾರಜೋಳ
ಶ್ರೀ ದಿನೇಶ್ ಗುಂಡೂರಾವ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)
ಶ್ರೀ ಕೆ.ಆರ್. ರಮೇಶ್ ಕುಮಾರ್
ಶ್ರೀಮತಿ ವೈ. ರಾಮಕ್ಕ
ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ
ಶ್ರೀಮತಿ ವಿನಿಷಾ ನಿರೋ
ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ)
ಶ್ರೀ ಕೆ.ಜಿ.ಬೋಪಯ್ಯ
ಶ್ರೀ ಎಂ.ಪಿ. ಅಪ್ಪಚ್ಚು ರಂಜನ್
ಶ್ರೀ ಸಿ.ಟಿ.ರವಿ (14-35)

**3. ಶಾಸನ ರಚನೆ**

1.ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ

ಪರ್ಯಾಲೋಚನಾ ಪ್ರಸ್ತಾವ

**ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015**

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಆರ್. ರಮೇಶ್ ಕುಮಾರ್
ಶ್ರೀ ಬಸವರಾಜ ಬೊಮ್ಮಾಯಿ

2. ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ

ಪರ್ಯಾಲೋಚನಾ ಪ್ರಸ್ತಾವ

**ಕರ್ನಾಟಕ ಅರಣ್ಯ ತಿದ್ದುಪಡಿ ವಿಧೇಯಕ, 2015**

ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು)
ಶ್ರೀ ಕೆ.ಜಿ.ಬೋಪಯ್ಯ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

(ವಿಧೇಯಕವು ಅಂಗೀಕರಿಸಲ್ಪಟ್ಟಿತು)

ಅನುಬಂಧ-1 (35-39)

**4. ಮಾನ್ಯ ಸಚಿವರಿಂದ ಹೇಳಿಕೆ**

ವಿಷಯ:ರೇಪ್ ಕೇಸ್‌ನಲ್ಲಿ ಕ್ರಮ ತೆಗೆದುಕೊಂಡಿರುವ ಬಗ್ಗೆ.

ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) (ಗೃಹ ಸಚಿವರ ಪರವಾಗಿ)
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) (39-40)

**5. ಶಾಸನ ರಚನೆ**

ವಿಧೇಯಕದ ಮಂಡನೆಗೆ ಅನುಮತಿ ಕೋರಿಕೆ

**ಕರ್ನಾಟಕ ಕೈಗಾರಿಕಾ ಸೌಲಭ್ಯಗಳ (ತಿದ್ದುಪಡಿ) ವಿಧೇಯಕ, 2015**

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ)

(ವಿಧೇಯಕವನ್ನು ಮಂಡಿಸಲಾಯಿತು)

(ಅನುಬಂಧ-2)

**6. ವರದಿಯನ್ನೊಪ್ಪಿಸುವುದು**

ಶ್ರೀ ಎಸ್.ವೈ.ಗೋಪಾಲಕೃಷ್ಣ (ಅಧ್ಯಕ್ಷರು, ಅಂದಾಜುಗಳ ಸಮಿತಿ)

ವಿಷಯ:ಕರ್ನಾಟಕ ವಿಧಾನಸಭೆಯ ಅಂದಾಜುಗಳ ಸಮಿತಿಯ 2014-15ನೇ ಸಾಲಿನ 4ನೇ ವರದಿ

(ಮಂಡಿಸಲಾಯಿತು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಡಾ:ಎ.ಬಿ.ಮಾಲಕರೆಡ್ಡಿ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ)

ವಿಷಯ: ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನಾ ರಚನಾ ಸಮಿತಿಯ 2014-15ನೇ ಸಾಲಿನ 43ನೇ ವರೆದಿ.

(ಮಂಡಿಸಲಾಯಿತು)

**7.ಪ್ರಶ್ನೋತ್ತರ**

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಎಸ್. ಮಧು ಬಂಗಾರಪ್ಪ 410 (5269)
ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ಶ್ರೀ ಎನ್.ಹೆಚ್. ಕೋನರೆಡ್ಡಿ 412 (5254)
ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ಶ್ರೀ ಶಿವಾನಂದ ಎಸ್. ಪಾಟೀಲ್ 413 (5635)
ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ಶ್ರೀ ಕೆ.ಎಂ.ತಿಮ್ಮರಾಯಪ್ಪ 514 (5985)
ಡಾ: ಎಂ.ಹೆಚ್. ಅಂಬರೀಶ್ (ವಸತಿ ಸಚಿವರು)
ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ 417 (5638)
ಡಾ: ಎಂ.ಹೆಚ್. ಅಂಬರೀಶ್ (ವಸತಿ ಸಚಿವರು)
ಶ್ರೀ ಕೆ.ಎಸ್. ಮಂಜುನಾಥಗೌಡ 418(5658)
ಡಾ: ಎಂ.ಹೆಚ್. ಅಂಬರೀಶ್ (ವಸತಿ ಸಚಿವರು)

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು)

ದಿನಾಂಕ: 25.11.2015ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 28ನೇ ಪಟ್ಟಿಯಲ್ಲಿರುವ 230 ಪ್ರಶ್ನೆಗಳ ಪೈಕಿ 160 ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರವನ್ನು ಮಂಡಿಸಲಾಯಿತು. (ಅನುಬಂಧ-3) (40-41)

**8. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

1.ವಿಷಯ: ಮಹದಾಯಿ ಉಪಯೋಜನೆಯಿಂದ ಕಳಸಾ-ಬಂಡೂರಿ ಯೋಜನೆಯನ್ನು ಕೂಡಲೇ ಜಾರಿಗೊಳಿಸುವ ಬಗ್ಗೆ.

ಶ್ರೀ ಎನ್.ಹೆಚ್.ಕೋನರೆಡ್ಡಿ
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಬಿ.ಆರ್. ಯಾವಗಲ್
ಶ್ರೀ ಜಿ.ಎಸ್. ಪಾಟೀಲ್
ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ
ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)
ಶ್ರೀ ಸಿದ್ಧರಾಮಯ್ಯ (ಮುಖ್ಯ ಮಂತ್ರಿಯವರು) (42-44)

2.ವಿಷಯ: ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಮಕ್‌ಗಳು ಟ್ರ್ಯಾಕ್ಟರ್ ತಯಾರಿಕಾ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರೈತರಿಗೆ ಒತ್ತಾಯ ಪೂರ್ವಕವಾಗಿ ಹಾಗೂ ಅನಾವಶ್ಯಕವಾಗಿ ಟ್ರ್ಯಾಕ್ಟರ್‌ನ ಮೂಲ ಬೆಲೆಗಿಂತ ದುಪ್ಪಟ್ಟು ಬೆಲೆಗೆ ಸಾಲ ಕೊಡಿಸಿಕೊಡುವುದರ ಮೂಲಕ ಮಾರಾಟ ಮಾಡಿ ವಂಚನೆ ಮಾಡುತ್ತಿರುವ ಬಗ್ಗೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ
ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) (44-45)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

3.ವಿಷಯ: ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿ ಅಂಬಾಪುರ ಗ್ರಾಮದ ಸರ್ವೆ ನಂಬರ್ 46 ರಲ್ಲಿರುವ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಮಂಜೂರು ಮಾಡಿರುವ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರ ಪರವಾಗಿ) (45)

**9.ಗಮನ ಸೆಳೆಯುವ ಸೂಚನೆಗಳು**

1.ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣ ಎಡದಂಡೆ ನಾಲೆಗೆ 14 ದಿನಗಳು ನೀರು ಹರಿಸಲು ಕ್ರಮ ಕೈಗೊಳ್ಳುವ ಕುರಿತು.

ಶ್ರೀ ಗುರು ಪಾಟೀಲ ಶಿರವಾಳ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಜಲ ಸಂಪನ್ಮೂಲ ಸಚಿವರ ಪರವಾಗಿ)

2. ಚಿಕ್ಕಬಳ್ಳಾಪುರ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ತಲಾ 5.00 ಕೋಟಿ ರೂ.ಗಳ ಅನುದಾನ ಮಂಜೂರಾಗಿದ್ದು ಹಣ ಬಿಡುಗಡೆಯಾಗದೆ ಕಾಮಗಾರಿಗಳು ಪ್ರಾರಂಭವಾಗ ದಿರುವ ಬಗ್ಗೆ.

ಶ್ರೀ ಎಂ. ರಾಜಣ್ಣ
ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು)(ಯೋಜನೆ, ಸಾಂಖ್ಯಿಕ ಸಚಿವರ ಪರವಾಗಿ)

3. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಚೀಣ್ಯ ಹೋಬಳಿಯ ಸೋಮನಹಳ್ಳಿಯಲ್ಲಿ ಮೊರಾರ್ಜಿ ವಸತಿ ಶಾಲೆಯ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನ ಬಿಡುಗ ಡೆ ಮಾಡುವ ಬಗ್ಗೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎನ್. ಚಲುವರಾಯಸ್ವಾಮಿ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)

4. ರಾಜ್ಯದಲ್ಲಿ ನಿಗದಿತ ಮದ್ಯ ಮಾರಾಟಕ ಗುರಿ ತಲುಪದ ಮದ್ಯದಂಗಡಿ ಮಾಲೀಕರಿಗೆ ದಂಡ ವಿಧಿಸಿ ಕಿರುಕುಳ ನೀಡುತ್ತಿರುವ ಬಗ್ಗೆ.

ಶ್ರೀ ವಿ. ಸುನೀಲ್ ಕುಮಾರ್
ಶ್ರೀ ಮನೋಹರ ಹಚ್. ತಹಶೀಲ್ದಾರ್ (ಅಬಕಾರಿ ಮತ್ತು ಮುಜರಾಯಿ ಸಚಿವರು)

5.ವಿಷಯ: ಮಾಲೂರು ತಾಲ್ಲೂಕಿನ ದಿನ್ನಹಳ್ಳಿ, ಅರಮಾಕನಹಳ್ಳಿ, ತಾಳಕುಂಟೆ ಹಾಗೂ ರಾಂಪುರ ಗ್ರಾಮಗಳಲ್ಲಿನ ರೈತ ರ ಜಮೀನುಗಳಿಗೆ ಎಲ್ಲಾ ರೀತಿಯ ಸರ್ಕಾರಿ ದಾಖಲೆಗ ಳಿದ್ದರೂ ಸಹ, ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಕೆ.ಎಸ್. ಮಂಜುನಾಥಗೌಡ
ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು)

6.ವಿಷಯ:ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ.

ಶ್ರೀ ಸಾ.ರಾ.ಮಹೇಶ್
ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರ ಸಚಿವರು)

7.ವಿಷಯ: ತುಮಕೂರು ತಾಲ್ಲೂಕು ಡಿ.ಕೊರಟಗೆರೆ ಗ್ರಾಮದ ಸರ್ಕಾರಿ ಗೋಮಾಳ ಸರ್ವೆ ನಂಬರ್ 84ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ದಲಿತರಿಗೆ ಮೀಸಲಿಟ್ಟ 33 ಗುಂಟೆ ಜಮೀನನ್ನು ಒತ್ತುವರಿದಾರರಿಂದ ತೆರವುಗೊಳಿಸುವ ಬಗ್ಗೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ಸುರೇಶ್‌ಗೌಡ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರ ಪರವಾಗಿ)

8.ವಿಷಯ:ಕೆ.ಆರ್.ಪೇಟೆ, ಬೂಕನಕೆರೆ ಹೋಬಳಿ ಬಣ್ಣೇನಹಳ್ಳಿ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 129 ಎಕರೆ ಪ್ರದೇಶದಲ್ಲಿಕ ಫೇವರೀಚ್ ಕಂಪನಿಯ ಮೆಗಾ ಫುಡ್ ಪಾರ್ಕ್ ನಿರ್ಮಾಣ ಮಾಡಿರುವ ಜಮೀನಿನಲ್ಲಿ ಕೈಗಾರಿಕೆಯ ನಿರ್ಮಾಣ ಕಾಮಗಾರಿಯು ಇನ್ನೂ ಪ್ರಾರಂಭವಾಗದೇ ಇರುವುದರ ಬಗ್ಗೆ.

ಶ್ರೀ ನಾರಾಯಣಗೌಡ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಪರವಾಗಿ)

9.ವಿಷಯ:ದೇಶದಲ್ಲಿ ಐಸಿಎಸ್ ಸಂಭಾವ್ಯ ದಾಳಿ ಬಗ್ಗೆ ರಾಜ್ಯದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ.

ಶ್ರೀ ವಿ.ಸುನೀಲ್ ಕುಮಾರ್
ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರ ಸಚಿವರು) (ಗೃಹ ಸಚಿವರ ಪರವಾಗಿ)

10.ವಿಷಯ:ರೋನೋ ಚಂಡಮಾರುತದಿಂದ ನಷ್ಟವಾಗಿರುವುದಕ್ಕೆ ಪರಿಹಾರ ಕೊಡುವ ಬಗ್ಗೆ.

ಶ್ರೀ ಎಂ.ಕೃಷ್ಣಾರೆಡ್ಡಿ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರು)

11.ವಿಷಯ:ಟಿ.ಸಿ.ಯಿಂದ ಬೆಂಕಿ ಹತ್ತಿಕೊಂಡಿದ್ದರಿಂದ ಕಬ್ಬು ಬೆಳೆ ನಷ್ಟವಾಗಿರುವ ಬಗ್ಗೆ.

ಶ್ರೀ ಪಿ.ರಾಜೀವ್

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)

12.ವಿಷಯ:ತೊರೇಮಾವಿನಹಳ್ಳಿ ಗ್ರಾಮದಲ್ಲಿರುವ ಸಹಕಾರಿ ಸಂಘದ ಚುನಾವಣೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ.

ಶ್ರೀ ಎಂ.ಟಿ.ಕೃಷ್ಣಪ್ಪ
ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರ ಸಚಿವರು)

13.ವಿಷಯ:ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ ಕಾರ್ಮಿಕರ ಬಗ್ಗೆ.

ಶ್ರೀ ಎಂ.ಜೆ.ಅಪ್ಪಾಜಿ
ಶ್ರೀ ಪಿ.ಟಿ.ಪರಮೇಶ್ವರನಾಯ್ಕ್ (ಕಾರ್ಮಿಕ ರಾಜ್ಯ ಸಚಿವರು)
(45-48)

**10. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

1.ವಿಷಯ: ಬೆಳೆ ಹಾನಿಯ ಬಗ್ಗೆ ಪರಿಹಾರ ಕೊಡುವುದು.
ಶ್ರೀ ಎಂ. ರಾಜಣ್ಣ
ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು)

2.ವಿಷಯ:ಚಿರತೆಯನ್ನು ಹಿಡಿಯುವ ಬಗ್ಗೆ.
ಶ್ರೀ ಯು.ಬಿ.ಬಣಕಾರ್ (49)

**11.ಅನುಬಂಧ- 1, 2 ಮತ್ತು 3.**

***********

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದಿ:25-11-2015-11.10(2)-ಎ.ಜೆ&ವಿ.ಆರ್

**<u>ಕರ್ನಾಟಕ ವಿಧಾನ ಸಭೆ</u>**

ಬುಧವಾರ, 25ನೇ ನವೆಂಬರ್ 2015 ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರಾದ **ಶ್ರೀ ಕಾಗೋಡು ತಿಮ್ಮಪ್ಪ** ರವರು ಪೀಠವನ್ನು ಅಲಂಕರಿಸಿದರು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಸದನವು ಬೆಳಿಗ್ಗೆ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಯಲ್ಲಿದ್ದರು)**

ಅಧ್ಯಕ್ಷರು: ದಿನಾಂಕ: 25-11-2015 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದಸ್ಯರಾದ ಶ್ರೀ ಜಿ.ಟಿ.ದೇವೇಗೌಡರವರಿಗೆ ಜನ್ಮದಿನದ ಶುಭಾಶಯಗಳು, ಇವರಿಗೆ ಭಗವಂತ ಆಯುರಾರೋಗ್ಯ, ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ: ಮಾನ್ಯ ಅಧ್ಯಕ್ಷರೆ, ಉಪ ಲೋಕಾಯುಕ್ತರ ಬಗ್ಗೆ ವಿನಾಕಾರಣ ತೇಜೋವಧೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಲೋಕಾಯುಕ್ತ ಭಾಸ್ಕರ್‌ರಾವ್ ರವರ ಮೇಲೆ ಇದ್ದಂತಹ corruption charges ಹಾಗೂ ಮತ್ತೊಂದು ಇತ್ತು ಅದಕ್ಕೆ counter ಮಾಡುವುದು ಇಡೀ ಲೋಕಾಯುಕ್ತ ಸಂಸ್ಥೆಯನ್ನು ಇವರು ಮುಚ್ಚುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು: ತೇಜೋವಧೆ ಮಾಡುವುದಕ್ಕೆ ಎಂಬ ಭಾಷೆಯನ್ನು ಬಳಸುವುದಕ್ಕೆ ಹೋಗಬೇಡಿ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರ ಇಡೀ ಲೋಕಾಯುಕ್ತ ಸಂಸ್ಥೆಯನ್ನೇ ಮುಚ್ಚಿಹಾಕುವುದಕ್ಕೆ ಹೊರಟಿದೆ. ಭ್ರಷ್ಟಾಚಾರದ ಎಲ್ಲಾ ಹಗರಣಗಳು ಮುಚ್ಚಿ ಹೋಗಬೇಕು ಎಂಬುದೇ ಇವರ ಉದ್ದೇಶವಾಗಿದೆ. ಬೇರೆ ಯಾವುದೇ ಉದ್ದೇಶವಿಲ್ಲ. ಇವರಿಗೆ ಈ ದುರುದ್ದೇಶವಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: As a friend ಆಗಿ ನಾನು ಒಂದು ಮಾತನ್ನು ಹೇಳುತ್ತೇನೆ. ಉಪ ಲೋಕಾಯುಕ್ತರು ಪ್ರೆಸ್‌ಗೆ ಹೇಳಿಕೆ ಕೊಟ್ಟಿರುವುದು ಸರಿಯೇ? Is it a culture?

ಶ್ರೀ ಜಗದೀಶ್ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಮತ್ತೆ ಅವರನ್ನು defend ಮಾಡುವವರು ಯಾರು? ಈ ರೀತಿ ವಿನಾಕಾರಣ ಆಪಾದನೆ ಮಾಡಿ ಅವರನ್ನು ತೇಜೋವಧೆ ಮಾಡುವ ಕೆಲಸ ಮಾಡಿದರೆ . . . . . ಅದು ಬಿಟ್ಟು ಸರ್ಕಾರ ಇದನ್ನು ಮುಚ್ಚು ಹಾಕುವುದಕ್ಕೆ ಹೊರಟಿದೆ. ಈ ರೀತಿ ತೇಜೋವಧೆ ಮಾಡುವಂತದ್ದು, ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚು ಹಾಕುವಂತಹ ಪ್ರಯತ್ನವಿದೆ ಅದನ್ನು withdraw ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಅದಕ್ಕೆ ಉತ್ತರ ಕೊಡಿಸುತ್ತೇನೆ. ಈಗ ನಾನು ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ನೀವು ಕೊಟ್ಟಾಗ ಏನು ವಿಧಾನವನ್ನು ಅನುಸರಿಸಿದ್ದೇನೆ, ಅದೇ ತರಹದ ವಿಧಾನವನ್ನು ನಾನು ಅನುಸರಿಸುತ್ತೇನೆ. ಅದಕ್ಕೋಸ್ಕರ ನಾನು ಅದನ್ನು ಪರಿಶೀಲನೆ ಮಾಡಿ ಮತ್ತೇ ನಿಮ್ಮ ಜೊತೆಗೆ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ : ಮಾನ್ಯ ಅಧ್ಯಕ್ಷರೆ, ನಮ್ಮ ಜೊತೆ ಸಹ consultation ಸ್ವಲ್ಪ ಮಾಡಿ. ಏಕೆಂದರೆ, last time ನಾವು submit ಮಾಡಬೇಕಾದಾಗ consultation ಏನು ಮಾಡಿದ್ದೇವೆ, ಆ process ಎಲ್ಲವನ್ನೂ ದಯವಿಟ್ಟು ಮಾಡಿ.

ಅಧ್ಯಕ್ಷರು : ನಿಮ್ಮ ಜೊತೆ ಮತ್ತು ಅವರ ಜೊತೆ consultation ಮಾಡುತ್ತೇನೆ. ಈಗಾಗಲೇ ಪ್ರಾರಂಭ ಮಾಡಿಕೊಂಡಿರುತ್ತೇನೆ. ಏಕೆಂದರೆ ಈ busy ಇರುವುದರಿಂದ ಸೂಕ್ಷ್ಮವಾಗಿ ನಾನು ಮತ್ತು ಅಧ್ಯಕ್ಷರು ಮಾಡಿದ್ದೇವೆ. ಇದನ್ನು ನಾನೇ ಕುಳಿತುಕೊಂಡು ಎಲ್ಲವನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ : ಸಾರ್, ತಾವು ಈಗ ಏನು consultation ಮಾಡುತ್ತೇವೆಂದು ಭರವಸೆಯನ್ನು ನೀಡಿ ನ್ಯಾಯಯುತವಾದ ನಿರ್ಣಯವನ್ನು ಕೈಗೊಂಡಿದ್ದೀರಿ. ಆ ಒಂದು ಭರವಸೆ ಮೇಲೆ withdraw ಮಾಡುತ್ತಿದ್ದೇವೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಬಾವಿಯಿಂದ ಹೊರ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು.)

ಅಧ್ಯಕ್ಷರು : Ok, Thank you, ಈಗ ಕುಮಾರಸ್ವಾಮಿಯವರೇ, ಮಾತನಾಡಿ. ಈಗ ಸಮಯದ ಅಭಾವವಿದೆ.

ಶ್ರೀ ಜಗದೀಶ್ ಶೆಟ್ಟರ : ನಾನು ಕೂಡ ಕೆಲವೊಂದು ಮಹತ್ವದ ವಿಷಯಗಳ ಬಗ್ಗೆ ಚರ್ಚೆ ಮಾಡಲು ಮನವಿಯನ್ನು ನೀಡಿರುತ್ತೇನೆ. ಹಾಗಾಗಿ ಕುಮಾರಸ್ವಾಮಿಯವರು ಮಾತನಾಡಿದ ಕೂಡಲೇ ಆ ವಿಚಾರಗ ಳನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಕೊಟ್ಟಿದ್ದೀರಿ. ಅವರು ಮಾತನಾಡಿ ಮುಗಿದ ಕೂಡಲೇ ತೆಗೆದುಕೊಳ್ಳೋಣ. ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, Rule 69 ರಲ್ಲಿ ಬರಗಾಲ ಮತ್ತು ರೈತರ ಆತ್ಮಹತ್ಯೆಯ ವಿಚಾರವಾಗಿ . . . . .

ಅಧ್ಯಕ್ಷರು : ಮಾತನಾಡಲು ನಿಮಗೆ ಎಷ್ಟು ಗಂಟೆಗಳ ಕಾಲಾವಕಾಶ ಬೇಕು?

(ಮುಂದು . . . .)

ದಿನಾಂಕ:25.11.2015-11.20(03)-GM-PS.

**ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ (ಮುಂದುವರೆದುದು)**

ವಿಷಯ : ರಾಜ್ಯದಲ್ಲಿನ ಬರಗಾಲ, ರೈತರ ಸಂಕಷ್ಟಗಳ ಬಗ್ಗೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ರಾಮನಗರ) :- ಮಾನ್ಯ ಅಧ್ಯಕ್ಷರೆ, ಇವತ್ತಿನ ದಿನ ಬರಗಾಲ ಮತ್ತು ರೈತರ ಆತ್ಮಹತ್ಯೆಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ನನಗೆ ಅವಕಾಶ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಟ್ಟದ್ದಕ್ಕಾಗಿ ಮೊದಲನೆಯದಾಗಿ ತಮಗೆ ನನ್ನ ಗೌರವಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಅಧ್ಯಕ್ಷರು: ಅದೆಲ್ಲ ಏನು ಬೇಡ ರೀ. ನಮ್ಮ ಮೇಲಿನ ಸಿಟ್ಟು ಹೋಗಿದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಹೋಗಿದೆ ಅಧ್ಯಕ್ಷರೆ. ನಿಮ್ಮ ಮೇಲೆ ಸಿಟ್ಟಿಲ್ಲ ಅಧ್ಯಕ್ಷರೆ.

ಶ್ರೀ ಎಂ.ಟಿ.ಕೃಷ್ಣಪ್ಪ: ನೀವು ಸಮಯ ಕೊಟ್ಟ ಮೇಲೆ ಸಿಟ್ಟು ಹೋಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಬರಗಾಲ ಮತ್ತು . . .

ಅಧ್ಯಕ್ಷರು: ಒಳ್ಳೆ ಪೀಠದಲ್ಲಿ ನಾನು ಕುಳಿತುಕೊಂಡಿದ್ದೇನೆ ನೋಡಿ. ಕುಮಾರಸ್ವಾಮಿಯವರೆ ಆ ರೀತಿಯಲ್ಲ, ನಮಗೆ ಇದೆಲ್ಲ ಇಡಿಸುವುದಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಆ ಪೀಠದಲ್ಲಿ ಕುಳಿತುಕೊಂಡು ಕೆಲಸ ಮಾಡುವುದೆಷ್ಟು ಕಷ್ಟ ಎಂದು ನಮಗೂ ಅದರ ಅರಿವಿದೆ ಅಧ್ಯಕ್ಷರೆ. ಆದರೂ ಎಲ್ಲೋ ಒಂದೊಂದು ಬಾರಿ ಮನುಷ್ಯನ ಸಹಜ ಗುಣ, ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾವೂ ಒಂದೊಂದು ಬಾರಿ ದಾರಿ ತಪ್ಪಿ ಏನಾದರೊಂದು ಮಾತು ಹೇಳಿದ್ದರೆ ನಿಮ್ಮ ಮನಸ್ಸಿಗೆ ಅದರಿಂದ ನೋವಾಗಿದ್ದರೆ, ನಿಮ್ಮ ಮನಸ್ಸಿನಲ್ಲಿದ್ದರೆ ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಛೇ. . . . ಛೇ. . . . ಆ ರೀತಿ ಏನೂ ಇಲ್ಲಪ್ಪ. ಆ ವಿಷಯವನ್ನೆಲ್ಲಾ ಹೆಚ್ಚು ಎಳೆಯುವುದಕ್ಕೆ ಹೋಗಬಾರದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇವತ್ತು ಬರಗಾಲ ಮತ್ತು ರೈತರ ಆತ್ಮಹತ್ಯೆಯ ವಿಷಯದಲ್ಲಿ ಗೌರವಾನ್ವಿತ ವಿರೋಧ ಪಕ್ಷದ ನಾಯಕರಾಗಿರುವಂಥ ಜಗದೀಶ್ ಶೆಟ್ಟರ್‌ರವರ ಆದಿಯಾಗಿ ಬಿ.ಆರ್.ಪಾಟೀಲ್‌ರವರು, ಪುಟ್ಟಣ್ಣಯ್ಯರವರು, ರಾಜೀವ್‌ರವರು ಮತ್ತು ನಡಹಳ್ಳಿಯವರು ಹಾಗೂ ನಮ್ಮ ಹಲವಾರು ಜನ ಗೌರವಾನ್ವಿತ ಸದಸ್ಯರುಗಳು ಇವತ್ತು ಸದನ ಮತ್ತು ಸರ್ಕಾರದ ಗಮನ ಸೆಳೆಯುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ರಾಜ್ಯದಲ್ಲಿ ಕಳೆದ 4-5 ವರ್ಷಗಳಿಂದ ಸತತವಾಗಿ ಒಂದಲ್ಲಾ ಒಂದು ರೀತಿಯಲ್ಲಿ ಅದು ಅತಿವೃಷ್ಟಿಯಿರಬಹುದು ಅಥವಾ ಅನಾವೃಷ್ಟಿಯಿರಬಹುದು ಎರಡೂ ರೀತಿಯ ಸಮಸ್ಯೆಗಳನ್ನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಮ್ಮ ರಾಜ್ಯದಲ್ಲಿ ರೈತ ಸಮುದಾಯ ಅದರ ಪೆಟ್ಟಿನಲ್ಲಿದ್ದಾರೆ. ಪ್ರಕೃತಿಯ ಅಸಹಕಾರದಿಂದ ರೈತರು ಇವತ್ತು ಅತ್ಯಂತ ಸಂಕಷ್ಟಕ್ಕೊಳಗಾಗಿರುವಂಥ ಪರಿಸ್ಥಿತಿಗಳನ್ನು ನಾವು ಕಾಣುತ್ತಿದ್ದೇವೆ.

ಅಧ್ಯಕ್ಷರು: ಪ್ರಕೃತಿ ಸಹಕಾರ ಕೊಡುತ್ತೇನೆಂದು ಯಾವಾಗಲಾದರೂ ಹೇಳಿತ್ತೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಪ್ರಕೃತಿ ಸಹಕಾರ ಕೊಟ್ಟರೆ ನಾವು ಉಳಿಯುತ್ತೇವೆ.

ಅಧ್ಯಕ್ಷರು: ಆ ರೀತಿಯಲ್ಲ, ಅದೆಲ್ಲವೂ ಪ್ರಕೃತಿಯ ನಿಯಮ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಪ್ರಕೃತಿ ಅಸಹಕಾರದಲ್ಲಿ, ಅದಕ್ಕೆ ನಾವು ತಲೆಬಾಗಲೇಬೇಕು. ಇಂಥ ಪರಿಸ್ಥಿತಿಯಲ್ಲಿ ನಮ್ಮ ರೈತರ ಸಮಸ್ಯೆಗಳ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಎಷ್ಟರಮಟ್ಟಿಗೆ ಕೃಷಿಕರನ್ನು ಈ ಸಂಕಷ್ಟದಿಂದ ಪಾರು ಮಾಡುವಂಥ ನಿಟ್ಟಿನಲ್ಲಿ ಏನೇನು ಕಾರ್ಯಕ್ರಮಗಳಾಗಿವೆ ಎನ್ನುವ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತಾ ಸದನದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ ಮತ್ತು ಈ ವರ್ಷದ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ನಾವು ಚರ್ಚೆ ಮಾಡುವುದಾದರೆ; ಕಳೆದ 2014ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಬಿದ್ದಂಥ ಆಲಿಕಲ್ಲು ಮಳೆಯಿಂದ ಹಾನಿಯಾಗಿರುವ ಬಗ್ಗೆ ರಾಜ್ಯ ಸರ್ಕಾರದಿಂದ ವಿವರವಾದ ಒಂದು ಮನವಿಯನ್ನು ವರದಿ ರೂಪದಲ್ಲಿ ಮಾರ್ಚ್ ತಿಂಗಳಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಅದರ ಪ್ರಕಾರ ರಾಜ್ಯದಲ್ಲಿ 2014ರಲ್ಲಿ ಸುಮಾರು 600 ಕೋಟಿ ರೂಪಾಯಿಗಳಿಗೂ ಮಿಗಿಲಾಗಿ ನಷ್ಟವಾಗಿರುವ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ರೈತರ Agriculture and Horticulture crops ಗೆ ಸಂಬಂಧಪಟ್ಟಂತೆ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಆದ ಅನಾಹುತಗಳ ಬಗ್ಗೆ 691 ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂದು estimateನ್ನು ಕಳುಹಿಸಿದ್ದಾರೆ. 2014ರಲ್ಲಿ SDRF norms ಪ್ರಕಾರ ಕೇಂದ್ರ ಸರ್ಕಾರಕ್ಕೆ 109 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಬೇಕೆಂದು ರಾಜ್ಯ ಸರ್ಕಾರದಿಂದ ಒಂದು ಪ್ರಸ್ತಾವನೆ ಹೋಗಿದೆ. ನಂತರ, ಅಕ್ಟೋಬರ್ ತಿಂಗಳಿನಲ್ಲಿ ಮತ್ತೆ ಆಗಸ್ಟ್ ತಿಂಗಳಿನಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಉದಾಹರಣೆಗೆ ಗುಲ್ಬರ್ಗಾ, ರಾಯಚೂರು ಇತ್ಯಾದಿ ಭಾಗಗಳಲ್ಲಿ ಹೆಚ್ಚುವರಿ ಮಳೆಯಿಂದ ಆದಂಥ ಅನಾಹುತಗಳ ಬಗ್ಗೆ ಮತ್ತೊಂದು estimateನ್ನು ಕಳುಹಿಸಿದರು.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸುಮಾರು 593 ಕೋಟಿ ರೂಪಾಯಿಗಳ damagesಗೆ ಸಂಬಂಧಪಟ್ಟಂತೆ ಒಂದು ಪ್ರಸ್ತಾವನೆಯನ್ನು 2014ನೇ ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅಂದು ರಾಜ್ಯ ಸರ್ಕಾರ 62 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಕೇಂದ್ರ ಸರ್ಕಾರಕ್ಕೆ SDRF schemeನಲ್ಲಿ 348 ಕೋಟಿ ರೂಪಾಯಿಗಳ ಅನುದಾನವನ್ನು ತಕ್ಷಣವೇ ಕೊಡಬೇಕೆಂದು ರಾಜ್ಯ ಸರ್ಕಾರದಿಂದ ಮನವಿಯನ್ನು ಸಲ್ಲಿಸಿದ್ದಾರೆ. ನಾನು ಸುದೀರ್ಘವಾಗಿ ಎಲ್ಲಾ ಮಾಹಿತಿಯನ್ನು ಇಡುವುದಕ್ಕೆ ಹೋಗುವುದಿಲ್ಲ. ನಾನು ಏತಕ್ಕಾಗಿ ಈ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆಂದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಕ್ಕೂ ಮತ್ತು ಈ ರಾಜ್ಯದಲ್ಲಿ ನಡೆದಿರುವಂಥ ಅನಾಹುತಗಳೆರಡಕ್ಕೂ ಒಂದಕ್ಕೊಂದು ಸಂಬಂಧವಿದೆ. ರೈತರ ಆತ್ಮಹತ್ಯೆ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಈ ಎರಡೂ ಮನವಿಯ ಮೇರೆಗೆ 2014ರಲ್ಲಿ SDRF ಅನುದಾನ ನಮಗೆ ಕೊಡಲೇಬೇಕಾಗಿರುವಂಥ ಅನುದಾನ ಮತ್ತು NDRFನಿಂದ ಎರಡೂ ಸ್ಕೀಂಗಳಲ್ಲಿ ಆಲೀಕಲ್ಲು ಮಳೆಗೆ 82 ಕೋಟಿ ಮತ್ತು ಬರಕ್ಕೆ 188 ಕೋಟಿ ಮತ್ತು SDRFನಿಂದ ಕೊಡುವಂಥ ಹಣ 146 ಕೋಟಿ ಮತ್ತು ರಾಜ್ಯ ಸರ್ಕಾರದ 25% ಹಣ 36 ಕೋಟಿ ರೂಪಾಯಿಗಳು. ಈ ಹಣ ಬಿಡುಗಡೆಯಾಗಿರುವ ಬಗ್ಗೆ ಜಗದೀಶ್ ಶೆಟ್ಟರ್‌ರವರು ಸದನದಲ್ಲಿ ಮಾತನಾಡುವಾಗ ಹೇಳಿದರು. ಈಗಾಗಲೇ 521 ಕೋಟಿ ಹಣ ಬಿಡುಗಡೆ ಮಾಡಿರುವುದರಲ್ಲಿ ಕೇವಲ 36 ಅಥವಾ 38 ಕೋಟಿ ಹಣ ಖರ್ಚು ಮಾಡಿದ್ದಾರೆನ್ನುವ ವಿಷಯವನ್ನು ಪ್ರಸ್ತಾಪ ಮಾಡಿದರು. ನಂತರ, ಸೆಪ್ಟೆಂಬರ್ 2014ರಲ್ಲಿ ರಾಜ್ಯ ಸರ್ಕಾರದಿಂದ ಮತ್ತೊಂದು ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆಗಸ್ಟ್ ತಿಂಗಳಿನಲ್ಲಿ flood ಆಗಿರುವುದಕ್ಕೆ ಸೆಪ್ಟೆಂಬರ್ 2014ರಲ್ಲಿ ಮತ್ತೊಂದು ಮನವಿಯನ್ನು ಕೊಟ್ಟಿದ್ದಾರೆ. ಅದಾದ ಮೇಲೆ ಅಕ್ಟೋಬರ್ 2014ರಲ್ಲಿ ಬರಗಾಲದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮತ್ತೊಂದು ಮನವಿಯನ್ನು ಕೊಟ್ಟಿದ್ದಾರೆ. ಆ ಮನವಿಯಲ್ಲಿ total estimated loss in agriculture and horticulture cropನಿಂದ ರೈತರು ಬೆಳೆದಿರುವ ಬೆಳೆ ನಷ್ಟವಾಗಿರುವ ಬಗ್ಗೆ 3,589 ಕೋಟಿ ರೂಪಾಯಿ ಎಂದು estimate ಮಾಡಿದ್ದಾರೆ. 2014ರಲ್ಲಿ draught ಆದಂಥ ಘಟನೆಯೊಳಗೆ SDRFನಲ್ಲಿ Relief ಕೇಳಿರುವುದು 779 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಡಿ ಎಂದು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

assistance ಕೇಳಿದ್ದಾರೆ. ನಂತರ, 2015ರ ಏಪ್ರಿಲ್ ತಿಂಗಳಿನಲ್ಲಿ ಪುನ: ಆಲಿಕಲ್ಲು ಮಳೆಯಾಯಿತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪುನ: claim ಮಾಡಿರುವುದು estimate loss ಆಗಿರುವುದರ ಬಗ್ಗೆ ಮಾಹಿತಿಯನ್ನು ಕೊಡುತ್ತಾ, ಮತ್ತೆ ಈ ಬಾಬ್ತಿಗೆ 422 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಅಧ್ಯಕ್ಷರು: ಕುಮಾರಸ್ವಾಮಿಯವರೆ, ನೀವು ಹಿರಿಯ ನಾಯಕರಾಗಿದ್ದೀರಿ. ಬರ ಪರಿಸ್ಥಿತಿಯ ವಸ್ತುಸ್ಥಿತಿ ರಾಜ್ಯದಲ್ಲಿ ಏನಿದೆ, ಇದನ್ನು ಮೊದಲು ವಿವರಿಸಿ ಹೇಳಿ, ನಂತರ ಎಷ್ಟು ಹಣ ಕೊಡಬೇಕಾಗಿತ್ತು? ಯಾರಿಗೆ ಎಷ್ಟು ಹಣ ಕೊಟ್ಟಿದ್ದಾರೆ, ಏಕೆ ಕೊಟ್ಟಿಲ್ಲ, ಕೇಂದ್ರ ಸರ್ಕಾರ ಎಷ್ಟು ಕೊಟ್ಟಿದೆ ಎನ್ನುವ ರೀತಿಯಲ್ಲಿ ಹೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾಹಿತಿಗಳನ್ನು ನೀಡುತ್ತಾ, ಈ ವಿಷಯದ ಬಗ್ಗೆ ಏತಕ್ಕಾಗಿ ಸದನದ ಗಮನ ಸೆಳೆಯುತ್ತಿದ್ದೇನೆಂದರೆ, 2 ವರ್ಷದಲ್ಲಿ ಕೃಷಿ ವಲಯದಲ್ಲಿ ಆಗಿರುವಂಥ ನಷ್ಟದ ಬಗ್ಗೆ ಹೇಳುತ್ತಿದ್ದೇನೆ. ಸರ್ಕಾರವೇ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವಂಥ ವರದಿ ಬಗ್ಗೆ ಗಮನ ಸೆಳೆಯುತ್ತಿದ್ದೇನೆ. ರೈತರ ಬೆಳೆ ಎಷ್ಟರ ಮಟ್ಟಿಗೆ ನಷ್ಟವಾಗಿದೆ ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆ. 422 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ 2015ರ ಏಪ್ರಿಲ್ ತಿಂಗಳಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಮನವಿ. ನಂತರ ಆಗಸ್ಟ್‌ನಲ್ಲಿ ಮತ್ತೆ ಬರಗಾಲದ ಬಗ್ಗೆ ಒಂದು ವರದಿಯನ್ನು ಕೊಟ್ಟರು. ಪುನ: modified ವರದಿಯನ್ನು ಮತ್ತೆ ಕೊಟ್ಟಿದ್ದಾರೆ. ಆಗ SDRFನಲ್ಲಿ 3,800 ಕೋಟಿ ರೂಪಾಯಿಗಳ assistanceನ್ನು ಕೇಳಿದ್ದಾರೆ. ಈ ವರ್ಷ ರೈತರು ಬೆಳೆದಿರುವಂಥ agriculture and horticulture ಬೆಳೆಯಲ್ಲಿ drought ನಿಂದ ಆಗಿರುವಂಥ ನಷ್ಟ 11,037 ಕೋಟಿ ರೂಪಾಯಿಗಳು.

(ಮುಂದು. . . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 / 11.30(04) MPL-PS

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು. . . .) :**

ಮಾನ್ಯ ಅಧ್ಯಕ್ಷರೆ, ಈ ವರ್ಷ ಬರಗಾಲದಿಂದಾಗಿ ರೈತರು ಬೆಳೆದ agriculture ಮುತ್ತು horticulture crop ನಲ್ಲಿ ಸುಮಾರು 11,037 ಕೋಟಿ ರೂ. ನಷ್ಟವಾಗಿದೆ. ಕಳೆದ ವರ್ಷದಿಂದ total estimate ತೆಗೆದುಕೊಂಡಾಗ ರಾಜ್ಯದಲ್ಲಿ ರೈತರ ಬೆಳೆ ನಷ್ಟದ ಪ್ರಮಾಣ ಸುಮಾರು 22 ಸಾವಿರ ಕೋಟಿ ರೂ.ಗಳಿಗೂ ಮಿಗಿಲಾಗಿದೆ. ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಪರಿಣಾಮ ತೋಟಗಾರಿಕೆ ಬೆಳೆ ಮತ್ತು ಕೃಷಿ ಬೆಳೆಯಲ್ಲಿ ಆಗಿರುವ ನಷ್ಟ ಸುಮಾರು 22 ಸಾವಿರ ಕೋಟಿ ರೂ. ಈ ನಷ್ಟದ ಬಗ್ಗೆ ಕೇಂದ್ರಸರ್ಕಾರದ ಗಮನವನ್ನು ಏನು ಸೆಳೆದಿದ್ದಾರೆ, ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಕೇಂದ್ರ ಮತ್ತು ರಾಜ್ಯಸರ್ಕಾರದಿಂದ. ಕೃಷಿ ವಲಯದಲ್ಲಿ ಇಷ್ಟು ನಷ್ಟ ಅನುಭವಿಸಿರುವ ರೈತರ ನೆರವಿಗೆ ರಾಜ್ಯಸರ್ಕಾರದಿಂದ ಅವರೇ ಸದನದಲ್ಲಿ ಮಂಡನೆ ಮಾಡಿರುವುದು 2015-ಏಪ್ರಿಲ್-ಮೇ ತಿಂಗಳಿನಲ್ಲಿ ಆದಂತಹ ಆಲಿಕಲ್ ಮಳೆಯಿಂದ ಆದಂತಹ ಅನಾಹುತದಲ್ಲಿ SDRF ನಿಂದ ಕೇಂದ್ರದ ಪಾಲು 207 ಕೋಟಿ. ರೂ. ರಾಜ್ಯದ ಪಾಲು 69 ಕೋಟಿ ರೂ.ಗಳು ಒಟ್ಟಾರೆ 276 ಕೋಟಿ ರೂ. ಎಂದು ತೋರಿಸಿದ್ದಾರೆ. ರಾಜ್ಯಸರ್ಕಾರ ಆಯವ್ಯಯದಲ್ಲಿ ನಿಗದಿ ಪಡಿಸಿರುವ ಹೆಚ್ಚುವರಿ ಅನುದಾನ 100 ಕೋಟಿ ರೂ. 376 ಕೋಟಿ ರೂ. ಒಟ್ಟು ಅನುದಾನ ಈ ಪರಿಹಾರಕ್ಕೆ ಬಿಡುಗಡೆ ಆಗಿದೆ. NDRF ನಲ್ಲಿ ಕೇಂದ್ರಸರ್ಕಾರದಿಂದ 207 ಕೋಟಿ ಮತ್ತು ಇನ್ನೊಂದು 105 ಕೋಟಿ. ಒಟ್ಟಾರೆ 312 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಇಂದು ರಾಜ್ಯಸರ್ಕಾರ 2015-16 ಕ್ಕೆ 08.10.2015 ರಲ್ಲಿ ಅನುದಾನ ಬಿಡುಗಡೆ ಮಾಡಿರುವ ಕುರಿತು ಒಂದು ವಿವರಣೆ ಕೊಟ್ಟಿದ್ದಾರೆ. ಅದರಲ್ಲಿ 521 ಕೋಟಿ ರೂ. ಬಿಡುಗಡೆ ಮಾಡಿದ್ದೇವೆಂದು ತೋರಿಸಿದ್ದಾರೆ. ಮತ್ತೆ ಕೇಂದ್ರ ಸರ್ಕಾರ 1500 ಕೋಟಿ ರೂ. ಗಳನ್ನು ಕೊಡುವುದಾಗಿ ಹೇಳಿದ್ದಾರೆ, ಆದರೆ, ಇನ್ನೂ ಹಣ ಬಿಡುಗಡೆಯಾಗಿಲ್ಲ ಎಂಬ ಮಾಹಿತಿಯನ್ನು ಇಟ್ಟಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication

ರೈತರಿಗೆ 23 ಸಾವಿರ ಕೋಟಿ ರೂ. ಬೆಳೆ ನಷ್ಟ ಎಂದು ಏನು estimate ಆಗಿದೆ, ರೈತನಿಗೆ ನಾವು input subsidy ಕೊಡುವುದು ಏನಿದೆ, ಅದರ ಪ್ರಕಾರವೇ ರಾಜ್ಯಸರ್ಕಾರ ನಮ್ಮಲ್ಲಿರುವ ಮಾಹಿತಿಗಳ ಪ್ರಕಾರ input subsidy ಹಣವನ್ನೂ ರೈತರಿಗೆ ಕೊಡಲು ಕಳೆದೆರಡು ವರ್ಷದಲ್ಲಿ ಸಾಧ್ಯವಾಗಿಲ್ಲ. Input subsidy ಗೆ ಸಂಬಂಧಪಟ್ಟಂತೆ ಯಾವ ರೀತಿ ರಾಜ್ಯಸರ್ಕಾರ ಕೆಲಸ ನಿರ್ವಹಿಸುತ್ತಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವಿಷಯದಲ್ಲಿ ಎಷ್ಟರಮಟ್ಟಿಗೆ ರಾಜ್ಯಸರ್ಕಾರ ಗಮನ ಕೊಟ್ಟಿದ್ದಾರೆ? ಕೇಂದ್ರಸರ್ಕಾರ ಇಂತಹ ವಿಷಯದಲ್ಲಿ ಎಷ್ಟರಮಟ್ಟಿಗೆ ಗಂಭೀರವಾಗಿ ತೆಗೆದುಕೊಂಡಿದೆ? ನಾನು 04.11.2015 ರ ಬೀದರ್ ಜಿಲ್ಲೆಯ ಮಾಹಿತಿಯನ್ನು ತಮ್ಮ ಮುಂದಿಡುತ್ತೇನೆ. ಎಲ್ಲಾ ಜಿಲ್ಲೆಗಳ ಮಾಹಿತಿಯನ್ನು ಹೇಳಲು ಹೋಗುವುದಿಲ್ಲ. ಅಲ್ಲಿ ಬೆಳೆ ಮುಂಗಾರು ಹಂಗಾಮಿನಲ್ಲಿ 3,18,599 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗುತ್ತದೆ. ಮಳೆ ಅಭಾವದಿಂದ 2,78,928 ಹೆಕ್ಟೇರ್ ಭೂಮಿ ಬೆಳೆ ಹಾನಿಯಾಗಿದೆ. ಕೇಂದ್ರಸರ್ಕಾರದ NDRF ಮಾರ್ಗಸೂಚಿಯಡಿಯಲ್ಲಿ ಬೆಳೆ ಹಾನಿಗೆ ಪರಿಹಾರ ಕೊಡುವುದು ಏನಿದೆ 1,74,000 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿರುವುದಕ್ಕೆ input subsidy 128 ಕೋಟಿ ರೂ.ಗಳ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಎಂದು ಬೀದರ್ ಜಿಲ್ಲಾಧಿಕಾರಿಗಳ ಕಚೇರಿಯಿಂದ ರಾಜ್ಯಸರ್ಕಾರಕ್ಕೆ 19.08.2015 ರಲ್ಲಿ ಒಂದು ಪ್ರಸ್ತಾವನೆ ಕಳುಹಿಸಿದ್ದು, ಈಗಾಗಲೇ 3 ತಿಂಗಳು ಕಳೆಯುತ್ತಿದೆ. ಅದರ ಜೊತೆಗೆ ಬೀದರ್ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ತುರ್ತು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕೇಳಿರುವ ಅನುದಾನ 519 ಲಕ್ಷ ರೂ. ಅಂದರೆ 5 ಕೋಟಿ 19 ಲಕ್ಷ ರೂ. ಕೇಳಿದ್ದಾರೆ. ಆದರೆ, ರಾಜ್ಯಸರ್ಕಾರ 04.11.2015 ರವರೆಗೆ ಕುಡಿಯುವ ನೀರಿನ ವ್ಯವಸ್ಥೆಗೆ ಬಿಡುಗಡೆ ಮಾಡಿರುವುದು ಕೇವಲ 1 ಕೋಟಿ ರೂ.ಗಳು. ಇವರು ಕಾಮಗಾರಿಗೆ ಅನುಮೋದನೆ ಎಷ್ಟು ಕೊಟ್ಟಿದ್ದಾರೆ 119 ಲಕ್ಷಕ್ಕೆ ಕೊಟ್ಟುಕೊಂಡಿದ್ದಾರೆ. ಅವರು ತಕ್ಷಣ 5 ಕೋಟಿ ರೂ.ಗಳ ಅವಶ್ಯಕತೆ ಇದೆ ಎಂದು ಹೇಳಿರುವ ಪ್ರಸ್ತಾವನೆಗೆ ರಾಜ್ಯಸರ್ಕಾರ ಕೇವಲ ಒಂದು ಕೋಟಿ ರೂ. ಅನುದಾನ ಕೊಟ್ಟು ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ? ಈ ರೀತಿ ಹಣ ಕೊಡುವುದರಿಂದ. ಅದರ ಜೊತೆಗೆ 129 ಲಕ್ಷ input subsidy ಏನು immediately



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

release ಆಗಬೇಕೆಂದು ಕೇಳಿದ್ದಾರೆ, ಇಲ್ಲಿಯವರೆಗೆ ಹಣ ಬಿಡುಗಡೆಯಾಗಿಲ್ಲ. ಬೀದರ್ ಜಿಲ್ಲೆ ಒಂದರ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಬಹುಶ: input subsidy ಹಲವಾರು ಜಿಲ್ಲೆಗಳಿಂದ ಬಂದಿರುವ ಮಾಹಿತಿಗಳ ಆಧಾರದಲ್ಲಿ ಹೇಳುವುದಾದರೆ ಬಹುಶ: ಇಷ್ಟು ಹೊತ್ತಿಗೆ ಸುಮಾರು 2.5 ಸಾವಿರ ಕೋಟಿ ರೂ.ಗಳಿಂದ 3 ಸಾವಿರ ಕೋಟಿ ರೂ. ಬಿಡುಗಡೆಯಾಗಬೇಕಿತ್ತು. ಆದರೆ ಹಣ ಬಿಡುಗಡೆಯಾಗಿಲ್ಲ. ಏತಕ್ಕೆ ನಾನು ಇಷ್ಟು ವಿಷಯಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆಂದರೆ, ನಿಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯಲು ಬಯಸುತ್ತಿದ್ದೇನೆಂದರೆ ಇಂದು ರೈತರು ಬೆಳೆದಿರುವ ಬೆಳೆ ನಷ್ಟದ ಪ್ರಮಾಣ ಏನಿದೆ, ಇಂತಹ ಪರಿಸ್ಥಿತಿಯಲ್ಲಿ ಈ ಸರ್ಕಾರದಿಂದ ಮತ್ತು ಕೇಂದ್ರಸರ್ಕಾರದಿಂದ ಎಷ್ಟರಮಟ್ಟಿಗೆ ರೈತರ ಬೆಂಬಲಕ್ಕೆ ಎರಡೂ ಸರ್ಕಾರಗಳು ಬಂದಿವೆ ಎನ್ನುವ ವಿಷಯವನ್ನು ನಾವು ಚರ್ಚೆ ಮಾಡಲು ಹೋದರೆ ಎಲ್ಲಿಯೋ ಒಂದು ಕಡೆ ನಾವು ಆ ರೈತ ಸಮುದಾಯವನ್ನು ಕಡೆಗಣಿಸಿದ್ದೇವೆ. ಅದರ ಹಿನ್ನೆಲೆಯಲ್ಲಿ ರೈತರು ಬಹಳ ದೊಡ್ಡ ಪ್ರಮಾಣದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಪ್ರಾರಂಭವಾಗಿರುವುದು. ರೈತರ ಆತ್ಮಹತ್ಯೆ ಪ್ರಕರಣಗಳು ನಿನ್ನೆ-ಮೊನ್ನೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭವಾಗಿರುವುದಲ್ಲ. 1997-98 ರಿಂದ ನಿರಂತರವಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸುಮಾರು 2 1/2 ಲಕ್ಷಕ್ಕೂ ಹೆಚ್ಚಿನ ರೈತರು ಈ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ವರದಿ ಏನಿದೆ, ಇದರ ಹಿನ್ನೆಲೆಯಲ್ಲಿ ಬರಗಾಲದ ಬಗ್ಗೆ ಕೇಂದ್ರಸರ್ಕಾರ ಹಣ ಬಿಡುಗಡೆ ಮಾಡಲಿಲ್ಲ. ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂಬ ಕಾರಣ ಕೊಡುವುದರಿಂದ ರಾಜ್ಯಸರ್ಕಾರ ರೈತರನ್ನು ಆ ಸಂಕಷ್ಟದಿಂದ ಪಾರು ಮಾಡಲಾಗುವುದಿಲ್ಲ. ಇಂದು ರಾಜ್ಯ ಮತ್ತು ಕೇಂದ್ರಸರ್ಕಾರದ ಜವಾಬ್ದಾರಿ ಇದೆ. ಮೇವಿನ ಪ್ರಕರಣದಲ್ಲಿ ಎಷ್ಟು ಗೋ-ಶಾಲೆಗಳನ್ನು ತೆರೆದಿದ್ದೇವೆಂದು ಮಾಹಿತಿ ಕೊಡುತ್ತಾರೆ ಸದನದಲ್ಲಿ. ಯಾವ್ಯಾವ ಜಿಲ್ಲೆಗಳಲ್ಲಿ ಗೋ-ಶಾಲೆಗಳನ್ನು ತೆರೆದಿದ್ದೇವೆ ಎಂದು ಸದನದಲ್ಲಿ ಏನು ಮಾಹಿತಿ ಕೊಟ್ಟಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ನಿಮ್ಮ ಕ್ಷೇತ್ರದಲ್ಲಿಯೇ ಬಹುಶ: ರೈತರು ತಹಶೀಲ್ದಾರ್ ಕಚೇರಿಯ ಮುಂದೆ ಮುತ್ತಿಗೆ ಹಾಕಿದರು. ಗೋ ಶಾಲೆಗಳನ್ನು ತೆರೆದಿಲ್ಲ, ಜಾನುವಾರುಗಳಿಗೆ ಮೇವಿಲ್ಲ ಎಂದು ಧರಣಿ ನಡೆಸಿದ್ದಾರೆ, ನಿನ್ನೆಯೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಧರಣಿ ಆಗಿದೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇಂದೂ ಗಲಾಟೆ ನಡೆಯುತ್ತಿದೆ ಎನ್ನುವ ಮಾಹಿತಿ ಇದೆ. ಸರ್ಕಾರ ಸದನದಲ್ಲಿ ಹೇಳುತ್ತಾರೆ, ನಾವು ರಾಜ್ಯದಲ್ಲಿ ಗೋ-ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಇಲ್ಲಿ ಏನು ಮಾಹಿತಿ ಕೊಡುತ್ತಾರೆ, ರಾಜ್ಯದಲ್ಲಿ 93 ಲಕ್ಷ ಜಾನುವಾರುಗಳಿವೆ, ಅವುಗಳ ಮೇವಿನ ದೃಷ್ಟಿಯಿಂದ ಗೋ-ಶಾಲೆಗಳಲ್ಲಿ ಕೆಲವು ಭಾಗಗಳಲ್ಲಿ ಮೇವಿಲ್ಲದ ಪರಿಸ್ಥಿತಿಯಲ್ಲಿ 8 ಸಾವಿರ ಗೋವುಗಳನ್ನು ನಾವು ಗೋ-ಶಾಲೆಗೆ ತಂದು ಬಿಟ್ಟಿದ್ದೇವೆ. ಮೇವು ಕೊಡುತ್ತಿದ್ದೇವೆಂದು ವರದಿ ಕೊಟ್ಟಿದ್ದಾರೆ. ಅವರ ವರದಿಯ ಪ್ರಕಾರ 93 ಲಕ್ಷ ಜಾನುವಾರುಗಳಿವೆ ಎಂದು. ಆದರೆ ಇವರು ಗೋ-ಶಾಲೆ ತೆರೆದು ಕೇವಲ 8 ಸಾವಿರ ಜಾನುವಾರುಗಳಿಗೆ ಮಾತ್ರ ಗೋ-ಶಾಲೆಗಳಲ್ಲಿ ರಕ್ಷಣೆ ಕೊಟ್ಟಿದ್ದೇವೆ, ಮೇವು ಕೊಟ್ಟಿದ್ದೇವೆಂದು ವರದಿಯನ್ನು ಉತ್ತರ ನೀಡುವಾಗ ಕೊಟ್ಟಿದ್ದಾರೆ. ಅದೂ ಸುಳ್ಳು. ಈ ರೀತಿಯಲ್ಲಿ ಬರಗಾಲದ ವಿಷಯದಲ್ಲಿ ಸರ್ಕಾರಗಳು ನಡೆದುಕೊಳ್ಳುತ್ತಿರುವ ರೀತಿ ಏನಿದೆ, ಇವರು ಮಾಡಿಕೊಂಡಿರುವ ಮಾರ್ಗಸೂಚಿಗಳೇನಿವೆ, ಇವುಗಳಿಂದ ಇವತ್ತಿನ ಪರಿಸ್ಥಿತಿಗೆ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಲು ಸಾಧ್ಯವೆ? NDRF ನ ಮಾರ್ಗಸೂಚಿ ಇಟ್ಟುಕೊಂಡಿದ್ದೀರಿ, 2014-15ನೇ ಸಾಲಿನಲ್ಲಿ ಸರ್ಕಾರವೇ ಕೊಟ್ಟಿರುವ estimate. 22 ಸಾವಿರದಿಂದ 23 ಸಾವಿರ ಕೋಟಿ ತೋಟಗಾರಿಕೆ ಬೆಳೆ ಮತ್ತು ಕೃಷಿ ಬೆಳೆ ಹಾನಿಯಾಗಿರುವುದು ಏನಿದೆ, ಏನು ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದ್ದು ಸೇರಿ 33% ಮಾರ್ಗಸೂಚಿ ಇಟ್ಟುಕೊಂಡಿದ್ದಾರೇನೋ ಆ ಲೆಕ್ಕವನ್ನು ತೆಗೆದುಕೊಂಡರೂ 8 ರಿಂದ 9 ಸಾವಿರ ಕೋಟಿ ರೂ. ಇಷ್ಟು ಹೊತ್ತಿಗೆ ಬಿಡುಗಡೆಯಾಗಬೇಕಿತ್ತು. ಆದರೆ ಇಲ್ಲಿ ಆ ಪರಿಸ್ಥಿತಿ ಇಲ್ಲ. ಕೇವಲ 526 ಕೋಟಿ ರೂ. ಹಣ ಬಿಡುಗಡೆ ಮಾಡಿದ್ದೇವೆಂದು ಏನು ಹೇಳುತ್ತಾರೆ, ಅದರಲ್ಲಿಯೂ ಖರ್ಚಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಷ್ಟರಮಟ್ಟಿಗೆ ಬರಗಾಲದ ಬಗ್ಗೆ ಪ್ರಾಮಾಣಿಕವಾಗಿ ಸ್ಪಂದಿಸುತ್ತಿದ್ದಾರೆಂದು ಅತ್ಯಂತ ನೋವಿನಿಂದ ಹೇಳಬೇಕಾಗುತ್ತದೆ. ಇವತ್ತು ಸರ್ಕಾರಕ್ಕೆ ಜವಾಬ್ದಾರಿ ಇದೆಯೆ? ಸರ್ಕಾರ ನಿಜವಾಗಿಯೂ ಅತ್ಯಂತ ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸುತ್ತಿದ್ದೀರಾ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ./ Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.


(ಮುಂದು. . . )

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 (5) 11.40 NM VR

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ( ಮುಂದು)

ಎಷ್ಟು ಜನ ಮಂತ್ರಿಗಳು ಈ ಬರಗಾಲಕ್ಕೆ ಸಂಬಂಧ ಪಟ್ಟ ಹಾಗೆ ಅತೀವೃಷ್ಟಿ ಇರಲಿ, ಅನಾವೃಷ್ಟಿ ಆದಂತಹ ಪರಿಸ್ಥಿತಿಯಲ್ಲಿ ಎಷ್ಟು ಜಿಲ್ಲೆಗಳಿಗೆ ಹೋಗಿ ಎಷ್ಟು ಸಭೆಗಳನ್ನು ಮಾಡಿದ್ದಾರೆ, ಎಷ್ಟು ಹಳ್ಳಿಗಳಿಗೆ ಭೇಟಿ ನೀಡಿದ್ದಾರೆ? ಸರ್ಕಾರದಿಂದ ಉತ್ತರ ಕೊಡುವಾಗ ದಯವಿಟ್ಟು ಆ ಮಾಹಿತಿಯನ್ನು ಸದನದ ಮುಂದೆ ಇಟ್ಟು ಬಿಡಲಿ. ಕಳೆದ ಎರಡು ವರ್ಷಗಳಿಂದ ಪ್ರತಿ ವರ್ಷವೂ ಅತೀವೃಷ್ಟಿ ಅನಾವೃಷ್ಟಿ ಎರಡನ್ನೂ ನಾವೇನು ಕಾಣುತ್ತಿದ್ದೇವೆ ಬಹುಶ: ನಾನು ಹೋದಂತಹ ಹಲವಾರು ಪ್ರದೇಶಗಳಲ್ಲಿ ಮಂತ್ರಿಗಳು ಭೇಟಿ ಕೊಟ್ಟಿರತಕ್ಕಂತಹ ವಿಷಯಗಳ ಬಗ್ಗೆ ಕೇಳಿದರೆ ಯಾರೂ ನಮ್ಮ ಕಷ್ಟಗಳನ್ನು ಕೇಳುವುದಕ್ಕೆ ಬಂದಿಲ್ಲವೆಂದು ಹಲವಾರು ಜಿಲ್ಲೆಗಳಲ್ಲಿ ಆ ರೈತರು ಕೊಡತಕ್ಕಂತಹ ಪ್ರತಿಕ್ರಿಯೆಗಳು ಏನಿವೆ ಇದು ನಿಜಕ್ಕೂ ಜವಾಬ್ದಾರಿಯುತವಾದ ಸರ್ಕಾರ ಹಾಗೂ ಮಂತ್ರಿಗಳು ನಡೆದುಕೊಳ್ಳತಕ್ಕಂತಹ ರೀತಿಯೇ? ಹಣ ಬಿಡುಗಡೆ ಆಗಿಲ್ಲ, ಆ ರೈತರಿಗಾದರೂ ಇಲ್ಲಪ್ಪ ನಾವಿದ್ದೇವೆ ಸ್ವಲ್ಪ ದಿವಸ ತಾಳ್ಮೆಯಿಂದ ಇರಿ ನಿಮ್ಮ ಹಣ ಬಿಡುಗಡೆ ಮಾಡಿ ಕೊಡುತ್ತೇವೆ, input subsidy ಕೊಡುತ್ತೇವೆ ಇಂತಹ ಒಂದು ಕನಿಷ್ಟ ಅವರಿಗೆ ವಿಶ್ವಾಸ ಮೂಡಿಸುವ ಕೆಲಸ ಆಗದೆ ಹೋದರೆ ಇವತ್ತು ನಾಲ್ಕು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವತ್ತಿನ ಪತ್ರಿಕೆ ತೆಗೆದರೆ ಗೊತ್ತಾಗುತ್ತದೆ. ಪತ್ರಿಕೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಒಂದು ಕಾಲಂ ಅನ್ನೇ ಇಟ್ಟಿದ್ದಾರೆ. ಇಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗುವುದಕ್ಕೆ ಕಾರಣ ಸರ್ಕಾರ ಆ ಕ್ಷಣಕ್ಕೆ ಹೋಗಿ ರೈತನ ವಿಶ್ವಾಸ ಮೂಡಿಸತಕ್ಕಂತಹ ಕೆಲಸ ಮಾಡಿದ್ದರೆ ಸ್ವಲ್ಪ ದಿವಸ ತಾಳ್ಮೆಯಿಂದ ಇರಿ ಎಂದು ಹೇಳುವಂತಹ ಸೌಜನ್ಯದ ಮಾತುಗಳನ್ನು ಹೇಳದೆ ಇರತಕ್ಕಂತಹ ಪರಿಸ್ಥಿತಿಯಲ್ಲಿ ಇವತ್ತು ಈ ಪರಿಸ್ಥಿತಿ ಉದ್ಭವವಾಗಿದೆ. ಕೃಷಿ ವಲಯಕ್ಕೆ ಈ ವರ್ಷ ಎಷ್ಟು ದುಡ್ಡು ಇಟ್ಟಿದ್ದಾರೆ ಪ್ರತಿ ವರ್ಷ ಹಣ ಕಡಿಮೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡುತ್ತಿದ್ದಾರೆ. 2013-14 ರಲ್ಲಿ ಸುಮಾರು ಎರಡು ಸಾವಿರ ಚಿಲ್ಲರೆ ಕೋಟಿ ಕೃಷಿ ವಲಯಕ್ಕೆ ಇಟ್ಟಿದ್ದರು. ಈ ವರ್ಷ 500 ಕೋಟಿ ರೂಪಾಯಿಗೆ reduce ಮಾಡಿಕೊಂಡಿದ್ದಾರೆ. ಅದಕ್ಕೆ ಕಾರಣ ಕೇಂದ್ರ ಸರ್ಕಾರದವರು ಅನುದಾನಗಳನ್ನು ಕಡಿತಗೊಳಿಸಿದ್ದಾರೆ, ಅದರಿಂದ ನಾವು ಇಲ್ಲಿ ಕೆಲವನ್ನು ಕಡಿತ ಮಾಡಬೇಕಾಗಿದೆ ಎಂದು ಇದನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಈ ರೀತಿ ಇವತ್ತು ಅನುದಾನಗಳನ್ನು ಕಡಿತ ಮಾಡುವುದರಿಂದ ಕೃಷಿ ವಲಯಕ್ಕೆ ಆಗುತ್ತಿರುವಂತಹ ಈ ಒಂದು ದೊಡ್ಡ ಮಟ್ಟದ ಪೆಟ್ಟು ಏನಿದೆ, ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದಾ ಎಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ಇವತ್ತು ಯಾವುದಾದರೂ ಒಂದು ರೀತಿಯಲ್ಲಿ ಕೃಷಿ ವಲಯದಲ್ಲಿ ಆಗಿರತಕ್ಕಂತಹ ಬೆಳೆ ನಷ್ಟಕ್ಕೆ ಪರಿಹಾರ ಕೊಡದೆ ಇದ್ದರೆ ಯಾರು ಅವರನ್ನು ರಕ್ಷಣೆ ಮಾಡುವವರು? ಬೆಳೆ ವಿಮೆ ಯೋಜನೆ ಇದೆ. ರೈತರು ಬೆಳೆದಂತಹ ಬೆಳೆ ನಷ್ಟವಾದರೆ ಬೆಳೆ ವಿಮೆ ಎಂದು ಹಣ ಕಟ್ಟಿಸಿಕೊಳ್ಳುತ್ತಾರೆ. ಧಾರವಾಡಕ್ಕೆ ಹೋದರೆ ಧಾರವಾಡದಲ್ಲಿ ಹೇಳುತ್ತಾರೆ ಅಲ್ಲಿ ರೈತರು ಸುಮಾರು 19 ರಿಂದ 20 ಕೋಟಿ ಹಣ ಬೆಳೆ ವಿಮೆಗೆ ಕಟ್ಟುತ್ತಾರೆ ಬೆಳೆ ನಷ್ಟದ ಪರಿಹಾರ ಬೆಳೆ ವಿಮೆ ಕಂಪನಿಗಳವರು ಎಷ್ಟು ಕೊಡುತ್ತಾರೆ ಇಲ್ಲಿಯವರೆಗೆ ಎಂಟು ಕೋಟಿಯೋ ಒಂಬತ್ತು ಕೋಟಿಯೋ ಕೊಡುತ್ತಾರೆ. ಬೆಳೆ ವಿಮೆ ಹಣ ಏನು ಕಟ್ಟಿದ್ದಾರೆ, ಆ ಹಣವನ್ನೇ ಕೊಟ್ಟಿಲ್ಲ ಇನ್ನು ಇವರು ಪರಿಹಾರ ಎಲ್ಲಿಂದ ಕೊಡುತ್ತಾರೆ? ಇದು ಬೆಳೆ ವಿಮೆ ಯೋಜನೆಯೂ ಎಲ್ಲೋ ಒಂದು ಕಡೆ ಹಗಲು ದರೋಡೆ ಇದು. ಕೆಲವು ಗೈಡ್‌ಲೈನ್ಸ್ ಏನು ಇಟ್ಟುಕೊಂಡಿದ್ದಾರೆ ಆ ಗೈಡ್‌ಲೈನ್ಸ್‌ನಲ್ಲಿ ನೀವು ಬೆಳೆ ವಿಮೆ ಮನವಿ ಏನು ಕೊಡುತ್ತಿದ್ದೀರಿ ಅದಕ್ಕೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆಂದು ಕಾರಣ ಹೇಳುತ್ತಿದ್ದಾರೆ. ಇದು ರಾಜ್ಯದಲ್ಲಿ ಹಲವಾರು ಪ್ರದೇಶಗಳಲ್ಲಿ ಈ ಬೆಳೆ ವಿಮೆ ಯೋಜನೆಯೂ ಎಲ್ಲೋ ಒಂದು ಕಡೆ ಟೋಪಿ ಹಾಕತಕ್ಕಂತಹ ವ್ಯವಹಾರದ ಯೋಜನೆ ಆಗಿದೆ. ಇದನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ. ಕೆಲವು ಹಲವಾರು ಮಾರ್ಪಾಡುಗಳನ್ನು ಮಾಡಬೇಕಾಗಿದೆ. ಅದರ ಹಿನ್ನೆಲೆಯಲ್ಲಿ ಇವತ್ತು ಈ ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ಎಲ್ಲೋ ಒಂದು ಕಡೆ ನಾವು ರೈತರ ಒಂದು ನೆರವಿಗೆ ಬರತಕ್ಕಂಥದ್ದರಲ್ಲಿ ಕೇಂದ್ರಸರ್ಕಾರದವರೂ ನಮ್ಮನ್ನು ಕಡೆಗಣಿಸಿದ್ದಾರೆ, ರಾಜ್ಯ ಸರ್ಕಾರದವರೂ ನಮ್ಮನ್ನು ಕಡೆಗಣಿಸಿದ್ದಾರೆ. ನೆನ್ನೆ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ನೋಡಿದೆ. ತಮಿಳುನಾಡಿನಲ್ಲಿ ಆದಂತಹ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪರಿಸ್ಥಿತಿಗೆ ಶರ ವೇಗದಲ್ಲಿ 900 ಕೋಟಿ ರೂ. ಹಣ ಬಿಡುಗಡೆ ಆಯಿತು. ನಾವು ಇಲ್ಲಿಯವರೆಗೆ ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆ ಇಟ್ಟರೆ ರಾಜ್ಯ ಸರ್ಕಾರಕ್ಕೆ ಇದುವರೆಗೂ ಹಣ ಬಿಡುಗಡೆ ಆಗಿಲ್ಲ. ಮಲತಾಯಿ ಧೋರಣೆ ತೋರಿಸುತ್ತಿದ್ದಾರೆ. West Bengal Chief Minister ಇವತ್ತು ಒಂದು ಹೇಳಿಕೆ ಕೊಟ್ಟಿದ್ದಾರೆ. ಇವತ್ತು ತಮಿಳುನಾಡಿಗೆ ಕೊಟ್ಟಂತಹ ನೆರವನ್ನು West Bengal ಗೆ ಕೊಡುವುದರಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡಿದೆ ಎನ್ನತಕ್ಕಂತಹ ಹೇಳಿಕೆ ಅಲ್ಲಿಯ ಮುಖ್ಯ ಮಂತ್ರಿಗಳಿಂದಲೂ ಬಂದಿರುವುದು ನಾನು ಗಮನಿಸಿದ್ದೇನೆ. ಇಲ್ಲಿ ನಮ್ಮ BJP ಸ್ನೇಹಿತರಿಗೆ ಕೇಳಿದರೆ ರಾಜ್ಯ ಸರ್ಕಾರದಿಂದ ಅಲ್ಲಿ ಹೋಗಿ ಕೇಳುವುದಿಲ್ಲ, ಹದಿನೈದು ದಿವಸ ಒಂದು ವಾರಕ್ಕೆ ಹೋಗಿ ಯಾರಾದರೂ ಅದರ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕೆಂದು ಹೇಳುತ್ತಾರೆ. ಬಹುಶ: ಒಂದು ದಿವಸ ಪತ್ರಿಕೆಯಲ್ಲಿ ಗಮನಿಸಿದೆ ನಮ್ಮ ಕೃಷಿಸಚಿವರು ಕೇಂದ್ರದ ಗೃಹ ಸಚಿವರನ್ನು ಭೇಟಿ ಮಾಡಿದರು. ಭೇಟಿ ಮಾಡಿ ತಕ್ಷಣಕ್ಕೆ 500 ಕೋಟಿ ರೂಪಾಯಿಗಳಾದರೂ ಬಿಡುಗಡೆ ಮಾಡಿ ಎಂದು ಬೇಡುತ್ತಾರೆ. ಕೇಂದ್ರ ಸರ್ಕಾರ ಈ ಹಣವನ್ನು ನಮಗೆ ಧರ್ಮಕ್ಕೆ ಕೊಡುವುದು ಅಲ್ಲ. ಕೇಂದ್ರ ಸರ್ಕಾರದ್ದೂ ಇಲ್ಲಿ ಜವಾಬ್ದಾರಿ ಇದೆ. ಕೇಂದ್ರ ಸರ್ಕಾರ ಇಷ್ಟು ದಿವಸವಾದರೂ ನಾವು ಕೊಟ್ಟಿರತಕ್ಕಂತಹ estimated loss ಗಳ ಬಗ್ಗೆ ಎಷ್ಟರ ಮಟ್ಟಿಗೆ ನಮಗೆ ಸ್ಪಂದಿಸಿದ್ದಾರೆಂದು ನೋಡಿದಾಗ ಎಲ್ಲೋ ಒಂದು ಕಡೆ ಕರ್ನಾಟಕ ರಾಜ್ಯವನ್ನು ಕೇಂದ್ರ ಸರ್ಕಾರ ಭೂಪಟದಿಂದ ತೆಗೆಯತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೇ? ರಾಜ್ಯ ಸರ್ಕಾರ ರೈತರ ಸಮಸ್ಯೆಗಳು ನಮಗೆ ಸಂಬಂಧ ಇಲ್ಲವೇನೋ ಎನ್ನತಕ್ಕಂತಹ ಭಾವನೆಯಲ್ಲಿದ್ದಾರಾ ಎಂದು ಅನುಮಾನ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಕುಮಾರಸ್ವಾಮಿಯವರೆ, ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿಲ್ಲವೆಂದು ಅಲ್ಲ. ಈ ವಾರದಲ್ಲಿ 1540 ಕೋಟಿ ಹಣ ಬರದ ಸಂಬಂಧವಾಗಿ ಬಿಡುಗಡೆ ಮಾಡಿದ್ದಾರೆ. ಆಜ್ಞೆಯೂ ಆಗಿದೆ. ನನಗನ್ನಿಸಿದ ಮಟ್ಟಿಗೆ ಇತ್ತೀಚಿನ ವರ್ಷಗಳಲ್ಲಿ ತಾವು ಹಿಂದಿನದನ್ನು ಅವಲೋಕನ ಮಾಡಿ ಹಿಂದೆ drought flood ಆದಾಗ ನಾವು ಏನು ಡಿಮಾಂಡ್ ಮಾಡುತ್ತಿದ್ದೆವು ಅವರು ಎಷ್ಟು ಹಣ ಕೊಡುತ್ತಿದ್ದರು, ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ಹಣ ಕೊಟ್ಟಿದ್ದಾರೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಹೌದು ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ರೀತಿಯಲ್ಲಿ ಈ ವರ್ಷ 1500 ಕೋಟಿ ಎಂದು ಏನು ಹೇಳಿದ್ದಾರೆ, ಬಹುಶ: ಹಿಂದಿನ ಹಲವಾರು ಪ್ರಕರಣಗಳನ್ನು ಹೋಲಿಕೆ ಮಾಡಿದಾಗ ಆ ವಿಷಯದಲ್ಲಿ ಹೆಚ್ಚಿಗೆ ಕೊಟ್ಟಿದ್ದಾರೆಂದು ನಾವು ಅರ್ಥೈಸಬಹುದು. ಆದರೆ ಈ ವರ್ಷ ಆಗಿತಕ್ಕಂತಹ ಲಾಸ್ ಎಷ್ಟು? ಕೃಷಿ ಮತ್ತು ತೋಟಗಾರಿಕೆ ಬೆಳೆಯಲ್ಲಿ ಆಗಿರತಕ್ಕಂತಹ ನಷ್ಟ ಸುಮಾರು 11 ರಿಂದ 11.5 ಸಾವಿರ ಕೋಟಿ ರೂಪಾಯಿಗಳು. ಇವತ್ತು ಅದರ ಹಿನ್ನೆಲೆಯಲ್ಲಿ 1500 ಕೋಟಿಯೂ ಇವತ್ತು ಆ ರೈತರ ಬೆಳೆ ನಷ್ಟಕ್ಕೆ ದೊಡ್ಡ ಮಟ್ಟದ ಪರಿಹಾರ ಆಗುವುದಿಲ್ಲ, ಹಣ ಬರುವುದಿಲ್ಲ ಸುಮ್ಮನೆ ಘೋಷಣೆ ಮಾಡಿದ್ದಾರೆಂದು ನಾನು ಲಘುವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಇನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವಂತಹ ಸತತವಾದ ಬರಗಾಲದ ಮತ್ತು ಅತಿವೃಷ್ಠಿ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವೂ ಇನ್ನೂ ಹೆಚ್ಚಿನ ನೆರವನ್ನು ಕೊಡಬೇಕಾಗಿತ್ತು ಎನ್ನತಕ್ಕಂತಹ ನಿರೀಕ್ಷೆ ಜನರಲ್ಲಿ ಹಾಗೂ ನಮ್ಮಲ್ಲಿಯೂ ಇವೆ. ಅಂತಹ ಪರಿಸ್ಥಿತಿ ನಾವು ಇಲ್ಲಿ ಕಾಣುತ್ತಿಲ್ಲ. ಇವತ್ತು ಗ್ರಾಮೀಣ ಕುಡಿಯುವ ನೀರಿನ ವಿಷಯದಲ್ಲಿ ಹಲವಾರು ಜನ ನಮ್ಮ ಶಾಸಕರು ಚರ್ಚೆ ಮಾಡಿದ್ದಾರೆ. ನನಗೆ ಒಂದು ಅನುಮಾನ ಇರುವುದು ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು 57,000 ಕೋಟಿ ಕ್ರಿಯಾ ಯೋಜನೆ 2009-10 ರಿಂದ 2015-16ನೇ ಸಾಲಿನವರೆಗೆ ಸುಮಾರು 57,000 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ಆಡಳಿತಾತ್ಮಕವಾದ ಮಂಜೂರಾತಿ ಕೊಟ್ಟುಕೊಂಡಿದ್ದಾರೆ. ಇದರಲ್ಲಿ 3 ಲಕ್ಷದ 20,000 ಕಾಮಗಾರಿಗಳು ಎನ್ನತಕ್ಕಂಥದ್ದನ್ನು ಅನಮೋದನೆ ಕೊಟ್ಟುಕೊಂಡಿದ್ದಾರೆ. 57,000 ಕೋಟಿ ರೂ.ಗಳಲ್ಲಿ ಅದು ನಿಮ್ಮ ಮಲ್ಟಿ ವಿಲೇಜ್ ಸ್ಕೀಮ್ ಇರಬಹುದು, ಬೇರೆ ಬೇರೆ ಯಾವ್ಯಾವ ಸ್ಕೀಮ್‌ಗಳು ಇವೆ ನೀರನ್ನು ಕೊಡುತ್ತಿದ್ದೀರಿ ಅವೆಲ್ಲ ಒಟ್ಟಾರೆ ಸೇರಿರುವುದು. ಒಟ್ಟಾರೆ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಯೋಜನೆಗಳು. ಕಳೆದ ವರ್ಷದ ಸಾಲಿನವರೆಗೆ 1,69,000 ಕಾಮಗಾರಿಗಳನ್ನು ಪೂರೈಸಿದ್ದೇವೆಂದು ನಿಮ್ಮ website ನಲ್ಲಿದೆ. ನಿಮ್ಮ website ನೋಡಿದಾಗ ಆ ವೆಬ್‌ಸೈಟ್‌ನಲ್ಲಿ ನಾನು ಗಮನಿಸಿರತಕ್ಕಂತಹ ಅಂಶ 1,69,000 ಕಾಮಗಾರಿಗಳನ್ನು ಈಗಾಗಲೇ ಪೂರೈಸಿದ್ದೇವೆ. ಅದರ ಸಂಪೂರ್ಣ ವೆಚ್ಚ 14,198 ಕೋಟಿ ರೂಪಾಯಿಗಳು. ಒಂದು 1,69,000 ಕಾಮಗಾರಿಗಳ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಯೋಜನೆಗಳನ್ನು ಏನು ಪೂರೈಸಿದ್ದೀರಿ ಅದರ ಒಟ್ಟಾರೆ ವೆಚ್ಚ 14,198 ಕೋಟಿ. ಇಲ್ಲಿಯವರೆಗೆ ಪೇಮೆಂಟ್ ಆಗಿರತಕ್ಕಂತಹ actual expenditure ತೋರಿಸುತ್ತಿರತಕ್ಕಂಥದ್ದು 6,100 ಕೋಟಿ. ಇನ್ನು ಈ ಕಾಮಗಾರಿ ಮುಗಿದಿದೆ ಎಂದು ಏನು ಹೇಳುತ್ತಿದ್ದೀರಿ ಅದಕ್ಕೆ 8,000 ಕೋಟಿ ರೂ. ಬಿಡುಗಡೆ ಆಗ ಬೇಕು. ಅದರ ಜೊತೆಗೆ on going scheme ನ spill over work ಅದಕ್ಕೆ ಇನ್ನು 11,154 ಕೋಟಿ ಬೇಕು. ಅದರ ಜೊತೆಗೆ ಈ ವರ್ಷದ ಕ್ರಿಯಾ ಯೋಜನೆ ನೀವು ಇಲ್ಲಿ ವೆಬ್‌ಸೈಟ್‌ನಲ್ಲಿ 4,345 ಕೋಟಿ ಎಂದು ಹಾಕಿಕೊಂಡಿದ್ದೀರಿ. ಆದರೆ ಇನ್ನು ಅಪ್ರೂವಲ್ ಕೊಟ್ಟಿಲ್ಲ. ಕ್ರಿಯಾ ಯೋಜನೆ ಎಂದು ವೆಬ್‌ಸೈಟ್‌ನಲ್ಲಿ ತೋರಿಸಿಕೊಂಡಿದ್ದೀರಿ. ಒಟ್ಟಾರೆ ಈ ಯೋಜನೆಗಳಿಗೆ ಹಣದ ವೆಚ್ಚ 23,000 ಕೋಟಿ ಬೇಕು. 23,000 ಕೋಟಿ ಹಣ ಬೇಕು, ಈಗಾಗಲೇ ಮಾಡಿರತಕ್ಕಂತಹ ಕೆಲಸಕ್ಕೆ ಇನ್ನು 8,000 ಕೋಟಿ ಬಿಲ್ ಪೆಂಡಿಂಗ್ ಇದೆ. ರಾಮನಗರ ಜಿಲ್ಲೆಯ ಕ್ರಿಯಾ ಯೋಜನೆ ಕಳುಹಿಸಿ ಎಂದು ಹೇಳಿದಿರಿ, ರಾಮನಗರ ಜಿಲ್ಲೆಗೆ ನೀವು ಕಳುಹಿಸಿರುವುದು 54 ಕೋಟಿ ಗೆ ಕ್ರಿಯಾ ಯೋಜನೆ ಕಳುಹಿಸಿ ಎಂದು ಹೇಳಿದರು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮುಂದು. . . .

25-11-2015/11-50/6/HRV/VR

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಂ.ವ)

ನೀವು ರಾಮನಗರ ಜಿಲ್ಲೆಗೆ ಕಳುಹಿಸಿರತಕ್ಕಂಥದ್ದು, 54 ಕೋಟಿ ರೂ.ಗಳ ಕ್ರಿಯಾಯೋಜನೆಯನ್ನು 2015-16 ಕ್ಕೆ ಕಳುಹಿಸಬೇಕೆಂದು ಹೇಳಿದ್ದರು. 54 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ಕಳುಹಿಸಿದ್ದಾರೆ. ರಾಮನಗರ ಜಿಲ್ಲೆಯ ಕುಡಿಯುವ ನೀರಿನ ಯೋಜನೆಗೆ ಇದನ್ನು ಕಳುಹಿಸಿಕೊಟ್ಟಿದ್ದಾರೆ. ಈ ಯೋಜನೆಗೆ ಏನು ತೀರ್ಮಾನಗಳನ್ನು ನೀವು ಮಾಡುತ್ತಿದ್ದಿರಿ, ಇಲ್ಲೇನು ಹೇಳುತ್ತೀರೆಂದರೆ, pending bills 7 ಕೋಟಿ ರೂ.ಗಳದ್ದೆಂದು ತೋರಿಸುತ್ತಿದ್ದೀರಿ. ದಿನಾಂಕ 31-10-2015 ಕ್ಕೆ ರಾಮನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳು ಮುಗಿದಿರತಕ್ಕಂಥದ್ದಕ್ಕೆ 7 ಕೋಟಿ 66 ಲಕ್ಷ ರೂ.ಗಳ pending bill ಅನ್ನು ದಿನಾಂಕ 31-10-2015 ಕ್ಕೆ ತೋರಿಸಿದ್ದೀರಿ. ಆದರೆ ಈ ಬಿಲ್‌ಗಳು ಈ ವರ್ಷದ್ದಲ್ಲ. ಕಳೆದ ವರ್ಷದ್ದು, ಈಗಾಗಲೇ 2014-15 ರಲ್ಲಿ ಮಾಡಿರತಕ್ಕಂಥ ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್‌ಗಳಿಗೇ ಹಣ ಇದುವರೆಗೂ ಬಿಡುಗಡೆಯಾಗಿಲ್ಲ. ಇನ್ನು ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಯಾರು ಬರುತ್ತಾರೆ. ಕುಡಿಯುವ ನೀರಿನ ಯೋಜನೆ ವಿಷಯದಲ್ಲಿ ಇಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ಯಾವ ಕಂಟ್ರ್ಯಾಕ್ಟರ್‌ಗಳು ಬೋರ್ ಕೊರೆಯುವುದಕ್ಕೆ ಬರುವುದಿಲ್ಲ. ಆದುದರಿಂದ ಇಲ್ಲಿ ವೆಬ್‌ಸೈಟ್‌ಗಳಲ್ಲಿ, ಬುಕ್‌ಗಳಲ್ಲಿ ಕ್ರಿಯಾ ಯೋಜನೆಗಳನ್ನು create ಮಾಡಿ ತೋರಿಸಿಕೊಳ್ಳುವುದರಿಂದ ಇವತ್ತಿಗೂ ಆ ಜನರ ಸಮಸ್ಯೆಗಳಿಗೆ ಕುಡಿಯುವ ನೀರಿನ ವಿಷಯದಲ್ಲಿ ಪರಿಹಾರ ದೊರಕುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿದ್ದೇವೆ. ಇವತ್ತು 23 ಸಾವಿರ ಕೋಟಿ ರೂ.ಗಳ ಹಣದ ಅವಶ್ಯಕತೆಯೇನಿದೆ, ನೀವು ತೋರಿಸಿಕೊಂಡಿರತಕ್ಕಂಥ multi village schemes, ಮಗದೊಂದು, ಇದು ಎಷ್ಟು ದಿನಗಳ ಕಾಲದಲ್ಲಿ ಇವೆಲ್ಲವನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸರ್ಕಾರದ ಗಮನಕ್ಕೇ ಬಿಡುತ್ತೇನೆ. ಇದರ ಜೊತೆಯಲ್ಲಿ ಈ ವರ್ಷ ಕುಡಿಯುವ ನೀರಿಗಾಗಿ 1569 ಕೋಟಿ ರೂ.ಗಳನ್ನೇನೋ ರಾಜ್ಯದ ಬಜೆಟ್‌ನಲ್ಲಿ ನೀವು ಇಟ್ಟಿದ್ದೀರಿ. ಕೇಂದ್ರ ಸರ್ಕಾರದಿಂದ ಬಹುಷ: 1500 ಕೋಟಿ ರೂ.ಗಳು ಬರಬಹುದೆಂದು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಿರೀಕ್ಷೆಯನ್ನು ಇಟ್ಟುಕೊಂಡಿದ್ದೀರಿ. ಆದರೆ ಈ ಕ್ಷಣದವರೆಗೆ ನನಗಿರತಕ್ಕಂಥ ಮಾಹಿತಿ ಪ್ರಕಾರ ಕೇಂದ್ರ ಸರ್ಕಾರದಿಂದ ನಿಮಗೆ ಬಂದಿರತಕ್ಕಂಥ ಹಣ ಕೇವಲ 130 ಕೋಟಿ ರೂ.ಗಳು. ಇವತ್ತು ನಾವು ನವೆಂಬರ್ ತಿಂಗಳಿನಲ್ಲಿದ್ದೇವೆ. ಕೇಂದ್ರ ಸರ್ಕಾರದಿಂದ ಇವತ್ತಿಗೂ ಹಣ ಬಿಡುಗಡೆಯಾಗಿಲ್ಲ. ಅದಕ್ಕೆ ಕಾರಣವನ್ನೇನು ಹೇಳುತ್ತಾರೆಂದರೆ, ಏತಕ್ಕೆ ಹಣವನ್ನು ಇವರು ಬಿಡುಗಡೆ ಮಾಡಿಲ್ಲ, ಕೇಂದ್ರ ಸರ್ಕಾರದವರು ಹೇಳತಕ್ಕಂಥದ್ದೇನೆಂದರೆ, ನನಗೆ ಬಂದಂಥ ಮಾಹಿತಿಯನ್ನು ಸದನದ ಮುಂದೆ ಇಡುತ್ತಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಇದರ ಬಗ್ಗೆ ಹೇಳಿದರೆ ಸಾಕು. ಇದು ಯಾವುದೋ ಡೆಪಾಸಿಟ್ ಇಟ್ಟುಕೊಂಡಿದ್ದೀರಲ್ಲ, ನಾನು ಒಂದು ಬಾರಿ ಈ ಡೆಪಾಸಿಟ್ ವಿಷಯದಲ್ಲಿ ಹೇಳಿದ್ದೆ. ಆಂಧ್ರ ಬ್ಯಾಂಕ್‌ನಲ್ಲಿ 400 ಕೋಟಿಯೋ 410 ಕೋಟಿ ಹಣವನ್ನೇನೋ ಕುಡಿಯುವ ನೀರಿನ ಯೋಜನೆಯ ಹಣವನ್ನು ಅಲ್ಲಿ ಇಟ್ಟುಕೊಂಡಿದ್ದಾರಲ್ಲ, ಆ ಬಗ್ಗೆ ಹೊರಗಡೆ ಚರ್ಚೆಯಾಗಿದೆ, ಕೇಂದ್ರ ಸರ್ಕಾರದ ಮುಂದೆಯೂ ಚರ್ಚೆಯಾಗಿದೆ. ಇಲ್ಲಿ ರಾಜ್ಯ ಸರ್ಕಾರದಲ್ಲಿ ನಾವು ಕೊಡತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗುತ್ತಿಲ್ಲ, ನಾವು ಕೊಟ್ಟಂಥ ಹಣವನ್ನು ಬೇರೆ ಬೇರೆ ಅಕೌಂಟ್‌ಗಳಲ್ಲಿ ಈ ಹಣ swindle ಆಗುತ್ತಿದೆ. ಆದುದರಿಂದ ನಾವು ಇವತ್ತು 1500 ಕೋಟಿ ರೂ.ಗಳ ಹಣವನ್ನು ಕೊಡುವ ಅವಶ್ಯಕತೆಯಿಲ್ಲವೆನ್ನುವ ಭಾವನೆ ಅವರಲ್ಲಿದೆಯೆನ್ನುವ ಮಾಹಿತಿಯಿದೆ. ಇದು ನನಗೆ ಬಂದಿರತಕ್ಕಂಥ ಮಾಹಿತಿಯಾಗಿದೆ. ಆದುದರಿಂದ ಕೇಂದ್ರ ಸರ್ಕಾರದಿಂದ 1500 ಕೋಟಿ ರೂ.ಗಳು ಬರಬಹುದೆಂದು ನೀವು ಏನು ನಿರೀಕ್ಷೆಯನ್ನಿಟ್ಟುಕೊಂಡಿದ್ದೀರಿ ಬಹುಷ: ಅಷ್ಟು ಹಣ ಕೇಂದ್ರ ಸರ್ಕಾರದಿಂದ ಬರುವುದಿಲ್ಲ. ಇದು ನನಗಿರತಕ್ಕಂಥ ಮಾಹಿತಿ ಪ್ರಕಾರ ಹೇಳುತ್ತಿರುವುದು. ಕೇವಲ 130 ಕೋಟಿ ರೂ.ಗಳು ಬಂದಿರತಕ್ಕಂಥದ್ದು. ಇನ್ನು ಉಳಿದಿದ್ದನ್ನು ಈ ವರ್ಷಕ್ಕೆ ಎಲ್ಲಿಂದ ನೀವು adjust ಮಾಡುತ್ತೀರಿ? ಈ ವರ್ಷಕ್ಕೆ ಬಹುಷ: ಕೆಲವುದರಲ್ಲಿ ಇರತಕ್ಕಂಥದ್ದು, 2500 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ready ಮಾಡಿಕೊಂಡಿದ್ದೀರಿ ಎನ್ನತಕ್ಕಂಥದ್ದನ್ನು ಹೇಳುತ್ತಿದ್ದೀರಿ, ನಿಮ್ಮ website ನಲ್ಲಿ 4900 ಕೋಟಿ ರೂ.ಗಳದ್ದೆಂದು ತೋರಿಸುತ್ತಿದ್ದೀರಿ. ಇದು ಇರತಕ್ಕಂಥ ಪರಿಸ್ಥಿತಿ. ಈ ಸರ್ಕಾರಕ್ಕೆ ನಾನು ಬಹಳ ಹಿಂದೆಯೇ ಹೇಳಿದೆ. ಈ ಸರ್ಕಾರ ಹೊಸದಾಗಿ ಬಂದಾಗಲೇ, ರಾಮನಗರದ ಪ್ರಾಧಿಕಾರದಲ್ಲಿ 15 ಕೋಟಿ ರೂ.ಗಳನ್ನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಕೌಂಟ್‌ನಿಂದಲೇ ಬೇರೆ ಕಡೆಗೆ ಅಧಿಕಾರಿಗಳು ಎತ್ತಿಕೊಂಡು ಹೋಗಿದ್ದರು. ಮಂಡ್ಯದ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ 5 ಕೋಟಿ ರೂ.ಗಳ ಹಣವನ್ನು ಬೇರೆ ಕಡೆಗೆ ದುರ್ಬಳಕೆ ಮಾಡಿಕೊಂಡಿದ್ದರು. ಇದರ ಬಗ್ಗೆ ತನಿಖೆ ನಡೆಯುತ್ತಿದೆ. ಆಗಲೇ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಇವತ್ತು ಈ ರಾಜ್ಯದಲ್ಲಿ ರಾಜ್ಯ ಸರ್ಕಾರದ ಹಣ ಯಾವ ಯಾವ ಬ್ಯಾಂಕ್ ಖಾತೆಗಳಲ್ಲಿದೆ, ಅವೆಲ್ಲವನ್ನು ಒಂದು ಬಾರಿ ಟ್ರೆಶರಿಗೆ ವಾಪಸ್ ತೆಗೆದುಕೊಳ್ಳಿ ಎಂದು ನಾನು ಅಲ್ಲಿ ಕುಳಿತಿದ್ದಾಗ ಹೇಳಿದ್ದೆ. ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಮನವಿ ಮಾಡಿದೆ. ಇವತ್ತು ಎಲ್ಲೆಲ್ಲಿ ಹಣ ಸೋರಿಕೆಯಾಗಿದೆ, ಯಾವ ರೀತಿಯಾಗಿ ಇವತ್ತು ಸಾರ್ವಜನಿಕರ ಹಣ ಸದ್ಬಳಕೆಯಾಗದೆ ಆ ಹಣವನ್ನು ಇವತ್ತು ಕೆಲವು ಅಧಿಕಾರಿಗಳೋ, ಮತ್ತ್ಯಾರೋ ಸೇರಿ ಸಾರ್ವಜನಿಕರ ಹಣವನ್ನು ನುಂಗಿ ಹಾಕತಕ್ಕಂಥ ಕೆಲಸಗಳೇನು ನಡೆಯುತ್ತಿದೆ, ಅದನ್ನು ಸರಿಪಡಿಸಿಕೊಳ್ಳಬೇಕಾದರೆ ಒಂದು ಬಾರಿ ಸಂಪೂರ್ಣವಾಗಿ ಎಲ್ಲಾ ಬ್ಯಾಂಕ್‌ಗಳಲ್ಲಿರತಕ್ಕಂಥ ಹಣವನ್ನು ರಾಜ್ಯ ಸರ್ಕಾರದ ಖಜಾನೆಗೆ ವಾಪಸ್ ತರಿಸಿಕೊಳ್ಳಿ ಎನ್ನತಕ್ಕಂಥ ಸಲಹೆಯನ್ನು ಕೊಟ್ಟಿದ್ದೆ. ಆದರೆ ಅದರ ಬಗ್ಗೆ ಗಮನ ಕೊಡಲಿಲ್ಲ. ಬಹುಷ: ಶಿವಮೊಗ್ಗದಲ್ಲಿಯೂ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಂಥ ಅವ್ಯವಹಾರಗಳಿವೆ. ಇದೆಲ್ಲವನ್ನು ನಾವು ಕಾಣುತ್ತಿದ್ದೇವೆ. ಈಗ ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಹಣದ ಬಗ್ಗೆ ನಾನು ಹೇಳಿದಾಗ ನಮ್ಮ ಗೌರವಾನ್ವಿತ ಮಂತ್ರಿಗಳು, ಅವರ ಬಗ್ಗೆ ನನಗೆ ಗೌರವವಿದೆ, ಅವರು ಏನು ಹೇಳಿದರೆಂದರೆ ಕುಮಾರಸ್ವಾಮಿಯವರಿಗೆ ಸರಿಯಾದಂಥ ಮಾಹಿತಿಯಿಲ್ಲದೆ ಅವರು ಮಾತನಾಡಿಬಿಟ್ಟಿದ್ದಾರೆ, ನಾವು ತನಿಖೆಯನ್ನು ನಡೆಸುತ್ತಿದ್ದೇವೆ ಎನ್ನುವಂಥ ಪ್ರತಿಕ್ರಿಯೆಯನ್ನು ನಾನು ಹೇಳಿಕೆ ಕೊಟ್ಟಾಗ ಅವರು ಹೇಳಿದರು. ನಾನು ಸ್ವಾಗತ ಮಾಡುತ್ತೇನೆ. ಆದರೆ ನಾವು ಇವತ್ತು ಎಚ್ಚರ ಎಲ್ಲೆಲ್ಲಿ ತಪ್ಪುತ್ತಿದ್ದೇವೆ, ನಮ್ಮನ್ನು ಯಾರು ಯಾರು ಇವತ್ತು ದಾರಿ ತಪ್ಪಿಸುತ್ತಿದ್ದಾರೆ, ಇದಕ್ಕೆ ಕಾರಣಗಳೇನಿವೆ, ಇದನ್ನು ಸರಿಪಡಿಸಿಕೊಳ್ಳದಿದ್ದರೆ ಬಹುಷ: ಮುಂದಿನ ದಿನಗಳಲ್ಲಿ ಈ ರಾಜ್ಯದಲ್ಲಿ ದೊಡ್ಡ ಅನಾಹುತವನ್ನು ನಾವು ಕಾಣುತ್ತೇವೆ. ಇವತ್ತು ಅಧಿಕಾರಿಗಳಿಗೆ ಭಯಭಕ್ತಿಯಿಲ್ಲ. ಯಾವುದೇ ಅಧಿಕಾರಿಗಳಿಗೆ, ಯಾವುದೇ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಲ್ಲಿ ನಾನು ಎಲ್ಲ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಹೆಚ್ಚಿನ ಅಧಿಕಾರಿಗಳಲ್ಲಿ ಇವತ್ತು ಭಯಭಕ್ತಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಎನ್ನುವುದು ಹೊರಟುಹೋಗಿದೆ. ಏನು ಮಾಡಿದರೂ ಕೂಡ ಇವೆಲ್ಲವನ್ನು ನಾವು ಸಹಿಸಿಕೊಳ್ಳಬಹುದು, ಇದರಿಂದ overcome ಮಾಡಿಕೊಂಡು ಬರಬಹುದು, ನಮಗೇನೂ ಇದರಲ್ಲಿ ತೊಂದರೆಗಳಾಗ ುವುದಿಲ್ಲ ಎನ್ನತಕ್ಕಂಥ ಒಂದು ಉದ್ಧಟತನ ಪ್ರಾರಂಭವಾಗಿದೆ. ಇದರಿಂದಾಗಿಯೇ ಇವತ್ತು ಈ mutual fund ಇರಬಹುದು, ಈ ರಾಜ್ಯದಲ್ಲಿ ಯಾರಿಗೂ ಶಿಕ್ಷೆಯಾಗುವುದಿಲ್ಲ, ಅವತ್ತು ನಾನು ಹೇಳಿದೆ, ಮೆಟ್ರೋದಲ್ಲಿರಬಹುದು, ಬಿಡಿ.ಎ. ದಲ್ಲಿರಬಹುದು, ಇವತ್ತು ಸಾವಿರಾರು ಕೋಟಿ ರೂ.ಗಳ ಹಣವನ್ನು mutual fund ನಲ್ಲಿ ಹಾಕಿ ಇವತ್ತು ಆ ಹಣವನ್ನು ಹಾಳುಮಾಡಿದ್ದಾರೆ, ಈ ವಿಷಯಗಳನ್ನೆಲ್ಲ ಬಹಳ ಹಿಂದೆಯೇ ನಾನು ಪ್ರಸ್ತಾಪ ಮಾಡಿದ್ದೇನೆ. ಇಲ್ಲಿ ನಾವು ಈ ರೀತಿಯಲ್ಲಿ ಹಣವನ್ನು ಸೋರಿಕೆ ಮಾಡಿಕೊಂಡು, ಈ ರೈತರುಗಳೇನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಅವರಿಗೆ ಇವತ್ತು ಹಣವನ್ನು ಕೊಡುವುದಕ್ಕೆ ನಾವು ಯೋಚನೆ ಮಾಡುತ್ತೇವೆ. ಆ ರೈತ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ಲಘುವಾಗಿ ಪರಿಗಣಿಸುತ್ತೇವೆ. ಇಂಥ ಒಂದು ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಈ ಕುಡಿಯುವ ನೀರಿನ ವಿಷಯದಲ್ಲಿ ನಾನು ಮನವಿ ಮಾಡುತ್ತೇನೆ, ಇವತ್ತು ನಿಮಗೆ ಉತ್ಸಾಹವಿದೆ. ಇವತ್ತು 7 ಸಾವಿರ ಶುದ್ಧ ನೀರಿನ ಘಟಕಗಳನ್ನು ಮಾಡುತ್ತೇನೆಂದು ತಾವು ಹೇಳಿದ್ದೀರಿ. ಆ ರೀತಿ 7 ಸಾವಿರ ಶುದ್ಧ ನೀರಿನ ಘಟಕಗಳನ್ನು ಮಾಡದಿದ್ದರೆ ನಾನು ರಾಜೀನಾಮೆಯನ್ನೇ ಕೊಟ್ಟು ಹೋಗುತ್ತೇನೆಂದು ಹೇಳಿದ್ದೀರಿ. ಆ ಮಾತನ್ನು ಸದನದಲ್ಲಿಯೇ ಹೇಳಿಬಿಟ್ಟಿದ್ದೀರಿ. ಬಹುಷ: ಈಗ ಹೋಗುತ್ತಿರತಕ್ಕಂಥ ಆ ವೇಗ, ಈಗ ಆಗುತ್ತಿರತಕ್ಕಂಥ ಕೆಲಸವನ್ನು ನೋಡಿದಾಗ, ಬಹುಷ: ನಿಮ್ಮ ಉತ್ಸಾಹ ಮತ್ತು ಗುರಿಯನ್ನೇನು ಇಟ್ಟುಕೊಂಡಿದ್ದೀರೋ, ಆ ರೀತಿ ಗುರಿ ಮುಟ್ಟತಕ್ಕಂಥದ್ದಕ್ಕೆ ನಿಮ್ಮ ಅಧಿಕಾರಿಗಳಾಗಲಿ ಅಥವಾ ನಿಮ್ಮ ಸರ್ಕಾರದ ಮುಖಾಂತರ, ಆರ್ಥಿಕ ಇಲಾಖೆಯ ಮುಖಾಂತರ ಆ ಗುರಿ ಮುಟ್ಟತಕ್ಕಂಥದ್ದಕ್ಕೆ ನೀವು ಯಶಸ್ಸನ್ನು ಕಾಣುತ್ತೀರ ಎನ್ನತಕ್ಕಂಥದ್ದರ ಬಗ್ಗೆ ನೀವೇ ತೀರ್ಮಾನಕ್ಕೆ ಬರಬೇಕು. ಏಕೆಂದರೆ ಇಲ್ಲಿ ನಡೆಯುತ್ತಿರತಕ್ಕಂಥ ಕಾಮಗಾರಿಗಳು, ಹಣ ಬಿಡುಗಡೆಯಾಗುತ್ತಿರುವುದು, ಇವೆಲ್ಲವನ್ನು ನೋಡಿದಾಗ ಎಲ್ಲೋ ಒಂದು ಕಡೆ ಆ ಗುರಿಯನ್ನು ಮುಟ್ಟತಕ್ಕಂಥ ವಿಷಯದಲ್ಲಿ ವಿಫಲರಾಗುತ್ತೀರೇನು ಎನ್ನತಕ್ಕಂಥ ಸಂಶಯವಿದೆ. ಮಾನ್ಯ ಅಧ್ಯಕ್ಷರೆ, ಇನ್ನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಾವು ಹೇಳಿದಿರಿ, ಮೊನ್ನೆಯೂ ಕೂಡ ನಾನು ಸದನಕ್ಕೆ ಬರದಿದ್ದರೂ ಕೂಡ ಹೊರಗಡೆ ಅಲ್ಲಿ ಕುಳಿತು ಕೇಳಿಸಿಕೊಳ್ಳುತ್ತಿದ್ದೆ.

ಶ್ರೀ ಕೆ. ಶಿವಮೂರ್ತಿ:-ಕುಮಾರಸ್ವಾಮಿಯವರೆ, ಒಂದು ಕ್ಲಾರಿಫಿಕೇಶನ್, ಈ ಹಣವನ್ನು swindle ಮಾಡುತ್ತಾರೆಂದು ತಾವು ಹೇಳಿದಿರಲ್ಲ, ಅಧಿಕಾರಿಗಳು ತಮ್ಮ ಖಾತೆಯಲ್ಲಿಟ್ಟುಕೊಂಡು ಸ್ವೇಚ್ಛಾಚಾರವಾಗಿ ಡೆಪಾಸಿಟ್ ಮಾಡಿಕೊಂಡು ಅದರಿಂದ interest ಪಡೆದುಕೊಳ್ಳುತ್ತಿದ್ದಾರೆಂದು. ಇವೆಲ್ಲವು ಪೂರ್ತಿ ನಿಖರವಾಗಿ ರಾಜ್ಯದಲ್ಲಿ ಎಷ್ಟು ಹಣ ಯಾವ ಯಾವ ಖಾತೆಯಲ್ಲಿದೆಯೆಂದು ತಮ್ಮಲ್ಲಿ ಮಾಹಿತಿಯಿದೆಯೆ? ಏಕೆಂದರೆ ತಾವು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂಥವರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:-ಶಿವಮೂರ್ತಿಯವರೆ ಇದರ ಬಗ್ಗೆ ಮಾಹಿತಿಯನ್ನು ನನ್ನಲ್ಲಿ ಕೇಳುತ್ತೀರಲ್ಲ. ಇದರ ಬಗ್ಗೆ ಮಾಹಿತಿ ಕೊಡಬೇಕಾದವರು ಅವರು. ನನ್ನನ್ನು ಮಾಹಿತಿ ಕೇಳಿದರೆ ಹೇಗೆ. ನಾನಲ್ಲ ಸರ್ಕಾರವನ್ನು ನಡೆಸುತ್ತಿರುವುದು.

ಶ್ರೀ ಕೆ. ಶಿವಮೂರ್ತಿ:-ತಾವು ಇದರ ಬಗ್ಗೆ ಬೆಳಕು ಚೆಲ್ಲಬೇಕು. Financial discipline ವಿಚಾರದಲ್ಲಿ ಅವರ ಮೇಲೆ control ಇಡಬೇಕಲ್ಲವೆ, ಇದು audit ಆಗಬೇಕು, accountability ಇರಬೇಕಲ್ಲವೆ, ಹೀಗಿರುವಾಗ ಇದನ್ನು ಬಿಟ್ಟು ಹೇಗೆ ಹೋಗುತ್ತಾರೆ

ಶ್ರೀ ಹೆಚ್.ಡಿ. ಕುಮಾರಸ್ವಾಮಿ:-ಶಾಸಕಾಂಗ ಪಕ್ಷದ ಸಭೆಯಲ್ಲಿ ನೀವು ಮುಖ್ಯಮಂತ್ರಿಗಳ ಜೊತೆ ಈ ವಿಷಯದ ಬಗ್ಗೆ ಚರ್ಚೆ ಮಾಡಿ. ಈಗಾಗಲೇ ಇಂಥ ಹಲವಾರು ಪ್ರಕರಣಗಳು ನಿಮ್ಮ ಮುಂದಿದೆ. ಹಲವಾರು ಪ್ರಕರಣಗಳು ನಿಮ್ಮ ಮುಂದಿದೆ.

ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-ಕುಮಾರಸ್ವಾಮಿಯವರೆ ಒಂದ್ನಿಮಿಷ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:-ಹೇಳಿ ಸಾರ್.

ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರು ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಸಾಕಷ್ಟು ವಿವರಗಳೊಂದಿಗೆ ಈ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಬರದ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದಾರೆ. ಅದರಲ್ಲಿಯೂ ನಮ್ಮ ಇಲಾಖೆಗೆ ನೇರವಾಗಿ ಸಂಬಂಧಿಸಿರತಕ್ಕಂಥ ಏನು ಕುಡಿಯುವ ನೀರಿಗಾಗಿ ಹಣವೇನಿತ್ತೋ ಅದನ್ನು ಠೇವಣಿ ಮಾಡಿ ಮುಖ್ಯ ಖಾತೆಯಿಂದ ಪ್ರತ್ಯೇಕವಾಗಿರಿಸಿರುವುದರ ಬಗ್ಗೆ, ಪತ್ರಿಕೆಯಲ್ಲಿ ಹೇಳಿಕೆ ಬಂದಿದ್ದರ ಬಗ್ಗೆ ಹಾಗೂ ನಾವು ನಮ್ಮ ಇಲಾಖೆಯಲ್ಲಿರತಕ್ಕಂಥ ಆ ದೋಷವೇನಿದೆ ಅದನ್ನು ಕಂಡುಹಿಡಿಯುವುದಕ್ಕೆ ಪುನಟಿ ಶ್ರೀಧರ್‌ರವರ ಸಮಿತಿಯನ್ನು ರಚನೆ ಮಾಡಿದ್ದೆವು. ಅವರು ತನಿಖೆ ಮಾಡಿ ಒಂದು ವರದಿಯನ್ನು ಕೊಟ್ಟಿದ್ದರು. ಅದಾದ ಮೇಲೆ ನನ್ನದೊಂದು ಹೇಳಿಕೆಯಿತ್ತು. ಅದಕ್ಕೆ ಅವರದೊಂದು ಹೇಳಿಕೆ ಬಂತು. ಅದಕ್ಕೆ ನಾನು ಪ್ರತಿಕ್ರಿಯಿಸಿದೆ. ಅದಕ್ಕೆ ಈಗ ಅವರು ಮತ್ತೆ ಉತ್ತರ ಕೊಟ್ಟರು. ಏತನ್ಮಧ್ಯೆ ಸನ್ಮಾನ್ಯ ಶಿವಮೂರ್ತಿ ನಾಯಕ್‌ರವರು ಅವರನ್ನು ಒಂದು ಪ್ರಶ್ನೆ ಕೇಳುತ್ತಿದ್ದಾರೆ. ನಮಗೆ ಕೇಳಬೇಕಾಗಿರತಕ್ಕಂಥ ಪ್ರಶ್ನೆಯನ್ನು ಅವರಲ್ಲಿ ಕೇಳಿದರು. ಆದರೆ ಅವರ ಹತ್ತಿರ ಮಾಹಿತಿಯಿದ್ದರೆ ಕೊಡಿ ಎಂದು ಅವರು ಕೇಳಿದ್ದಾರೆ. ಪರವಾಗಿಲ್ಲ. ಆದರೆ ಒಂದು ಮಾತನ್ನು ನಾನು ಕುಮಾರಸ್ವಾಮಿಯವರಿಗೆ ಹೇಳಬಯಸುತ್ತೇನೆ. ಶಿವಮೂರ್ತಿ ನಾಯಕ್‌ರವರಿಗೆ ಉತ್ತರವಾಗಿ ಹೇಳಬಯಸುತ್ತೇನೆ. ಏನು ಈ ರೀತಿಯಾಗಿ ಅನಧಿಕೃತವಾಗಿ ಈಗ ಠೇವಣಿಯಾಗಿದೆಯೋ, ಜನರ ಅಭಿವೃದ್ಧಿಗಾಗಿ ಏನು ಹಣ ವಿನಿಯೋಗವಾಗಬೇಕಾಗಿತ್ತೋ ಅದರ ಬದಲಾಗಿ ಠೇವಣಿ ಇಟ್ಟಿರತಕ್ಕಂಥ ಕ್ರಮವನ್ನು ಸರ್ಕಾರ ಸಹಿಸಬಾರದು.

(ಮುಂದು)

D 25.11.2015/12.00/7/HBU-VG

ಶ್ರೀ ಹೆಚ್.ಕೆ. ಪಾಟೀಲ್ (ಮುಂದು) : ಈ ಹಿನ್ನೆಲೆಯಲ್ಲಿ ಒಂದು ಸಮಿತಿ ಮಾಡಿದೆವು. ಮಾನ್ಯ ಶಿವಮೂರ್ತಿ ನಾಯಕ್ ಅಪೇಕ್ಷೆ ಪಟ್ಟ ಹಾಗೆ ಒಂದು detailed audit ಆಗಬೇಕಾಗಿತ್ತು. ಈಗಾಗಲೇ ಆರ್ಥಿಕ ಇಲಾಖೆಯವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಒಂದು ಗ ಂಭೀರವಾದಂಥ ಸಭೆಯನ್ನು ನಡೆಸಿದರು. ಆ ಸಭೆಯಲ್ಲಿ ಎರಡು ತಿಂಗಳೊಳಗೆ ತನಿಖೆ ಆಗ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಬೇಕೆಂದು ಆದೇಶ ಕೊಟ್ಟರು. ಆ ಆದೇಶದ ಹಿನ್ನೆಲೆಯಲ್ಲಿ ಶಿವರುದ್ರಪ್ಪ, Additional Comptroller of Auditor ಎಂದು ಏನೋ ಅವರ designation ಇದೆ, ಅವರನ್ನೊಳಗೊಂಡಂತೆ ಒಂದು ಆಡಿಟ್ ಟೀಮ್ ಮಾಡಿದ್ದು, ಈಗಾಗಲೇ ತನಿಖೆಯಾಗಿದೆ. ಇನ್ನು ಸ್ವಲ್ಪ ಸಮಯದಲ್ಲಿ ವರದಿ ನಮ್ಮ ಕೈಸೇರುತ್ತದೆ. ಆ ಸಂದರ್ಭದಲ್ಲಿ ಶಿವಮೂರ್ತಿ ನಾಯಕ್‌ರವರು ಹೇಳಿದಂತೆ, ಮಾನ್ಯ ಕುಮಾರಸ್ವಾಮಿಯವರು ಪ್ರಸ್ತಾಪ ಮಾಡಿದ ಹಾಗೆ ಹೆಚ್ಚಿನ ವಿವರಗಳನ್ನು ನಾವು ನಿಮ್ಮ ಜೊತೆ ಹಂಚಿಕೆ ಮಾಡಿಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೆಲವೊಂದು ಮಾಹಿತಿಗಳನ್ನು ಕೊಟ್ಟರು. ಅನಧಿಕೃತವಾಗಿ ಠೇವಣಿ ಇಟ್ಟಿರುವುದರ ಬಗ್ಗೆ ತನಿಖೆ ಮಾಡುವುದಕ್ಕೆ ಒಂದು ಸಮಿತಿ ಮಾಡಿದ್ದು, ಆ ಸಮಿತಿ ತನಿಖೆ ಮಾಡಿ ವರದಿ ಕೊಟ್ಟಿದ್ದಾರೆನ್ನುವ ವಿಚಾರದಲ್ಲಿ ನಾನು ಪ್ರಸ್ತಾಪ ಮಾಡಬೇಕೆಂದು ಕೊಂಡಿದ್ದೆನು. ಆದರೆ ಈಗ ಈ ವಿಚಾರ ಬಂದಿದ್ದರಿಂದ ಇಲ್ಲಿ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ. ಆ ಸಮಿತಿ ತನಿಖೆ ಮಾಡಿರುವಂಥ ವರದಿ ಇದೆಯಲ್ಲ, ಅದನ್ನು ದಯವಿಟ್ಟು ಬಹಿರಂಗಪಡಿಸಿ. ನಾನು ಇನ್ನೊಂದು ಮಾತು ಹೇಳುವುದೇನೆಂದರೆ 400-500 ಕೋಟಿ ರೂಪಾಯಿ ಹಣವನ್ನು ನಿಯಮಾನುಸಾರ ಇಟ್ಟಿಲ್ಲದಿರುವುದರಿಂದ ತನಿಖೆ ಮಾಡಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ನನಗೆ ಅನಿಸುವ ಮಟ್ಟಿಗೆ ಕುಡಿಯುವ ನೀರಿನ ಯೋಜನೆಗೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಬಂದಿರುವಂಥ ಹಣವನ್ನು ಡೆಪಾಸಿಟ್ ಇಟ್ಟು, ಆ ಹಣ ಖರ್ಚಾಗದೆ ಹಾಗೆ ಉಳಿಯುತ್ತದಲ್ಲ, ಆ ಹಣ ಖರ್ಚಾಗುವುದು ಆಗಬೇಕಲ್ಲ. ಅದು ಆಗದಿದ್ದರೆ ಏನು ಪ್ರಯೋಜನ? ಆಗ ಕುಡಿಯುವ ನೀರಿನ ಯೋಜನೆ ಎಲ್ಲಾ ಸ್ಥಗಿತವಾಗುತ್ತದೆ. ಇನ್ನೊಂದು ವಿಚಾರ ಏನೆಂದರೆ ತಮ್ಮ ಕಛೇರಿಯಿಂದಲೇ ನಿಮ್ಮ ಕಾರ್ಯದರ್ಶಿಯವರ ಸೂಚನೆ ಪ್ರಕಾರ ಸುಮಾರು 80 ಕೋಟಿ ರೂಪಾಯಿ ಹಣ ಧಾರವಾಡದ ಕೆಲವು ಬ್ಯಾಂಕುಗಳಲ್ಲಿ ಡೆಪಾಸಿಟ್ ಇಟ್ಟಿದ್ದಾರೆನ್ನುವ ಆಪಾದನೆ ಬಂದಿದೆ. ಅದಕ್ಕೂ ಸಹ ತಾವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಏಕೆಂದರೆ ಆ ಹಣವನ್ನು ಅನಧಿಕೃತವಾಗಿ ನಿಯಮವನ್ನು ಮೀರಿ ಇಟ್ಟಿದ್ದಾರೆನ್ನುವುದು ಹಾಗೂ ತಮ್ಮ ಕಛೇರಿಯಿಂದಲೇ ಸೂಚನೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹೋಗಿರುವ ಪ್ರಕಾರ 80 ಕೋಟಿ ರೂಪಾಯಿ ಹಣ ಇಟ್ಟಿದ್ದಾರೆನ್ನುವ ವಿಚಾರದಲ್ಲಿ ಬಹಳಷ್ಟು ಗೊಂದಲ ನಿರ್ಮಾಣವಾಗಿದೆ. ಒಂದು ಕಡೆ ಆ ವಿಚಾರದಲ್ಲಿ ತನಿಖೆ ಮಾಡಬೇಕಾಗಿದ್ದರೆ, ಮತ್ತೊಂದು ಕಡೆ ಆ ಹಣ ಖರ್ಚಾಗಬೇಕು. ಇಲ್ಲದಿದ್ದರೆ ನೀವು ಈ ಕೆಲಸ ಮಾಡಿರುವುದರ ಬಗ್ಗೆ Completion Certificate ಕೇಂದ್ರ ಸರ್ಕಾರಕ್ಕೆ ತೋರಿಸದಿದ್ದರೆ ಬರುವಂತಹ ದಿನಗಳಲ್ಲಿ ಬರುವಂತಹ ಹಣಕ್ಕೂ ಕೂಡ ತಡೆಯಾಗು ತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಗ್ರಾಮೀಣಾಭಿವೃದ್ಧಿ ಇಲಾಖೆ ಮಂತ್ರಿಗಳಾಗಿ ಕೆಲಸ ಮಾಡಿದವರು. ಅಕ್ರಮವಾಗಿ ಠೇವಣಿ ಇಟ್ಟಿರುವುದನ್ನು ತನಿಖೆ ಮಾಡಬೇಕೆಂದು ಹೇಳಿ ಪ್ರಾರಂಭ ಮಾಡಿದವನೇ ನಾನು. ನಾನು ಅಥವಾ ನನ್ನ ಕಛೇರಿಯಿಂದ ಇರಬಹುದು, ಯಾರೇ ಆಗಲಿ ಅಕ್ರಮವಾಗಿ ಡೆಪಾಸಿಟ್ ಮಾಡಬೇಕೆಂದು ಹೇಳಿದ್ದರೆ, ಅದು ಸತ್ಯಕ್ಕೆ ದೂರವಾದುದು. ಅದರ ಜೊತೆಗೆ ಹೇಳುವುದೇನೆಂದರೆ ಈಗ ಯಾರ ಮೇಲೆ ತನಿಖೆ ನಡೆಯುತ್ತದೆ, ಯಾರ ಮೇಲೆ ಪೊಲೀಸ್ ಕಂಪ್ಲೇಟ್ ಆಗುತ್ತದೆ, ಅವರ ಮಾತು ಕೇಳಿ ಅಲ್ಲೊಂದು ಇಲ್ಲೊಂದು ವರದಿ ಬಂದರೆ ಅದರ ಬಗ್ಗೆ ಸರಿಯಾದ ಸತ್ಯವನ್ನು ಅರಿತು ಯಾರೇ ಆಗಲಿ ಹೇಳಬಹುದು. ನಾನು ಒಂದು ಮಾತನ್ನು ತಮಗೆ ಹೇಳುತ್ತೇನೆ. ತಾವು ವರದಿ ಕಳುಹಿಸಿ ಎಂದು ಹೇಳಿದಿರಿ. ನಮ್ಮ ಪುನೀತಿ ಶ್ರೀಧರ್ ಅವರ ವರದಿ, ನಿಮ್ಮ ಕೈಗೆ ಮುಟ್ಟಿರುವುದಕ್ಕೆ ಸಾಕು. ನಮ್ಮ ಶಾಸಕ ಮಿತ್ರರಿಗೂ ವರದಿಗಳನ್ನು ಕೊಟ್ಟಿದ್ದೇನೆ. ಅವರು ಮೂರು interim report and final report ಕೊಟ್ಟರು, ಆ ನಾಲ್ಕು ವರದಿಗ ಳನ್ನು ನಿಮಗೆ ಇವತ್ತೆ ಕಳುಹಿಸಿಕೊಡುತ್ತೇನೆ. ಶಿವರುದ್ರಪ್ಪ ವರದಿ ನಮಗೆ ಸಲ್ಲಿಕೆಯಾದಮೇಲೆ ಅದನ್ನು ಪರಿಶೀಲನೆ ಮಾಡಿ ಅದೂ ಸಹ ನಿಮಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಮಂತ್ರಿಗಳೆ ಅವರ ಇಲಾಖೆಯಲ್ಲಿ ಅನಧಿಕೃತವಾಗಿ ಅಕ್ರಮ ಠೇವಣಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ, ಅದೆಲ್ಲ ಸರಿ. ಕಳೆದ ವರ್ಷ 30-54 ಸ್ಕೀಮ್‌ನಲ್ಲಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹಾಗೂ ತಾಲ್ಲೂಕು ಪಂಚಾಯಿತಿ ಗ್ರ್ಯಾಂಟ್ last day 12.00 ಗಂಟೆಗೆ treasury lock ಆಗಿ ಹೋಯಿತು. ಸುಮಾರು 75% ಬಿಲ್‌ಗಳು ಪಾವತಿಯಾಗಲಿಲ್ಲ. ಇದರಿಂದ ಇಡೀ ಸದನದಲ್ಲಿರುವ ಬಹಳಷ್ಟು ಸದಸ್ಯರುಗಳ ಕ್ಷೇತ್ರದಲ್ಲಿ ಕಷ್ಟವಾಯಿತು. ತಾವು ಈ ವಿಚಾರದಲ್ಲಿ ತನಿಖೆಗೆ ಒಪ್ಪಿಸಿದಿರಿ. ನಾನು ಹೇಳುವುದು ಅಂಗೈ ಹುಣ್ಣಿಗೆ ಕನ್ನಡಿ ಏಕೆ? ಅನಧಿಕೃತವಾಗಿ ಅಕ್ರಮವಾಗಿ ಠೇವಣಿ ಇಟ್ಟಿರುವುದು ಗೊತ್ತಿದೆ. ನೀವು ನೇರವಾಗಿ ಅಧಿಕಾರಿಗಳ ಮೇಲೆ ಆಕ್ಷನ್ ಮಾಡಿ. ಆ ಅಧಿಕಾರಿಗಳಿಗೆ ಎಷ್ಟು ಧೈರ್ಯವಿರಬೇಕು? ಅದು 5-10 ಕೋಟಿ ರೂಪಾಯಿ ಆದರೆ ಒಂದು ರೀತಿಯಾಗುತ್ತದೆ, ಆದರೆ ನೂರಾರು ಕೋಟಿ ರೂಪಾಯಿ ಹಣವನ್ನು, ಅವರ ಸ್ವಂತಿಕೆಗೋ, ಅವರ ಲಾಭಕ್ಕೋ, ಪರ್ಸಂಟೇಂಜ್‌ಗೋ ಏನೋ ಒಂದು ಮಾಡುವುದಕ್ಕೆ ಮಾಡಿದ್ದಾನೆ. ಅವರು ಅಕ್ರಮವಾಗಿ ಠೇವಣಿ ಇಡುತ್ತಾರೆಂದರೆ, ತಾವು ನೇರವಾಗಿ ಆಕ್ಷನ್ ಮಾಡಬಹುದಲ್ಲ. ಮೊದಲೇ ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳುತ್ತೀರಿ. ಇದ್ದಂತಹ ಹಣವನ್ನು ಅವರು ಆ ರೀತಿಯಾಗಿ ಅಕ್ರಮವಾಗಿ ಠೇವಣಿ ಇಟ್ಟುಕೊಂಡಿದ್ದಾರೆ, ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿ ಆಗುತ್ತಿದೆ ಎಂದಾಗ ಅದರ ಪರಿಣಾಮಗಳೇನು? ತಾವು ದಯಮಾಡಿ ಆ ನಿಟ್ಟಿನಲ್ಲಿ ಶೀಘ್ರ ಕ್ರಮವಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಹಣ ಏನು diversion ಆಗಿದೆ, ಅದರಿಂದ ಕೆಲಸ ಸ್ಥಗಿತವಾಗಿರುವುದು ನಿಮ್ಮ ಕಾಲದಲ್ಲಿ ಆಗಿರುವುದಲ್ಲ. ಇದು ಬಹುಶ: 2010-2011ರಿಂದ ಪ್ರಾರಂಭವಾಗಿರುವುದು, ಇದು ಹೊಸದಾಗಿ ಪ್ರಾರಂಭವಾಗಿರುವುದು ಅಲ್ಲ. ಅದಕ್ಕೆ ನಾನು ಅಧಿಕಾರಿಗಳು ಸ್ವಲ್ಪ ದಾರಿ ತಪ್ಪಿದ್ದಾರೆಂದು ಹೇಳಿದ್ದು. ನಾನು ಮಾಹಿತಿ ಇಡಬೇಕಾದರೆ ಯಾವುದೋ ಅಧಿಕಾರಿ ತಪ್ಪು ಮಾಡಿದವನು, ಅವನು ಕೊಡುವಂತಹ ಮಾಹಿತಿ ಮೇಲೆ ನಾನು ಚರ್ಚೆ ಮಾಡುವುದಿಲ್ಲ. ಯಾರು ತಪ್ಪು ಮಾಡಿರುತ್ತಾನೆ, ಅದರ ಮೇಲೆ ಚರ್ಚೆ ಮಾಡುತ್ತೇನೆ. ಯಾವುದೇ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡದಿದ್ದರೆ, ನಿರ್ದಾಕ್ಷಿಣ್ಯವಾಗಿ, ನೇರವಾಗಿ ಅಂತಹ ಅಧಿಕಾರಿಗಳ ಬಗ್ಗೆ ಚರ್ಚೆ ಮಾಡುವಂತಹ ಒಂದು ಅಭ್ಯಾಸವನ್ನು ಇಟ್ಟುಕೊಂಡಿದ್ದೇನೆ. ನಾನು ಇನ್ನೊಂದು ವಿಚಾರ ತಮ್ಮ ಗಮನಕ್ಕೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತರುವುದೇನೆಂದರೆ Ministry of Drinking Water and Sanitationನಲ್ಲಿ ಒಂದು ಸಭೆಯಾಗಿದೆ. ಆ ಸಭೆಯಲ್ಲಿ '119 schemes which are pending more than 3 to 10 years for completion and also another three schemes which are pending more than 10 years and requested to complete the schemes by giving priority' ಎಂದು ನಮ್ಮ ಅಧಿಕಾರಿಗಳು ಹೋದಾಗ ಚರ್ಚೆಯಾಗಿದೆ. However Secretary MDWS directed that NRDWP funds not to be used for completion of any scheme pending for more than five years ಎಂದು ಅವರು direction ಕೊಟ್ಟಿದ್ದಾರೆ. ನಾವು ಹಳೇ ಕಾಮಗಾರಿಗಳನ್ನು ನಾವು ಹಾಗೆ ನಿಲ್ಲಿಸಿಕೊಂಡು ಯಾವುದೋ ಒಂದು ಕಾರಣಕ್ಕೆ ನಿಂತಿರುವುದಕ್ಕೆ ಇವತ್ತು ರಾಜ್ಯ ಸರ್ಕಾರದ ಹಣವನ್ನು ಹಾಕಿಕೊಂಡೇ ಕೆಲಸ ಮಾಡಬೇಕಾಗಿದೆ. ಕೇಂದ್ರ ಸರ್ಕಾರ ಈಗ ಕೊಡತಕ್ಕಂಥ ಹಣವನ್ನು ನಾವು ಯಾವುದೇ ಹಳೆ ಯೋಜನೆಗಳಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಮತಿ ಕೊಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ತಾವು ಈ ವಿಚಾರದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳದೆ ಹೋದರೆ ಬಹುಶ: ಆ ಸ್ಕೀಮ್‌ಗಳು ಹಾಗೆ ನಿಂತು ಹೋಗುತ್ತವೆ. ಆ ಹಿನ್ನೆಲೆಯಲ್ಲಿ ದಯವಿಟ್ಟು top priorityಅನ್ನು ಕೊಡುವುದಕ್ಕೆ ಗಮನ ಕೊಡಬೇಕೆಂದು ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ನಾನು ಏಕೆ ಹೇಳಿದ್ದೆಂದರೆ ಈ ಹಣವನ್ನು ಬೇರೆ ಬೇರೆ ಬ್ಯಾಂಕುಗಳಲ್ಲಿ ಇಟ್ಟಂತಹ ವಿಷಯದಲ್ಲಿ ಹೊರಗಡೆ ಹಣ ದುರ್ಬಳಕೆಯಾಗಿದೆ, ಹಣ ಲಪಟಾಯಿಸಿದ್ದಾರೆನ್ನುವ ಮಾಹಿತಿ ಕೇಂದ್ರ ಸರ್ಕಾರಕ್ಕೆ ಹೋಗಿದೆ, ಅದರ ಹಿನ್ನೆಲೆಯಲ್ಲಿ ತಾವು 1,500 ಕೋಟಿ ರೂಪಾಯಿ ಹಣ ಬರುತ್ತದೆಂದು ನಿರೀಕ್ಷೆ ಮಾಡಿದಂತೆ ಆ ಹಣವನ್ನು ಕಡಿತಗೊಳಿಸಬೇಕೆಂದು ತೀರ್ಮಾನಗೊಳಿಸಿದ್ದಾರೆಂದು ನನಗೆ ಇರುವಂತಹ ಮಾಹಿತಿ ಇದೆ. ಆದ್ದರಿಂದ ನಮ್ಮ ಇಲಾಖೆಯ ಅಧಿಕಾರಿಗಳು ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡಿ ಇಲ್ಲಿ ಯಾವುದೇ ಹಣ ದುರ್ಬಳಕೆಯಾಗಿಲ್ಲ, ನಾವು ಹಣವನ್ನು ಲೂಟಿ ಮಾಡುವುದಕ್ಕೆ ಬಿಟ್ಟಿಲ್ಲ, ಬಳಕೆ ಮಾಡಿಕೊಳ್ಳುತ್ತಿದ್ದೇವೆ, ಹಣ ದುರ್ಬಳಕೆಯಾಗಿದೆ ಎನ್ನುವ ಭಾವನೆಯನ್ನು ತೆಗೆದುಹಾಕಿ. ಕೇಂದ್ರ ಸರ್ಕಾರದ ಹಣ 1,500 ಕೋಟಿ ರೂಪಾಯಿ ಬರುತ್ತದೆಂದು ಏನು ನಿರೀಕ್ಷೆ ಇಟ್ಟಿದ್ದೇವೆ, ಆ ಹಣ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಡದಿದ್ದರೆ ನಮಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದಕ್ಕೆ ತೊಂದರೆಯಗುತ್ತದೆಂದು ಚರ್ಚೆ ಮಾಡಿ ಮಾಹಿತಿಯನ್ನು ಕೊಟ್ಟು ಹಣ ತರುವುದಕ್ಕೆ ಗಮನ ಕೊಡುವುದ ಸೂಕ್ತ. ಇಲ್ಲದಿದ್ದರೆ ನೀವು ಏನು ಗುರಿ ಇಟ್ಟುಕೊಂಡಿದ್ದೀರಿ, ಅದರಲ್ಲಿ ಪೆಟ್ಟು ತಿನ್ನುತ್ತೀರಿ ಎನ್ನುವ ವಿಚಾರವನ್ನು ನಾನು ತಮ್ಮ ಗ ಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಾವೂ ಕೂಡ ನರೇಗಾ ಯೋಜನೆ ಅತ್ಯಂತ ಉತ್ತಮವಾದುದು ಎಂದು ಹೇಳುತ್ತಿದ್ದಿರಿ. ರೈತರು ಹಾಗೂ ಉತ್ತರ ಕರ್ನಾಟಕದ ಕೂಲಿ ಕಾರ್ಮಿಕರು ಬರಗಾಲದಲ್ಲಿ ಗುಳೆ ಹೋಗುತ್ತಿದ್ದಾರೆ, ಈ ನರೇಗಾ ಯೋಜನೆಯನ್ನು ಉಪಯೋಗ ಮಾಡಿಕೊಂಡು ಅವರು ಗುಳೆ ಹೋಗ ುವುದನ್ನು ನಿಲ್ಲಿಸಬೇಕೆಂದು ತಾವು ಇಲ್ಲಿ ಚರ್ಚೆ ಆಗಬೇಕಾದರೆ ಹೇಳಿದಿರಿ. ಈ ನರೇಗಾ ಯೋಜನೆ ಒಳ್ಳೆಯ ಯೋಜನೆಯೇ.

ಅಧ್ಯಕ್ಷರು : ಈಗ ಅದಕ್ಕೆ ಹೊರತಡೆ ಬಂದಾಗ ಕೆಲವರೆಲ್ಲ ನಿಮ್ಮಿಂದ ನಾವೆಲ್ಲ ಜಮೀನು ಮಾರುವುದೇ ಸೈ ಎಂದು ಹೇಳಿದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ನರೇಗಾ ಸ್ಕೀಮ್ ಅನ್ನು ಕೆಲವರು ಮರೇಗ ಾ ಸ್ಕೀಮ್ ಎಂದು ಕರೆಯುತ್ತಾರೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ತಮಾಷೆ ಮಾಡುವುದಿಲ್ಲ ಮತ್ತು ಅದನ್ನು ಲಘುವಾಗಿ ಕೂಡ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಕುಮಾರಸ್ವಾಮಿ, ಅದನ್ನು ನಾನು ಒಪ್ಪಿದೆ. ಆ ಒಂದು ಯೋಜನೆ ಇದೆಯಲ್ಲ, ಅದು ನಮ್ಮ ದೇಶಕ್ಕೆ ಒಂದು ಅಪೂರ್ವವಾದಂತಹ ಯೋಜನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಒಳ್ಳೆಯ ಯೋಜನೆ ಎಂದು ನಾನು ಕೂಡ ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಅಧ್ಯಕ್ಷರು : ಅದನ್ನು ಕಾರ್ಯಗತ ಮಾಡುವಂತಹ ವಿಚಾರದಲ್ಲಿ ಈ ಸರ್ಕಾರಕ್ಕೂ ಹಾಗೂ ಹಿಂದಿನ ಸರ್ಕಾರಕ್ಕೂ ಇಚ್ಛಾಶಕ್ತಿ ಇಲ್ಲ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಮರೇಗಾ ಪದ ಸರಿಯಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಕಾರಣವನ್ನು ಹೇಳುತ್ತೇನೆ. ಈ ನರೇಗ ಾ ಯೋಜನೆಯ ಹಣವನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ, ಈಗ ಇರುವಂತಹ RTI ವ್ಯವಸ್ಥೆಯೊಳಗೆ ಸ್ಥಳೀಯವಾಗಿ ನಡೆಯುವಂತಹ ರಾಜಕಾರಣ ಏನಿದೆ, ಕಾಮಗಾರಿಗಳು ಆಗುವಂತಹ ವಿಷಯದಲ್ಲಿ ಆ ರಾಜಕಾರಣವನ್ನು ನಿಲ್ಲಿಸಿದರೆ ನೀವು ಹೇಳಿದಂತೆ ಕೆಲಸವನ್ನು ಸರಿಯಾಗಿ ನಡೆಸಬಹುದು.

ಅಧ್ಯಕ್ಷರು : ಆ ರಾಜಕಾರಣ ನಿಲ್ಲಿಸಬಹುದು ಎಂದರೆ ನಾವು 224 ಜನ ಇದ್ದೇವಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು.

(ಮುಂದು)

25.11.15 - 12.10 - (8) - RD-CP

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮುಂದು.. ..

ರಾಯಚೂರು ಜಿಲ್ಲೆಯಲ್ಲಿ ನರೇಗಾ ಸ್ಕೀಮ್‌ನಲ್ಲಿ 1,500 ಜನರು ಅರ್ಜಿಯನ್ನು ಹಾಕಿ, ನರೇಗಾ ಹಣವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿ ಕೊಡುತ್ತೇನೆ. ಸುಮಾರು 34 ಲಕ್ಷರೂ.ಗಳಷ್ಟು ಹಣವನ್ನು ಯಾರಿಗೂ ಕೂಲಿ ಕೊಡದೇ ದುರ್ಬಳಕೆಯಾಗಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ರುವಂಥ ಒಂದು ಪ್ರಕರಣವಾಗಿದೆ. ಇದು ಇತ್ತೀಚೆಗೆ ರಾಯಚೂರು ಜಿಲ್ಲೆಯಲ್ಲಿ 34 ಲಕ್ಷ ರೂ.ಗಳ ಸುಳ್ಳು ಲೆಕ್ಕವನ್ನು ತೋರಿಸಿ, ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ರೀತಿಯಾದಾಗ ತಾವು ಹೇಳುತ್ತಿರುವ ಉದ್ದೇಶ ಅತ್ಯಂತ ಉತ್ತಮವಾಗಿರುವಂಥದ್ದು, ಇದನ್ನು ರಾಷ್ಟ್ರದಲ್ಲಿ ತಂದರು, ಪ್ರತಿ ಕುಟುಂಬಕ್ಕೆ social justice ಕೊಡಬೇಕು, ಪ್ರತಿ ಕುಟುಂಬಕ್ಕೆ ನಿಖರವಾಗಿ ಒಂದು ವರ್ಷದಲ್ಲಿ ಇಷ್ಟು ದಿವಸಗಳ ಕಾಲ ಅವನಿಗೆ ಕೆಲಸ ಕೊಟ್ಟು, ಆ ಕುಟುಂಬಗಳನ್ನು ಉಳಿಸಬೇಕು, ಅವರನ್ನು ಆರ್ಥಿವಾಗಿ ಮೇಲೆ ತರಬೇಕೆಂದು ಒಳ್ಳೆಯ ದೃಷ್ಟಿಯನ್ನು ಇಟ್ಟುಕೊಂಡು ತಂದಂಥ ಕಾರ್ಯಕ್ರಮವಾಗಿದೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಂಥ ಕಾರ್ಯಕ್ರಮವನ್ನು ದಾರಿ ತಪ್ಪಿಸುವಂಥ ಕೆಲಸ ನಡೆಯುತ್ತಿದೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಅದು ಏನಾಗಿದೆಯೆಂಬ ಬಗ್ಗೆ ತಮಗ ಿ ಕಳುಹಿಸಿ ಕೊಡುತ್ತೇನೆ. ಇವತ್ತು 34 ಲಕ್ಷ ರೂ.ಗಳು ದುರ್ಬಳಕೆಯಾಗಿದೆ, ಇದು ಒಂದು ಹಳ್ಳಿಯಲ್ಲಿ ನರೇಗಾ ಸ್ಕೀಮ್‌ನಲ್ಲಿ ಹಣ ದುರ್ಬಳಕೆಯಾಗಿರುವಂಥದ್ದು. ದಿನಾಂಕ: 01.07.2015 ರಿಂದ 15.07.2015 ರವರೆಗೆ ಕೂಲಿಕಾರರ ಹಾಜರಿಯಲ್ಲಿ ಕೆಲಸ ಬರದ ಕೂಲಿಕಾರರು ಇರುತ್ತಾರೆಂದು ಹೇಳಿಕೊಂಡು, ಇದು recent ಆಗಿ ಬಿಲ್ ಆಗಿರುವಂಥದ್ದು. ಈ ಮಾಹಿತಿಯನ್ನು ಮಾನ್ಯ ಮಂತ್ರಿಯವರಿಗೆ ತಲುಪಿಸುತ್ತೇನೆ. ಈ ರೀತಿಯಾಗಿರುವಂಥದ್ದು ಒಂದು ಉದಾಹರಣೆ ಅಷ್ಟೆ. ಅದಕ್ಕೋಸ್ಕರ ಹಣ ಸಾರ್ವಜನಿಕವಾಗಿ ಏನು ಸದ್ಬಳಕೆಯಾಗಬೇಕು, ನಾವು ಆ ರೀತಿಯಾಗುವಂಥದ್ದರಲ್ಲಿ ಎಲ್ಲೋ ಒಂದು ಕಡೆ ಎಡವಿದ್ದೇವೆ.

ಇನ್ನು ನಾನು ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ಮಾಹಿತಿಗಳನ್ನು ಏನು ಇಟ್ಟಿದ್ದೇನೆ. ಇವತ್ತು ಸುಮಾರು 23,000 ಸಾವಿರ ಕೋಟಿ ರೂ.ಗಳ ಬೆಳೆ ನಷ್ಟವಾಗಿರುವಂಥದ್ದು ಏನಿದೆ. ಇವತ್ತು ಇಂಥ ವಿಷಯದಲ್ಲಿ 1,000 ಕೋಟಿ, 2,000 ಕೋಟಿ ರೂ.ಗಳನ್ನು input subsidy ಎಂದು ಕೊಡುವುದರಿಂದ, ರೈತ ಆರ್ಥಿಕವಾಗಿ ಕಷ್ಟಕ್ಕೆ ಒಳಗಾಗಿದ್ದಾನೆ, ಆ ರೈತನನ್ನು ಉಳಿಸುವುದಕ್ಕೆ ಸಾಧ್ಯವಿಲ್ಲ. ಅದರ ಹಿನ್ನಲೆಯಲ್ಲಿ ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಘಟನೆಗಳು ಏನಿವೆ. ಇವತ್ತು ಆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳ ಬಗ್ಗೆ ರಾಜ್ಯದಲ್ಲಿ, ದೇಶದಲ್ಲಿ ಯಾವ್ಯಾವ ರೀತಿಯಲ್ಲಿ ಚರ್ಚೆಗಳು ಮಾಡಿಕೊಂಡಿದ್ದಾರೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಇವತ್ತು ಹಾವೇರಿ ಜಿಲ್ಲೆಯ ಬಗ್ಗೆ ಬಹುಶ: ಮಾನ್ಯ ಎ.ಎಸ್.ಪಾಟೀಲ್ (ನಡಹಳ್ಳಿ)ಯವರೋ, ಯಾರೋ ಹೇಳಿದರು.

ಅಧ್ಯಕ್ಷರು: ಹೌದು, ಮಾನ್ಯ ಪಾಟೀಲ್ (ನಡಹಳ್ಳಿ)ಯವರೆ ಹೇಳಿದ್ದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾನು ಮೊದಲು ರೈತರ ಆತ್ಮಹತ್ಯೆ ವಿಷಯವಾಗಿಯೇ ಮಾತನಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ಈಗ .. ..

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ನಾನು ಸದನದ ಗಮನಕ್ಕೆ ತಂದು ಬಿಡುತ್ತೇನೆ, ಆಮೇಲೆ ತಾವು ಸಲಹೆಗಳನ್ನು ಹೇಳಬೇಕೆಂದರೆ ಹೇಳುತ್ತೇನೆ. ತಾವು ಮೊದಲು ಕೇಳುವುದೇ ಅದು, ಅದಕ್ಕೆ ಇದನ್ನು ಸರಿ ಪಡಿಸುವುದಕ್ಕೆ ಏನು ಮಾಡಬೇಕೆಂಬುದನ್ನು ಕೇಳುತ್ತೀರಿ.

ಅಧ್ಯಕ್ಷರು: ಅದಕ್ಕೆ ಈಗ ಈ ತುರ್ತು ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಈಗ ಆತ್ಮಹತ್ಯೆ ಮಾಡಿಕೊಳ್ಳದ ಹಾಗೆ ವಾತಾವರಣವನ್ನು ಸೃಷ್ಟಿ ಮಾಡಬೇಕಾಗಿದೆ. ಎರಡನೆಯದಾಗಿ, ಆತ್ಮಹತ್ಯೆ ಮಾಡಿಕೊಂಡಂಥ ಜನರಿಗೆ ರಕ್ಷಣೆ ಕೊಡಬೇಕು, ಇದರ ಬಗ್ಗೆ ಬೇಗ ಹೇಳಿ, ಶಾಶ್ವತವಾದಂಥ ವಿಷಯಗಳ ಬಗ್ಗೆ ಬೇರೆ ಸಂದರ್ಭದಲ್ಲಿ ಮಾತನಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಹೇಳುತ್ತೇನೆ, ಇವತ್ತು ಪ್ರಮುಖವಾದಂಥ ಅಂಶ ಇದಾಗಿದೆ. ರೈತರು ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಪ್ರಸ್ತಾಪ ಮಾಡದೇ ಇದ್ದರೆ, ಮತ್ತೆ ನನಗೆ ಅವಕಾಶವನ್ನು ಜನವರಿ, ಫೆಬ್ರವರಿಯಲ್ಲಿ ನಡೆಯುವ ಅಧಿವೇಶನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಈ ವಿಷಯವಾಗಿ ಸರ್ಕಾರದ ಗಮನ ಸೆಳೆಯಬೇಕಾಗಿದೆ. ನಾನು ಹಾವೇರಿ ಜಿಲ್ಲೆಯ ವಿಷಯಕ್ಕೆ ಸಂಬಂಧಪಟ್ಟಂತೆ ಏಕೆ ಹೇಳುತ್ತೇನೆಂದರೆ, ನಾನು ಹಾವೇರಿ ಜಿಲ್ಲೆಗೆ ಹೋಗಿದ್ದೆ. ನಾನು ಹೋದ ದಿವಸದಲ್ಲಿ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳು ಏನಿತ್ತು, ಆ 70 ಕುಟುಂಬಗಳನ್ನು ಒಂದೆಡೆ ಸೇರಿಸಿ ಪ್ರತಿಯೊಂದು ಕುಟುಂಬದಲ್ಲಿ ಯಾವ್ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ಬಗ್ಗೆ ಅವರ ಸಮಸ್ಯೆಯನ್ನು ಕೇಳಿದ್ದೇನೆ. ನಾವು ಆ 70 ಕುಟುಂಬಗಳಿಗೆ ನಮ್ಮ ಪಕ್ಷದ ವತಿಯಿಂದ 50,000 ರೂ.ಗಳ ಪರಿಹಾರವನ್ನು ಕೊಟ್ಟು ಬಂದಿದ್ದೇವೆ.

ಅಧ್ಯಕ್ಷರು: ಒಬ್ಬೊಬ್ಬರಿಗೆ ಕೊಟ್ಟಿದ್ದಿರಾ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಬ್ಬೊಬ್ಬರಿಗೆ ತಲಾ 50,000 ರೂ.ಗಳಂತೆ ಕೊಟ್ಟಿದ್ದೇವೆ.

ಅಧ್ಯಕ್ಷರು: Very good.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಈ ರಾಜ್ಯದಲ್ಲಿ ಗುಲ್ಬರ್ಗಾ, ರಾಯಚೂರು, ಚಿಕ್ಕಮಗಳೂರು, ಹಾವೇರಿ ಈ ಭಾಗಗಳಿಗೆ ಹೋಗಿದ್ದೇನೆ. ನಾನು ವೈಯಕ್ತಿಕವಾಗಿ 300 ಕುಟುಂಬಗಳಿಗೂ ಮಿಗಿಲಾಗಿ, ಪ್ರತಿ ಕುಟುಂಬಕ್ಕೂ 50,000 ರೂ.ಗಳನ್ನು ಕೊಟ್ಟು ಬಂದಿದ್ದೇನೆ.

ಅಧ್ಯಕ್ಷರು: Good. ನೀವು ಕೊಡದೆ ಇನ್ಯಾರು ಕೊಡುತ್ತಾರೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇವತ್ತು ಆ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಬಂದಿದ್ದೇನೆ.

ಅಧ್ಯಕ್ಷರು: ಆಯಿತು.

ಶ್ರೀ ಯು.ಬಿ.ಬಣಕಾರ್: ಮಾನ್ಯ ಕುಮಾರಸ್ವಾಮಿಯವರೆ, ಒಂದು ನಿಮಿಷ. ತಾವು ಹಾವೇರಿ ಜಿಲ್ಲೆಗೆ ಭೇಟಿ ಕೊಟ್ಟು, ಅವರಿಗೆ ಪರಿಹಾರ ಕೊಡುವ ಪ್ರಯತ್ನ ಮಾಡಿದ್ದೀರಿ. ಕಾಂಗ್ರೆಸ್ ಪಕ್ಷದ ಅಧಿನಾಯಕರಾದ ಮಾನ್ಯ ರಾಹುಲ್ ಗಾಂಧಿಯವರು, ರಾಣಿಬೆನ್ನೂರಿಗೆ ಬಂದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು A.C. ಅವರಿರುವಂಥ ಕಮಿಟಿಯ ಕೆಲವು ಮಾನದಂಡಗಳನ್ನು ಎಲ್ಲರಿಗೂ ಪರಿಹಾರ ಕೊಡುವ ದೃಷ್ಟಿಯಿಂದ ಬದಲಾವಣೆಗಳನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಇವತ್ತಿನವರೆಗೂ ಮಾನ್ಯ ಸಿದ್ದರಾಮಯ್ಯನವರು ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಅದನ್ನು ಮಾನ್ಯ ರಾಹುಲ್ ಗಾಂಧಿಯವರು ಕೇಳುತ್ತಾರೆ, ನಿಮಗೆ ಏಕೆ?

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಬಣಕಾರ್‌ರವರ ಹತ್ತಿರ ಇರುವ ಮಾಹಿತಿ ಸರಿ ಇಲ್ಲ. ಮಾನ್ಯ ರಾಹುಲ್ ಗಾಂಧಿಯವರು ಬಂದಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಅವತ್ತು ರೈತರ ಸಭೆಯಲ್ಲಿ ಕೆಲವು ಭರವಸೆಗಳನ್ನು ಕೊಟ್ಟರು. ಆ ಬಗ್ಗೆ ಈಗಾಗಲೇ ಆದೇಶಗಳು ಆಗಿವೆ, ಆ ಆದೇಶಗಳ ಕಾಪಿಯನ್ನು ಸಹ ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಯು.ಬಿ.ಬಣಕಾರ್: ತಮ್ಮ ಒಂದು ಆದೇಶವನ್ನು ನೋಡಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಮಂತ್ರಿಯವರೆ, only ಆದೇಶವಾಗಿದೆ, ಅದು ಕಾರ್ಯಗತವಾಗಿಲ್ಲ.

(ಗೊಂದಲ)

ಶ್ರೀ ಯು.ಬಿ.ಬಣಕಾರ್: 5 ಲಕ್ಷ ರೂ.ಗಳ ಪರಿಹಾರವನ್ನು ನಾವು ಸಹ ಕೊಟ್ಟು ಬಂದಿದ್ದೇವೆ. ನೀವು ಏನು ಹೇಳಿದ್ದೀರಿ, ಬಹಳಷ್ಟು ಜನರಿಗೆ ಪರಿಹಾರ ಸಿಕ್ಕಿಲ್ಲ. ಅದು ಬೇರೆ ಬೇರೆ ಕಾರಣಗಳಿಗೆ ಪರಿಹಾರ ಸಿಕ್ಕಿಲ್ಲ, ಆ ಕಾರಣಕ್ಕೆ ಮಾನದಂಡವನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದ್ದೀರಿ, ಆ ಮಾನದಂಡವನ್ನು ಬದಲಾವಣೆ ಮಾಡಿಲ್ಲವೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಬಿಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಯಾವ ಕಾರಣಕ್ಕೋಸ್ಕರ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಎಲ್ಲೋ ಒಂದು ಕಡೆ ನನ್ನ ಮನಸ್ಸಿಗೆ ಆದಂಥ ನೋವಿದೆ. ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ ಒಂದು ವಿಷಯ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದಕ್ಕೆ ಮಾನ್ಯ ಸಹಕಾರ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಹಕಾರ ಸಚಿವರು ಏನು ಹೇಳಿದ್ದಾರೆಂದರೆ, "ಇದು ಮಾರುವೇಷದ ಕಾರ್ಯಾಚರಣೆಯಲ್ಲ, ರೈತರ ಆತ್ಮಹತ್ಯೆ ಬಗ್ಗೆ ನಿಜವಾದ ಕಾರಣವನ್ನು ತಿಳಿದುಕೊಳ್ಳಲು ನಡೆಸಿದ ಯತ್ನ ಅಷ್ಟೆ. ಮೃತರ ಕುಟುಂಬಕ್ಕೆ 2 ಲಕ್ಷ ರೂ.ಗಳ ಪರಿಹಾರ ವಿತರಿಸಲಾಗಿದೆ" ಎಂದು ಹೇಳಿದ್ದಾರೆ. ಇದು ಹಾವೇರಿ ಜಿಲ್ಲೆಯಲ್ಲಿ ಕಳೆದ ಮೇ ತಿಂಗಳಲ್ಲಿ ಜುಲೈ ತಿಂಗಳವರೆಗೆ 11 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಲ್ಲಿ 6 ರೈತರ ಮನೆಗಳಿಗೆ ಮಹಿಳಾ ಅಧಿಕಾರಿಗಳು ಭೇಟಿ ನೀಡಿ, ಮಾಹಿತಿಯನ್ನು ಸಂಗ್ರಹಿಸಿದ್ದಾರೆಂದು ಹೇಳಿದ್ದಾರೆ. ಈ 6 ಮಹಿಳಾ ಅಧಿಕಾರಿಗಳು ಯಾರು ತಮಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಹಿತಿಯನ್ನು ಕೊಟ್ಟಿದ್ದಾರಲ್ಲಾ, ಅವರನ್ನು ಕರೆಸಿ, next ಗಣರಾಜ್ಯೋತ್ಸವದ ದಿನದಂದು ಅವರಿಗೆ ಸನ್ಮಾನ ಮಾಡಿ. ಆ 6 ಜನ ಮಹಿಳಾ ಅಧಿಕಾರಿಗಳು ಯಾರೆಂಬುದನ್ನು ಕೇಳಬಯಸುತ್ತೇನೆ. ಇಲ್ಲಿ ರಾಣಿಬೆನ್ನೂರು ತಾಲ್ಲೂಕಿನಲ್ಲಿ ದೇವಸ್ಥಾನವನ್ನು ಕಟ್ಟುವುದಕ್ಕೆಂದು ಹಳ್ಳಿಯವರು 2 ಲಕ್ಷರೂ.ಗಳನ್ನು ಸಂಗ್ರಹ ಮಾಡಿದ್ದರು. ಆ ಹಣವನ್ನು ಒಬ್ಬ ರೈತನ ಮನೆಯಲ್ಲಿ ಇಟ್ಟಿದ್ದರು. ಆ ರೈತನ ಮಕ್ಕಳು ಆ ಹಣವನ್ನು ತೆಗೆದುಕೊಂಡು ಹೋಗಿ, ಇಸ್ಪಿಟ್ ಆಟವನ್ನು ಆಡಿಯೋ, ಏನೋ ಮಾಡಿ ಕಳೆದರು. ಆ ರೈತನು ಹಣವನ್ನು ಕೊಡಲು ಆಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಪತ್ರಿಕೆಯಲ್ಲಿ ವರದಿ ಕೊಟ್ಟಿದ್ದಾರೆ. ಮತ್ತೆ ಇನ್ನೊಂದು ಘಟನೆ ರಾಣಿಬೆನ್ನೂರಿನಲ್ಲಿ ಒಬ್ಬ ರೈತ ಎರಡು ಮದುವೆಯಾಗಿ, ಆ ಸಂಸಾರದಲ್ಲಿ ಪ್ರತಿ ದಿವಸ ತಿಕ್ಕಾಟ ಬಂದು, ಅವನ ಇಬ್ಬರ ಹೆಂಡತಿಯರ ಕಾಟವನ್ನು ತಡೆಯಲಾರದೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಇನ್ನೊಂದು ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯನ್ನು ನೋಡಿದ ಮೇಲೆ..

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ, ಈಗ ರಾಜ್ಯದಲ್ಲಿ ಎಷ್ಟು ಆತ್ಮಹತ್ಯೆಗಳಾಗಿವೆ, ಅವುಗಳ ಬಗ್ಗೆ ಒಂದೊಂದು ಇಲ್ಲಿ ಚರ್ಚೆ ಮಾಡುತ್ತಾ ಹೋದರೆ.. ..

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ, ಬೇರೆಯುದನ್ನು ತೆಗೆದು ಕೊಳ್ಳುತ್ತಿಲ್ಲ.

ಅಧ್ಯಕ್ಷರು: ಅದಕ್ಕೆ ಯಾರೋ ತನಿಖೆ ಮಾಡಿದರೆಂಬ ಸಂಶಯ ನಿಮಗೆ ಬಂದಿದೆಯಲ್ಲಾ, ಈ ಹಿನ್ನಲೆಯಲ್ಲಿ ನಿಜವಾಗಿರುವುದನ್ನು ಗುರುತಿಸಬೇಕಾದರೆ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಸಲಹೆಗಳನ್ನು ನೀಡಿ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದನ್ನು ಹೇಳುತ್ತೇನೆ. ಈ ವರದಿ ನೋಡಿದ ಮೇಲೆ...

ಅಧ್ಯಕ್ಷರು: ಈಗ ನಾನು ಹೇಳುತ್ತೇನೆ ಕೇಳಿ, ನಾನು ನಮ್ಮ ಊರಿನ ಪಕ್ಕದಲ್ಲೇ ಹೋಗಿ ಗಂಡ ಸತ್ತಿರುವ ಹೆಂಡತಿಗೆ ಪರಿಹಾರ ಕೊಟ್ಟು ಬಂದಿದ್ದೇನೆ. ಅವರು ಹೇಳಿದ ಕಾರಣವನ್ನು ನಾನು ಇಲ್ಲಿ ಕುಳಿತುಕೊಂಡು ಹೇಳುವ ಆಗಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಆ ವಿಷಯವನ್ನು ಒಪ್ಪಿಕೊಳ್ಳುತ್ತೇನೆ. ಈಗ 840 ಸಂಖ್ಯೆ ಮೀರಿದೆ, ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಂಥ 800 ಪ್ರಕರಣಗಳ ಬಗ್ಗೆ ಹೇಳುವುದಾದರೆ, 10% ಬೇರೆ ಕಾರಣಗಳಿಗೆ ಸತ್ತಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ 90-95% ರೈತರು ಆತ್ಮಹತ್ಯೆ ಮಾಡಿಕೊಂಡಿರುವಂಥದ್ದು, ಅವರ ಸಾಲದ ಹೊರೆಯನ್ನು ತಾಳಲಾರದೇ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ ಯಾರೋ 3-4 ಜನರು ಬೇರೆ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿರುವುದನ್ನೇ, ಈ 800 ಜನರ ಮೇಲೂ apply ಮಾಡಿ ಬಿಟ್ಟರೆ, ಆ ರೈತ ಎಲ್ಲಿಗೆ ಹೋಗಬೇಕು? ಇದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಈಗ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆ ಮಾರ್ಗ, ಈ ಮಾರ್ಗ, ವಾಮ ಮಾರ್ಗದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ನಿನ್ನೆ ದೇಶಪಾಂಡೆ ಎನ್ನುವವರು ವರದಿಯನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದರು. ಅವನು 'ಮಕ್ಕಳಿಗೆ ಮದುವೆ ಮಾಡುವುದಕ್ಕೆ ಆಗದೇ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ವರದಿ ಕೊಟ್ಟಿದ್ದಾರೆಂದು ಹೇಳುತ್ತಿದ್ದರು. ಆ ರೈತ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ, ಆ ರೈತ ಮಗಳಿಗೆ ಮದುವೆ ಮಾಡುವುದಕ್ಕೆ ಆಗುವುದಿಲ್ಲವೆಂದು, ಅವನು ನೇಣಿಗೆ ಶರಣಾದರೆ ಇಲ್ಲ ವಿಷವನ್ನು ಕುಡಿದರೆ, ಅದನ್ನು ರೈತನ ಆತ್ಮಹತ್ಯೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಎಂದು ಪರಿಗಣಿಸುತ್ತಿರೋ, ಇಲ್ಲವೊ? ಅವನ ಹತ್ತಿರ ಹಣ ಇದ್ದಿದ್ದರೆ, ಅವನ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದ್ದಿದ್ದರೆ, ಅವನು ನೇಣು ಏಕೆ ಹಾಕಿಕೊಳ್ಳುತ್ತಿದ್ದ? ಆದ್ದರಿಂದ ನನ್ನದು ಒಂದು ವಾದ ಏನೆಂದರೆ, ರೈತ ಸಮಸ್ಯೆಗೋಸ್ಕರ ಅದು ಸಾಂಸಾರಿಕವಾಗಿ ಅಗಲಿ, ಯಾವುದೇ ಅಗಲಿ, ಯಾವ ರೈತ ಪಹಣಿ ಹೊಂದಿರುತ್ತಾನೆ, ಯಾವ ರೈತನು ತನ್ನ ರೈತ ಕಸುಬು ಮಾಡುತ್ತಿರುತ್ತಾನೆ, ವ್ಯವಸಾಯ ಮಾಡುತ್ತಿರುತ್ತಾನೆ, ಆ ಎಲ್ಲಾ ರೈತರಿಗೂ ಇಂಥ ಆಕಸ್ಮಿಕ ಘಟನೆಗಳು ನಡೆದರೆ, ಅವರಿಗೆ ಪರಿಹಾರ ಕೊಡುವುದು ಸೂಕ್ತವೆಂದು ನನ್ನ ಭಾವನೆಯಾಗಿದೆ.

ಮುಂದು.. ..

25-11-2015/12.20/9/GG/VR

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ರಾಣಿಬೆನ್ನೂರು ತಾಲ್ಲೂಕಿನಲ್ಲಿ ಒಟ್ಟು 13 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಹಿಂದಿನ ಸತ್ಯವನ್ನು ತಿಳಿದುಕೊಳ್ಳಬೇಕು ಎಂದು ನಾನು ನನ್ನ ನಂಬಿಕಸ್ತನನ್ನು ಅಲ್ಲಿಗೆ ಕಳುಹಿಸಿ ಆ 13 ಕುಟುಂಬಗಳ ಮಾಹಿತಿಯನ್ನು ತರಿಸಿದ್ದೇನೆ. ಒಂದು ಕುಟುಂಬದಲ್ಲಿ ರೈತನಿಗೆ ಇಬ್ಬರು ಹೆಂಡತಿಯರಿದ್ದರು ಎಂದು ತಾವು ಹೇಳಿದ್ದೀರಿ, ಆದರೆ ಅಲ್ಲಿ ಅವನ ಹೆಂಡತಿ ಸತ್ತು 20 ವರ್ಷವಾಗಿದೆ, ನಂತರ ಅವನು ಇನ್ನೊಂದು ಮದುವೆಯಾಗಿದ್ದಾನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅದು individual case ಇರಬಹುದು. ಇವರು ಈ ರೀತಿ ಕಾರಣಗಳನ್ನು ಹುಡುಕುತ್ತಿದ್ದಾರೆ ಎಂದು ತಾವು ಹೇಳಿದಿರಿ. ಅವರು ಮಾಡಿರುವುದು ತಪ್ಪು. ನೀವು ಇನ್ನೊಂದು ಅಭಿಪ್ರಾಯವನ್ನೇನು ವ್ಯಕ್ತಪಡಿಸಿದಿರಿ ಎಂದರೆ ಸಾಲದ ಹೊರೆ ತಾಳಲಾರದೇ ರೈತ ಆತ್ಮಹತ್ಯೆಗೆ ಶರಣಾಗುತ್ತಾನೆ. ಮಾನ್ಯ ಪುಟ್ಟಣ್ಣಯ್ಯನವರೂ ಕೂಡ ಈ ಸದನದಲ್ಲಿ ಮಾತನಾಡುವಾಗ ಅದನ್ನೇ ಹೇಳುತ್ತಾರೆ. ನಾವು ಅನೇಕ ಸಲ ಸಾಲ ನೀತಿ ಬಗ್ಗೆ ಚರ್ಚೆ ಮಾಡುತ್ತೇವೆ. ರೈತ ಏಕೆ ಸಾಲ ಮಾಡುತ್ತಾನೆ? ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಸಾಲ ಮಾಡುತ್ತಾನೆಯೇ? ತನ್ನ ಕಾಯಿಲೆಯ ಚಿಕಿತ್ಸೆಗೋಸ್ಕರ ಸಾಲ ಮಾಡುತ್ತಾನೆಯೇ? ಮಕ್ಕಳ ಮದುವೆ ಮಾಡುವುದಕ್ಕೋಸ್ಕರ ಸಾಲ ಮಾಡುತ್ತಾನೆಯೇ? Agriculture

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

improve ಮಾಡುವುದಕ್ಕಾಗಿ ಕೊಳವೆ ಬಾವಿ ತೋಡಿಸುವುದಕ್ಕಾಗಿ ಸಾಲ ಮಾಡುತ್ತಾನೆಯೇ? ಸಾಲವನ್ನಂತೂ ಮಾಡಿದ್ದಾನೆ. ಸಹಕಾರಿ ಸಂಘಗಳಲ್ಲಿ ಸಾಲ ಮಾಡಿದ್ದಾನೆಯೇ? ಖಾಸಗಿಯವರ ಹತ್ತಿರ ಸಾಲ ತೆಗೆದುಕೊಂಡಿದ್ದಾನೆಯೇ? ಅಥವಾ ಕಮರ್ಷಿಯಲ್ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿದ್ದಾನೆಯೇ? ಇದರಲ್ಲಿ ಏನು ನ್ಯೂನತೆಗಳಿವೆ? ಇಂಥ ಕಾರಣಗಳಿಂದ ಆಗುತ್ತಿದೆ ಎಂದು ನಾವು ಇಡೀ ಸದನ ಒಂದಾಗಿ ಅಧ್ಯಕ್ಷರ ಮುಖಾಂತರ, ಸದನದ ಮುಖಾಂತರ ಸರ್ಕಾರಕ್ಕೆ ಈ ರೀತಿಯ ಕ್ರಮಗಳನ್ನು ಮುಂದೆ ಜರುಗಿಸಿದರೆ ಅದನ್ನು ತಪ್ಪಿಸಬಹುದು ಎಂದು ಹೇಳಿದರೆ ಬಹಳ ದೊಡ್ಡ ಅನುಕೂಲವಾಗುತ್ತದೆ. ತಾವು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದೀರಿ. ಉದಾಹರಣೆಗೆ, ಗೊಬ್ಬರದ ವಿಚಾರವನ್ನು ಹೇಳುವುದಾದರೆ, ಗೊಬ್ಬರಕ್ಕೆ ಯಾವುದೇ ನೀತಿ ಇಲ್ಲ. Manufacturer D.A.P.ಗೆ ಏನು ಹೇಳುತ್ತಾನೋ ಅದೇ ರೇಟು, 17-17ಕ್ಕೆ ಅವನು ಏನು ಹೇಳುತ್ತಾನೋ ಅದೇ ರೇಟು ಇದೆ. ಅದನ್ನು ತಯಾರು ಮಾಡುವುದಕ್ಕೆ, ಉತ್ಪಾದನೆ ಮಾಡುವುದಕ್ಕೆ ಎಷ್ಟು ಖರ್ಚು ಬರುತ್ತದೆ, ಅವನು ಅದನ್ನು ಎಷ್ಟಕ್ಕೆ ಮಾರಬಹುದು ಎನ್ನುವುದಕ್ಕೆ ಅವನ ಮೇಲೆ ನಿರ್ಬಂಧವೇ ಇಲ್ಲ. ಸಾಲ ನೀತಿ ಇಲ್ಲ, ಗೊಬ್ಬರದ ನೀತಿ ಇಲ್ಲ, ಬೆಳೆಗೆ ನೀತಿ ಇಲ್ಲ, ಬೆಲೆಗೆ ನೀತಿ ಇಲ್ಲ. Water mineral ಮಾಡಿ ಎಂದು ಹೇಳುತ್ತೇವೆ, ಅದನ್ನು ಮಾಡುವುದಿಲ್ಲ, water regulation ಮಾಡುವ authorityಯನ್ನು ಇಟ್ಟುಕೊಳ್ಳುವುದಿಲ್ಲ. ಅವನಿಗೆ ಬದುಕುವುದಕ್ಕೆ ಮಾರ್ಗವಿಲ್ಲದೇ ಇದ್ದಾಗ ಸಾವೊಂದೋ ಉಳಿದಿರುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ರಮೇಶ್ ಕುಮಾರ್‌ರವರೇ, ಒಂದು ನಿಮಿಷ.

ಅಧ್ಯಕ್ಷರು: ಅವರು ಪೂರೈಸಲಿ ಬಿಡಿ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರಿಗೆ ಕ್ಲಾರಿಫಿಕೇಷನ್ ಕೊಡುತ್ತಿದ್ದೇನೆ, ಅವರು ಉದಾಹರಣೆ ಕೊಟ್ಟರಲ್ಲ, ಅದೇ ಮನೆಗೆ ರಾಹುಲ್‌ಗಾಂಧಿಯವರು ಭೇಟಿ ಕೊಟ್ಟಿದ್ದಾರೆ, ಅಲ್ಲಿ ತೀರಿಕೊಂಡಿರುವ ರೈತನಿಗೆ ಇಬ್ಬರು ಹೆಂಡತಿಯರಿದ್ದಾರೆ, ಅವನಿಗೆ ಕೊಡುವಂಥ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪರಿಹಾರದಲ್ಲಿ ಇಬ್ಬರು ಹೆಂಡತಿಯರಿಗೂ ತಲಾ ಎರಡೂವರೆ ಲಕ್ಷ ರೂಪಾಯಿಗಳ ಚೆಕ್ ಕೊಟ್ಟಿದ್ದೇವೆ. ಏನು ಮಾತು ಕೊಟ್ಟು ಬಂದಿದ್ದೆವೋ ಅದನ್ನು ಇಂಪ್ಲಿಮೆಂಟ್ ಮಾಡಿದ್ದೇವೆ. ನಾವು ನೀವೆಲ್ಲ ಚರ್ಚೆ ಮಾಡಿ ಅವನು ಆ ಕಾರಣದಿಂದ ಸತ್ತ, ಈ ಕಾರಣದಿಂದ ಸತ್ತ ಎನ್ನುವುದಕ್ಕಿಂತಲೂ ರೈತನ ಕಷ್ಟಗಳನ್ನು ಯಾವ ರೀತಿ ಬಗೆಹರಿಸಬೇಕು, ರೈತ ಸಾವಿನ ಮೊರೆ ಹೋಗಲು ಕಾರಣಗಳೇನು ಎನ್ನುವುದನ್ನು ಹುಡುಕಿ, ಆ ಕಾರಣಗಳನ್ನು ಬಗೆಹರಿಸಲು ನಾವು ನೀವೆಲ್ಲರೂ ಪ್ರಯತ್ನ ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನೀವು ಹೇಳಿದಂಥ ವಿಷಯಕ್ಕೆ ನಾನು ಬರುತ್ತೇನೆ. ಆಗಿರುವಂಥ ಘಟನೆಗಳಿಗೆ ಬರೀ ಕಾರಣಗಳನ್ನು ಹೇಳುವುದಲ್ಲ, ಇವತ್ತು ಆ ರೈತ ಸಾಯಲು ಕಾರಣವೇನು ಎನ್ನುವ ವಿಷಯವನ್ನೂ ಪ್ರಸ್ತಾಪ ಮಾಡುತ್ತೇನೆ, ಅದರ ಬಗ್ಗೆಯೂ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ನೀವು ಕಾರಣಗಳನ್ನು ಹೇಳಿದರೂ ಸಹ ಸರ್ಕಾರ ಅದನ್ನು ಗ ಂಭೀರವಾಗಿ ತೆಗೆದುಕೊಂಡಾಗ ಮಾತ್ರ ಅದರಿಂದ ಉಪಯೋಗವಾಗುತ್ತದೆ. ಸುಮ್ಮನೆ ಇಲ್ಲಿ ಬರೀ ಚರ್ಚೆಯಾದರೆ ಉಪಯೋಗವಾಗುವುದಿಲ್ಲ.

ಅಧ್ಯಕ್ಷರು: ರೀ ಸ್ವಾಮಿ, ಎಲ್ಲರೂ ಸರ್ಕಾರ ನಡೆಸುತ್ತಾರೆ. ಆಯಿತು, ನೀವು ಬೇಗ ಹೇಳಿ.

(ಗೊಂದಲ)

ಅಧ್ಯಕ್ಷರು: ಕೋನರೆಡ್ಡಿಯವರು ಏನೋ ಹೇಳಿದರಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಎನ್.ಹೆಚ್. ಕೋನರೆಡ್ಡಿ: ರೈತರ ಸಮಸ್ಯೆಯ ಬಗ್ಗೆ ಗಂಭೀರವಾಗಿ ಚರ್ಚೆ ನಡೆಯುತ್ತಿದೆ, ಅದು ನಡೆಯಲಿ ಎಂದು ಹೇಳಿದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಾಲ ಮನ್ನಾ ಮಾಡಬೇಕು ಎನ್ನುವುದು ಎಲ್ಲ ರೈತರ ಬೇಡಿಕೆಯಾಗಿದೆ.

ಅಧ್ಯಕ್ಷರು: ಆಯಿತು. ನಾವೇನು ಕಂಟ್ರಾಕ್ಟರುಗಳೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ರಮೇಶ್ ಕುಮಾರ್‌ರವರೇ, ಬರೀ ಸಾಲಕ್ಕೆ ಸಂಬಂಧಿಸಿದಂತೆ ರೈತರ ಸುದ್ಧಿಯನ್ನು ಮಾತನಾಡುವುದು ತಪ್ಪು. ಅವನಿಗೆ ಈ ಉದ್ಯೋಗದಿಂದ ಬದುಕನ್ನು ಸಾಗಿಸಲು ಆಗದೇ ಇರುವಂಥ ನಿರಾಶೆಯ ನೀತಿ ಇರುವುದರಿಂದಲೇ ಅವನ ಸಾವು ಜಾಸ್ತಿಯಾಗ ುತ್ತಿದೆ. ಸಾಲ ಅದರ ಒಂದು ಭಾಗ.

ಅಧ್ಯಕ್ಷರು: ಪುಟ್ಟಣ್ಣಯ್ಯನವರೇ, ಈ ತುರ್ತು ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುವ ಬಗ್ಗೆ ಚರ್ಚೆ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಈ ಉದ್ಯೋಗಕ್ಕೆ ನೀತಿ ಮಾಡಬೇಕಲ್ಲವೇ?

ಅಧ್ಯಕ್ಷರು: ಅದನ್ನು ಆಮೇಲೆ ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಾನು ಉದಾಹರಣೆ ಕೊಟ್ಟೆ. ಕೋಳಿವಾಡ್‌ರವರು ಹೇಳಿದಂತೆ, ಒಂದು ಕುಟುಂಬದಲ್ಲಿ ಇಬ್ಬರು ಹೆಂಡತಿಯರಿದ್ದಾರೆ.

ಅಧ್ಯಕ್ಷರು: ಅದೆಲ್ಲ ಯಾಕ್ರೀ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಆವತ್ತು ನಾವು ಪರಿಹಾರ ಕೊಡಬೇಕಾದರೆ ಇಬ್ಬರೂ ಬಂದಿದ್ದರು. ಅದೂ ನನ್ನ ಗಮನದಲ್ಲಿದೆ. 20 ವರ್ಷದ ಹಿಂದೆಯೇ ಹೆಂಡತಿ ಸತ್ತಿರುವ ಒಂದು ಪ್ರಕರಣವೂ ಇದೆ.

ಅಧ್ಯಕ್ಷರು: ಅವುಗಳ ಬಗ್ಗೆಯೆಲ್ಲ ಚರ್ಚೆ ಬೇಡ ಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದೆಲ್ಲ ಈಗ ಬೇಡ. ಏಕೆ ನಾನು ಹೇಳುತ್ತಿದ್ದೇನೆ ಎಂದರೆ ನಿಮ್ಮ ಯಾರೋ ಗೂಢಾಚಾರರು ಹೇಳಿದರು ಎಂದು ಈ ವಿಷಯವನ್ನು ಅತ್ಯಂತ ಲಘುವಾಗಿ ನಂಬುವುಕ್ಕೆ ಹೋಗ ಬೇಡಿ. ಇವತ್ತು ಈ ದೇಶದ ಪಾಲಿಸಿಗಳು ಹೇಗಿವೆ ಎನ್ನುವುದಕ್ಕೆ ಒಂದು ವಿಷಯವನ್ನು ಹೇಳುತ್ತೇನೆ. ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಬಂದ ಮೇಲೆ, I.B. ಸಂಸ್ಥೆಯವರು ಕೇಂದ್ರ ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಡುತ್ತಾರೆ. ಅವರು ಕೊಟ್ಟಿರುವಂಥ ರಿಪೋರ್ಟ್‌ನಲ್ಲಿ ಏನಿದೆ ಎಂದರೆ, "According to the I.B the main reason of farmer suicides can be attributed to both natural and man made factors. While natural factors like uneven rains, hailstorm, drought and floods adversely affect crop yield. The man made factors i.e., pricing policies, inadequate marketing facilities result in post yield losses" ಇದು I.B. ಸಂಸ್ಥೆಯವರು ಇವತ್ತಿನ ಪ್ರಧಾನ ಮಂತ್ರಿಗಳಿಗೆ ಕೊಟ್ಟಂಥ ಒಂದು ರಿಪೋರ್ಟ್. ಇದರ ಬಗ್ಗೆ ಚರ್ಚಿಸಲು ಮೀಟಿಂಗ್ ಕರೆದಾಗ ಕೇಂದ್ರ ಸರ್ಕಾರದ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ, ರೈತರ ಬಗ್ಗೆ I.B.ಯವರಿಗೆ ಏನು ಗೊತ್ತಿದೆ, ರಿಪೋರ್ಟ್ ಕೊಡುವುದಕ್ಕೆ ಇವರು ಯಾರು ಎಂದು ಹೇಳುತ್ತಾರೆ. ". . However, some of these findings by the I.B have surprised officials, since they require technical knowledge of the agriculture sector". I.B.ಯವರು ಕೊಟ್ಟಂಥ ರಿಪೋರ್ಟ್ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಒಂದು ಮೀಟಿಂಗ್ ನಡೆದರೆ ಅದರಲ್ಲಿ ಅಧಿಕಾರಿಗಳು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

I.B.ಯವರಿಗೆ ರೈತರ ಬಗ್ಗೆ ಏನು ಗೊತ್ತಿದೆ ಎಂದು ಹೇಳುತ್ತಾರೆ. ಇವರಿಗೇ ಎಲ್ಲ ಗೊತ್ತಿರುವುದು, ಬೃಹಸ್ಪತಿಗಳು ಇವರು.

ಅಧ್ಯಕ್ಷರು: ಈಗಿನ ಬರ ಪರಿಸ್ಥಿತಿಗೆ ಸರ್ಕಾರ ಈಗ ಏನು ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದಕ್ಕಾಗಿಯೇ ಹೇಳುತ್ತಿದ್ದೇನೆ, ಇಂಥ ಅಧಿಕಾರಿಗಳು ಮಾಡಿರುವಂಥ ಮಾರ್ಗಸೂಚಿಯನ್ನಿಟ್ಟುಕೊಂಡು ನೀವು ಇವತ್ತು ರೈತರನ್ನು ಉಳಿಸುವಿರಾ? ನಾನು ಕೊಪ್ಪಳ ಜಿಲ್ಲೆಗೆ ಹೋಗಿದ್ದೆ, ಅಲ್ಲಿ 22 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ಜನರ ಆತ್ಮಹತ್ಯೆ ಪ್ರಕರಣಗಳನ್ನು ಮಾತ್ರ ಇವರು ಪರಿಹಾರಕ್ಕೆ ಅಂಗೀಕರಿಸುತ್ತಾರೆ, ಇನ್ನು 19 ರೈತ ಕುಟುಂಬಗಳ ಮನವಿಯನ್ನು ತಿರಸ್ಕಾರ ಮಾಡುತ್ತಾರೆ. ಅದಕ್ಕೆ ಕಾರಣವನ್ನೇನು ಕೊಡುತ್ತಾರೆ ಎಂದರೆ, ಆತ್ಮಹತ್ಯೆ ಮಾಡಿಕೊಂಡಿರುವ ರೈತನ ಹೆಸರಿನಲ್ಲಿ ಭೂಮಿ ಇಲ್ಲ, ಭೂಮಿ ಅವನ ತಾಯಿಯ ಹೆಸರಿನಲ್ಲಿ ಇದೆ, ಅದರಿಂದ ನಾವು ಆ ಕುಟುಂಬಕ್ಕೆ ಪರಿಹಾರ ಕೊಡುವುದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು: ಭೂಮಿ ಇದ್ದವನೂ ರೈತನೇ, ಕೃಷಿ ಕಾರ್ಮಿಕನೂ ರೈತನೇ. ಆ ಬಗ್ಗೆ ಸಲಹೆ ಕೊಡಿ, ಅಂಥವರಿಗೂ ಪರಿಹಾರ ಕೊಡಬೇಕು, ಅದಕ್ಕಾಗಿ ನಿಯಮಗಳಲ್ಲಿ ಬದಲಾವಣೆ ಮಾಡಿ ಎಂದು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅದಕ್ಕಾಗಿಯೇ ಇವತ್ತು ಮಾರ್ಗಸೂಚಿ ಬದಲಾವಣೆ ಯಾಗಬೇಕು ಎಂದು ನಾವು ಹೇಳುತ್ತಿರುವುದು.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಹೇಗಿದ್ದಾರೆ ಎಂದರೆ ರೈತರನ್ನು ಕೊಲೆ ಮಾಡುವುದಕ್ಕೇ ಅವರು ಇರುವುದು. ಅದಕ್ಕಾಗಿ, ನೀವು ಹೇಳಿದ ಹಾಗೆ ಒಂದು ಸದನ ಸಮಿತಿ ಮಾಡಲಿ. ಎಲ್ಲ ಶಾಸಕರ ಅಭಿಪ್ರಾಯ ತೆಗೆದುಕೊಂಡು, ಆತ್ಮಹತ್ಯೆ ಮಾಡಿಕೊಂಡಿರುವ ಎಲ್ಲ ರೈತ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕುಟುಂಬಗಳನ್ನು ಭೇಟಿ ಮಾಡಿ ಒಂದು ವಾಸ್ತವಿಕತೆಯ ರಿಪೋರ್ಟ್ ತರಿಸಲಿ. ನನ್ನ ಕ್ಷೇತ್ರದಲ್ಲಿ ನಾಲ್ಕು ಜನ ರೈತರು ಸತ್ತಿದ್ದಾರೆ. ಅದರಲ್ಲಿ ಒಬ್ಬರಿಗೆ ಮಾತ್ರ ಎರಡು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಈ ರೀತಿಯಾದರೆ ರೈತರು ಬದುಕುವುದು ಹೇಗೆ ಹೇಳಿ.

ಅಧ್ಯಕ್ಷರು: ಆಯಿತು, ಬೇಗ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಕೆಲವು ವಿಷಯಗಳ ಬಗ್ಗೆಯಾದರೂ ಸರ್ಕಾರದ ಗಮನವನ್ನು ಸೆಳೆಯದೇ ಹೋದರೆ, ಸರ್ಕಾರ ತನ್ನ ನೀತಿಯನ್ನು ಬದಲಾವಣೆ ಮಾಡಿಕೊಳ್ಳುವುದು ಹೇಗೆ? ನನಗೆ ಅರ್ಥವಾಗುತ್ತದೆ, ನಿಮಗೆ ಇಲ್ಲಿ ಸಮಯದ ಚಿಂತೆ. ನಮಗೆ ಪ್ರಸ್ತಾಪ ಮಾಡಲು ಇನ್ನೂ ಹಲವಾರು ವಿಷಯಗಳಿವೆ. ಅವುಗಳನ್ನು ನಾನು ಚರ್ಚೆ ಮಾಡಲು ಹೋದರೆ ನನಗೆ ಸೆನ್ಸಾರ್ ಮಾಡುತ್ತೀರಿ. ಹಾಗಾದರೆ ಮತ್ತೆ ನಾನು ಹೇಗೆ ಚರ್ಚೆ ಮಾಡಲಿ, ಸರ್ಕಾರದ ಗಮನವನ್ನು ಹೇಗೆ ಸೆಳೆಯಲಿ? ಇವತ್ತು ದೇಶದಲ್ಲಿ ವ್ಯವಸ್ಥೆಗಳು ಯಾವಯಾವ ರೀತಿ ನಡೆಯುತ್ತಿವೆ ಎನ್ನುವುದನ್ನು ಹೇಳದಿದ್ದರೆ ಗೊತ್ತಾಗುವುದು ಹೇಗೆ?

ಅಧ್ಯಕ್ಷರು: ಈಗ ಇಲ್ಲಿ ಕರ್ನಾಟಕದ ವಿಷಯವನ್ನು ಹೇಳಿ. ಕರ್ನಾಟಕದಲ್ಲಿರುವ ಬರ ಪರಿಸ್ಥಿತಿಯನ್ನು ಹೇಗೆ ಎದುರಿಸಬಹುದು ಎಂದು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ತಂಗಡಗಿಯವರು ಈಗ ಸದನದಲ್ಲಿ ಇಲ್ಲ. ಕೊಪ್ಪಳ ಜಿಲ್ಲೆಯಲ್ಲಿ 22 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿಗಳು ಎಲ್ಲ ಮಂತ್ರಿಗಳಿಗೆ ಆದೇಶ ಮಾಡುತ್ತಾರೆ, ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರತಿ ರೈತ ಕುಟುಂಬಗಳನ್ನು ಭೇಟಿ ಮಾಡಿ ವರದಿ ಕೊಡಿ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳು ಬರೆದಿರುವ ಪತ್ರದ ಪ್ರತಿಯನ್ನೂ ನನ್ನ ಬಳಿ ಇಟ್ಟುಕೊಂಡಿದ್ದೇನೆ. ರಾಜ್ಯದಲ್ಲಿ 800ಕ್ಕೂ ಹೆಚ್ಚಿನ ರೈತರು ಆತ್ಮಹತ್ಯೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡಿಕೊಂಡಿದ್ದಾರೆ. ಅವರಲ್ಲಿ ಎಷ್ಟು ಕುಟುಂಬಗಳನ್ನು ಇವತ್ತು ಮಂತ್ರಿಗಳು ಭೇಟಿ ಮಾಡಿ ಬಂದಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ 22 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಂಬಂಧಪಟ್ಟ ಮಂತ್ರಿಗಳು ಒಂದು ಮನೆಗೂ ಭೇಟಿ ನೀಡಿಲ್ಲ. ಅವರ ತಾಲ್ಲೂಕಿನಲ್ಲಿ ಸತ್ತಿರುವ ರೈತರ ಕುಟುಂಬಗಳಿಗೇ ಭೇಟಿ ಕೊಟ್ಟಿಲ್ಲ. ಇಲ್ಲಿ ನಾವು ವಾಲ್ಮೀಕಿ ಸಮಾಜದ ಜಯಂತ್ಯೋತ್ಸವವನ್ನು ಮಾಡುತ್ತೇವೆ. ಇಲ್ಲಿ ಕುಳಿತುಕೊಂಡು ಅದನ್ನು ಸರ್ಕಾರದ ಕಾರ್ಯಕ್ರಮ ಎಂದು ಹೇಳುತ್ತೇವೆ. ಆದರೆ ಆ ಸಮಾಜಕ್ಕೆ ಸೇರಿರುವಂಥ ಕೃಷಿಕರು ಆತ್ಮಹತ್ಯೆ ಮಾಡಿಕೊಂಡಿದ್ದರೂ ಅಲ್ಲಿಗೆ ಮಂತ್ರಿಗಳು ಭೇಟಿ ನೀಡಿಲ್ಲ. 2-3 ವರ್ಷದ ಅವರ ಮಕ್ಕಳು ತಾಯಿಯ ಮಡಿಲಲ್ಲಿ ಅತ್ತುಕೊಂಡು ಕುಳಿತಿವೆ.

(ಮುಂದುವರೆದಿದೆ)

25-11-2015 : 12-30 [10] kkd:vr

1

ಶ್ರೀ ಹೆಚ್.ಡಿ.ಕುಮಾರಸ್ವಾಮಿ: (ಮುಂದು..): ನೀವು ಜಯಂತೋತ್ಸವ ಮಾಡುವುದರಿಂದ ಈ ದೇಶವನ್ನು ಉದ್ಧಾರ ಮಾಡುತ್ತಿದ್ದೀರಾ? ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ರೈತರ ಕುಟುಂಬಗಳಲ್ಲಿ ಮದುವೆ ವೆಚ್ಚ ತೀರಿಸಲಾಗದೆ ಸಾಯುತ್ತಾರೆಂರು ಹೇಳುತ್ತಾರಲ್ಲ, ನಾನು ಭೇಟಿ ಕೊಟ್ಟಿರತಕ್ಕಂಥ 300 ರೈತ ಕುಟುಂಬಗಳಲ್ಲಿ ಆ ತಾಯಿ 8 ತಿಂಗಳು, ಒಂದೂವರೆ ತಿಂಗಳ ಮಕ್ಕಳನ್ನು ಹೆತ್ತುಕೊಂಡು ಇದ್ದಾರೆ. ಜನ್ಮ ಕೊಟ್ಟಿರತಕ್ಕಂಥ ಆ ತಾಯಿಯ ಗಂಡ ಸತ್ತುಹೋಗಿದ್ದಾನೆ. ಇಷ್ಟು ಚಿಕ್ಕ ಮಕ್ಕಳು ಇರುವುದರಿಂದ ಆ ಸತ್ತಿರತಕ್ಕಂಥ ರೈತ ಅವರದ್ದು ಮದುವೆ ಮಾಡುವುದು ಎಲ್ಲಿಂದ ಬಂತು? ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ರೈತರ ಕುಟುಂಬದಲ್ಲಿ ನೂರಕ್ಕೆ 90 ಭಾಗ ಇವತ್ತು 3 ವರ್ಷದ, 4 ವರ್ಷದ ಮಕ್ಕಳನ್ನು ಜೊತೆಯಲ್ಲಿಟ್ಟುಕೊಂಡಿದ್ದಾರೆ. ಅಂಥ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ರೈತರ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಇಲ್ಲಿ ಮಾತನಾಡಬೇಕಾದರೆ, ಇಲ್ಲಿ ಯಾರೋ ಸದಸ್ಯರು ಒಬ್ಬರು ಎದ್ದು ನಿಂತು 420 case ಹಾಕುತ್ತಾರೆ, ಅದಕ್ಕೆ

ರೈತರು ಹೆದರಿಕೊಂಡರು, ಇದು ಆಗಬಾರದೆಂದು ಹೇಳಿದರು. ಮತ್ತೆ ಮಾರನೇ ದಿವಸ ರೈತರು ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅವರೇ ಮಾತನಾಡುತ್ತಾರೆ. ಈ ತರಹದ ಚರ್ಚೆ ಈ ಸದನದೊಳಗೆ ನಡೆಯುತ್ತದೆ. ಇವತ್ತು ನಾವು ಈ ತರಹ ರೈತರನ್ನು ಲಘುವಾಗಿ ಪರಿಗಣಿಸುವುದು ಬೇಡ. ಈಗ ಸರ್ಕಾರದ ಮಂತ್ರಿಗಳು TA, DA ಏತಕ್ಕೆ ತೆಗೆದುಕೊಳ್ಳುತ್ತಾರೆ? ಪ್ರತಿ ತಿಂಗಳು TA, DA, ಪ್ರವಾಸ ಭತ್ಯೆ ಅನ್ನು ನೀವು ಎಷ್ಟು claim ಮಾಡುತ್ತೀರಿ? ಸತ್ತಿರತಕ್ಕಂಥ ಎಷ್ಟು ಜನ ರೈತರ ಕುಟುಂಬಗಳಿಗೆ ನೀವು ಭೇಟಿ ಕೊಟ್ಟಿದ್ದೀರಿ? ಆ ಮಾಹಿತಿಯನ್ನು ಇವತ್ತು ಈ ಸದನದಲ್ಲಿಡಿ. ನೀವು ಪ್ರತಿ ತಿಂಗಳು ಪ್ರವಾಸ ಭತ್ಯೆಯನ್ನು ತೆಗೆದುಕೊಂಡಿದ್ದೀರಲ್ಲ, ಆ ಪ್ರವಾಸ ಭತ್ಯೆಯಲ್ಲಿ ಎಷ್ಟು ರೈತರ ಕುಟುಂಬವನ್ನು ಭೇಟಿ ಮಾಡಲಿಕ್ಕೆ ಆ ಹಣವನ್ನು ಉಪಯೋಗ ಮಾಡಿದ್ದೀರಿ? ನೀವು ಪ್ರವಾಸ ಭತ್ಯೆ ಏನು ತೆಗೆದುಕೊಳ್ಳುತ್ತೀರಿ ಅದು ಈ 6 ಕೋಟಿ ಜನರು ಕೊಡತಕ್ಕಂಥ ಹಣದಿಂದ. ಇಂಥ ಪರಿಸ್ಥಿತಿಯಲ್ಲಿ ಏನಿದ್ದೇವೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದರೂ ಮಂತ್ರಿಗಳು ಹೋಗಲಿಲ್ಲ, ರೈತರ ಮನೆಗಳಿಗೆ ಭೇಟಿ ಕೊಡಲಿಲ್ಲ. ಯಾವ್ಯಾವ ಪರಿಸ್ಥಿತಿಯಲ್ಲಿ ಹೇಳಿರತಕ್ಕಂಥದ್ದನ್ನು ಲಘುವಾಗಿ ಪರಿಗಣಿಸಿದಿರಿ. ಕೇವಲ 240 ಕುಟುಂಬಗಳಿಗೆ ನೀವು ಪರಿಹಾರ ಕೊಡುತ್ತೀರಿ. ರೈತರು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಪಟ್ಟಿ ತೆಗೆದು ನೋಡಿದಾಗ ಅದರಲ್ಲಿ ಕಬ್ಬು ಬೆಳಗಾರ, ಹತ್ತಿ ಬೆಳೆ ಬೆಳೆಯುವವನು, ಭತ್ತ ಬೆಳೆಯುವವನು, ರೇಷ್ಮೆ ಬೆಳೆಯುವವನೂ ಇದ್ದಾನೆ. ಈ ರಾಜ್ಯದಲ್ಲಿ ಯಾವ ಬೆಳೆ ಬೆಳೆಯತಕ್ಕಂಥ ರೈತ ನೆಮ್ಮದಿಯಿಂದ ಇದ್ದಾನೆ? ರೈತರು ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಪ್ರಮುಖವಾದ ಕಾರಣ ಏನೆಂದರೆ, ಯಾವ ರೈತ ಬೆಳೆ ಇವತ್ತು ಉದಾಹರಣೆಗೆ ಕಬ್ಬನ್ನೇ ತೆಗೆದುಕೊಳ್ಳಿ. ಒಂದು ವರ್ಷ, ಒಂದೂವರೆ ವರ್ಷಗಳ ಕಾಲ ರೈತ ಬೆಳೆದಂಥ ಬೆಳೆಯನ್ನು ಕಟಾವು ಮಾಡಿ ಕಾರ್ಖಾನೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿಕೊಂಡು ಬಂದರೆ, ಆ ರೈತನಿಗೆ ಸಕಾಲದಲ್ಲಿ ಹಣ ಕೊಡದೇ ಹೋದರೆ ಅವನು ಸಾಲ ತೀರಿಸಲಿಕ್ಕೆ ಎಲ್ಲಿಂದ ಸಾಧ್ಯ? ಹಾವೇರಿಯಲ್ಲಿ ಸಂಗೂರು ಕಬ್ಬಿನ ಕಾರ್ಖಾನೆಯ owner ಹೇಳುತ್ತಾನಂತೆ, ಆತ factory owner ಅಲ್ಲ. ಅದು ಸಹಕಾರಿ ಕಾರ್ಖಾನೆ, ರೈತರ ಕಾರ್ಖಾನೆ. ಅದನ್ನು ನಡೆಸುವವನು ಹೇಳುತ್ತಾನೆ, ನೀವು ಟನ್ ಒಂದಕ್ಕೆ ಒಂದೂವರೆ ಸಾವಿರ ರೂಪಾಯಿಗಳಂತೆ ಕೊಡುವುದಕ್ಕೆ ತಯಾರಿದ್ದರೆ ತಯಾರಿದ್ದೇವೆ ಎಂದು ಒಪ್ಪಂದದ ಪತ್ರಕ್ಕೆ ಸಹಿ ಹಾಕಿಕೊಟ್ಟರೆ, ನಾವು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹಾಕತಕ್ಕಂಥ conditions ಗೆ ಸಹಿ ಹಾಕಿಕೊಟ್ಟರೆ ನಿಮ್ಮ ಕಬ್ಬನ್ನು ನನ್ನ ಕಾರ್ಖಾನೆಯ ಆವರಣದೊಳಗೆ ತೆಗೆದುಕೊಂಡು ಬನ್ನಿ, ಇಲ್ಲದೇ ಇದ್ದರೆ ಯಾವುದೇ ಕಾರಣಕ್ಕೂ ನಾನು ಕಬ್ಬು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದು, ಇವತ್ತೂ ಕೂಡ ಆ ಸಂಗೂರು ಕಾರ್ಖಾನೆಯ ಮಾಲೀಕ ಅಲ್ಲಿ ಕಬ್ಬು ತೆಗೆದುಕೊಳ್ಳುತ್ತಿಲ್ಲ. ದಾವಣಗೆರೆಯಿಂದ ತೆಗೆದುಕೊಳ್ಳುತ್ತಿದ್ದಾನೆ. ದಾವಣಗೆರೆಯಲ್ಲಿ ಸದ್ಯ ಕಬ್ಬು ಹೋದರೆ ಸಾಕು ಎಂದು ಕೆಲವರು ದಾವಣಗೆರೆಯಿಂದ ಕಬ್ಬನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಸಾಗಿಸಿಕೊಂಡು ಕುಳಿತಿದ್ದಾರೆ. ಹಾವೇರಿಯೊಳಗೆ ರೈತರು ಇವತ್ತು ಕಬ್ಬು ಮಾರಾಟ ಮಾಡುವುದಕ್ಕಾಗುತ್ತಿಲ್ಲ. ಕೇಂದ್ರ ಸರ್ಕಾರದವರು FRP ದರವನ್ನು 2300 ರೂಪಾಯಿಗಳೆಂದು ನಿಗದಿ ಮಾಡಿದ್ದರು.

**(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)**

ಈ ರಾಜ್ಯದ ಯಾವ ಕಾರ್ಖಾನೆ ಮಾಲೀಕ 2300 ರೂಪಾಯಿಗಳನ್ನು ಟನ್ ಒಂದಕ್ಕೆ ಕೊಡುತ್ತೇನೆಂದು ಒಪ್ಪಿಕೊಂಡಿದ್ದಾನೆ ಎನ್ನುವ ಬಗ್ಗೆ ಸರ್ಕಾರ ರೈತರ ಪರವಾಗಿ ನನಗೆ ಉತ್ತರ ಕೊಡಬೇಕು. ಇಂದು ಯಾವುದೇ ಕಾರ್ಖಾನೆ ಮಾಲೀಕರು ಟನ್ ಒಂದಕ್ಕೆ ಒಂದೂವರೆ ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಹಣ ಕೊಡಲಿಕ್ಕೆ ತಯಾರಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಕುಮಾರಸ್ವಾಮಿಯವರೆ, ಒಂದು ನಿಮಿಷ. Last time ಒಂದು ನೂರು ರೂಪಾಯಿಗಳನ್ನು ಸಕ್ಕರೆ ಮಾಲೀಕರುಗಳಿಂದ ಕೊಡಿಸುತ್ತೇವೆಂದು ಸರ್ಕಾರದ ಕಡೆಯಿಂದ promise ಮಾಡಿದ್ದರು. ಆದರೆ, ಸಕ್ಕರೆ ಮಾಲೀಕರು ಕೊಡಲಿಲ್ಲ. ಅದನ್ನು ಕೊಡದಿದ್ದರೆ ನಾವೇ ಭರಿಸುತ್ತೇವೆಂದು ಸರ್ಕಾರದವರು ಹೇಳಿದರು. ಅದನ್ನೂ ಕೊಡಲಿಲ್ಲ. ಅದೂ ಕೂಡ ಸಾವಿರಾರು ಕೋಟಿ ರೂಪಾಯಿ ಹಾಗೆಯೇ pending ಇದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅಲ್ಲ, ಸರ್ಕಾರ ಹೇಳುವುದಕ್ಕಿಂತಲೂ ವಿದ್ಯುತ್ ಸಚಿವರು ಆವತ್ತು ಒಂದು assurance ಮಾಡಿದ್ದರು. ಈ ಖಾಸಗಿ ಕಾರ್ಖಾನೆಯವರು ಏನು ವಿದ್ಯುತ್ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡಿ ಸರ್ಕಾರಕ್ಕೆ ನಾವು ಕೊಡುತ್ತೇವೆ, ಆ ಹಣವನ್ನು ಅವರು ಕಾರ್ಖಾನೆಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಡುವುದರಲ್ಲಿಯೂ ನಾವು cut ಮಾಡಿಕೊಂಡು ರೈತರಿಗೆ ಕೊಡುತ್ತೇವೆಂದು ಹೇಳಿದರು. ಇದೇ ಸದನದಲ್ಲಿ ವಿದ್ಯುತ್ ಸಚಿವರು ಭರವಸೆ ಕೊಟ್ಟಿದ್ದರು, ಅದೂ ಆಗಲಿಲ್ಲ. ಅದರ ಜೊತೆಗೆ ಇವತ್ತಿನ ಈ ಹಂಗಾಮಿಗೆ 2015-16ನೇ ಹಂಗಾಮು ಇರುವುದರಿಂದ ಎಲ್ಲಾ ಖಾಸಗಿ ಕಾರ್ಖಾನೆಯವರು ಪತ್ರಿಕೆಯಲ್ಲಿ ಒಂದು ಪ್ರಕಟಣೆ ಕೊಟ್ಟಿದ್ದಾರೆ. ಅದೇನೆಂದರೆ, ಈ ವರ್ಷಕ್ಕೆ ಒಂದು ಟನ್ ಕಬ್ಬುಗೆ 1500 ರೂ.ನಂತೆ ಬೆಲೆ ಕೊಡುತ್ತೇವೆ, ಅದಕ್ಕೆ ನೀವು ಸಹಕಾರ ಕೊಡಬೇಕೆಂದು ಪತ್ರಿಕಾ ಪ್ರಕಟಣೆ ಕೊಟ್ಟಿದಾರೆ. ಅದರ ಬಗ್ಗೆ ಸರ್ಕಾರ ಪ್ರತಿಕ್ರಿಯೆ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇನ್ನೊಂದು ಉದಾಹರಣೆ ಕೊಡುವುದಾದರೆ, ಹಾಸನದಲ್ಲಿ ಜಮೀನು ಇರುವುದು ಈ ಹೆಣ್ಣುಮಗಳ ಹೆಸರಿನಲ್ಲಿ. ಸಾಲ ತೆಗೆದುಕೊಂಡವನು ಗಂಡ. ಗಂಡ ಆತ್ಮಹತ್ಯೆ ಮಾಡಿಕೊಂಡ. ಅವನ ಹಂಡತಿಗೆ 500 ರೂಪಾಯಿಗಳ old age pension ಬರುತ್ತಿದೆ. ಇವತ್ತು ವಿಜಯಾ ಬ್ಯಾಂಕ್‌ನವರು ಆ 500 ರೂಪಾಯಿಗಳ old age pension ಅನ್ನು ಸಾಲದ ಹಣಕ್ಕೆ ಜಮಾ ಮಾಡಿಕೊಳ್ಳುತ್ತಿದ್ದಾರೆ. ಸತ್ತಿರುವವನು ಅವಳ ಗಂಡ. ಸಾಲ ತೆಗೆದುಕೊಂಡವನು ಗಂಡ. ಭೂಮಿ ಹೆಂಡತಿಯ ಹೆಸರಿನಲ್ಲಿದೆ. ಅವಳ ಜೀವನೋಪಾಯಕ್ಕಾಗಿ ನೀವು ಸರ್ಕಾರದಿಂದ ಪ್ರತಿ ತಿಂಗಳು 500 ರೂ.ಗಳನ್ನು ಕೊಟ್ಟರೆ ಅದನ್ನು ಬ್ಯಾಂಕಿನ ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿದ್ದಾರೆ. ಇದು ನಡೆಯುತ್ತಿರತಕ್ಕಂಥದ್ದು. ಇಂಥ ಪರಿಸ್ಥಿತಿಯಲ್ಲಿ ಬರೀ ರಾಜ್ಯದಲ್ಲಿ ಅಲ್ಲ, ಇಡೀ ದೇಶದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. ಮಹಾರಾಷ್ಟ್ರದಲ್ಲೂ ಅದೇ ಪರಿಸ್ಥಿತಿ ಇದೆ. ರೈತರ ಸಾಲ ಮನ್ನಾ ಮಾಡಬೇಕೆಂದು ಚರ್ಚೆ ಮಾಡುತ್ತೇವೆ. ಕೇಂದ್ರದಲ್ಲಿ Parliament ನಲ್ಲಿ ಮಾನ್ಯ ಗೃಹ ಸಚಿವರು ಹೇಳುತ್ತಾರೆ. " Don't politicize the death of farmers" said the Home Minister Rajnath Singh in a debate when the matter came up in the Loksabha. ನಾವು ಇವತ್ತು ಈ ರೈತನ ಆತ್ಮಹತ್ಯೆ ಪ್ರಕರಣ ಇಟ್ಟುಕೊಂಡು ರಾಜಕೀಯ ಮಾಡುತ್ತಾ ಹೊರಟಿದ್ದೇವೆ. ರೈತನ ಆತ್ಮಹತ್ಯೆ ನಿಲ್ಲಿಸುವುದು ಹೇಗೆ? ಆ ರೈತನ ಕಷ್ಟಕ್ಕೆ ಪರಿಹಾರ ಕೊಡುವುದು ಹೇಗೆ? ಈ ಬಗ್ಗೆ ನಾವು ತೀರ್ಮಾನ ಮಾಡುತ್ತಿಲ್ಲ. ಈ ರೈತನ ಆತ್ಮಹತ್ಯೆಯಲ್ಲಿಯೂ ನಾವು ರಾಜಕಾರಣಿಗಳು, ಪಕ್ಷಗಳು ರಾಜಕಾರಣ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡಿಕೊಂಡು ಹೊರಟಿದ್ದೇವೆಂದು ಅತ್ಯಂತ ನೋವಿನಿಂದ ನಾನು ಹೇಳುತ್ತೇನೆ. ಇವತ್ತು ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಾರೆ. ಸಾಲ ಮನ್ನಾ ಮಾಡುವುದೊಂದೇ ಪರಿಹಾರವಲ್ಲ. ನಾನು ಬರಗಾಲದ ಬಗ್ಗೆ ಚರ್ಚೆ ಮಾಡಿದ ಸಂದರ್ಭದಲ್ಲಿ, ಈ ರೈತರು ಬೆಳೆದಂಥ 23 ಸಾವಿರ ಕೋಟಿ ರೂಪಾಯಿಗಳ ಬೆಳೆ ನಷ್ಟವಾಗಿದೆ ಎಂದು ಕಳೆದ ವರ್ಷ ಈ ವರ್ಷ ಏನು ಹೇಳಿದ್ದೇನೆ, ಸಾಲ ಮಿತಿ ಬಗ್ಗೆ ಚರ್ಚೆ ಮಾಡಬೇಕೆಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ಆ ವಿಷಯದ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಈ ರಾಜ್ಯದೊಳಗೆ ಸಾಲ ನೀತಿ ಯಾವ ರೀತಿ ಇದೆ, ಸಹಕಾರಿ ಬ್ಯಾಂಕುಗಳ ಸಾಲ ಎನ್ನತಕ್ಕಂಥದ್ದರಲ್ಲೂ ಯಾವ ರೀತಿ ನಾವು ರೈತರಿಗೆ ಧೋಖಾ ಹಾಕುತ್ತಿದ್ದೇವೆ, ನಾವು ಆ ರೈತರಿಗೆ ನಿಜವಾದ ಸಾಲ ಕೊಡುತ್ತಿದ್ದೇವೆಯೇ, ಅದನ್ನೂ ಚರ್ಚೆ ಮಾಡೋಣವಂತೆ. ಶ್ರೀ ರಮೇಶ್ ಕುಮಾರ್‌ರವರು ಪ್ರಮುಖವಾದ ಅಂಶ ಏನು ಪ್ರಸ್ತಾಪ ಮಾಡಿದರು, ಅದೂ ಕೂಡ ಇವತ್ತು ಇಲ್ಲಿ ಚರ್ಚೆಯಾಗಬೇಕು. ಮೊನ್ನೆ ಇಲ್ಲಿ ಚರ್ಚೆ ಆದ ಹಾಗೆ ಇದೆ. ಬಹುಶ: ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಚರ್ಚೆ ಮಾಡುವ ಸಂದರ್ಭದಲ್ಲಿ ವಾದ ನಡೆಯಿತು. ಅದರ ಸತ್ಯಾಂಶ ಏನಿದೆ, ವಾಸ್ತವಾಂಶ ಏನಿದೆ ಅದೂ ಚರ್ಚೆಯಾಗಬೇಕು, ಅರ್ಧಕ್ಕೆ ನಿಲ್ಲಿಸಬೇಕಾದ ಅವಶ್ಯಕತೆ ಇಲ್ಲ. ಕೇಂದ್ರದ ಮಂತ್ರಿಗಳಾದ ಶ್ರೀ ರಾಜನಾಥಸಿಂಗ್‌ರವರು ರೈತರ ಆತ್ಮಹತ್ಯೆ ವಿಷಯವನ್ನು politicize ಮಾಡಿಕೊಳ್ಳಬೇಡಿ ಎಂದು Parliament ನಲ್ಲಿ ಹೇಳುತ್ತಾರೆ. ಆದರೆ, politicize ಮಾಡುತ್ತಿದ್ದೇವೆ. ರೈತರ ಸಾಲ ಮನ್ನಾ ಮಾಡಿ ಎಂದು ಬಹುಶ: ಮೊನ್ನೆ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡುವಾಗ ಹೇಳಿದ್ದಾರೆ, demand ಮಾಡಿದ್ದಾರೆ. 2 ಲಕ್ಷ ರೂಪಾಯಿಗಳ ವರೆಗೆ ರೈತನ ಸಾಲ ಮನ್ನಾ ಆಗಬೇಕೆಂದು ಸಭೆಯಲ್ಲಿ demand ಇಟ್ಟಿದ್ದಾರೆ. ಒಪ್ಪುತ್ತೇನೆ. 2 ಲಕ್ಷ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡತಕ್ಕಂಥದ್ದು ಏನು demand ಇಟ್ಟಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ನಾನು ಸ್ನೇಹಿತರುಗಳಿಗೂ ಒಂದು ಮನವಿ ಮಾಡುತ್ತೇನೆ, ರೈತರ ಸಾಲ ಮನ್ನಾ ವಿಷಯದಲ್ಲಿ ನಮ್ಮ ಕಾಲದಲ್ಲಿ ನಾವು 3600 ಕೋಟಿ ರೂಪಾಯಿಗಳ ರೈತರ ಸಾಲ ಮನ್ನಾ ಮಾಡತಕ್ಕಂಥ ನಿರ್ಧಾರ ಮಾಡಿದೆವು ಎಂದು ಶ್ರೀ ಜಗದೀಶ್ ಶೆಟ್ಟರ್ ರವರು ಇಲ್ಲಿ ಮಾತನಾಡಿದ್ದನ್ನು ನಾನು ಇಲ್ಲಿ ಕೇಳಿದ್ದೇನೆ, ನೋಡಿದ್ದೇನೆ. ಆವತ್ತು 2013ರಲ್ಲಿ ಚುನಾವಣೆಗೆ ಹೋಗತಕ್ಕಂಥ ಕೊನೆಯ ಹಂತವಾಗಿತ್ತು. ಆವತ್ತಿನ ಬಿಜೆಪಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸರ್ಕಾರದಲ್ಲಿ ಬಜೆಟ್‌ನ ಕೊನೆಯ ಹಂತದಲ್ಲಿ ಮಂಡನೆ ಮಾಡುತ್ತಿದ್ದಾರೆ. ಯಡಿಯೂರಪ್ಪನವರು ಬಹುಶ: ಆ ಮೂಲೆಯಲ್ಲಿ ಎಲ್ಲೋ ಕುಳಿತಿದ್ದರೆಂದು ತೋರುತ್ತದೆ, ಮಾಡುತ್ತೀರೋ ಇಲ್ಲವೋ ಎಂದು ಅವರು ಜೋರಾಗಿ ಕೂಗಿ ಹೇಳಿದರು. ಅಷ್ಟರೊಳಗೆ ಸ್ವಲ್ಪ difference ಗಳಿತ್ತು. ಸರಿ, ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿ 3600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡತಕ್ಕಂಥ ನಿರ್ಧಾರವನ್ನು ಆವತ್ತು ಪ್ರಕಟ ಮಾಡಿದರು. ಆ ಸಾಲ ಮನ್ನಾ ಮಾಡಲಿಕ್ಕೂ 14% ಇದ್ದಂಥ VAT ಅನ್ನು 14.5% ಗೆ ಏರಿಕೆ ಮಾಡಿದಿರಿ. ರೈತರ ಸಾಲ ಮನ್ನಾ ಮಾಡುವುದಕ್ಕೆ 3600 ಕೋಟಿ ರೂಪಾಯಿಗಳನ್ನು ಹೊಂದಿಸಬೇಕೆಂದು ಜಗದೀಶ್ ಶೆಟ್ಟರ್‌ರವರೇ ಭಾಷಣ ಮಾಡಿದ್ದಾರೆ. 3600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಲಿಕ್ಕೆ 14% ಇದ್ದಂಥ VAT ಅನ್ನು 14.5% ಗೆ ಏರಿಕೆ ಮಾಡಿದೆವು ಆ ಹಣ ಹೊಂದಿಸಲಿಕ್ಕೆ ಎನ್ನುವ ಮಾತನ್ನು ಅವರೇ ಹೇಳಿದ್ದಾರೆ. ಇಲ್ಲಿ ನೋಡಿದ್ದೇನೆ, ಗಮನಿಸಿದ್ದೇನೆ. ಆ 14.5%ಗೆ ಏರಿಕೆ ಮಾಡಿಕೊಂಡಾಗ, ಹಲವಾರು ಬಾಬ್ತಿನ ಮೇಲೆ ಹಾಕತಕ್ಕಂಥ VAT ಏನಿದೆ, ಆ ರೈತನು ಮಾರ್ಕೆಟ್‌ನಲ್ಲಿ ಹೋಗಿ ಖರೀದಿ ಮಾಡಿದರೆ ಆ ರೈತನೂ ಕೂಡ ಮತ್ತೆ ಅಲ್ಲಿಯೇ ಕಟ್ಟಬೇಕು. ಈ ಸಾಲ ಮನ್ನಾ ಮಾಡುತ್ತೇವೆಂದು ಮತ್ತೆ ಅವನ ಮೇಲೆ 0.5% tax ಏರಿಕೆ ಮಾಡಲಾಯಿತು. ಅವರ (ಬಿಜೆಪಿ) ಕಾಲದಲ್ಲಿ 900 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದರು. ನಂತರ ನೀವು (ಆಡಳಿತ ಪಕ್ಷ) ಬಂದು ಇನ್ನುಳಿದಂಥ ಸಾಲ ಮನ್ನಾ ಮಾಡಿದ್ದೀರಿ. ಆ 14.5% tax ಅನ್ನು ಏರಿಕೆ ಮಾಡಿದಿರಿ, 6 ಕೋಟಿ ಜನತೆ ಮೇಲೆ ಪುನ: tax ನ ಹೊರೆ ಹೊರಿಸಿದಿರಿ. ಆ 14.5% ನೀವೇನು ಏರಿಕೆ ಮಾಡಿದಿರಿ, ಅದನ್ನು ಮತ್ತೆ ಇಳಿಕೆ ಮಾಡಲೇ ಇಲ್ಲ. ರೈತರ ಸಾಲ ಮನ್ನಾ ಮಾಡತಕ್ಕಂಥದ್ದಕ್ಕೆ, ಸರ್ಕಾರದ ಖಜಾನೆ ತುಂಬಿಸಿಕೊಳ್ಳಲಿಕ್ಕೆ ಈ tax ಹಾಕಿದ್ದೇವೆಂದು ಏನು ಹೇಳುತ್ತೀರಿ, ಇವತ್ತು ಅದನ್ನೆ ಮತ್ತೆ ಹಾಗೆಯೇ continue ಮಾಡಿಕೊಂಡು ಹೋದಿರಿ. 6 ಕೋಟಿ ಜನತೆ ಮೇಲೆ ಆ 14.5% VAT ಅನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಿದ್ದೀರಿ. ಹೌದು, ನಾವು ನೀವು ಸೇರಿ ಸಮ್ಮಿಶ್ರ ಸರ್ಕಾರವನ್ನು ರಚಿಸಿದಾಗ, ಅದರಲ್ಲಿ ನಾನು ಮುಖ್ಯಮಂತ್ರಿ ಇದ್ದಾಗ ಸಾಲ ಮನ್ನಾ ಮಾಡಿದೆವು.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015-(11)-12-40-ಎಸ್ಸೆಂಕೆ-ಎಸ್ಎಸ್‌ಡಿ

ಶ್ರೀ ಹೆಚ್.ಡಿ.ಕುಮಾರಸ್ವಾಮಿ :-

ಬೀದರ್‌ನಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಂಥ ಒಂದು ಕುಟುಂಬದ ಮನೆಯಲ್ಲಿ ಗ್ರಾಮ ವಾಸ್ತವ್ಯ ಮಾಡಿದೆ. ಆ ಹಳ್ಳಿಯಲ್ಲಿ ಆ ಮನೆಯಲ್ಲಿ ಆ ಕುಟುಂಬದ ವಿಧವೆಯಾದ ಹೆಣ್ಣುಮಗಳು ಕೊಟ್ಟಂಥ ಅನ್ನವನ್ನು ಊಟ ಮಾಡಿದೆ. ಆ ಎರಡು ತುತ್ತು ಅನ್ನ ಏನು ತಿಂದಿದ್ದೇನೆ, ಆ ರಾತ್ರಿ ಅಲ್ಲಿಯೇ ತೀರ್ಮಾನ ಮಾಡಿದೆ, ಒಂದು ಬಾರಿ ಈ ರೈತರ ಸಾಲ ಮನ್ನಾ ಮಾಡಬೇಕು ಅದರ ಮೂಲಕ ಅವರ ಋಣ ತೀರಿಸೋಣ, ಅವರನ್ನು ಋಣ ಬಾಧೆಯಿಂದ ಮುಕ್ತರನ್ನಾಗಿಸೋಣವೆಂದು ತೀರ್ಮಾನ ಮಾಡಿದೆ. ನಾನು ತೀರ್ಮಾನಿಸಿ ಘೋಷಣೆ ಮಾಡಿದರೆ ಅಂದು ಯಾವ್ಯಾವ ರೀತಿ ನಡೆಯಿತು ಅದನ್ನೆಲ್ಲಾ ಪುನ: ಪ್ರಸ್ತಾಪ ಮಾಡುವುದಿಲ್ಲ. ಅಂದು ನಮ್ಮ ಆರ್ಥಿಕ ಸಚಿವರು ಮಾಡಲಿಕ್ಕಾಗಲ್ಲ ಎಂದರು. 2007ರ ಜನವರಿ ತಿಂಗಳಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸಬೇಕು. ನಾವು ಆ ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ರೈತರಿಗೆ ಸಂದೇಶ ಕೊಡಬೇಕೆಂದು ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ರೈತರ ಸಾಲ ಮನ್ನಾ ಬಗ್ಗೆ mention ಮಾಡಿದೆ. ಆದರೆ, Cabinet ನಲ್ಲಿ ಆ ಪದ ತೆಗೆದು ಹಾಕಬೇಕೆಂದು ಅಂದು ಹೇಳಿದರು. ಮಾನ್ಯ ರಮೇಶ್ ಕುಮಾರ್‌ರವರೇ ಅಂದು ಆ ಪದವನ್ನು ಹೊಡೆದು ಹಾಕಿಸಿ ತೆಗೆದು ಹಾಕಿಸಿದೆ. ಆದರೂ ಅಂದು 2,500/- ಸಾವಿರ ಕೋಟಿ ರೂಪಾಯಿಗಳ ರೈತರ ಸಾಲ ಮನ್ನಾ ಏನು ಮಾಡಿದೆವು, ರಾಜ್ಯದ ಆರು ಕೋಟಿ ಜನರ ಮೇಲೆ ಅಂದು ತೆರಿಗೆ ಹಾಕಲಿಲ್ಲ. ಅಂದು ಇದ್ದಂಥ ನಮ್ಮ ಮಿತಿಯೊಳಗೆ ಆ ರೈತರ ಸಾಲ ಮನ್ನಾ ಮಾಡಲಿಕ್ಕೆ 2,500/- ಸಾವಿರ ಕೋಟಿ ರೂಪಾಯಿಗಳನ್ನು ನೇರವಾಗಿ ರೈತನ ಖಾತೆಗೆ ಜಮಾ ಮಾಡಿಸಿದ್ದೇವೆ. ಮಾಡಿ ತೋರಿಸಿದ್ದೇವೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಆ ರೈತನನ್ನು ಉಳಿಸಬೇಕೆನ್ನುವ ಹೃದಯ ವೈಶ್ಯಾಲತೆ ಇದ್ದರೆ ತಾಯಿಯ ಹೃದಯ ಇದ್ದರೆ ಇವತ್ತೂ ಕೂಡ ಆ ರೈತನನ್ನು ಉಳಿಸಲಿಕ್ಕೆ ತೀರ್ಮಾನ ಮಾಡಬಹುದು. ಆದರೆ, ಸಾಲ ಮನ್ನಾ ಮಾಡುವುದು ಒಂದೇ ಶಾಶ್ವತ ಪರಿಹಾರ ಅಲ್ಲ ಎನ್ನುವುದು ನನಗೆ ಗೊತ್ತಿದೆ ಅದನ್ನೂ ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ, ಇಂದು ಈ ಸಾಲ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮನ್ನಾ ಬಗ್ಗೆ ಏನು ಚರ್ಚೆ ನಡೆಯುತ್ತಿದೆ, ಹೊರಗಡೆ ನಾವೇನು ರೈತರಿಗೆ ಆತ್ಮಸ್ಥೈರ್ಯ ತುಂಬಬೇಕೆಂದು ಹೇಳುತ್ತೇವೆ, ಈ ಭಾಗ ಆ ಬಾಗದ ಎಲ್ಲರೂ ಸೇರಿ ರೈತರಿಗೆ ಕೈ ಮುಗಿದು ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ಹೇಳಿದ್ದೇವೆ. ಆದರೂ ನಾವು ಅದನ್ನು ನಿಲ್ಲಿಸುವುದಕ್ಕೆ ಆಗಿಲ್ಲ. ಇಂದು ರೈತ ಏಕೆ sudden ಆಗಿ ಪ್ರತಿ ನಿತ್ಯ 4-5 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಹಲವಾರು ರೀತಿಯ ಕಾರಣಗಳಿವೆ. ಇವತ್ತು ರೈತರೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅದಕ್ಕೆ ಪರಿಹಾರಗಳೇನು ಎಂದು ಹೇಳಿದರು. ಉಪಾಧ್ಯಕ್ಷರೆ, ನನ್ನ ಬಳಿ ಒಂದು ಪಟ್ಟಿ ಇದೆ. ಯಾವ್ಯಾವ ವರ್ಷಗಳಲ್ಲಿ ಎಂದರೆ, 2003-04 ರಿಂದ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡರು ಎನ್ನುವ ಬಗ್ಗೆ ಪಟ್ಟಿಯಿದೆ. 2014-15 ರಲ್ಲಿ ಕೇವಲ 48 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಸರ್ಕಾರ ಕೊಟ್ಟಿರುವ ಮಾಹಿತಿಯಲ್ಲಿದೆ. ಆದರೆ, ನಿಮ್ಮ National Crime Records Bureau ದಲ್ಲಿ ಕರ್ನಾಟಕದಲ್ಲಿ ಕಳೆದ ವರ್ಷವೂ ಕೂಡ 321 cases ನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅವರು ಮಾಹಿತಿ ಕೊಡುತ್ತಾರೆ. ಆದರೆ, ರಾಜ್ಯ ಸರ್ಕಾರದಲ್ಲಿರತಕ್ಕಂಥ ಮಾಹಿತಿ ಕೇವಲ 48 ಮಾತ್ರ ಎಂದು ಇದೆ. ಇದು ಯಾವ ರೀತಿ ರೈತನನ್ನು ಇಂಥ ಒಂದು ಪರಿಸ್ಥಿತಿಯಲ್ಲಿಯೂ ಅತ್ಯಂತ ಲಘುವಾಗಿ ಪರಿಗಣಿಸಿದ್ದೇವೆ? ಹಾವೇರಿಯಲ್ಲಿ ನಾನು ಪರಿಹಾರ ಕೊಡಲಿಕ್ಕೆ ಹೋದಾಗ ಬಹುಶಃ 8-9 ವರ್ಷದ ಹುಡುಗಿ ವೇದಿಕೆಗೆ ಬಂದಳು. 2013 ರಲ್ಲಿ ಅವಳ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅವರಿಗೆ ಸರ್ಕಾರದಿಂದ ಯಾವ ಪರಿಹಾರವೂ ದೊರಕಿಲ್ಲ. 2013 ರಲ್ಲಿ ಬ್ಯಾಡಗಿ ಕ್ಷೇತ್ರದವರು ಸಾಲದಿಂದ ರೈತ ಆತ್ಮಹತ್ಯೆ ಮಾಡಿಕೊಂಡಂಥವನ 8-9 ವರ್ಷದ ಹುಡುಗಿ ರಾಜ್ಯ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಮೊದಲನೆ ಸ್ಥಾನದಲ್ಲಿ ಆಯ್ಕೆಯಾಗಿದ್ದಾಳೆ. ಯಾವ ರೈತ ಸತ್ತಿದ್ದಾನೆ ಆ ಕುಟುಂಬಕ್ಕೆ ಇದುವರೆವಿಗೂ ಪರಿಹಾರ ದೊರಕಿಲ್ಲ ಅಂಥ ರೈತನ ಹೆಂಡತಿ ಇಂದು ಹಾವೇರಿಯಲ್ಲಿ ಮನೆ ಕೆಲಸ ಮಾಡಿಕೊಂಡಿದ್ದಾಳೆ. ಸರ್ಕಾರದಿಂದಲೂ ಪರಿಹಾರವಿಲ್ಲ, ಇಂಥ ಪರಿಸ್ಥಿತಿಯಲ್ಲಿ ಆ ಹೆಣ್ಣು ಮಗಳು ಜನ್ಮ ಕೊಟ್ಟಂಥ ತಾಯಿ ತನ್ನ ಮಗಳನ್ನು ಓದಿಸುತ್ತಿದ್ದಾಳೆ. ಆ ಮಗು ವೇದಿಕೆಗೆ ಬಂದು ಕಣ್ಣೀರು ಹಾಕಿ ನನ್ನ ಹತ್ತಿರ ಮಾಹಿತಿ ಕೊಡುತ್ತಾಳೆ. ಇಂದಿನವರೆಗೆ ಪರಿಹಾರ ದೊರಕಿಲ್ಲ. ಅದೇ ರೀತಿಯಲ್ಲಿ ನಮ್ಮ ಬಿ.ಆರ್.ಪಾಟೀಲ್‌ರವರ ಕ್ಷೇತ್ರದಲ್ಲಿ ಅಂಗವಿಕಲ ಮಕ್ಕಳೊಂದಿಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ರೈತ ಮಹಿಳೆಯ ಸಂಕಷ್ಟದ ಜೀವನ ನಡೆಸುತ್ತಿದ್ದಾಳೆ. ಗುಲ್ಬರ್ಗಾದಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡು 5 ವರ್ಷಗಳಾಗಿವೆ. ಅವನಿಗೆ ಇಬ್ಬರು ಅಂಗವಿಕಲ ಮಕ್ಕಳಿದ್ದಾರೆ, ಇವತ್ತಿನವರೆಗೆ ಪರಿಹಾರ ಕೊಟ್ಟಿಲ್ಲ. ರೈತನ ಪರಿಸ್ಥಿತಿ ಈ ರೀತಿಯಾಗಿದೆ. ನಾವು ಇವತ್ತು ರೈತನ ಆತ್ಮಹತ್ಯೆಯ ಬಗ್ಗೆ ಲಘುವಾಗಿ ಮಾತನಾಡುತ್ತೇವೆ, ಕುಡಿದು ಸತ್ತಿದ್ದಾನೆ, ಇಸ್ಪೀಟು ಆಡಿ ಸಾಯುತ್ತಾನೆಂದು ಹೇಳುತ್ತೇವೆ. ಇಂಥ ರೈತರ ಬಗ್ಗೆ ಲಘುವಾಗಿ ಮಾತನಾಡುವುದೇನಿದೆ, ನಾವು ರೈತನಿಗೋಸ್ಕರವಾಗಿ ಏನು ಕಾರ್ಯಕ್ರಮ ಕೊಟ್ಟಿದ್ದೇವೆ?

ಉಪಾಧ್ಯಕ್ಷರು : ಕುಮಾರಸ್ವಾಮಿಯವರೆ, ನೀವು conclude ಮಾಡಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಉಪಾಧ್ಯಕ್ಷರೆ, ಆಯಿತು ಮುಗಿಸಿ ಬಿಡುತ್ತೇನೆ. ನಮ್ಮ ರಮೇಶ್ ಕುಮಾರ್ ರವರು, ರೈತ ಯಾವ ರೀತಿ ಸಾಲ ತೆಗೆದುಕೊಳ್ಳುತ್ತಾನೆ? ರೈತನಿಗೆ ನಾವು ಯಾವ ರೀತಿಯಲ್ಲಿ ಸಾಲ ಕೊಡುತ್ತಿದ್ದೇವೆ? ಇದರ ಬಗ್ಗೆ ಚರ್ಚೆ ಮಾಡಿ ಗಮನ ಸೆಳೆಯಿರಿ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅಲ್ಪಾವದಿ ಸಾಲ, ಮಧ್ಯಮಾವದಿ ಸಾಲ, ದೀರ್ಘಾವದಿ ಸಾಲ ಕೊಡುತ್ತಿದ್ದೇವೆ. 20,63,148 ರೈತರಿಗೆ ಅಲ್ಪಾವದಿ ಸಾಲ ಕೊಡುತ್ತೀರಿ. ಆ ಸಾಲದ ಪ್ರಮಾಣ 9,285.99 ಕೋಟಿ ರೂಪಾಯಿಗಳು. ಮಧ್ಯಮಾವದಿ ಸಾಲ ಪಡೆದಿರುವವರ ಸಂಖ್ಯೆ 15 ಸಾವಿರ, ಆ ಸಾಲದ ಪ್ರಮಾಣ 292 ಕೋಟಿ ರೂಪಾಯಿಗಳು. ದೀರ್ಘಾವದಿ ಸಾಲ ಪಡೆದಿರುವವರ ಸಂಖ್ಯೆ: 26 ಸಾವಿರ, ಆ ಸಾಲದ ಪ್ರಮಾಣ 317 ಕೋಟಿ ರೂಪಾಯಿಗಳು, ಒಟ್ಟು 9,896 ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೇವೆಂದು ಈ ವರ್ಷದ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೀರಿ. 9,896 ಕೋಟಿ ರೂಪಾಯಿಗಳ ಸಾಲ ಏನಿದೆ, ಅಲ್ಪಾವದಿ ಸಾಲ ತೆಗೆದುಕೊಂಡಿರತಕ್ಕಂಥ ರೈತರಿಗೆ ನೀವು ಕೊಟ್ಟಿದ್ದು ಸುಮಾರು 5,200 ಕೋಟಿ ರೂಪಾಯಿಗಳು. ಈಗಾಗಲೇ ರೈತ ಕಳೆದ ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ 4,911 ಕೋಟಿ ರೂಪಾಯಿಗಳ ಸಾಲ ಮರುಪಾವತಿ ಮಾಡಿದ್ದಾನೆಂದು ನಿಮ್ಮ ದಾಖಲೆಗಳಲ್ಲಿ ಹೇಳುತ್ತಿದೆ. ಮಾನ್ಯ ರಮೇಶ್ ಕುಮಾರ್‌ರವರೇ, ಈ ವರ್ಷ ರೈತರೇನು ಅಲ್ಪಾವದಿ ಸಾಲವಾಗಿ ತೆಗೆದುಕೊಂಡಿದ್ದರೋ ಅದರಲ್ಲಿ 4,911 ಕೋಟಿ ರೂಪಾಯಿಗಳನ್ನು, ಅವನ ಬೆಳೆ ನಷ್ಟವಾಗಿದ್ದರೂ ಆ ರೈತನ ಸಾಲ ಇಲ್ಲಿ ಜಮಾ ಆಗಿ ಬಿಟ್ಟಿದೆ. ಈ ವರ್ಷದ್ದೆ 2014-15 ರಲ್ಲಿಯೇ.,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್.ಮಹಾದೇವಪ್ರಸಾದ್(ಸಹಕಾರ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಅಂದರೆ, ಕಳೆದ ವರ್ಷದ ಸಾಲವನ್ನು ಈ ವರ್ಷ ತೀರಿಸುತ್ತಾರೆ. ತಾವೇನು ಈ ವರ್ಷ 5 ಸಾವಿರ ಕೋಟಿ ರೂಪಾಯಿಗಳ ಸಾಲ ಕೊಟ್ಟಿರುವುದರ ಬಗ್ಗೆ ಹೇಳುತ್ತಿದ್ದೀರಿ ಅದನ್ನು ತೀರಿಸುವಂಥ ಅವಧಿ ಬರುವುದು ಮುಂದಿನ ವರ್ಷಕ್ಕೆ. ಹೀಗಾಗಿ ಕಳೆದ ವರ್ಷ ಕೊಟ್ಟಿದ್ದ ಸಾಲ ಆಯಾಯ ತಿಂಗಳಲ್ಲಿ ಏನೇನು ಸಾಲ demand ಇರುತ್ತದೆ, ಅದು ಈ ವರ್ಷದ ಆಯಾಯ ತಿಂಗಳಲ್ಲಿ recovery ಆಗುತ್ತಾ ಬರುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಸಚಿವರೇ ಇಲ್ಲಿ ಹೇಳುತ್ತೇನೆ ಕೇಳಿ.

ಶ್ರೀ ಕೆ.ಆರ್.ರಮೇಶ್ ಕುಮಾರ್ (ಶ್ರೀನಿವಾಸಪುರ) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಅವರಿಗೆ ಗೊತ್ತಿದೆ. ನನ್ನ ಅಧ್ಯಕ್ಷತೆಯಲ್ಲಿ ಅವರೇ ಒಂದು ಸಮಿತಿ ಏರ್ಪಾಡು ಮಾಡಿದ್ದರು, ನಾನೊಂದು ವರದಿಯನ್ನು ಕೊಟ್ಟಿದ್ದೇವೆ. ಕುಮಾರಸ್ವಾಮಿಯವರು ಹೇಳತಕ್ಕಂಥದ್ದಕ್ಕೆ ಪುಷ್ಟೀಕರಿಸಿ ಹೇಳುವುದಾದರೆ, ಈ ರಾಜ್ಯದ ಒಟ್ಟು ರೈತ ಕುಟುಂಬಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರತಕ್ಕಂಥ ಜನ ಶೇಕಡ 6 ಕ್ಕಿಂತ ಮೀರಿ ಹೋಗಿಲ್ಲ. ಅಲ್ಪಾವದಿ ಸಾಲಗಳೇನಿದೆ ಇದು ಕೃಷಿಕನಿಗೆ ದೊಡ್ಡ ಉಪಯೋಗವಾಗುವುದಿಲ್ಲ. ಅವು ಹೆಚ್ಚಿಗೆ book-adjustment ಆಗುತ್ತವೆ. ದೀರ್ಘಾವದಿ ಸಾಲ ಕೊಡುವುದಕ್ಕೆ ವ್ಯವಸ್ಥೆ ಇರುವುದು ನಮ್ಮ ಸಹಕಾರಿ system ನಲ್ಲಿ only PCRD Banks. PCRD Banks ಶೇಕಡ 80 ರಷ್ಟು banks ಇವತ್ತು defaulters ಆಗಿದ್ದಾರೆ. As institution defaulters ಆದರೆ NABARD ನವರು ಅವರಿಗೆ further finance ಮಾಡುವುದಿಲ್ಲ. ಅದ್ದರಿಂದ, ಈ 6% ಹೊರತುಪಡಿಸಿ ಉಳಿದ 94% ರೈತ ಕುಟುಂಬಗಳು ಎಲ್ಲಿ ಸಾಲ ತರುತ್ತಿದ್ದಾರೆ, ಅದನ್ನು ಯೋಚಿಸಿ. ಕುಮಾರಸ್ವಾಮಿಯವರು ಹೇಳತಕ್ಕಂಥದ್ದು ನೂರಕ್ಕೆ ನೂರು ಸತ್ಯ. ಸದಸ್ಯರಿದ್ದಾರಲ್ಲ ರೈತ ಕುಟುಂಬಗಳಿದ್ದಾವಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತ ಕುಟುಂಬಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರತಕ್ಕಂಥವರ ಸಂಖ್ಯೆ ಶೇಕಡ 6 ಮೀರಿಲ್ಲ. ಅದರಲ್ಲಿ ದುರ್ಬಲ ವರ್ಗಗಳು ಅವರು ಇವರನ್ನಂತು ಕೇಳಲೇಬೇಡಿ, ಅವರು ಯಾರೂ ಇಲ್ಲವೇ ಇಲ್ಲ. ಯಾವ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

book ಇಟ್ಟುಕೊಂಡು rubber stamp ಇರುತ್ತದಲ್ಲ ಅದು, Resolution Book ಕಂಕುಳಲ್ಲಿಯೇ ಇಟ್ಟುಕೊಂಡು ಮನೆಯವರೇ society ನಡೆಸುತ್ತಿದ್ದಾರೆ ಅವರೇ ಈ ಸಾಲ ತೆಗೆದುಕೊಳ್ಳುವುದು ವಾಪಸ್ ಕಟ್ಟುವುದು, ಈ book adjustment societyಗಳಿವು. ಅದ್ದರಿಂದ, ನೀವು ಸಮಗ್ರವಾಗಿ ಸಹಕಾರಿ ವ್ಯವಸ್ಥೆಯನ್ನು ಪುನರ್ ರಚಿಸಬೇಕಾಗಿದೆ. ರೈತರನ್ನು ದೊಡ್ಡ ರೈತ, ಸಣ್ಣ ರೈತ ಎಂದು ವಿಭಜಿಸಬೇಡಿ. ಆ ಜಾತಿ ರೈತ, ಈ ಜಾತಿ ರೈತ ಎಂದು ವಿಭಜಿಸಬೇಡಿ. ನಾವು ರೈತರ ಸಾಲ ಮನ್ನಾ ಮಾಡಿ ಎಂದು ಕೇಳುವುದಕ್ಕಿಂತಲೂ ಸರಳ ಬಡ್ಡಿಯಲ್ಲಿ ಸಾಲ ಕೊಡಿ ಎಂದು ಕೇಳಿ, ವಾಪಸ್ ಸಾಲ ಕಟ್ಟುವ ಹಾಗೆ ಮಾಡಿ, ರೈತ ಸ್ವಾಭಿಮಾನಿ, ರೈತ ಅನ್ನ ಇಟ್ಟವನೇ ಹೊರತು ಬಿಕ್ಷೆ ಬೇಡಿದವನಲ್ಲ. ರೈತನಿಗೆ ಸಾಲ ಮರುಪಾವತಿ ಮಾಡತಕ್ಕಂಥದ್ದಕ್ಕೆ ಅವಕಾಶ ಕೊಡಿ. ಅವನು Commercial Banks ಗೆ ಹೋಗುವುದಕ್ಕೆ ಬಿಡಬೇಡಿ. Private money lenders ಕೃಪೆಗೆ ಅವನನ್ನು ತಳ್ಳಬೇಡಿ. ನಿಮ್ಮ netw0rk ನ್ನು expand ಮಾಡಿ. ಈಗ Poly House ಕೊಡುತ್ತಿದ್ದೀರಿ, ನಾನು ಈಗ ತಾನೇ Agricultural Minister ರವರ ಹತ್ತಿರ ಮಾತನಾಡಿದೆ. ನಮ್ಮ ಶಕ್ತಿಗೆ ಮೀರಿದ ಸಾಲವಾದರೆ Commercial Banks ನಾವು ಹೋಗಬೇಕು. ನಾನು ಇದೇ ಸದನದಲ್ಲಿ ಹೇಳಿದ್ದೇನೆ.

(ಮುಂದು)

25.11.2015 12.50(12) ಕೆಎಸ್:ಎಸ್ಎಸ್ಡಿ

ಶ್ರೀ ಕೆ.ಆರ್.ರಮೇಶ್ ಕುಮಾರ್:- (ಮುಂದು)

ನೀವು ಬೇರೆಯವರ ಮಾಹಿತಿ ತೆಗೆದುಕೊಳ್ಳುವುದು ಬೇಡ. ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ನನ್ನ loan account ಏನಾಗಿದೆ ಎಂದು ಅವರಿಂದ ಮಾಹಿತಿ ತೆಗೆದುಕೊಳ್ಳಿ. ನಾನು ಇಂದಿರಾ ನಗರದಲ್ಲಿರುವ ಯುಕೋ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದೇನೆ. High-Tech Mango Farming ಗೋಸ್ಕರ National Horticulture Board ನವರು ನನಗೆ ಕೊಟ್ಟಿದ್ದರು. ನಾನು ಬ್ಯಾಂಕ್‌ನಿಂದ 88 ಲಕ್ಷ ರೂಪಾಯಿ ಸಾಲ ತೆಗೆದುಕೊಂಡಿದ್ದೆ. ಅದಕ್ಕೆ 5 ವರ್ಷ gestation period ಇತ್ತು. 6ನೇ ವರ್ಷಕ್ಕೆ 5



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವರ್ಷದ ಬಡ್ಡಿಯನ್ನು ಅಸಲಿಗೆ ಸೇರಿಸಿ ಅದರ ಮೇಲೆ ಬಡ್ಡಿ ಕಟ್ಟಬೇಕಾಗಿತ್ತು. 6ನೇ ವರ್ಷಕ್ಕೆ ಮೊದಲನೆ ಕಂತು 10 ಲಕ್ಷ ರೂಪಾಯಿ ಮತ್ತೆ 7ನೇ ವರ್ಷಕ್ಕೆ 27 ಲಕ್ಷ ರೂಪಾಯಿ ಆಗಿತ್ತು. ಇದಕ್ಕೆ ನಾನು ಹೆದರಿ ಇನ್ನೊಂದು ಆಸ್ತಿಯನ್ನು ಮಾರಿ ಅವರ ಬಾಕಿ ಹಣವನ್ನು ವಜಾ ಮಾಡಿಕೊಂಡೆ. 9ನೇ ವರ್ಷಕ್ಕೆ 1 ಕೋಟಿ 38 ಲಕ್ಷ ರೂಪಾಯಿಗಳಷ್ಟು ನಾನು ಕಟ್ಟಬೇಕಾಗಿತ್ತು. ಮಾನಮರ್ಯಾದೆಗೆ ಅಂಜಿ ಎಲ್ಲವನ್ನು ಕಳೆದುಕೊಂಡು ನಾವು ಕುಳಿತುಕೊಂಡಿದ್ದೇವೆ. ನನಗೇನು ಪರವಾಗಿಲ್ಲ. ಆದರೆ, ಬೇರೆಯವರ ಗತಿ ಏನು? Please take a second look into the whole co-operative lending policy. ನಿಮಗೆ ರೈತ ಉಳಿಯಬೇಕು ಅಥವಾ ಬದುಕಬೇಕೆಂದು ಇದ್ದರೆ ಅದರ ಬಗ್ಗೆ ಮೊದಲು ಯೋಚನೆ ಮಾಡಿ. ಮಾನ್ಯ ಕುಮಾರಸ್ವಾಮಿಯವರು ಹೇಳುತ್ತಿರುವುದು ಸರಿ ಇದೆ. ಮಾನ್ಯ ಕುಮಾರಸ್ವಾಮಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಒಂದು ವರದಿಯನ್ನು ಕೊಟ್ಟಿದ್ದೇನೆ. ತಮಗೆ ಬಿಡುವು ಇದ್ದಾಗ ಅದನ್ನು ತರಿಸಿಕೊಂಡು ದಯಮಾಡಿ ಓದಿ. ಅದರಲ್ಲಿ ನಾನು ಎಲ್ಲಾ ಡೀಟೆಲ್ಸ್ ಅನ್ನು ಕೊಟ್ಟಿದ್ದೇನೆ. Non Performing Assets ಇವತ್ತಿನದಿವಸ Industrial Sectorನಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಸಾಲ ತೆಗೆದುಕೊಂಡು ವಾಪಸ್ಸು ಕಟ್ಟದೆ ಇರುವವರ ಹತ್ತಿರ ರಿಕವರಿ ಮಾಡುವುದಕ್ಕೆ ಆಗದೆ ಇರತಕ್ಕಂಥದು 4 ಲಕ್ಷ 95 ಸಾವಿರ ಕೋಟಿ ಇದೆ. ಅಂದರೆ, Rs.4,95,000 crores according to the bulletin of the Reserve Bank of India issued at the end of March 2014. Why are you not opening your eyes? ಅವರುಗಳು ಸಾಲ ತೆಗೆದುಕೊಳ್ಳಬೇಕಾದರೆ ಏನು ಅಡಮಾನ ಇಡಬೇಕಾಗಿಲ್ಲ. ಆದರೆ, ನಾನು ಸಾಲ ತೆಗೆದುಕೊಳ್ಳಬೇಕಾದರೆ, ನನ್ನ ಆಸ್ತಿಯನ್ನು ಅಡಮಾನ ಇಡಬೇಕು. ಇದು ಯಾವ ನೀತಿ? ನಾವೆಲ್ಲ ರೈತರ ಮಕ್ಕಳು ಮತ್ತು ಬಡವರಿದ್ದೇವೆ. ಇವತ್ತಿನದಿವಸ ಶ್ರೀಮಂತರಿಗೆ ಸಾಲ ಕೊಡುವುದು ಸುಲುಭ ಆದರೆ, ಬಡವರಿಗೆ ಸಾಲ ಕೊಡುವುದಕ್ಕೆ ತೊಂದರೆ ಕೊಡುತ್ತಿದ್ದೀರಿ. ಹಾಗಾದರೆ, ಈ ಸಭೆ ಏಕೆ ಇರಬೇಕು? Please take a second look into that matter.

ಶ್ರೀ ಹೆಚ್.ಡಿ.ಕುಮಾರ ಸ್ವಾಮಿ:- ನಾನು ಸಾಲದ ರಿಕವರಿ ಬಗ್ಗೆ ಹೇಳಿರುವಂಥದು ಕಳೆದ ವರ್ಷದು ಎಂದು ಮಾನ್ಯ ಸಚಿವರು ಹೇಳಿದರು. ಈ ವರ್ಷ ಅಂದರೆ, 2015-16ನೇ ಸೆಪ್ಟೆಂಬರ್ ತಿಂಗಳವರೆಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

5,209 ಕೋಟಿ ರೂಪಾಯಿ ಅಲ್ಪಾವಧಿ ಬೆಳೆ ಸಾಲ ವಿತರಣೆ ಆಗಿದೆ. 2015-16ನೇ ಸಾಲಿನಲ್ಲಿ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಅಲ್ಪಾವಧಿ ಬೆಳೆ ಸಾಲವನ್ನು ಮರುಪಾವತಿಸಿದ ಮತ್ತು ಬಾಕಿ ಉಳಿಸಿಕೊಂಡ ಸಾಲದ ವಿವರ ಎಂದು ಮಾಹಿತಿ ಕೊಟ್ಟಿದ್ದಾರೆ. 5,209 ಕೋಟಿ ರೂಪಾಯಿಯಲ್ಲಿ 4,911 ಕೋಟಿ ರೂಪಾಯಿ ಸಾಲ ಮರುಪಾವತಿಯಾಗಿದೆ ಎಂದು ನನಗೆ ಕೊಟ್ಟಿರುವ ಮಾಹಿತಿಯಲ್ಲಿದೆ. ಇದು ನಿಮ್ಮ ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಬ್ಯಾಂಕ್‌ಗಳ ಮಾಹಿತಿ ಆಗಿದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- ಮಾನ್ಯ ಕುಮಾರಸ್ವಾಮಿಯವರೇ, ಒಂದು ಸಣ್ಣ ಕ್ಲಾರಿಫಿಕೇಷನ್ ಅನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಪ್ರತಿ ವರ್ಷ ಏಪ್ರಿಲ್ ತಿಂಗಳಿಂದ ಮುಂದಿನ ವರ್ಷದ ಮಾರ್ಚ್ ತಿಂಗಳ ಕೊನೆಯವರೆಗೆ ಸಾಲವನ್ನು ನಿರಂತರವಾಗಿ ಆಯಾ ತಿಂಗಳಲ್ಲಿ ಬೆಳೆಯುವ ಬೆಳೆಯ ಸಂದರ್ಭಗಳನ್ನು ನೋಡಿಕೊಂಡು ಆಯಾ ಡಿಸಿಸಿ ಬ್ಯಾಂಕ್‌ಗಳಲ್ಲಿ ಸಾಲ ವಿತರಣೆ ಮಾಡಿಕೊಂಡು ಬರುತ್ತಾರೆ. ಆದರೆ, ತಾವು ಈಗ ಹೇಳಿದ ಪ್ರಕಾರ ಸೆಪ್ಟೆಂಬರ್ ತಿಂಗಳವರೆಗೆ ಸುಮಾರು 5,000 ಕೋಟಿ ರೂಪಾಯಿ ಸಾಲ ವಿತರಣೆ ಆಗಿದೆ. ಹಾಗೆಯೇ ಸುಮಾರು 4 ಸಾವಿರ ಕೋಟಿ ಚಿಲ್ಲರೆ ರೂಪಾಯಿಗಳಷ್ಟು ರಿಕವರಿ ಬಗ್ಗೆ ತಾವು ಹೇಳಿದ್ದೀರಿ. ಈ ರಿಕವರಿ ಹಣ ಹಿಂದಿನ ವರ್ಷದ ಅವಧಿಯಲ್ಲಿ ಸಾಲ ತೆಗೆದುಕೊಂಡಂಥದು ಆಗಿದೆ. ಈ ವರ್ಷದ ಅವಧಿಯ ಸಾಲ ಆಯಾ ತಿಂಗಳಲ್ಲಿ close ಆಗುವ ಸಮಯದಲ್ಲಿ clear ಆಗಿರುವಂಥ ಮಾಹಿತಿ ಆಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:- ಆಯಿತು sir, 4,911 ಕೋಟಿ ರೂಪಾಯಿ ಸಾಲ ಮರುಪಾವತಿ ಎಂದು ಹೇಳಿದ್ದಾರೆ. ಮಾನ್ಯ ರಮೇಶ್ ಕುಮಾರ್ ಈಗ ಹೇಳಿರುವಂತೆ ಈ ರಾಜ್ಯದಲ್ಲಿ ಸುಮಾರು 27 ಲಕ್ಷ ರೈತರು ಸಹಕಾರಿ ಕ್ಷೇತ್ರದಲ್ಲಿ ಸದಸ್ಯತ್ವವನ್ನು ಹೊಂದಿದ್ದಾರೆ. ನಮ್ಮ ರಾಜ್ಯದಲ್ಲಿರುವ 75 ಲಕ್ಷ ರೈತ ಕುಟುಂಬದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸದಸ್ಯತ್ವವನ್ನು ಹೊಂದಿರತಕ್ಕಂಥವರ ಸಂಖ್ಯೆ ಕೇವಲ 27 ಲಕ್ಷ ಮಾತ್ರ ಇದೆ. ಆದರೆ, ಇವತ್ತಿನದಿವಸ ನೀವು 20 ಲಕ್ಷ ಕುಟುಂಬಗಳಿಗೆ ಸಾಲವನ್ನು ಕೊಡುತ್ತಿದ್ದೀರಿ. ಬಹುಶ: ಮೊನ್ನೆದಿವಸ ಇಲ್ಲಿ ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಿದಂಥ ಸಂದರ್ಭದಲ್ಲಿ ತಾವು ಈ ಬಗ್ಗೆ ಹೇಳಿಕೆಯನ್ನು ಕೊಡುವಾಗ ನೀವು ಮೊದಲು 15 ಲಕ್ಷ ಜನರಿಗೆ ಕೊಡುತ್ತಿದ್ದೀರಿ. ಆದರೆ, ನಾವು ಬಂದ ಮೇಲೆ 20 ಲಕ್ಷ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಜನರಿಗೆ ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಪ್ರತಿ ವರ್ಷ ಸಾಲ ಕೊಡತಕ್ಕಂಥ ಪರ್ಸೆಂಟೇಜ್ ಏರಿಕೆ ಆಗುತ್ತಾ ಹೋಗುತ್ತದೆ. ಸುಮಾರು 50 ರಿಂದ 60 ಸಾವಿರ ಜನರಿಗೆ ಸಾಲವನ್ನು ಹೆಚ್ಚಿಗೆ ಕೊಡುತ್ತೀರಿ. ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ನಾನು ಬಹಳ ಸ್ಪಷ್ಟವಾಗಿ ಕೇಳುವುದಕ್ಕೆ ಬಯಸುತ್ತೇನೆ. ಹಲವಾರು ಮಾನ್ಯ ಸದಸ್ಯರು ಡಿಸಿಸಿ ಬ್ಯಾಂಕ್‌ನಲ್ಲಿ ಕೆಲಸ ಮಾಡಿರುವವರು ಇಲ್ಲಿದ್ದಾರೆ. 20 ಲಕ್ಷ ರೈತ ಕುಟುಂಬಗಳಿಗೆ ಸುಮಾರು 9,200 ಕೋಟಿ ರೂಪಾಯಿ ಅಲ್ಪಾವಧಿ ಸಾಲವನ್ನು ಕೊಟ್ಟಿದ್ದೇವೆಂದು ನಿಮ್ಮ ledgerಗಳಲ್ಲಿ ಎಂಟ್ರಿ ಆಗುತ್ತವಷ್ಟೆ. ಇವತ್ತಿನದಿವಸ ಡಿಸಿಸಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡತಕ್ಕಂಥ ಮಾನ್ಯ ಸದಸ್ಯರುಗಳು ಅಲ್ಲಿನ ಸತ್ಯಾಂಶವನ್ನು ಇಲ್ಲಿ ಹೇಳಬೇಕು. 3% interest ಬಗ್ಗೆ ಹೇಳುವುದಕ್ಕೆ ಹೋದಾಗ ಮೊನ್ನೆದಿವಸ ಅದರ ಬಗ್ಗೆ comments ಮಾಡಿದರು. 3% ಬಡ್ಡಿ ಪ್ರಕಾರ 3 ಲಕ್ಷ ರೂಪಾಯಿ ಕೊಡುತ್ತಿದ್ದೀರಿ. ಆದರೆ, ರೈತರಿಗೆ ಬಡ್ಡಿ ರಹಿತ ಸಾಲ ಎಂದು ಹೇಳುತ್ತಿದ್ದೀರಿ. ಆದರೆ, ಕೇಂದ್ರ ಸರ್ಕಾರ 3% ಬಡ್ಡಿಯ ಸಾಲವನ್ನು ಕೊಡುತ್ತದೆ. ಇವತ್ತು ಯಾವ ರೈತ in time ಸಾಲದ ಹಣವನ್ನು ಮರುಪಾವತಿ ಮಾಡುತ್ತಾನೆಯೋ ಆತನಿಗೆ 3% ಬಡ್ಡಿ ರಹಿತವಾದ ಹಣಕ್ಕಾಗಿ ಕೇಂದ್ರ ಸರ್ಕಾರದವರು ಆ 3% ಹಣವನ್ನು ಕೊಡುತ್ತಿದ್ದಾರೆ. ಇದಕ್ಕಾಗಿ ವರ್ಷಕ್ಕೆ ಸುಮಾರು 180 ರಿಂದ 190 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬರಬಹುದು. ಆದರೆ, ಆ ಹಣವನ್ನು ಇವತ್ತು ನೀವು ರೈತರಿಗೆ ಕೊಡುತ್ತಿಲ್ಲ. ಆದರೆ, ಅದನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ರೈತ in time ಸಾಲ ಮರುಪಾವತಿ ಮಾಡಿದ್ದಾನೆಂದು ಲೆಕ್ಕದಲ್ಲಿ ತೋರಿಸುತ್ತೀರಿ. ತಾವು ಹೊರಡಿಸಿರುವ ಆದೇಶ ಪ್ರತಿ ಸಹ ನನ್ನ ಹತ್ತಿರ ಇದೆ. ನಿಮ್ಮ ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರಿಗೆ ಪ್ರತಿವರ್ಷ ಅಲ್ಪಾವಧಿ ಸಾಲವನ್ನು ಕೊಡತಕ್ಕಂಥದೆಲ್ಲ book adjustment ಆಗಿದೆ. ಅಲ್ಲಿ ನಿಮ್ಮ Secretary in time ಕಟ್ಟುತ್ತಾನೆಂದು ನೀವು ಕೊಡತಕ್ಕಂಥ 3% ರಿಯಾಯ್ತಿ ಹಣಕ್ಕಾಗಿ ಸಂಬಂಧಪಟ್ಟ ರೈತನ ದುಡ್ಡನ್ನು ಇವರು adjustment ಮಾಡಿಕೊಳ್ಳುವುದಕ್ಕಾಗಿ interest part ಅನ್ನು ಕಟ್ಟಿಕೊಂಡು ಆ ರೈತನಿಗೆ 5 ರಿಂದ 6% ಚಾರ್ಜ್ ಮಾಡಿ ಆ ಹಣವನ್ನು ಇಡೀ ರಾಜ್ಯದಲ್ಲಿ ರೈತರಿಂದ ವಸೂಲಿ ಮಾಡುತ್ತಿಲ್ಲವೆಂದು ಅಥವಾ ಈ ರೀತಿಯಾಗಿ ನಡೆಯುತ್ತಿಲ್ಲವೆಂದು ತಾವು ಹೇಳಿದರೆ ನಾನು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಈ ಒಂದು ವಿಷಯದಲ್ಲಿ ಹೇಳುವುದಾದರೆ, ಇದಕ್ಕಾಗಿ ರೈತರು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹಣವನ್ನು ಕಟ್ಟುತ್ತಿಲ್ಲ. ನೀವು ನಿಮ್ಮ account ನಲ್ಲಿ book adjustment ಮಾಡಿಕೊಳ್ಳುತ್ತಿದ್ದೀರಿಷ್ಟೆ. ಮಾನ್ಯ ರಮೇಶ್ ಕುಮಾರ್‌ರವರು ರಾಷ್ಟ್ರೀಕೃತ ಬ್ಯಾಂಕ್ ಬಗ್ಗೆ ಹೇಳಿದರು. ರಾಷ್ಟ್ರೀಕೃತ ಬ್ಯಂಕ್‌ನವರು ನಿಮಗೆ ಪ್ರತಿ ವರ್ಷ ಎಷ್ಟು ಸಾಲ ಕೊಡುತ್ತಾರೆ? ರಾಷ್ಟ್ರೀಕೃತ ಬ್ಯಾಂಕ್‌ಗಳು ಕಳೆದ ವರ್ಷ 392 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆಂದು ಈ ಬಗ್ಗೆ ಸದನದಲ್ಲಿ ನೀವೆ ಮಾಹಿತಿ ಇಟ್ಟಿದ್ದೀರಿ. ನೀವು ಈಗ 20 ಲಕ್ಷ ಜನ ರೈತರಿಗೆ ಸಾಲವನ್ನು ಕೊಡುತ್ತಿದ್ದೀರಿ. ಆದರೆ, ಬಾಕಿ ಉಳಿದಂತಹ 50 ಲಕ್ಷ ರೈತ ಕುಟುಂಬಗಳು ಎಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಿದ್ದಾರೆ? ಇವರಿಗೆ ಸಾಲ ಕೊಡುತ್ತಿರುವವರು ಯಾರು? ಸಹಕಾರಿ ಬ್ಯಾಂಕ್‌ಗಳಲ್ಲಿ ಏನಾಗಿದೆ ಎಂದರೆ, ರೈತ ಹಿಂದೆ ತೆಗೆದುಕೊಂಡಿರುವಂಥ ಸಾಲವನ್ನು ಕೇವಲ book adjustment ಗೋಸ್ಕರ ತೋರಿಸಿಕೊಂಡು ಹೋಗುತ್ತಿದ್ದೀರಿ. ಆದರೆ, ಸಂಬಂಧಪಟ್ಟ ರೈತ ಸಾಲವನ್ನು ಕಟ್ಟುತ್ತಿಲ್ಲ ಹಾಗೆಯೇ ಆ ರೈತನಿಗೆ ಹೊಸ ಸಾಲ ಸಹ ದೊರಕುತ್ತಿಲ್ಲ. ಇದೇ ರೀತಿಯಾಗಿ continue ಆಗುತ್ತಾ ಹೋಗುತ್ತಿದೆ. ಈ ಬಗ್ಗೆ ನಾನೇನಾದರು ತಪ್ಪು ಹೇಳಿದ್ದರೆ ಮಾನ್ಯ ಲಕ್ಷ್ಮಣ್ ಸವದಿಯವರು ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇರತಕ್ಕಂಥ ವಾಸ್ತವಾಂಶವನ್ನು ನಾನು ಹೇಳಿದ್ದೇನೆ. ಪ್ರತಿ ವರ್ಷ ರೈತ ಬಿತ್ತನೆ ಬೀಜಕ್ಕಾಗಿ ಮತ್ತು ಗೊಬ್ಬರ ತೆಗೆದುಕೊಳ್ಳುವುದಕ್ಕಾಗಿ ಎಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಿದ್ದಾನೆ? ಕಳೆದ ವರ್ಷ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕಳೆದ ವರ್ಷ 392 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ. ಹಾಗಾದರೆ ರಾಜ್ಯದಲ್ಲಿರುವ ರೈತರು ಬೆಳೆ ಬೆಳೆಯುವುದಕ್ಕೆ ಎಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಿದ್ದಾನೆ? ಆತ ಸಾಲವನ್ನು ಬೇರೆಕಡೆಯಿಂದ ಮಾಡುತ್ತಿದ್ದಾನೆ. ಈ ವಿಷಯದ ಬಗ್ಗೆ Central IB ರವರು ಕೇಂದ್ರ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. Crop pattern ಗೆ ಅನುಗುಣವಾಗಿ ರೈತ ತೆಗೆದುಕೊಳ್ಳತಕ್ಕಂಥ ಸಾಲದ ಬಗ್ಗೆ IB ರವರು ಕೊಟ್ಟಿರುವ ವರದಿಯನ್ನು ಇವತ್ತಿನದಿವಸ ಬಹಳ ಲಘುವಾಗಿ ಪರಿಗಣಿಸಿದ್ದಾರೆ. ಇವತ್ತಿನದಿವಸ 100ಕ್ಕೆ 90 ಭಾಗದಷ್ಟು ರೈತರು ಮಾರುಕಟ್ಟೆಯಲ್ಲಿ ಲೇವಾದೇವಿಗಾರರ ಹತ್ತಿರ ಸಾಲವನ್ನು ತೆಗೆದುಕೊಳ್ಳಬೇಕಾಗಿದೆ. ಇವತ್ತಿನದಿವಸ ಯಾವ ರೈತ ಏನು ಬೆಳೆ ಬೆಳೆಯುತ್ತಾನೆಯೋ ಅದರ ಮೇಲೆ ಸಾಲ ಕೊಡತಕ್ಕಂಥ ಖಾಸಗಿಯವರು ಅಗ್ರಿಮೆಂಟ್ ಮಾಡಿಕೊಂಡಿರುತ್ತಾನೆ. ಈ ಒಂದು ಹಿನ್ನಲೆಯಲ್ಲಿ ಬೆಲೆ ಕುಸಿತವಾಗಿ ರೈತನಿಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸರಿಯಾದ ಬೆಲೆ ದೊರಕುವುದಿಲ್ಲ. ರೈತ ಬೆಳೆ ಬಂದ ತಕ್ಷಣ ಸಾಲ ಕೊಟ್ಟಿರುವಂತಹ ವ್ಯಕ್ತಿ ಬಂದು ರೈತ ಬೆಳೆದಂಥ ಮಾಲನ್ನು ತೆಗೆದುಕೊಂಡು ಹೋಗುತ್ತಾನೆ. ಆತ ಏನು ಬೆಲೆ ನಿಗದಿ ಮಾಡುತ್ತಾನೆಯೋ ಆ ಬೆಲೆಗೆ ರೈತ ಒಪ್ಪಿಕೊಳ್ಳಬೇಕಾಗುತ್ತದೆ. ಈ ಒಂದು ಕಾರಣದಿಂದ ಇವತ್ತಿನದಿವಸ ಮಾರುಕಟ್ಟೆಯಲ್ಲಿ ಏರಿಳಿತ ಆಗುತ್ತಿದೆ. ಮೊನ್ನೆದಿವಸ ಮಾನ್ಯ ಕೇಂದ್ರ ಸಚಿವರಾದ ಶ್ರೀ ಸದಾನಂದ ಗೌಡರು ಕೃಷಿ ಮೇಳದಲ್ಲಿ ಭಾಷಣ ಮಾಡಿದ್ದಾರೆ. ಇವತ್ತು ಮಾರುಕಟ್ಟೆಯಲ್ಲಿ ಯಾವ ರೀತಿಯಾಗಿ ರೈತರಿಗೆ ಅನ್ಯಾಯವಾಗ ುತ್ತಿದೆ ಎಂದು ಅವರಿಗೂ ಸಹ ಗೊತ್ತಿದೆ. ಈ ಬಗ್ಗೆ ಅವರು ಕೃಷಿ ಮೇಳದಲ್ಲಿ ಭಾಷಣ ಮಾಡಿದ್ದಾರೆ. ಈ ಎಲ್ಲ ವಿಷಯ ಗೊತ್ತಿದ್ದು ಸಹ ರೈತರನ್ನು ಉಳಿಸುವುದಕ್ಕೆ ನಾವು ಯಾವ ಒಂದು ಕಾರ್ಯಕ್ರಮವನ್ನು ಕೊಡುವುದಕ್ಕೆ ಹೊರಟ್ಟಿದ್ದೇವೆ? ಏಕೆಂದರೆ, ನಾವು ಎಲ್ಲಾ ವಿಷಯವನ್ನು ತಿಳಿದುಕೊಂಡಿದ್ದೇವೆ. ಆದರೆ, ನಾವ್ಯಾರು ರೈತರ ನೆರವಿಗೆ ಬರುವುದಕ್ಕೆ ತಯಾರಿಲ್ಲ. ಇಂಥ ಒಂದು ಪರಿಸ್ಥಿತಿ ಇವತ್ತಿನದಿವಸ ನಮ್ಮಲ್ಲಿದೆ. ಇವತ್ತಿದಿನವ ಲೇವಾದೇವಿಗಾರರಿಂದ ಸಾಲ ಪಡೆದುಕೊಂಡು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದ್ದರಿಂದ, ಲೇವಾದೇವಿಗಾರರನ್ನು ಅರೆಸ್ಟ್ ಮಾಡಿ ಅವರ ಮೇಲೆ ಕೇಸ್ ಹಾಕುತ್ತೇವೆಂದು ಹೇಳಿದ್ದೀರಿ. ಇವತ್ತಿನದಿವಸ ಸಾಲ ಕೊಡತಕ್ಕಂಥ ಎಲ್ಲಾ ಲೇವಾದೇವಿಗಾರರು ನಿಮ್ಮ ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಮುಂದೆ ನೋಂದಾಯಿಸಿಕೊಂಡಿರುವುದಿಲ್ಲ. ಸಾಲ ಕೊಡತಕ್ಕಂಥ ಕೆಲವರು unofficial ಆಗಿ ರುತ್ತಾರೆ. ಆದರೆ, ಇವರು ಯಾರ ಕೈಗೂ ಸಿಕ್ಕಿಕೊಳ್ಳುವುದಿಲ್ಲ. ನೀವು ಈಗ ಅವರ ಮೇಲೆ ಗದಾಪ್ರಹಾರ ಮಾಡುವುದಕ್ಕೆ ಹೋದರೆ ಬಹುಶ: ಮುಂದಿನ ವರ್ಷದಿಂದ ರೈತರಿಗೆ ಸಾಲ ಕೊಡುವುದಕ್ಕೆ ಯಾರು ಸಹ ಮುಂದೆ ಬರುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಮುಂದು)

25-11-2015-1-00(13)-YBG-VR(CP)

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಂದು)

ಅವನು ಎಲ್ಲಿಂದ ಬಿತ್ತನೆ ಮಾಡುತ್ತಾನೆ, ಅವನು ಎಲ್ಲಿಂದ ಗೊಬ್ಬರ ತೆಗೆದುಕೊಳ್ಳುವುದಕ್ಕೆ ಸಾಲ ಮಾಡುತ್ತಾನೆ. ಇದು ಎಲ್ಲಾ ದೊಡ್ಡ ಮಟ್ಟದ ಒಂದು ಕೆಟ್ಟ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ.

( ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಆಗಮಿಸಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು )

ಇದನ್ನು ಸರಿ ಪಡಿಸುವುದು ಹೇಗೆ ಎನ್ನುವುದರ ಬಗ್ಗೆ ಇವತ್ತು ನಾವು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ವರ್ಷ ಇನ್ನು ಹೆಚ್ಚಿನ ರೈತರ ಆತ್ಮಹತ್ಯೆಯನ್ನು ನಾವು ಕಾಣಬೇಕಾಗುತ್ತದೆ. ನಾವು ಕೆಟ್ಟ ದಿನಗಳನ್ನು ನೋಡಬೇಕಾಗುತ್ತದೆ. ಇವತ್ತು ಆ ಹಿನ್ನೆಲೆಯೊಳಗೆ ಇವತ್ತು ಸರ್ಕಾರಕ್ಕೆ ನಾನು ರೈತರ ಬಗ್ಗೆ ಹೇಳತಕ್ಕಂಥದ್ದು. ಮಾನ್ಯ ಅಧ್ಯಕ್ಷರೆ, ತಾವು ಬಂದು ಬಿಟ್ಟರಿ ನಾನು ಬೇಗ ಮುಗಿಸುತ್ತೇನೆ. ರೈತರ ವಿಷಯದಲ್ಲಿ ಬಹುಶ: ನಾವು ಅತ್ಯಂತ ಲಘುವಾಗಿ ಅವನ ಸಾವಿನ ಜೊತೆಯಲ್ಲಿ ಚೆಲ್ಲಾಟವಾಡುತ್ತಿದ್ದೇವೇನೋ? ನಾನು ಇದೆಲ್ಲವನ್ನು ಹೇಳುವುದಕ್ಕೆ ಹೋದರೆ ತಾವು ಬೇಡವೆನ್ನುತ್ತೀರಿ. United Nations General Assembly ಯೊಳಗೆ ಚರ್ಚೆ ಮಾಡುತ್ತಾರೆ.

ಅಧ್ಯಕ್ಷರು: ಅಲ್ಲಿದು ಬಿಡಿ, ಇಲ್ಲಿದು ಹೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅದಕ್ಕೆ ಹೇಳುತ್ತಿರುವುದು. ಅಲ್ಲಿ ಇವತ್ತು ಏನು ಚರ್ಚೆ ನಡೆಯುತ್ತಿದೆಯಲ್ಲಾ, ಇದನ್ನು ಬರಿ ಚರ್ಚೆಗೆ ಸೀಮಿತ ಮಾಡಿಕೊಳ್ಳಬೇಕೋ ನಾವು ಬದಲಾವಣೆ ಮಾಡಿಕೊಳ್ಳಬೇಕೆಂದು ಕೇಳುವುದಕ್ಕೆ ಹೇಳುತ್ತಿದ್ದೇನೆ ಅಷ್ಟೆ.

ಅಧ್ಯಕ್ಷರು: ಬರದ ಬಗ್ಗೆ ಮಾತ್ರ ಹೇಳಿ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಎರಡು ಗಂಟೆ ಆಯಿತು. ದಯವಿಟ್ಟು ಬೇಗ ಮುಗಿಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ಒಪ್ಪಿಕೊಳ್ಳುತ್ತೇನೆ. ಪರಿಹಾರ ಏನು? ಆಯಿತು ನಾನು ನನ್ನ ಮಾತನ್ನು ನಿಲ್ಲಿಸುತ್ತೇನೆ. ಇವತ್ತು ಈ ಪ್ರಶ್ನೆ ರಾಜ್ಯದೊಳಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ಕುಳಿತಿದ್ದಾರೆ. ನಾನು ನೀವು ಬರುವುದಕ್ಕೆ ಮುಂಚೆ ಹೇಳುತ್ತಿದ್ದೆ, ನಾನು ನಿಮ್ಮ ಮಂತ್ರಿಗಳಿಗೆ ಒಂದು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪತ್ರವನ್ನು ಬರೆದಿರುತ್ತೇನೆ. ಯಾವ ಮಂತ್ರಿಗಳು ಇವತ್ತು ಸಂಪೂರ್ಣವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಂಥ ಕುಟುಂಬಗಳನ್ನು ಆಯಾಯಾ ಜಿಲ್ಲೆಗಳಿಗೆ ಹೋಗಿ ಭೇಟಿ ಮಾಡಲಿಲ್ಲ. ನಾನು ಹೋದಾಗ ಆ ಮಾಹಿತಿಯನ್ನು ಕಂಡಂಥ ಪರಿಸ್ಥಿತಿ ಇದೆ. ನಿಮ್ಮ ಮಾತಿಗೂ ಇಲ್ಲಿ ಗೌರವ ದೊರಕಿರುವುದಿಲ್ಲ. ಇವತ್ತು ರೈತರ ಆತ್ಮಹತ್ಯೆಯ ವಿಷಯದಲ್ಲಿ ಮಾರ್ಗಸೂಚಿಯಲ್ಲಿ ಬದಲಾವಣೆಯನ್ನು ಮಾಡಿಕೊಂಡಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಇವತ್ತು ರೈತರ ಆತ್ಮಹತ್ಯೆ ವಿಷಯದಲ್ಲಿ ಕೆಲವು ಮಾರ್ಗಸೂಚಿಗಳು ಇದೆಯಲ್ಲಾ, ಆ ಮಾರ್ಗಸೂಚಿಗಳನ್ನು ನಮ್ಮ ಅಧಿಕಾರಿಗಳು ಪುಣ್ಯಾತ್ಮರು ಮಾಡುತ್ತಾರಲ್ಲಾ, ಅವರಿಗೆ ನೀವು ಸ್ವಲ್ಪ ಚೆಡಿ ಏಟು ಕೊಡಬೇಕಾಗುತ್ತದೆ. ಇವತ್ತು ಆ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅವನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಖಾತೆ ಇಲ್ಲವೆಂದರೆ, ಅವನಿಗೆ ಪರಿಹಾರವಿಲ್ಲ. ಸಹಕಾರಿ ಬ್ಯಾಂಕಿನಲ್ಲಿ ಅವನ ಸಾಲ ತೆಗೆದುಕೊಳ್ಳದಿದ್ದರೆ ಪರಿಹಾರವಿಲ್ಲ. ಪ್ರೈವೇಟ್‌ನಲ್ಲಿ ಸಾಲ ತೆಗೆದುಕೊಂಡಿದ್ದರೆ ಪರಿಹಾರವಿಲ್ಲ. ಇಂತಹ ಮಾರ್ಗಸೂಚಿಯನ್ನು ಏನು ಇಟ್ಟುಕೊಂಡಿದ್ದೀರಿ, ಈ ಮಾರ್ಗಸೂಚಿಯನ್ನು ಮಾಡಿರತಕ್ಕಂಥ ನಮ್ಮ ಅಧಿಕಾರಿಗಳು ಏನಿದ್ದಾರಲ್ಲಾ, ಇವರುಗಳ ವೈಭವ ನೋಡಿದರೆ, ಇವರುಗಳಿಗೆ ಒಂದು ಕಾರು, ಮನೆಗೆ ತರಕಾರಿ ತರುವವನಿಗೆ ಒಂದು ಕಾರು, ಇವರ ಮಕ್ಕಳನ್ನು ಸ್ಕೂಲಿಗೆ ಬಿಡುವುದಕ್ಕೆ ಒಂದು ಕಾರು, ಇವರು ರೈತರ ಸಮಸ್ಯೆಯ ಬಗ್ಗೆ ಮಾರ್ಗಸೂಚಿ ಕೊಡುವವರು. ನಾವು ಇದನ್ನು ಈ ರಾಜ್ಯದೊಳಗೆ ಪಾಲಿಸಬೇಕು. ಬದಲಾವಣೆ ಮಾಡಿ. ಇವತ್ತು 840 ಜನ ರೈತರ ಆತ್ಮಹತ್ಯೆ ಪ್ರಕರಣ ಮೀರಿ ಹೋಗುತ್ತಿದೆ. ಇವತ್ತು ಏನು ತಿರಸ್ಕಾರ ಮಾಡಿಕೊಂಡಿದ್ದೀರಿ, ರೈತರು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ವಿಷಯದಲ್ಲಿ, ಇವತ್ತು ಹಲವಾರು ಪ್ರಕರಣಗಳನ್ನು ತಿರಸ್ಕಾರ ಮಾಡಿದ್ದಾರೆ. ಮತ್ತೆ ಅದೆಲ್ಲವನ್ನು ಅಂಗೀಕಾರ ಮಾಡಿ, ಈ ಮಾರ್ಗಸೂಚಿಯನ್ನು ಕಿತ್ತುಹಾಕಿ ಇವತ್ತು ಸಂಪೂರ್ಣವಾಗಿ ಆ ರೈತ ಕುಟುಂಬಗಳಿಗೆ ಪರಿಹಾರ ಕೊಡತಕ್ಕಂಥದ್ದು ಅಷ್ಟೆ ಅಲ್ಲ.

ಅಧ್ಯಕ್ಷರು: ದಯವಿಟ್ಟು ನೀವು ಕುಳಿತುಕೊಳ್ಳಿ, ಅವೆಲ್ಲಾ ಎತ್ತುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇವತ್ತು ಕಬ್ಬು ಬೆಳೆಗಾರರ ಪರಿಸ್ಥಿತಿ. ಯಾವ ಒಂದು FRP ದರ ನಿಗದಿಯಾಗಿದೆ, ಯಾವುದೆ ಕಾರ್ಖಾನೆಗಳ ಮಾಲೀಕರು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ

advertisement ಕೊಟ್ಟಿದ್ದಾರೆ. 1500 ಕ್ಕಿಂತ ಮೇಲೆ ಕೊಡುವುದಕ್ಕಾಗುವುದಿಲ್ಲವೆಂದು advertisement ನಲ್ಲಿ ಹೇಳಿಕೆ ಕೊಟ್ಟು ಬಿಟ್ಟಿದ್ದಾರೆ. ಆದರೆ ಅದರ ಬಗ್ಗೆ ಸರ್ಕಾರ ಚಕಾರ ಎತ್ತಿಲ್ಲ.

(ಗೊಂದಲ)

( ಈ ಹಂತದಲ್ಲಿ ಮಾನ್ಯ ಸಾ.ರಾ.ಮಹೇಶ್‌ರವರು ಸಕ್ಕರೆ ಕಾರ್ಖಾನೆಯ ಬಾವುಟವನ್ನು ಹಿಡಿದುಕೊಂಡು ಸದನದ ಬಾವಿಯ ಸಮೀಪ ಬಂದರು )

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಆಮೇಲೆ, ಆಮೇಲೆ...

ಅಧ್ಯಕ್ಷರು: ಕಾರ್ಯದರ್ಶಿಯವರೆ, ಅವರನ್ನು ಆಚೆಗೆ ಕಳುಹಿಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅವರು ಒಂದು ಕಾರ್ಖಾನೆಯ ವಿಷಯದಲ್ಲಿ ಸರ್ಕಾರದ ಗಮನ ಸೆಳೆಯಲಿಕ್ಕೆ ಅವರು ಬಂದರು ಎಂದು ಕಾಣಿಸುತ್ತದೆ. ಅವರು ಬೇರೆ ಏನು ವಿಷಯ.

ಅಧ್ಯಕ್ಷರು: ಏನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅವರ ಕ್ಷೇತ್ರದಲ್ಲಿ ಕಾರ್ಖಾನೆಯ ವಿಷಯದ ಬಗ್ಗೆ..

ಶ್ರೀ ಡಿ.ಕೆ.ಶಿವಕುಮಾರ(ಇಂಧನ ಸಚಿವರು): ಅವರು ಮಾತನಾಡಿ ಬೆಳಕು ಚೆಲ್ಲಲಿ, ಯಾರು ಬೇಡವೆನ್ನುತ್ತಾರೆ. ನಿಮ್ಮ ನಾಯಕರು ಮಾತನಾಡುವಾಗ ನೀವು ಈ ರೀತಿ ಬಂದರೆ, ನಿಮ್ಮ ನಾಯಕರಿಗೆ ಅವಮಾನ ಮಾಡಿದಂತೆ ಅಲ್ಲವೇ?

( ಶ್ರೀ ಸಾ.ರಾ.ಮಹೇಶ್ ಅವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ಶ್ರೀ ಸಾ.ರಾ.ಮಹೇಶ್: Zero hour ನಲ್ಲಿ question ಹಾಕಿದೆ ಉತ್ತರ ಬಂದಿಲ್ಲ. ಮೊನ್ನೆ calling attention ದಲ್ಲಿ ಕೇಳಿದೆ. Adjourn ಆಯಿತು.

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮ ನಾಯಕರು ಮಾತನಾಡುತ್ತಾರೆ ಕಣಯ್ಯ.

ಶ್ರೀ ಸಾ.ರಾ.ಮಹೇಶ್: ಅವರು ರೈತರ ಪರವಾಗಿ ಮಾತನಾಡುವಾಗ ಮುಗಿಯುವುದಕ್ಕೆ ಬಂತಲ್ಲಾ, ಹೇಳುವುದಕ್ಕೆ ಬಂದೆ, ಅದು ತಪ್ಪಾ.

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮ ಲೀಡರ್‌ಗೆ ಗೌರವ ಬೇಡವೇ? ಬೇರೆಯವರಿಗೆ ಬೇಡ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮೊನ್ನೆ ಶೂನ್ಯವೇಳೆಯಲ್ಲಿ ಕೇಳಿದ್ದರು. ಅದು ಬಂದಾಗ ಆ ಸದಸ್ಯರೆ ಸದನದಲ್ಲಿ ಇರಲಿಲ್ಲ.

ಶ್ರೀ ಸಾ.ರಾ.ಮಹೇಶ್: ನಾವು ಬಂದರೆ ಬೇಜಾರು ಮಾಡಿಕೊಳ್ಳುತ್ತೀರಿ. ಮೊನ್ನೆ ಉಗ್ರಪ್ಪನವರು ಈ ಸದನದಲ್ಲಿ ಬಂದು ಕುಳಿತಾಗ ಅಧ್ಯಕ್ಷರು ರೂಲಿಂಗ್ ಕೊಟ್ಟರು ಅವರು ಎದ್ದು ಹೋಗಲಿಲ್ಲ. ಬರಿ ನಾವು ಬಂದದ್ದಕ್ಕೆ ಈ ರೀತಿ ಮಾತನಾಡುತ್ತೀರಿ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮ ಲೀಡರ್ ಭಾಷಣ ಮಾಡಿದ ಮೇಲೆ ನೀವು ಬಂದು.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ನಮಗೆ ಒಂದು ತರಹ, ಅವರಿಗೆ ಒಂದು ತರಹ ಮಾಡುತ್ತೀರಲ್ಲಾ?

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮ ಲೀಡರ್‌ಗೆ ಒಂದು ನಿಮಿಷ ಕುಳಿತುಕೊಳ್ಳಿ ಎಂದು ಹೇಳಿ ನೀವು ಮಾತನಾಡಿ.

ಶ್ರೀ ಸಾ.ರಾ.ಮಹೇಶ್: ಹಾಗಾದರೆ, ನಾವು ಕೇಳುವುದೆ ತಪ್ಪಾ?

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಏನು? ಅಷ್ಟು ಕೇಳಬಾರದಾ?

ಶ್ರೀ ಸಾ.ರಾ.ಮಹೇಶ್: ನಾವು ಕೇಳಿದ್ದೆ ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್: ಕೇಳುವುದು ತಪ್ಪಲ್ಲಾ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಕಳೆದ ವಾರವೇ ಉತ್ತರ ಕೊಡಬಹುದಾಗಿತ್ತು, ಸದನದಲ್ಲಿ ಉತ್ತರ ಕೊಡುವುದಕ್ಕೆ ಕಾದು ಕುಳಿತಾಗ, ಅವರೆ ಇರುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎನ್.ಚೆಲುವರಾಯಸ್ವಾಮಿ: ಆಯಿತು, ಬಿಡಿ. ಸದನದಲ್ಲಿ ಮಾನ್ಯ ಸಚಿವರು ಗ ಮನಿಸುತ್ತಾರೆಂದು ಬಾವುಟ ಹಿಡಿದುಕೊಂಡು ಬಂದಿದ್ದಾರೆ ಬಿಡಿ.

ಶ್ರೀ ಸಾ.ರಾ.ಮಹೇಶ್: ಅಧ್ಯಕ್ಷರಿಗೆ ನಾವು ಅಗೌರವ ತರುವುದಿಲ್ಲ, ಹೇಳಿದ ತಕ್ಷಣ ಕುಳಿತುಕೊಳ್ಳುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್: ಹೋಗಲಿ, time ತೆಗೆದುಕೊಂಡು ನೀವು ದಯವಿಟ್ಟು ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: Brother, ಅಂಥವುಗಳನ್ನು ನೀವು ಸಾಕಷ್ಟು ಹಿಂದೆ ಮಾಡಿದ್ದೀರಿ.

ಶ್ರೀ ಡಿ.ಕೆ.ಶಿವಕುಮಾರ್: ಪ್ರಸ್ತಾಪ ಮಾಡಿ.

ಶ್ರೀ ಸಾ.ರಾ.ಮಹೇಶ್: ಕುಮಾರಸ್ವಾಮಿಯವರದು ಮುಗಿಯಲಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು final ಆಗಿ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಇವತ್ತು ದ್ರಾಕ್ಷಿ, ದಾಳಿಂಬೆ ಬೆಳೆಗಾರರು, ಕಳೆದ 4 ವರ್ಷಗಳಿಂದ ಅವರು ಏನು ಸಾಲ ಮಾಡಿಕೊಂಡಿದ್ದಾರೆ. ಆ ಬೆಳೆ ನಷ್ಟಕ್ಕೆ 800 ಕೋಟಿ ರೂ.ಗಳನ್ನು ಸಾಲ ಮಾಡಿಕೊಂಡಿದ್ದಾರೆ. ಕಳೆದ ಎರಡು ವರ್ಷದಿಂದ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದೇವೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎನ್ನತಕ್ಕಂಥ ಉತ್ತರ ಬಿಟ್ಟರೆ, ಇವತ್ತು ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ದ್ರಾಕ್ಷಿ, ದಾಳಿಂಬೆ ಬೆಳೆಗಾರರ ಸಮಸ್ಯೆಯ ಬಗ್ಗೆ ಇಲ್ಲಿಯವರೆಗೆ ಪರಿಹಾರ ದೊರಕಿಲ್ಲ. ಇವತ್ತು ಯಾವ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ವಿವಿಧ ಬೆಳೆಗಳನ್ನು ಬೆಳೆಯುತಕ್ಕಂಥ ಎಲ್ಲಾ ರೈತರ ಆತ್ಮಹತ್ಯೆ ನಡೆಯುತ್ತಿರತಕ್ಕಂಥದ್ದು. ದ್ರಾಕ್ಷಿ, ದಾಳಿಂಬೆ ಬೆಳೆಗಾರರು ಕಳೆದ ಮೂರು ವರ್ಷಗಳಿಂದ ಕೇಳುತ್ತಿದ್ದಾರೆ. ಅವರ ಬೆಳೆ ನಷ್ಟವಾಗಿ ಸುಮಾರು 800 ಕೋಟಿ ರೂ.ಗಳ ಸಾಲವನ್ನು ಅವರಿಂದ ತೀರಿಸುವುದಕ್ಕೆ ಆಗಿಲ್ಲ. ಕಬ್ಬು ಬೆಳೆಗಾರರಿಗೆ ಇವತ್ತು ಸರಿಯಾದ ರೀತಿಯಲ್ಲಿ ಬೆಲೆ ದೊರಕದೆ ಆ ಕಬ್ಬು ಬೆಳೆಗಾರರಿಗೆ ಇವತ್ತು ಹಣ ತಲುಪುತ್ತಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯರೆ, ನೀವು ಹಿರಿಯ ಸದಸ್ಯರು. ಜವಾಬ್ದಾರಿಯ ಕೆಲಸ ಮಾಡಿ ಬಂದ ಅನುಭವ ಇದೆ. ಅದಕ್ಕಾಗಿ ನಾನು ಮೊದಲು ಕೇಳಿದೆ. ಬರ ಪರಿಸ್ಥಿತಿ ಯಾವ ರೀತಿ ಆಗಿದೆ, ಏನು ಪರಿಸ್ಥಿತಿ ಇದೆ, ಅದನ್ನು ವಿವರಿಸಿ ಹೇಳಿ ಎಂದರೆ ನೀವು ಹೇಳುವುದಕ್ಕೆ ಹೋಗಲಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅದನ್ನು ಹೇಳಿದೆನಲ್ಲಾ.

ಅಧ್ಯಕ್ಷರು: ಈಗ ದ್ರಾಕ್ಷಿ, ದಾಳಿಂಬೆ ಬೆಳೆಯ ವಿಷಯಕ್ಕೆ ಬಂದಿರಿ. 136 ತಾಲ್ಲೂಕಿನಲ್ಲಿ ಬರದಿಂದ ಕಷ್ಟವಾಗಿದೆ, ಈ ತಾಲ್ಲೂಕಿನಲ್ಲಿ ಇಷ್ಟು ಭತ್ತ ಕೆಟ್ಟಿದೆ, ಈ ತಾಲ್ಲೂಕಿನಲ್ಲಿ ದ್ರಾಕ್ಷಿ ಕೆಟ್ಟಿದೆ ಎನ್ನುವ ಇದು ಒಂದು ಚಿತ್ರ. ಈಗ ಎಲ್ಲಾ ಪೂರೈಸಿಕೊಂಡು ಈಗ ದ್ರಾಕ್ಷಿ, ದ್ರಾಕ್ಷಿ ಆದ ಮೇಲೆ ಅಡಿಕೆ, ಅಡಿಕೆ ಆದ ಮೇಲೆ ಆಲೂಗಡ್ಡೆ, ಹೀಗೆ ಅಲ್ಲ ಅದು. ಸಾಕು ನೀವು ಪೂರೈಸಿ ಬಿಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನೀವು ಹೇಳಿದಿರಲ್ಲಾ, ಇವತ್ತು ಪ್ರತಿ ಜಿಲ್ಲೆಯೊಳಗೆ ಭತ್ತದ ಪರಿಸ್ಥಿತಿ ಏನು? ಎಲ್ಲಾ ಹೇಳಬೇಕೆಂದರೆ ನೀವು ನನಗೆ ಸಮಯ ಕೊಡುವುದಿಲ್ಲ. ಮಾಹಿತಿ ಇಟ್ಟುಕೊಂಡಿದ್ದೇನೆ, ನಾನು ಅದನ್ನು ಹೇಳುವುದಕ್ಕೆ ತಯಾರಾಗಿದ್ದೇನೆ.

ಅಧ್ಯಕ್ಷರು: ನೀವು ಎರಡು ಗಂಟೆ ಮಾತನಾಡಿದೀರಲ್ಲಾ, ನಾನು ಒಂದೇ ಗಂಟೆಯಲ್ಲಿ ಅವಕಾಶ ಕೊಡಿ, ನಾನು ಅಲ್ಲಿ ನಿಂತು ಇಡೀ ಚಿತ್ರವನ್ನು ತೋರಿಸುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅಧ್ಯಕ್ಷರೆ, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ presentation ಮಾಡುತ್ತಾರೆ.

ಅಧ್ಯಕ್ಷರು: ತಿಳಿದುಕೊಂಡಿದ್ದರೆ ಆಯಿತು, ಬೇರೆ ಪೂರೈಸಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ನಾನು ಇಲ್ಲಿ ಪ್ರಶ್ನೆ ಹೇಳುತ್ತಿರುವುದು. ಇವತ್ತು ಕಬ್ಬು ಬೆಳೆಗಾರರಿಗೆ ಸರಿಯಾದ ರೀತಗಿಯಲ್ಲಿ ಬೆಲೆ ನಿಗದಿಯಾಗದೆ ಹೋದರೆ, ಇವತ್ತು ಪುನ: ಆತ್ಮಹತ್ಯೆಗಳು ಶುರು ಆಗುತ್ತದೆ. ಕಳೆದ 15 ದಿವಸಗಳಿಂದ ಏನು ಮಳೆಯಾಗಿದೆ, ಈ ಭಾಗದಲ್ಲಿ ರಾಗಿ, ಭತ್ತ ಬೆಳೆದಿರತಕ್ಕಂಥ ಇವತ್ತು ಎಲ್ಲಾ ಜಿಲ್ಲೆಗಳಲ್ಲಿ ತುಮಕೂರು ಇರಬಹುದು, ಕೋಲಾರ, ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇರಬಹುದು, ರಾಗಿ ಸಂಪೂರ್ಣ ನಾಶವಾಗಿದೆ, ಅದು ಬೆಳೆ ಕೈ ಸಿಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ುತ್ತಿಲ್ಲ. 23,000 ಕೋಟಿ ರೂ.ಗಳ ಬೆಳೆ ನಷ್ಟದ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಈಗ ಪುನ: ಅದಕ್ಕೆ addition ಆಗುತ್ತಿದೆ. ಮೊನ್ನೆ ಆದಂಥ ಮಳೆಯಿಂದ ಈ ಭಾಗದಲ್ಲಿ ಎಲ್ಲಾ ಬೆಳೆ ನಾಶವಾಗಿದೆ. ಆ ಭಾಗದಲ್ಲಿ ಮಳೆ ಇಲ್ಲ, ಮೇವು ಇಲ್ಲ. ಮಳೆ ಇಲ್ಲದೆ ಅಲ್ಲಿ ಬೆಳೆ ನಾಶವಾಗಿದೆ. ಆದ್ದರಿಂದ ಇವತ್ತು ಒಟ್ಟಾರೆಯಾಗಿ ರೈತರು ಸಂಪೂರ್ಣವಾಗಿ ಏನು ಸಂಕಷ್ಟಕ್ಕೆ ಒಳಗಾಗಿದ್ದಾರೆ, ಈ ಬರ ವಿಷಯ ಇರಬಹುದು, ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಸರ್ಕಾರ ಸರಿಯಾದ ರೀತಿಯಲ್ಲಿ ಕ್ರಮ ಕೈಗೊಳ್ಳದಿದ್ದರೆ ನಾನು ಮುಖ್ಯಮಂತ್ರಿಗಳಿಗೆ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. 15 ದಿವಸದ ಹಿಂದೆ ಒಂದು ಆರ್ಟಿಕಲ್ ನೋಡಿದೆ, ಮಾನ್ಯ ಮುಖ್ಯಮಂತ್ರಿಗಳು ಗದಗದಲ್ಲಿ ಭಾಷಣ ಮಾಡಿದರು. ನಾನು ಇರತಕ್ಕಂಥದ್ದು, ಅಹಿಂದ ಪರವಾಗಿ, ನಾನು ಯಾರ ಟೀಕೆ ಮಾಡಿದರು ಅವರ ಪರವಾಗಿಯೇ ಇರುತ್ತೇನೆ, ಅವರ ಪರವಾಗಿ ಕೆಲಸ ಮಾಡುತ್ತೇನೆಂದು ಹೇಳಿದರು. ನಾನು ಹೋದಂಥ ಪ್ರದೇಶಗಳಲ್ಲಿ, ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥದ್ದರಲ್ಲಿ ಅಹಿಂದ ವರ್ಗದವರೆ ಜಾಸ್ತಿ ಇದ್ದಾರೆ.

ಅಧ್ಯಕ್ಷರು: ಏತಕ್ಕೆ.. ಅಹಿಂದನೋ ಕಹಿಂದನೋ ಮಹಿಂದನೋ..

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅವರ ರಕ್ಷಣೆ ಇದ್ದೇನೆಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಿದ್ದಾರೆ ಇವತ್ತು ಅಂತಹ ಕುಟುಂಬಗಳಿಗೂ ಪರಿಹಾರ ತಿರಸ್ಕಾರವಾಗಿರುತ್ತದೆ. ಅದನ್ನು ಸರಿಪಡಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಅವರು ಅಹಿಂದ ಸರ್ಕಾರ ಅಲ್ಲ, ಅವರು ಕಾಂಗ್ರೆಸ್ ಸರ್ಕಾರದಲ್ಲಿರುವವರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅವರು ಹೇಳಿರತಕ್ಕಂಥದ್ದು.

ಅಧ್ಯಕ್ಷರು: ಅವರು ಹೇಳುತ್ತಾರೆಂದು ನಾವೇಕೆ ಕೇಳವುದು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಗದಗದಲ್ಲಿ ಭಾಷಣ ಮಾಡಿರುವುದು, ಪೇಪರ್ ಕಟಿಂಗ್ ಅನ್ನು ಇಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಕರ್ನಾಟಕ ಸರ್ಕಾರ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿದ್ದರಾಮಯ್ಯ(ಮುಖ್ಯ ಮಂತ್ರಿಗಳು): ನಾನು ಅಹಿಂದ ಸರ್ಕಾರವೆಂದು ಹೇಳಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇಲ್ಲಿಯೇ ಇದೆ ಸರ್.

ಶ್ರೀ ಸಿದ್ದರಾಮಯ್ಯ: ಅಹಿಂದ ಸರ್ಕಾರ ಅಂಥ ಆಗುವುದಕ್ಕೆ ಸಾಧ್ಯವಿಲ್ಲ. ಆ ತರಹದ ಒಂದು ಆರೋಪ ನನ್ನ ಮೇಲೆ ಮಾಡುತ್ತಾರೆ. ಅವರಿಗೂ ಮಾಡಬೇಕಾದಂಥ ಅಗತ್ಯತೆಯೂ ಇದೆ. ಅದು constitutional obligation ಎಂದು ಹೇಳಿದೆ. What is wrong in that. Constitutional obligation ಅಲ್ಲವಾ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಂದು ರಾಜ್ಯದ 6 ಕೋಟಿ ಜನರ ಮುಖ್ಯಮಂತ್ರಿಯಾಗಿ..

ಅಧ್ಯಕ್ಷರು: ಮಾನ್ಯ ದೇವೇಗೌಡರು..

ಶ್ರೀ ಸಿದ್ದರಾಮಯ್ಯ: ನಾನು ಏನು ಹೇಳಿದೆ ಎಂದರೆ, ನಮ್ಮ ರೈತರ ಪರವಾಗಿಯೂ ಇದ್ದೇನೆ, ಬಡವರ ಪರವಾಗಿಯೂ ಇದ್ದೇನೆ, ಎಲ್ಲಾ ಜಾತಿಯವರ ಪರವಾಗಿಯೂ ಇದ್ದೇನೆ. ಆದರೂ ನನ್ನ ಮೇಲೆ ಸಿದ್ದರಾಮಯ್ಯ ಅಹಿಂದ ಪರವಾಗಿ ಇದ್ದಾರೆಂದು ಹೇಳುತ್ತಾರೆ. ಅವರ ಪರವಾಗಿಯೂ ಇರಬೇಕಾಗುತ್ತದೆ, because it is a constitutional obligation. ಅಂಥ ನಾನು ಹೇಳಿದೆ. What is wrong in that?

ಅಧ್ಯಕ್ಷರು: ಸಾಮಾಜಿಕ ನ್ಯಾಯ ಎಂದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಅದಕ್ಕಾಗಿ ನಾನು ಮುಖ್ಯಮಂತ್ರಿಗಳಿಗೆ ಹೇಳತಕ್ಕಂಥದ್ದು. ನೀವು ಸಾರ್ವಜನಿಕವಾಗಿ ಏನು ಹೇಳಿದಿರಲ್ಲಾ I am in favour of helping people who are suppressed for centuries ಎಂದು ಭಾಷಣದಲ್ಲಿ ಹೇಳಿದ್ದೀರಿ. ಅಲ್ಲವೇ? ನೂರಾರು ವರ್ಷಗಳಿಂದ ತುಳಿತಕ್ಕೆ ಒಳಗಾಗಿರತಕ್ಕಂಥವರಲ್ಲಿ ಬಹುಶ: ಮೊದಲನೆಯ ಸ್ಥಾನದಲ್ಲಿ ರೈತನು ಇದ್ದಾನೆ.

(ಮುಂದು)

25.11.2015/1.10(14)/UD.CP

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು. . .)
ಅದು ನಿಮ್ಮ commitment ಎಂದು ನೀವು ಏನು ಹೇಳಿದ್ದೀರಿ. . . .

ಶ್ರೀ ತನ್ವೀರ್‌ಸೇಠ್: ಇಲ್ಲ 100 ವರ್ಷದಿಂದ ತುಳಿತಕ್ಕೆ ಒಳಗಾಗಿರುವಂತಹ ಜನ ಅಂದಾಗ ಜನ. ವರ್ಗ ಅಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಹೌದು ಜನ ಎಂದು ಹೇಳುತ್ತಿರುವುದು. ಜನ, ವರ್ಗ ಅಂದರೆ ಏನು? ತುಳಿತಕ್ಕೆ ಒಳಗಾಗಿರುವುದರಲ್ಲಿ ಜನ, ವರ್ಗ ಎರಡೂ ಒಂದೇ.

(ಗೊಂದಲ)

ಶ್ರೀ ತನ್ವೀರ್‌ಸೇಠ್: ಜನ ಅಂದಾಗ ಎಲ್ಲರೂ ಬರುತ್ತಾರೆ. ಎಲ್ಲಾ ಜಾತಿಯವರೂ ಇದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳತಕ್ಕಂಥದ್ದು ಏನೆಂದರೆ, ಇವತ್ತು ಯಾವ ಒಂದು ಈ ವರ್ಗದ ರೈತ, ಕೃಷಿಕರು ಏನಿದ್ದಾರೆ, ಸಂಕಷ್ಟದಲ್ಲಿದ್ದಾರೆ ಅವರಿಗೆ ಶಾಶ್ವತವಾದ ರೀತಿಯಲ್ಲಿ ವಿಶ್ವಾಸ ಮೂಡಿಸುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ತೀರ್ಮಾನ ಮಾಡಬೇಕಾಗುತ್ತದೆ. ಬಡ್ಡಿ ಮನ್ನಾ, ಸುಸ್ತಿ ಬಡ್ಡಿ ಮನ್ನಾ ಎಂದು ಹೇಳಿದಿರಿ, ಆ ಬಡ್ಡಿ ಮನ್ನಾ ಯಾವುದೇ ಕಾರಣಕ್ಕೂ ರೈತರಿಗೆ ಈಗ ದೊರಕುತ್ತಿಲ್ಲ. ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಏನು ಹೇಳಿಕೊಂಡಿದ್ದೀರಿ, ನೀವು ಕೊಟ್ಟಿರುವಂತಹ ನೋಟಿಸ್ ಏನಿದೆ, ಅದರ ಪ್ರಕಾರ ರೈತರಿಗೆ ಹಣ ದೊರಕುವುದಿಲ್ಲ. ಆ ಬಡ್ಡಿ ಮನ್ನಾದಲ್ಲಿಯೂ ರೈತರಿಗೆ ಅನುಕೂಲವಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ,. . . .

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಬಿಡಿ ಮಾನ್ಯ ಅಧ್ಯಕ್ಷರೆ ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಕೇಳುವುದಕ್ಕೆ ಹೋದರೂ ಇವತ್ತು ಬಡ್ಡಿ ಮನ್ನಾ. . . . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ ತಾವು ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಹೇಳಿದಿರಿ. ಮೊನ್ನೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಕೃಷಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ರೈತರಿಗೆ ಸಾಲ ಕೊಡುವಾಗ ಏನಾಗಿದೆ, ಸಹಕಾರ ಸಂಘಗಳು ಹೇಗೆ ಆಗಿವೆ ಎನ್ನುವುದನ್ನೆಲ್ಲಾ ವಿಸ್ತಾರವಾಗಿ ಹೇಳಿ. ಹೊಸದಾಗಿ ಸಹಕಾರ ಸಚಿವರು ಆಗಿದ್ದಾರೆ. ಜಿಲ್ಲಾ ಕಾಂಗ್ರೆಸ್‌ನಲ್ಲಿ ಹಳೆಯ ಘಂಟರೇ ಕುಳಿತುಬಿಟ್ಟಿದ್ದಾರೆ. ಅವರನ್ನು ಏಳಿಸುವುದು ಅಷ್ಟು ಸುಲಭವಾಗುವುದಿಲ್ಲ. ಅವರ ನಂತರೇ ಮೇಲೆ ಅಪೆಕ್ಸ್ ಬ್ಯಾಂಕ್‌ಗೆ ಬರುತ್ತಾರೆ. ಈ ರೀತಿ ಎಲ್ಲಾ ನಡೆದಿದೆ. ಅದಕ್ಕೋಸ್ಕರ ಕೃಷಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಬಂದಾಗ ಅಲ್ಲಿ ಚರ್ಚೆ ಮಾಡಿ. ಇಲ್ಲಿಗೆ ತಾವು ಮಾತನಾಡುವುದನ್ನು ಮುಕ್ತಾಯ ಮಾಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ರೈತರಿಗೆ 240 ಕೋಟಿ ರೂ.ಗಳ burden ತೆಗೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಹಾವೇರಿಯಲ್ಲಿ ಈಗಾಗಲೇ ಈ ಸಾಲದ ಕಂತುಗಳನ್ನು ಮರುಪಾವತಿಸಿರುವ ಸಾಲಗಾರರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ ಎಂದು ಘೋಷಣೆ ಮಾಡಿದಿರಿ. ಇದು ನೀವೇ ಕೊಟ್ಟಿರುವ ಆದೇಶ. ಇವತ್ತು ನೀವು ಯಾವ ಕಾರ್ಯಕ್ರಮವನ್ನು ಘೋಷಣೆ ಮಾಡುತ್ತಿದ್ದೀರಿ, ಅದು ಘೋಷಣೆಯಾಗಿ ಉಳಿದುಕೊಳ್ಳುವುದು ಬೇಡ. ಇವೆಲ್ಲವನ್ನು ಮಾರ್ಪಾಡು ಮಾಡಿಕೊಂಡು ರೈತರಿಗೆ ಇವತ್ತು ಸರಿಯಾದ ರೀತಿಯಲ್ಲಿ ಏನು ನ್ಯಾಯ ದೊರಕಿಸಬೇಕು ಅದನ್ನು ದೊರಕಿಸಿಬಿಡಿ. ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ನನಗೆ ಮಾತನಾಡಲು ಸಮಯಾವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

## <u>ಪ್ರಕಟಣೆ</u>

ಅಧ್ಯಕ್ಷರು: ವಿಧಾನಸಭಾ ಸದಸ್ಯರಾದ ಶ್ರೀಮತಿ ಶಾರದಾ ಮೋಹನ ಶೆಟ್ಟಿಯವರು ತಮ್ಮ ಮಗನ ವಿವಾಹವಿರುವ ಕಾರಣ ದಿನಾಂಕ 23.11.2015 ರಿಂದ 27.11.2015 ರವರೆಗೆ ನಡೆಯುವ ಅಧಿವೇಶನಕ್ಕೆ ಗೈರುಹಾಜರಿಗೆ ಅನುಮತಿ ಕೋರಿ ಪತ್ರ ನೀಡಿರುತ್ತಾರೆ. ಮಾನ್ಯ ಸದಸ್ಯರು ಸದನಕ್ಕೆ ಪ್ರಸ್ತಾವಿತ ಅವಧಿಯಲ್ಲಿ ಗೈರುಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

ಶ್ರೀಮತಿ ಶಾರದಾ ಮೋಹನ ಶೆಟ್ಟಿಯವರು ದಿನಾಂಕ 23.11.2015 ರಿಂದ 27.11.2015 ರವರೆಗೆ ನಡೆಯುವ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರುಹಾಜರಾಗಲು ಅನುಮತಿ ನೀಡಲಾಗಿದೆ.

ಅಧ್ಯಕ್ಷರು: ಈಗ ಮಾನ್ಯ ಜಗದೀಶ್‌ಶೆಟ್ಟರ್‌ರವರೆ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತನಾಡಿ. 2.00 ಗಂಟೆಯೊಳಗೆ ಪೂರೈಸಿ.

ಶ್ರೀ ಜಗದೀಶ್ ಶೆಟ್ಟರ್: ಸಾರ್, 2.00 ಗಂಟೆಯೊಳಗೆ ಆಗುವುದಿಲ್ಲ. ಸಮಯ ಬೇಕಾಗುತ್ತದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಸಾರ್, ನಿಯಮ 69 ರ ಅಡಿಯಲ್ಲಿ ಮೊದಲು ಕಳಸಾ-ಬಂಡೂರಿ ಯೋಜನೆಯ ಬಗ್ಗೆ ನಾನು ಮಾತನಾಡಬೇಕಾಗಿದೆ.

ಅಧ್ಯಕ್ಷರು: ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಮೊದಲು ಇವರದ್ದು ಪೂರೈಸೋಣ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಅಧಿವೇಶನದ ಮೊದಲನೆ ದಿನದಿಂದಲೂ ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಮಹದಾಯಿ ಉಪಯೋಜನೆಯಿಂದ ಕಳಸಾ-ಬಂಡೂರಿ ಯೋಜನೆಯನ್ನು ಕೂಡಲೇ ಜಾರಿಗೊಳಿಸುವ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, calling attention ಅನ್ನು ಮೂರು ದಿನಗಳಿಂದ ಮುಂದೂಡಲಾಗುತ್ತಿದೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ರಾಹುಲ್‌ಗಾಂಧಿಯವರ ಕಾರ್ಯಕ್ರಮ ಇರುವುದರಿಂದ ಅಲ್ಲಿಗೆ ಹೋಗಬೇಕಾಗಿದೆ. ಚರ್ಚೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಇರಬೇಕಾಗುತ್ತದೆ. ಅದರ ಬಗ್ಗೆ ದೊಡ್ಡ ಚರ್ಚೆ ಮಾಡುವುದಕ್ಕಿಂಥ ಕಾನೂನು ಸುವ್ಯವಸ್ಥೆಯ ಬಗ್ಗೆ ಸರ್ಕಾರ ಏನು ಮಾಡಬೇಕು ಎನ್ನುವುದನ್ನು ಸ್ವಲ್ಪ ಬಿಡಿಸಿ ಹೇಳಿದರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, calling attention ಅನ್ನು ಮೂರು ದಿವಸಗಳಿಂದ ಮುಂದೂಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ನಾನು ತಿನ್ನಲಿಲ್ಲ. ಅವು ಇಲ್ಲೇ ಇವೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಇವತ್ತು ಮಾತನಾಡಲು ಅವಕಾಶ ಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು: ಆಯಿತು ಇವತ್ತು 7-8 ಗಂಟೆಯವರೆಗೆ ತಾವು ಕುಳಿತುಕೊಳ್ಳಲು ತಾವು ತಯಾರಿದ್ದರೆ ಮಾಡುತ್ತೇನೆ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಹತ್ತು ಗಂಟೆಯಾದರೂ ಕುಳಿತುಕೊಳ್ಳುತ್ತೇವೆ ಮಾಡಿ.

(ಗೊಂದಲ)

ಅಧ್ಯಕ್ಷರು: ಕೊನೆಗೆ ಇಲ್ಲಿ 20 ಜನ ಇರುತ್ತಾರೆ. ಅದರಲ್ಲಿ ನೀವೇ ಇರುವುದಿಲ್ಲ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ನಾವು ಇದ್ದೆವು. ನಿನ್ನೆ, ಮೊನ್ನೆಯೂ ಅಧಿವೇಶನವನ್ನು ಮುಂದೂಡಿದಿರಿ. ಮೊನ್ನೆ calling attention ನಲ್ಲಿ ಕೇಳಿದಾಗ ಉತ್ತರ ತರಿಸಿರಲಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಉತ್ತರ ತರಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮೂರು ಬಾರಿಯಿಂದಲೂ ಈ ರೀತಿಯೇ ಆಗುತ್ತಿದೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ಸದಸ್ಯರೇ ಸದನದಲ್ಲಿ ಇರಲಿಲ್ಲ.. .

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಸಾ.ರಾ ಮಹೇಶ್‌ರವರೆ ಒಂದು ಕೆಲಸ ಮಾಡಿ. ಎಷ್ಟು ಜನ ಇದ್ದಾರೆ ಎಂದು ಲೆಕ್ಕ ಹಾಕಿ. ಆನಂತರ 4.00 ಗಂಟೆಯ ಮೇಲೆ ಎಷ್ಟು ಜನ ಇರುತ್ತಾರೆ ಎಂದು ಲೆಕ್ಕ ಹಾಕಿ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ನಮಗೆ ಗೊತ್ತಿಲ್ಲ ನಾವಂತೂ ಇರುತ್ತೇವೆ.

ಅಧ್ಯಕ್ಷರು: ಹಾಗಾದರೆ ನನಗೂ ಗೊತ್ತಿಲ್ಲ.

ಶ್ರೀ ಸಾ.ರಾ.ಮಹೇಶ್: ನೀವು ರೂಲಿಂಗ್ ಮಾಡಿ.

ಅಧ್ಯಕ್ಷರು: ಆಯಿತು ಮಾಡೋಣ. ಮಾನ್ಯ ಜಗದೀಶ್ ಶೆಟ್ಟರ್‌ರವರೆ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾತನಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು**

**ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೊಲೆ, ಅತ್ಯಾಚಾರ, ಅಪಹರಣ, ದರೋಡೆ ಹಾಗೂ ಕೋಮು ಗಲಭೆಗಳಿಂದ ಅಮಾಯಕ ಜನರು ಮೃತಪಟ್ಟಿದ್ದು, ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿರುವ ಬಗ್ಗೆ.

*******

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಾನೂನು ಸುವ್ಯವಸ್ಥೆ, ಆಡಳಿತ ವ್ಯವಸ್ಥೆ ಕುಸಿದು ಹೋದಂತಹ ಸಂದರ್ಭದಲ್ಲಿ ನಾವು ಭಾರತೀಯ ಜನತಾ ಪಾರ್ಟಿಯ ಶಾಸಕರು ಮತ್ತು ನಮ್ಮ ಪ್ರಮುಖರು ಕೂಡಿಕೊಂಡು ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೇವೆ, ಈ ಒಂದು ವಿಚಾರವಾಗಿ ತಾವು ಇವತ್ತು ನಿಯಮ 69 ರಲ್ಲಿ ಇದನ್ನು convert ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ಗೃಹಸಚಿವರು ಸೀಟಿನಲ್ಲಿ ಇಲ್ಲ. ಮಾಜಿ ಗೃಹ ಸಚಿವರು ಸೀಟಿನಲ್ಲಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಉಪಾಧ್ಯಕ್ಷರು: ಅವರು ನೋಟ್ ಮಾಡಿಕೊಳ್ಳುತ್ತಾರೆ. ಮಾನ್ಯ ಜಾರ್ಜ್‌ರವರೆ ನೋಟ್ ಮಾಡಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಯಾರಾದರೂ ಈ ವಿಚಾರವಾಗಿ ಗಮನಕ್ಕೆ ತೆಗೆದುಕೊಂಡರೆ ಚಲೋ ಆಗ ುತ್ತದೆ. ಹಿಂದೆ ಹಲವಾರು ಬಾರಿ ಇಲ್ಲಿ ಈ ಕಾನೂನು ಸುವ್ಯವಸ್ಥೆಯ ಬಗ್ಗೆ ಸಾಕಷ್ಟು ಪ್ರಸ್ತಾಪವನ್ನು ಮಾಡಿದ್ದೇವೆ. ಇವತ್ತು, ನಾಳೆ ಈ ಒಂದು ಆಡಳಿತ ವ್ಯವಸ್ಥೆ ಸುಧಾರಣೆಯಾಗುತ್ತದೆ, ಕಾನೂನು ಸುವ್ಯವಸ್ಥೆಯಲ್ಲಿ ಒಂದು ಬಿಗಿ ಆಡಳಿತ ಬರುತ್ತದೆ ಎಂದು ಇವೆಲ್ಲಾ ನಾವು ನಂಬಿಕೊಂಡಿದ್ದೇವೆ. ಹಿಂದೆ ಮಾನ್ಯ ಜಾರ್ಜ್‌ರವರು ಗೃಹಸಚಿವರಾಗಿ ಕೆಲಸ ಮಾಡಿದ್ದರು. ಆ ಸಂದರ್ಭದಲ್ಲಿ ನಡೆದಂತಹ ಘಟನೆಗಳು,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಮಹಿಳೆಯರ ಮೇಲೆ ಅತ್ಯಾಚಾರ, ಬಾಲಕಿಯರ ಮೇಲೆ ಅತ್ಯಾಚಾರ, ಗ್ಯಾಂಗ್ ರೇಪ್ ಮತ್ತು ದರೋಡೆ, ಸರಗಳ್ಳತನ, ಅದು ಕರ್ನಾಟಕದಲ್ಲಿ ದಿನನಿತ್ಯದ ಮಾತು. ಈ ರೀತಿ ಎಷ್ಟು ಪ್ರಕರಣಗಳು ಆಗಿವೆ ಎನ್ನುವ ಅಂಕಿ-ಸಂಖ್ಯೆ ಇವೆ ಅದನ್ನೂ ಬೇಕಾದರೆ ನಾನು ಹೇಳುತ್ತೇನೆ. ಅಧಿಕಾರಿಗಳ ಕೊಲೆ, ಮಲ್ಲಿಕಾರ್ಜುನ ಬಂಡೆಯವರ ಕೊಲೆಯಾಯಿತು. ಇತ್ತೀಚೆಗೆ ಶ್ರೀ ಜಗದೀಶ್ ಎನ್ನುವ PSI ರವರ ಹತ್ಯೆ ಆಯಿತು. ಅಂದರೆ ಯಾರು ಕರ್ತವ್ಯದಲ್ಲಿದ್ದಾರೆ ಅವರ ಮೇಲೂ ಸಹಿತ ಹಲ್ಲೆ ಮತ್ತು ಹತ್ಯೆ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅಕ್ರಮ ಮರಳು ಗಣಿಗಾರಿಕೆ ಎಷ್ಟು ರಾಜಾರೋಷವಾಗಿ ನಡೆದಿದೆ ಎಂದರೆ ಅದನ್ನು ತಡೆಹಿಡಿಯಲು ಹೋದಂತಹ ತಹಶೀಲ್ದಾರರು ಇರಬಹುದು, inspectors ಇರಬಹುದು, ಅವರ ಮೇಲೆ ಹಲ್ಲೆ, ಅವರನ್ನು ಪ್ರಾಣಾಂತಿಕವಾಗಿ ಕೊಲೆ ಮಾಡುವಂತಹ ಪ್ರಯತ್ನ ಇಲ್ಲಿ ನಡೆದವು. ಚಾಮರಾಜನಗರ ಜಿಲ್ಲೆಯ ಡಿ.ಸಿಯವರಾದ ಶ್ರೀ ಕುಂಜಪ್ಪ ಅವರ ಮೇಲೆ ಹಲ್ಲೆಯಾಯಿತು. ಅಂದರೆ ಈ ರೀತಿ ಪ್ರತಿನಿತ್ಯ ನಡೆಯುತ್ತಿದೆ. ಜಾರ್ಜ್‌ರವರು ಗೃಹಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಸಾಕಷ್ಟು ಬಾರಿ ಹೇಳಿದ್ದೇವೆ. ಏನೂ ಸುಧಾರಣೆ ಆಗಲಿಲ್ಲ. ಈಗ ಹೊಸದಾಗಿ ಡಾ.ಜಿ.ಪರಮೇಶ್ವರ್‌ರವರು ಗೃಹಸಚಿವರಾಗಿ ಬಂದಿದ್ದಾರೆ. ಒಳ್ಳೆಯದು. ಸ್ವಲ್ಪ ಅವರಿಗೆ ಅವಕಾಶವನ್ನು ಕೊಡೋಣ. ಆದರೆ ಡಾ.ಜಿ.ಪರಮೇಶ್ವರ್‌ರವರು ಬಂದು ಪ್ರಮಾಣವಚನ ಸ್ವೀಕರಿಸಿದ ತಕ್ಷಣವೇ ಮೊದಲು ಮಂಗಳೂರಿನ ಜೈಲಿನಲ್ಲಿ ಖೈದಿಗಳು ಪರಸ್ಪರ ಹೊಡೆದಾಟ ಮಾಡಿ ಅಲ್ಲಿ ಒಬ್ಬ ಖೈದಿಯ ಹತ್ಯೆಯಾಯಿತು. ಆಮೇಲೆ ಟಿಪ್ಪು ಸುಲ್ತಾನ್‌ರವರ ಜಯಂತಿ ಘೋಷಣೆ, ಅದಾದ ಮೇಲೆ ಮಡಿಕೇರಿಯಲ್ಲಿ ಆದಂತಹ ಗಲಭೆ, ಇನ್ನಿತರ ಜಿಲ್ಲೆಗಳಲ್ಲಿ ಆದಂತಹ ಗಲಭೆ, ಇವುಗಳನ್ನು ನೋಡಿದರೆ, ಇವತ್ತು ಸರ್ಕಾರಕ್ಕೆ ಏನಾದರೂ awareness ಇದೆಯೋ ಇಲ್ಲವೋ ಅಥವಾ ಇಂತಹ ಒಂದು ಕೋಮು ಸೌಹಾರ್ದತೆ ವಾತಾವರಣ ನಿರ್ಮಾಣ ಮಾಡುವಂತಹ ಇಚ್ಛಾಶಕ್ತಿ ಇದೆಯೋ ಇಲ್ಲವೋ, ಒಂದು ಬಾರಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಸರ್ಕಾರ ಬಂದ ಮೇಲೆ ನಮ್ಮ ರಾಜ್ಯದಲ್ಲಿ ಯಾವುದೇ ಕೋಮು ಗಲಭೆ ಆಗಿಲ್ಲ, ಎಲ್ಲಾ ಕೋಮು ಸೌಹಾರ್ದತೆ ಇದೆ, ಸಂಘರ್ಷ ಇಲ್ಲ. ಜಾತಿ ಜಾತಿಗಳಲ್ಲಿ ಯಾವುದೇ ಕೋಮು ಹೋರಾಟ ಇಲ್ಲ, ಎಲ್ಲಾ ಜಾತಿ ಗಲಭೆಗಳು ನಿಂತಿವೆ ಎಂದು ಹೇಳಿದ್ದರು. ಅದರ ಬಗ್ಗೆ ರೆಕಾರ್ಡ್ ಇದೆ. ಆದರೆ ಇತ್ತೀಚೆಗೆ ನಡೆದಂತಹ ಘಟನೆಗಳನ್ನು ನೋಡಿದರೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ./ Uncorrected - Not for Publication.

ಇವತ್ತು ಬೆಳಗಾಂನಲ್ಲಿ ದಿನನಿತ್ಯ ಕೋಮುಗಲಭೆ ನಡೆಯುತ್ತಿವೆ. ಚಿಕ್ಕೋಡಿಯಲ್ಲಿ ಕೋಮುಗಲಭೆ ಆಯಿತು. ಶಿಗ್ಗಾಂವ್‌ನ ಬಂಕಾಪುರದಲ್ಲಿ ಕೋಮುಗಲಭೆ ಆಯಿತು. ಮುಧೋಳದಲ್ಲಿ ಆಯಿತು. ಇದರಲ್ಲಿ suffer ಆಗುವಂತಹವರು ಯಾರು? ಅಮಾಯಕರು. ಹಾಗಾದರೆ ಏನಾದರೂ precaution ಮಾಡಿಕೊಂಡು, ಇವರಿಗೆ ಒಂದು Intelligence Department ಇರುತ್ತದೆ. ಅದರ ಪ್ರಕಾರ ವರದಿಯನ್ನು ತೆಗೆದುಕೊಂಡು ಇದನ್ನು ನಿಯಂತ್ರಣ ಮಾಡುವಂಥದ್ದು, ಕೋಮು ಗಲಭೆ ಎಲ್ಲಿ ಆಗುತ್ತದೆ ಎನ್ನುವುದರ ಬಗ್ಗೆ ಸುಳಿವು ಸಿಕ್ಕಿದರೆ ಅದನ್ನು ಸರಿ ಮಾಡುವಂಥದ್ದು, ಇದು ಯಾವುದೂ mechanism ಇವರ ಕಡೆ ಇಲ್ಲವೋ ಹೇಗೋ ಎನ್ನುವ ಸಂಶಯ ನನಗೆ ಬರುತ್ತಿದೆ. ಮಾನ್ಯ ಮುಖ್ಯಮಂತ್ರಿಯವರು ಟಿಪ್ಪು ಸುಲ್ತಾನ್‌ರವರು ಜಯಂತಿ ಆಚರಣೆಯ ನಿರ್ಧಾರವನ್ನು ಕೈಗೊಂಡರು. ನನಗನ್ನಿಸುವ ಮಟ್ಟಿಗೆ ಕಾಂಗ್ರೆಸ್ ಸರ್ಕಾರದವರು 50-60 ವರ್ಷ ಆಡಳಿತ ಮಾಡಿದ್ದಾರೆ. ಹಿಂದೆ ಯಾವ ಮುಖ್ಯಮಂತ್ರಿಯವರು, ಯಾವ ಸರ್ಕಾರದವರೂ ಈ ಟಿಪ್ಪು ಸುಲ್ತಾನ್‌ರವರ ಜಯಂತಿಯನ್ನು ಆಚರಣೆ ಮಾಡಬೇಕೆನ್ನುವುದನ್ನು ಯಾರೂ ವಿಚಾರ ಮಾಡಿರಲಿಲ್ಲ. ಏಕೆಂದರೆ ನಾನೊಂದು ಹೇಳುತ್ತೇನೆ ಮಾನ್ಯ ಉಪಾಧ್ಯಕ್ಷರೆ, ಯಾವ್ಯಾವ ವ್ಯಕ್ತಿಗಳದ್ದು, ಮಹಾಪುರುಷರದ್ದು ಜಯಂತಿ ಆಚರಣೆ ಮಾಡುವಂಥದ್ದು, ಸಾರ್ವಜನಿಕವಾಗಿ ಸರ್ಕಾರಿ ಕಾರ್ಯಕ್ರಮ ಮಾಡುವಂಥದ್ದು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಅಧಿಕಾರವಿದೆ. ಹಿಂದೆ ಕನಕ ಜಯಂತಿ ಆಯಿತು, ಬಸವ ಜಯಂತಿ ಆಯಿತು, ವಾಲ್ಮೀಕಿ ಜಯಂತಿ ಆಯಿತು. ಆದರೆ ಟಿಪ್ಪು ಸುಲ್ತಾನ್‌ರವರ ಬಗ್ಗೆ ಮೊದಲಿನಿಂದಲೂ ವಾದ ವಿವಾದಗಳು ಇವೆ.

ಮುಂದು... ..

25-11-2015-1-20-15-MS-PS.

ಶ್ರೀ ಜಗದೀಶ್ ಶೆಟ್ಟರ್:(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮೊದಲಿನಿಂದಲೂ ವಾದವಿವಾದಗಳು ಇವೆ. ಆತನ ನಡವಳಿಕೆಯ ಬಗ್ಗೆ, ಆತನ ಕಾರ್ಯವೈಖರಿಯ ಬಗ್ಗೆ, ಆಡಳಿತದ ಬಗ್ಗೆ ಈ ರೀತಿಯಾಗಿ ಹಲವಾರು ವಿವಾದಾತ್ಮಕವಾದಂತಹ ವಿಚಾರಗಳು ಇವತ್ತಿನ ದಿವಸ ಟಿಪ್ಪುಸುಲ್ತಾನನ ಬಗ್ಗೆ ಇದೆ. ಅಂತಹ ಒಬ್ಬ ವಿವಾದಾತ್ಮಕವಾದಂತಹ ವ್ಯಕ್ತಿಯ ಬಗ್ಗೆ ಇವತ್ತಿನದಿವಸ ಸರ್ಕಾರದ ಪರವಾಗಿ ಈ ಟಿಪ್ಪುಸುಲ್ತಾನ್ ಜಯಂತಿಯನ್ನು ಆಚರಣೆ ಮಾಡುವುದು ಏನು ಪ್ರಾರಂಭವಾಯಿತಲ್ಲ. ಇಲ್ಲಿಂದಲೇ ಆಕ್ರೋಶಗಳು ಪ್ರಾರಂಭವಾದವು. ಇತ್ತೀಚೆಗೆ ನಾನು ಮಡಿಕೇರಿಗೆ ಹೋಗಿದ್ದಾಗ ಮಾನ್ಯ ಸದಸ್ಯರಾದ ಶ್ರೀ ಕೆ.ಜಿ.ಬೋಪಯ್ಯನವರು, ಶ್ರೀ ಎಂ.ಪಿ.ಅಪ್ಪಚ್ಚುರಂಜನ್ ಅಲ್ಲಿರುವ ಶಾಸಕರುಗಳು ಮಡಿಕೇರಿಯಲ್ಲಿ ಈ ಟಿಪ್ಪು ಜಯಂತಿಯನ್ನು ಆಚರಣೆ ಮಾಡಿರುವ ಬಗ್ಗೆ ಬಹಳ ವಿರೋಧವನ್ನು ವ್ಯಕ್ತಪಡಿಸಿ ಈ ಬಗ್ಗೆ ಪ್ರತಿಭಟನೆಯು ಆಯಿತು. ಇವರು ಯಾವಾಗ ಟಿಪ್ಪು ಜಯಂತಿ ಮಾಡುತ್ತೇವೆಂದು ಘೋಷಣೆಯನ್ನು ಮಾಡಿದರು. ಆ ಘೋಷಣೆ ಮಾಡಿದಂದಿನಿಂದಲೇ ಪರ-ವಿರೋಧ ಆಯಿತು. ಆ ಕೊಡಗು ಜಿಲ್ಲೆಯಲ್ಲಿ ಸುಮಾರು 20 ರಿಂದ 30 ಸಂಘಟನೆಗಳು ವಿರೋಧ ಮತ್ತು 10 ರಿಂದ 15 ಸಂಘಟನೆಗಳು ಜಯಂತಿಯ ಪರವಾಗಿದ್ದವು ಈ ಬಗ್ಗೆ ಮೆರವಣಿಗೆ ಮಾಡಬೇಕೋ ಅಥವಾ ಬೇಡವೋ ಎನ್ನವುದು ಇತ್ತು. ಈ ಬಗ್ಗೆ ಪ್ರತಿಭಟನೆಗಳು ಬೇರೆಬೇರೆ ಜಿಲ್ಲೆಗಳಲ್ಲಿ ಚಾಲೂ ಆಯಿತು. ಅದರ ಬಗ್ಗೆ ಚರ್ಚೆಗಳು ಪ್ರಾರಂಭವಾಯಿತು, ಮಾಧ್ಯಮದಲ್ಲಿ ಚರ್ಚೆಯಾಯಿತು. ಎಲ್ಲಾ ಟಿ.ವಿ.ಮಾಧ್ಯಮಗಳಲ್ಲಿಯೂ ಚರ್ಚೆಯಾಯಿತು. ಈ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಯಿತು. ಟಿಪ್ಪು ಸುಲ್ತಾನನ ಬಗ್ಗೆ ಲೇಖನಗಳು ಪತ್ರಿಕೆಯಲ್ಲಿ ಬಂದವು ಇಷ್ಟೆಲ್ಲಾ ಇದ್ದಾಗಲೂ ಸರ್ಕಾರವು ಇಂತಹದ್ದಕ್ಕೆ ಏತಕ್ಕಾಗಿ ಕೈಹಾಕಿದರು. ನವೆಂಬರ್ 10,11 ಮತ್ತು 12 ದೀಪಾವಳಿ ಹಬ್ಬ. ನಮಗೆ ಗೊತ್ತಿರುವ ಮಾಹಿತಿಯ ಪ್ರಕಾರ ನಾವು internetನಲ್ಲಿ ಮಾಹಿತಿಯನ್ನು ತೆಗೆದುಕೊಂಡಿದ್ದೇವೆ. ಟಿಪ್ಪುಸುಲ್ತಾನನ ಹುಟ್ಟಿದ ದಿವಸ ನವೆಂಬರ್ 20. ಆದರೆ ನವೆಂಬರ್ 10ನೇ ತಾರೀಖಿಗೆ ಟಿಪ್ಪುಸುಲ್ತಾನ್ ಜಯಂತಿ ಏತಕ್ಕಾಗಿ ಘೋಷಣೆ ಮಾಡಿದರು ಎಂದು ನನಗೆ ಅರ್ಥವಾಗಲಿಲ್ಲ. ಒಂದು ಕಡೆ ನೋಡಿದರೆ ಕರ್ನಾಟಕದಲ್ಲಿ ದೀಪಾವಳಿ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡುವ ಪರಂಪರೆ ಇದೆ. ಆ ದೀಪಾವಳಿಗೆ ತನ್ನದೆ ಆದಂತದ್ದು ಇದೆ, ದಸರಾ, ಗಣೇಶೋತ್ಸವ, ಇದಕ್ಕೆ ತನ್ನದೆ ಆದಂತಹ ವೈಶಿಷ್ಟ್ಯತೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇದೆ. ಆ ಧರ್ಮ ಆಚರಣೆ ಮಾಡುವುದು ಇದೆ. Religious Follows ಎಲ್ಲವೂ ಇದೆ. ಇವೆಲ್ಲವೂ ಇದ್ದಂತಹ ಸಂದರ್ಭದಲ್ಲಿ ಅವತ್ತೆ 10 ದಿವಸಗಳ ಮುಂಚೆಯೆ ಟಿಪ್ಪುಸುಲ್ತಾನ್ ಜಯಂತಿಯನ್ನು ಘೋಷಣೆ ಮಾಡಿ ಇದರಿಂದ ಏನು ಸಾಧನೆ ಮಾಡುವುದಕ್ಕೆ ಹೊರಟಿದ್ದಾರೆಂದು ನನಗೆ ಅರ್ಥವಾಗಲಿಲ್ಲ. ಘೋಷಣೆ ಆಗಿ ಎಲ್ಲವೂ ಆಯಿತು. ಇದಕ್ಕೆ ನಾವುಗಳು ಸಹ ವಿರೋಧವನ್ನು ಮಾಡಿದೆವು. ನೀವು ಕೊಡಗು ಜಿಲ್ಲೆಗೆ ಹೋಗಿ ಆ ಟಿಪ್ಪುಸುಲ್ತಾನನ ಬಗ್ಗೆ ಯಾವ ರೀತಿಯಾದಂತಹ ಭಾವನೆ ಇದೆ ಎಂದರೆ ಅಲ್ಲಿ ಅವರುಗಳಿಗೆ ಆಕ್ರೋಷದ ಭಾವನೆ ಇದೆ. ಹತ್ತಾರುಸಾವಿರ ಕೊಡಗು ಜನರನ್ನು ಕ್ರೂರವಾಗಿ ಕೊಂದುಹಾಕಿರುವುದು ಇದೆ. ಒಂದು ಕಡೆ 40 ಸಾವಿರಕ್ಕೂ ಹೆಚ್ಚು ಜನರನ್ನು ಕ್ರೂರವಾಗಿ ಹತ್ಯೆ ಮಾಡಿದ್ದಾನೆಂದು ಇತಿಹಾಸಕಾರರು ಬರೆದಿರುವ ಬಗ್ಗೆ ದಾಖಲೆ ಇದೆ. ಮಂಗಳೂರು ಇರಬಹುದು, ಮಲಬಾರ್ ಇರಬಹುದು, ಮೈಸೂರು ಪ್ರಾಂತ್ಯದಲ್ಲಿರಬಹುದು ಮತ್ತು 40 ರಿಂದ 50 ಸಾವಿರ ಜನರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರ ಮಾಡಿರುವುದು. ಈ ಬಗ್ಗೆ ಕ್ರೌರ್ಯವನ್ನು ಮೆರೆದು ನಂದಿಬೆಟ್ಟದಲ್ಲಿ ಟಿಪ್ಪು ಡ್ರಾಪ್ ಎಂದು ಇದೆ, ಅಲ್ಲಿಗೆ ಕರೆದುಕೊಂಡು ಹೋಗಿ ಕ್ರೌರ್ಯದಿಂದ ಯಾವ ರೀತಿಯಾಗಿ ಸಾಯಿಸುತ್ತಿದ್ದರೆಂದರೆ ಆ ಟಿಪ್ಪು ಡ್ರಾಪ್‌ನಿಂದ ಅವರನ್ನು ಕೆಳಕ್ಕೆ ಕೆಡವಿ ಸಾಯಿಸುತ್ತಿದ್ದರು. ಅಂದರೆ ಈ ರೀತಿಯಾಗಿ ಕ್ರೂರತನವಿರುವಂತಹ ವ್ಯಕ್ತಿ... ನಾನು ಸುಮ್ಮನೆ ಹೇಳುತ್ತಿಲ್ಲ, ನಾನು ದಾಖಲೆಯನ್ನು ಇಟ್ಟುಕೊಂಡೆ ಇತಿಹಾಸಕಾರರು ಬರೆದಿರುವಂತಹ ಪುಸ್ತಕದ ಆಧಾರದ ದಾಖಲೆಯನ್ನಿಟ್ಟುಕೊಂಡು ಹೇಳುತ್ತಿದ್ದೇನೆ. ಪತ್ರಿಕೆಯಲ್ಲಿ ಬರೆದಿರುವಂತಹ ಎಲ್ಲಾ ಲೇಖನಗಳನ್ನು ಬೇಕಾದರೆ ನೀವು ನೋಡಬಹುದು. 300 ಕ್ಕೂ ಹೆಚ್ಚು ದೇವಸ್ಥಾನಗಳ ನಾಶ....

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ಲೇಖನಕಾರರು ಬರೆದಿರುವಂತಹದ್ದು ನಾನಾರೀತಿಯಾದಂತಹ ಪುಸ್ತಕಗಳನ್ನು ಬರೆದಿರಬಹುದು. Mysore Gazetteer ಏನಿದೆ ಅಥವಾ ನಮ್ಮ ಹತ್ತಿರ ಸಂಪೂರ್ಣವಾದ ಮಾಹಿತಿ ಏನಿದೆ ದಾಖಲಾತಿಗಳನ್ನು ಇಟ್ಟುಕೊಂಡು ನಾವು ಮಾತನಾಡಬೇಕಾಗುತ್ತದೆ.

ಉಪಾಧ್ಯಕ್ಷರು: ನೀವು ಈ ಬಗ್ಗೆ ಮಾತನಾಡುವಾಗ ಮಾತನಾಡಿ.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್: ಒಂದು ನಿಮಿಷ ತಾಳಿ. ನಾನು ಮಾನ್ಯ ಉಪಾಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ: ಇವತ್ತಿಗೂ ಕೂಡ ಅಲ್ಲಿ ಹಾಗೆಯೇ ಇದೆ.

ಶ್ರೀ ತನ್ವೀರ್ ಸೇಠ್: ನಾನು ಮಾನ್ಯ ಉಪಾಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ನೀವು ಏತಕ್ಕಾಗಿ ಎದ್ದುನಿಂತುಕೊಂಡು ನಿಮ್ಮಿಷ್ಟಕ್ಕೆ ನೀವು ಏತಕ್ಕಾಗಿ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ವಿರೋಧಪಕ್ಷದ ನಾಯಕರು Yield ಆಗಿರುವುದರಿಂದ ನಾನು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ: ಆಯಿತು.

ಶ್ರೀ ತನ್ವೀರ್ ಸೇಠ್: ಮೈಸೂರು gazetterನಲ್ಲಿ ಇವತ್ತು ಇರುವಂತಹದ್ದು ಜೊತೆಗೆ ಅಂಕಣಕಾರರು ಇವತ್ತು ವಿರೋಧವಾಗಿ ಬರೆದಿರುವವರು ಅಥವಾ ಲೇಖನಗಳು ಏನು ಬರೆದಿವೆ Professor Pandaಅಂತಹವರು Professor Sriram ಎನ್ನುವವರು ಏನು ಬರೆದಿದ್ದಾರೆ. ಅದು ಮತಾಂತರ ಮಾಡುವಂತಹ ವಿಚಾರ ಆಗಿರಬಹುದು ಅಥವಾ ಬೇರೆ ಯಾವುದೇ ಧರ್ಮಕ್ಕೆ ಅಪಸ್ವರ ತೋರಿಸುವಂತಹ ಯಾವುದೇ ರೀತಿಯ ನಮ್ಮಲ್ಲಿ ದಾಖಲಾತಿಗಳು ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ದೇವಸ್ಥಾನದ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರಲ್ಲಾ ಈ ಬಗ್ಗೆ ತಮಗೆ ಗೊತ್ತಿದೆ ಶ್ರೀರಂಗಪಟ್ಟಣದಲ್ಲಿರುವಂತಹ ಶ್ರೀ ರಂಗನಾಥಸ್ವಾಮಿ ದೇವಸ್ಥಾನ 8ನೆಯ ಶತಮಾನದಲ್ಲಿ ಕಟ್ಟಿರುವುದಾಗಿದೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮತಾಂತರ ಮಾಡಿರುವಂತಹ ದಾಖಲಾತಿ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ. ನಮ್ಮ ಕೊಡಗಿನಲ್ಲಿ ...

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್: ತಾವು ಮಾನ್ಯ ಉಪಾಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ಮಾತನಾಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಗೌಡರು ಮತ್ತು ಕೊಡಗರನ್ನು ಇವತ್ತು ಯಾರು ಜಿಲ್ಲಾಧ್ಯಕ್ಷರಿದ್ದಾರೆ ಬಿದ್ದಂಡ ಅವರ familyಯವರು ಅರ್ಧ ಮುಸ್ಲಿಂ ಅರ್ಧ ಹಿಂದೂಗಳಾಗಿದ್ದಾರೆ, ಹಿಂದೂ ಕೊಡಗು ಕೂರ್ಗಿಗಳಾಗಿದ್ದಾರೆ.

ಶ್ರೀ ತನ್ವೀರ್ ಸೇಠ್: ಸನ್ನಿವೇಶಗಳು ಸಂದರ್ಭಗಳು ಏನಿವೆ ಎಂಬುವುದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಅಲ್ಲ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಇದಕ್ಕಿಂತಲೂ ನಿಮಗೆ ದಾಖಲೆ ಬೇಕೇ?

ಶ್ರೀ ತನ್ವೀರ್ ಸೇಠ್: ಸನ್ನಿವೇಶ ಮತ್ತು ಸಂದರ್ಭದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಲ್ಲ. ದೇವಸ್ಥಾನದ ವಿಚಾರದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಇವತ್ತು ನಾನಾ ಕ್ಷೇತ್ರಗಳು ಶೃಂಗೇರಿ ಇರಬಹುದು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇವರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ರಾಜೀನಾಮೆ ಕೊಟ್ಟರು.

ಶ್ರೀ ತನ್ವೀರ್ ಸೇಠ್: ಆ ಶೃಂಗೇರಿ ಪೀಠ ಏನಿದೆ. ಆ ವಿಚಾರದಲ್ಲಿ ತಾವು ಮಾತನಾಡಿ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅವರ ಅರ್ಧ family .....

ಶ್ರೀ ತನ್ವೀರ್ ಸೇಠ್: ಅನಾವಶ್ಯಕವಾಗಿ ಇಲ್ಲಿ ಮಾತನಾಡಿಕೊಂಡು ಸದನದ ಸಮಯವನ್ನು ಹಾಳುಮಾಡುವುದು ಬೇಡ.

ಶ್ರೀ ಕೃಷ್ಣಾಭೈರೇಗೌಡ(ಮಾನ್ಯ ಕೃಷಿ ಸಚಿವರು): ಇವರು ಒಂದು ಕುಟುಂಬದ ಹೆಸರನ್ನು ತೆಗೆದುಕೊಂಡು ಇಲ್ಲಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅಮು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್: ಇವರ ಕಾಲದಲ್ಲಿ ರಾಜಮಹಾರಾಜರುಗಳು ಸಹ ಇದ್ದರು.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಈ ಬಗ್ಗೆ ನಿಮಗೆ RTC ಅನ್ನು ಕೊಡುತ್ತೇವೆ. ಇದು ಸುಳ್ಳಾ ಇದಕ್ಕಿಂತಲೂ ನಿಮಗೆ ದಾಖಲೆ ಬೇಕೇ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಇವರು ನೇರವಾಗಿ ಒಬ್ಬ ವ್ಯಕ್ತಿಯ ವಿಚಾರದಲ್ಲಿ ......

(ಗೊಂದಲ)

ಶ್ರೀ ಕೃಷ್ಣಾಭೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ದಯವಿಟ್ಟು ಇಂತಹ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ತಾವು ಚರ್ಚೆ ಮಾಡುವುದಾದರೆ ಅದಕ್ಕೆ ನಾವು ಸಹ ಸಿದ್ಧರಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಉಪಾಧ್ಯಕ್ಷರೆ,...

ಉಪಾಧ್ಯಕ್ಷರು: ತಾವು ಮಾತನಾಡುವುದು ಬೇಡ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ತನ್ವೀರ್ ಸೇಠ್: ಇವರು ರಾಜಕೀಯ ಲಾಭಕ್ಕಾಗಿ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೃಷ್ಣಾಭೈರೇಗೌಡ: ನೀವು ಹೇಳುವಾಗ ಹೇಳಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್: ಯಾವ ಯಾವ ಸಂದರ್ಭದಲ್ಲಿ ಸರ್ಕಾರವು ಯಾವ ಯಾವ ಜಯಂತಿಯನ್ನು ಮಾಡಿದೆ ಅದಕ್ಕೆ ನಾವು ಯಾವತ್ತೂ ಕೂಡ ವಿರೋಧ ಮಾಡಿರಲಿಲ್ಲ.

ಉಪಾಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಮಾತನಾಡಿ.

ಶ್ರೀ ತನ್ವೀರ್ ಸೇಠ್: ಮಾಡುವುದರ ಬಗ್ಗೆ ಎಲ್ಲರೂ ಒಂದಾದರೆ ...............issue ಆಗುತ್ತದೆ.

ಉಪಾಧ್ಯಕ್ಷರು: ನೀವು ಮಾತನಾಡುವಾಗ ಮಾತನಾಡಿ.

ಶ್ರೀ ಸಿ.ಟಿ.ರವಿ: ಮಾನ್ಯ ಸದಸ್ಯರು ಇತಿಹಾಸದ ದಾಖಲೆಯ ಬಗ್ಗೆ ಹೇಳಿದ್ದಾರೆ.

ಶ್ರೀ ತನ್ವೀರ್ ಸೇಠ್: ಇತಿಹಾಸಕಾರರು ಬರೆದಿರುವ ಲೇಖನವನ್ನಿಟ್ಟುಕೊಂಡು ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಟಿ.ರವಿ: ನೀವು ಒಂದು ಸದನ ಸಮಿತಿಯನ್ನು ರಚನೆ ಮಾಡಿ.

ಶ್ರೀ ತನ್ವೀರ್ ಸೇಠ್: ಇತಿಹಾಸ ಏನು ಇದೆ ಅದನ್ನು ಸಹ ಮುಂದಿಟ್ಟುಕೊಳ್ಳೋಣ.

ಶ್ರೀ ಸಿ.ಟಿ.ರವಿ: ಇತಿಹಾಸದ ದಾಖಲೆಗಳ ಬಗ್ಗೆಯೂ ಸಹ ಅಧ್ಯಯನ ಮಾಡೋಣ. ಸದನ ಸಮಿತಿಯನ್ನು ರಚನೆ ಮಾಡಿ ಇತಿಹಾಸದ ದಾಖಲೆಯ ಬಗ್ಗೆ ಅಧ್ಯಯನ ಮಾಡೋಣ. ಅದು ಲೂಯಿಸ್ ಮಥಾಯಿಸ್ ಇರಬಹುದು. Malabar Manual Record ಇರಬಹುದು, Mysore gazetter ದಾಖಲೆ ಇರಬಹುದು.

ಉಪಾಧ್ಯಕ್ಷರು: ಆಯಿತು ಅದು ಏನಿದೆ ನೋಡೋಣ.

ಶ್ರೀ ಸಿ.ಟಿ.ರವಿ: ಸ್ವತ: ಟಿಪ್ಪು ಸುಲ್ತಾನನ ಆದೇಶಗಳು ಇರಬಹುದು, ಆ ಆದೇಶಗಳು ಏನಿವೆ ಎಂಬುವುದನ್ನು ಅಧ್ಯಯನ ಮಾಡೋಣ. ಏಕೆಂದರೆ ಇಲ್ಲಿ ಯಾರು ಯಾರನ್ನೂ ವೈಭವೀಕರಿಸುವುದು ಬೇಡ. ಇಲ್ಲಿ ಯಾರು ಯಾರನ್ನು ತೆಗಳುವುದು ಬೇಡ. ಇದರಲ್ಲಿ ಇತಿಹಾಸದ ...

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ ಅವರು ಫಿಲಾಸಫಿ ಹೇಳುತ್ತಿದ್ದಾರೆ. ತಾವು Points ಇಟ್ಟುಕೊಂಡು ಮಾತನಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಉಪಾಧ್ಯಕ್ಷರು: ಆಯಿತು ಬಿಡಿ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಇವರ ಪಕ್ಷದ ಸಿದ್ಧಾಂತಗಳನ್ನು ....

ಒಬ್ಬ ಮಾನ್ಯ ಸದಸ್ಯರು: ನಿಮ್ಮ ಕಾಂಗ್ರೆಸ್ ಪಕ್ಷದ .........

(ಗೊಂದಲ)

ಶ್ರೀ ಸಿ.ಟಿ.ರವಿ: Luis.........

(ಗೊಂದಲ)

ಶ್ರೀ ಸಿ.ಟಿ.ರವಿ: ಅವರು ಹೈವದನರಾವ್ ....

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಇವರ ವಾದವನ್ನು ಈ ಸದನದ ಕಡತದಲ್ಲಿ ಹೇಳುತ್ತಿದ್ದಾರೆ. ಅದು ಈ ಕಡತದಲ್ಲಿದೆ ಅದನ್ನು ತಾವು ತೆಗೆಸಿಹಾಕಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಇವರು ವಿಷಯಾಂತರ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಶಿವಮೂರ್ತಿ: It should not go on records. ಈ ವಿಷಯ ಕಡತದಲ್ಲಿ ಹೋಗುವುದು ಬೇಡ.

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ಮಾತನಾಡುವುದು ಬೇಡ. ಅದು ಕಡತದಲ್ಲಿ ಹೋಗುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು: ತಾವು ಮಾತನಾಡಿ. ಮಾನ್ಯ ರವಿಯವರೆ ತಾವು ಕುಳಿತುಕೊಳ್ಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ರವಿಯವರು ಮಾತನಾಡಿರುವುದು ದಾಖಲೆಗೆ ಹೋಗಬಾರದು.

ಶ್ರೀ ಕೆ.ಜಿ.ಬೋಪಯ್ಯ: ನಿಮ್ಮ ಖುರಾನ್‌ನಲ್ಲಿ .....

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಅವರು ಮಾತನಾಡಿರುವುದು ವಾಪಸ್ಸು ತೆಗೆದುಕೊಳ್ಳಬೇಕು. It should not go to the records.

ಶ್ರೀ ಸಿ.ಟಿ.ರವಿ: ಶ್ರೀರಂಗಪಟ್ಟಣದಲ್ಲಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಇದೆಯಾ?

ಶ್ರೀ ಸಿ.ಟಿ.ರವಿ: ಉತ್ಖಯನ ಮಾಡಿಸಿ.

ಶ್ರೀ ಕೆ.ಶಿವಮೂರ್ತಿ: ಇವರು ಇತಿಹಾಸವನ್ನು ತಿರುಚುತ್ತಿದ್ದಾರೆ, ಕೋಮುಭಾವನೆ ಕೆರಳಿಸುತ್ತಿದ್ದಾರೆ. ಹೊಸದಾಗಿ ಸೃಷ್ಟಿ ಮಾಡುತ್ತಿದ್ದಾರೆ, ಅವರು ಹೇಳುತ್ತಿರುವುದನ್ನು ನಾವು ಓದಿಯೇ ಇಲ್ಲ.

ಶ್ರೀ ಕೆ.ಜಿ.ಬೋಪಯ್ಯ: ದಾಖಲೆಯನ್ನಿಟ್ಟುಕೊಂಡು ಹೇಳುತ್ತಿದ್ದೇವೆ.

ಶ್ರೀ ಕೆ.ಶಿವಮೂರ್ತಿ: ಈ ಬಗ್ಗೆ ಇಂತಹದ್ದರ ಬಗ್ಗೆ ಓದೇ ಇಲ್ಲ. ಈ ಬಗ್ಗೆ ಪಾಠ ಇಲ್ಲ.

ಶ್ರೀ ಕೆ.ಜಿ.ಬೋಪಯ್ಯ: ನೀವು ಓದದೆ ಇದ್ದರೆ ಏನು?

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಈ ಬಗ್ಗೆ ನಾವು ದಾಖಲೆಗಳನ್ನು ಕೊಡುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ: ನಾವು ದಾಖಲೆ ಸಮೇತ ಕೊಡುತ್ತೇವೆ.

ಶ್ರೀ ಸಿ.ಟಿ.ರವಿ: ಈ ಬಗ್ಗೆ ಇತಿಹಾಸದ ದಾಖಲೆಗಳು ಇವೆ. ಈ ಬಗ್ಗೆ ಸದನ ಸಮಿತಿಯನ್ನು ರಚನೆ ಮಾಡಿ. ಟಿಪ್ಪು ಸುಲ್ತಾನ್ ಮತಾಂತರ ಮಾಡದೆ ಇದ್ದರೆ .....

ಶ್ರೀ ಕೆ.ಶಿವಮೂರ್ತಿ: He must withdraw it. I will oppose it.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ದೇವಸ್ಥಾನವನ್ನು ನಾಶ .......



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಸಿ.ಟಿ.ರವಿ: ಇವರು ಕೋಮುವಾದ ಎಂದು ಹೇಳುತ್ತಿದ್ದಾರೆ ಅದನ್ನು ಕೇಳುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ತನ್ವೀರ್ ಸೇಠ್: ಇದು ಜಾತ್ಯಾತೀತದ ವಿರುದ್ಧವಾಗಿದೆ. ಇದು ಸಂವಿಧಾನದ ವಿರುದ್ದವಾಗಿದೆ. ಇದು ಸದನದ ವಿರುದ್ಧವಾಗಿದೆ. ದಯವಿಟ್ಟು ಇದನ್ನು ಕಡತದಿಂದ ತೆಗೆಸಿಹಾಕಬೇಕು. ಇದು ಕಡತದಲ್ಲಿ ಹೋಗಿದೆ ಇದನ್ನು ತೆಗೆಸಿಹಾಕಿ.

ಶ್ರೀ ಕೆ.ಶಿವಮೂರ್ತಿ: ಇದು ಜ್ಯಾತ್ಯಾತೀತ ವ್ಯವಸ್ಥೆಗೆ ವಿರುದ್ದ, ಸಂವಿಧಾನಕ್ಕೆ ವಿರುದ್ಧ, ಈ ಸದನದ ವಿರುದ್ಧ, ಆದ್ದರಿಂದ ಇದನ್ನು ಕಡತದಿಂದ ತೆಗೆದು ಹಾಕಿ. Please remove this all.

ಉಪಾಧ್ಯಕ್ಷರು: ಆಯಿತು.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಈ ಬಗ್ಗೆ ನಾನು ತಮಗೆ RTC ಅನ್ನು ಕೊಡುತ್ತೇನೆ.

ಉಪಾಧ್ಯಕ್ಷರು: ಆಯಿತು.

(ಗೊಂದಲ)

ಶ್ರೀ ಸಿ.ಟಿ.ರವಿ:.......................ನರಮೇಧ................ಇತಿಹಾಸದ ದಾಖಲೆ ಇದೆ.

(ಗೊಂದಲ)

ಇವತ್ತಿಗೂ ಇತಿಹಾಸದ ದಾಖಲೆಯಲ್ಲಿದೆ.

ಶ್ರೀ ಕೆ.ಶಿವಮೂರ್ತಿ: No. ದಾಖಲೆಯಲ್ಲಿ ಇಲ್ಲ.

ಶ್ರೀ ಎನ್.ಎ.ಹ್ಯಾರಿಸ್: ಇವರಷ್ಟಕ್ಕೆ ಇವರೇ ಸೃಷ್ಟಿ ಮಾಡಿಕೊಂಡು ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು: ಈಗ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

(ಮುಂದು)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಸ. 25.11.2015/1.30/16/ಎನ್.ಸಿ.ಕೆ/ಪಿ.ಎಸ್

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಖಾದರ್‌ರವರೆ ನಿಮ್ಮ ಮಂಗಳೂರಿನಲ್ಲಿಯೂ ಗಲಾಟೆ ಆಗಿದೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಇತಿಹಾಸದಲ್ಲಿ ದಾಖಲೆ ಇದೆ.

ಶ್ರೀ ಎನ್.ಎ.ಹ್ಯಾರೀಸ್: ಇವರು ದಾಖಲೆಗಳನ್ನು ಸೃಷ್ಟಿ ಮಾಡಿ ಮಾತನಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ನೀವು ಮಾತನಾಡುವಾಗ ಮಾತನಾಡಿ.

ಶ್ರೀ ಕೆ.ಶಿವಮೂರ್ತಿ: ಇತಿಹಾಸವನ್ನು ಹೊಸದಾಗಿ ಸೃಷ್ಟಿ ಮಾಡಿ ಮಾತನಾಡುತ್ತಿದ್ದಾರೆ. ದಯವಿಟ್ಟು ಇದನ್ನು ತೆಗೆಸಿ ಹಾಕಿ. ರವಿಯವರು ಹೇಳಿದ ಇತಿಹಾಸದ ವಿಷಯವನ್ನು ನಾವು ಓದೇ ಇಲ್ಲ. ಇದನ್ನು ದಯವಿಟ್ಟು ಕಡತದಿಂದ ತೆಗೆಸಬೇಕು.

(ಗೊಂದಲ)

ಶ್ರೀ ಸಿ.ಟಿ.ರವಿ: ಟಿಪ್ಪು ಅಚ್ಚ ಕನ್ನಡಿಗನಲ್ಲ, ಪರ್ಷಿಯನ್ ಭಾಷೆ ಹೇರಿದಂಥ ಕನ್ನಡ ವಿರೋಧಿ. ಪರ್ಷಿಯನ್ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಹೇರಿದಂಥ ಒಬ್ಬ ಕನ್ನಡ ವಿರೋಧಿ, ಅವನ ಜಯಂತಿಯನ್ನು ಆಚರಣೆ ಮಾಡುತ್ತಿದ್ದಾರಲ್ಲಾ ಇವರಿಗೆ ನಾಚಿಕೆ ಇದೆಯೇ? ಯಾರಾದರೂ ಸ್ವಾಭಿಮಾನ ಇರುವ ಕನ್ನಡಿಗ ಈ ರೀತಿ ಯೋಚನೆ ಮಾಡುತ್ತಾರೆಯೇ?

(ಗೊಂದಲ)

ಉಪಾಧ್ಯಕ್ಷರು: ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ, ರವಿಯವರೆ ಕುಳಿತುಕೊಳ್ಳಿ. ಜಗದೀಶ್ ಶೆಟ್ಟರ್ ಮಾತನಾಡಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಉಪಾಧ್ಯಕ್ಷರು: ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಒಬ್ಬ ಪರ್ಷಿಯಾದಿಂದ ಬಂದ ಆಕ್ರಮಣಕಾರನನ್ನು ವೈಭವೀಕರಿಸುತ್ತಾರೆ ಇವರಿಗೆ ನಾಚಿಕೆಯಾಗಬೇಕು. ಮೈಸೂರು ಮಹಾರಾಜರು ಸೆರೆಹಿಡಿದಂತ ಒಬ್ಬ ಲೂಟಿಕೋರನನ್ನು ವೈಭವೀಕರಿಸುತ್ತಾರೆ ಇವರಿಗೆ ನಾಚಿಕೆಯಾಗುವುದಿಲ್ಲವೇ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಜಾತಿ ಜಾತಿ ಮೇಲೆ ಸಮರ ಸಾರುತ್ತೀರಾ ಆಗ ನಿಮಗೇನೂ ಆಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಜಗದೀಶ್ ಶೆಟ್ಟರ್‌ರವರೆ ಮಾತನಾಡಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

***( ಈ ಹಂತದಲ್ಲಿ ಬಿಜೆಪಿ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)***

(ಗೊಂದಲ)

ಉಪಾಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಯು.ಟಿ.ಖಾದರ್(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಹಾತ್ಮ ಗಾಂಧಿಯವರನ್ನು ಕೊಂದವರನ್ನು ವೈಭವಿಕರಿಸುತ್ತೀರಲ್ಲಾ ಆಗ ನಿಮಗೆ ನಾಚಿಕೆಯಾಗುವುದಿಲ್ಲವೇ?

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು): ಸಮಾಜವನ್ನು ಒಂದುಗೂಡಿಸಿ, ಅದನ್ನು ಒಡೆಯುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಮಾಜ ಒಡೆಯುವ ಕೆಲಸ ಏಕೆ ಮಾಡುತ್ತೀರಿ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಯು.ಟಿ.ಖಾದರ್: ದೇಶದ್ರೋಹಿಗಳು ನೀವು, ನಾವಲ್ಲ,

ಉಪಾಧ್ಯಕ್ಷರು: ಕುಳಿತುಕೊಳ್ಳಿ. ನೀವು ಮಾತನಾಡುವಾಗ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಉಪಾಧ್ಯಕ್ಷರೆ,

ಶ್ರೀ ಕೆ.ಶಿವಮೂರ್ತಿ: ಕುಮಾರಸ್ವಾಮಿಯವರು ಮಾತನಾಡಲಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ: ಈ ಸಂಸ್ಕೃತಿಯನ್ನು ಶುರು ಮಾಡಿದ್ದೇ ನೀವು ಸ್ವಾಮಿ. ಜಯಂತಿಗಳನ್ನು ಆರಂಭ ಮಾಡಿದ್ದೇ ತಾವು. ಇದು ನಿಮ್ಮ ಬಳುವಳಿ. ನೀವೇ ಈ ಜಯಂತಿಯನ್ನು ಶುರು ಮಾಡಿದ್ದು ನಾವಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಟಿಪ್ಪು ಸುಲ್ತಾನ್ ಸಂತ ಶಿಶುನಾಳ ಷರೀಫ್ ಅಲ್ಲ. ಸರ್ಕಾರ ಸಂತ ಶಿಶುನಾಳ ಷರೀಫ್ ಜಯಂತಿಯನ್ನು ಆಚರಣೆ ಮಾಡಲಿ. ನಾವು ಕೂಡ ಸಂತ ಶಿಶುನಾಳರವರು ಬರೆದಿರುವ ಪದ್ಯಗಳನ್ನು ಹಾಡುತ್ತೇವೆ. ಟಿಪ್ಪು ಸುಲ್ತಾನ್ ಏನು ಸಂತ ಶಿಶುನಾಳ ಷರೀಫ್‌ನೇನು? ಅಬ್ದುಲ್ ಕಲಾಂರವರ ಜಯಂತಿಯನ್ನು ಬೇಕಾದರೆ ಆಚರಣೆ ಮಾಡಿ.

(ಗೊಂದಲ)

ಶ್ರೀ ತನ್ವೀರ್ ಸೇಠ್: ನೀವೆಲ್ಲಾ ಮಾಡಿದ್ದು ಯಾವ ರಾಜಕೀಯ? ಟಿಪ್ಪು ಸುಲ್ತಾನ್ ಹಿಂದೂ ದೇವಾಲಯಗಳ ವಿರೋಧಿಯಾಗಿದ್ದರೆ ದಕ್ಷಿಣ ಭಾರತದ ಒಂದೇ ಒಂದು ದೇವಾಲಯ ಉಳಿಯುತ್ತಿರಲಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಟಿಪ್ಪು ಸುಲ್ತಾನ್ ಜಯಂತಿಯನ್ನು ಆಚರಣೆ ಮಾಡುವುದಕ್ಕೆ ನಿಮಗೆ ನಾಚಿಕೆಯಾಗಬೇಕು.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಉಪಾಧ್ಯಕ್ಷರೆ, ದಯವಿಟ್ಟು ಸದನದ ಎರಡೂ ಭಾಗದ ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇನೆ. ಇನ್ನು ಹಲವಾರು ಜ್ವಲಂತ ಸಮಸ್ಯೆಗಳಿವೆ. ಅದಕ್ಕೆ ಸಮಯ ಬೇಕು. ಈಗ Agriculture ವಿಷಯ ಮಾತನಾಡುವುದಕ್ಕೆ ಹೋದರೂ ಸಮಯ ಇಲ್ಲವೆನ್ನುತ್ತೀರಿ. ಈ ವಿಷಯ ತೆಗೆದುಕೊಂಡಿದ್ದೀರಿ. ಅವರು ಸತ್ತು ಎಲ್ಲೋ ಇದ್ದಾರೆ. ಅವರ ಬಗ್ಗೆ ಈಗ ನಾವು ಚರ್ಚೆ ಮಾಡಿಕೊಂಡು ನಾವು ನಾವು ಏಕೆ ಹೊಡೆದಾಡಿಕೊಂಡು ಕುಳಿತುಕೊಳ್ಳಬೇಕು. ದಯವಿಟ್ಟು ಬೇಡ.

(ಗೊಂದಲ)

***( ಈ ಹಂತದಲ್ಲಿ ಬಿಜೆಪಿ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)***

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ : ಉಪಾಧ್ಯಕ್ಷರೆ, ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ರೀತಿಯ ವಿವಾದಿತ ವ್ಯಕ್ತಿತ್ವದ ಬಗ್ಗೆ ಇತಿಹಾಸದ ಬಗ್ಗೆ ಸ್ಪಷ್ಟತೆ ಕೊಡಬೇಕು. ಇತಿಹಾಸದ ಬಗ್ಗೆ ಸ್ಪಷ್ಟತೆ ಮೂಡಿಸಲಿ. ಅದನ್ನು ಬಿಟ್ಟು ಈ ರೀತಿ ವಿವಾದಿತ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಯ ಬಗ್ಗೆ ಕಾರ್ಯಕ್ರಮವನ್ನು ಮಾಡಿದರೆ ಏನು ಉಪಯೋಗ? ಇತಿಹಾಸವೇನು ಎನ್ನುವುದು ಸ್ಪಷ್ಟಪಡಿಸಲಿ. ಇತಿಹಾಸದ ಬಗ್ಗೆ ಮೊದಲು ಸ್ಪಷ್ಟತೆ ಬರಲಿ ಆಮೇಲೆ ಉಳಿದದ್ದನ್ನು ಚರ್ಚೆ ಮಾಡೋಣ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಸದನದಲ್ಲಿ ಒಪ್ಪಿಕೊಳ್ಳಿ. ಯಾವುದಾದರೂ ವಿಶ್ವವಿದ್ಯಾನಿಲಯದಲ್ಲಿ ಒಂದು ಪೀಠವನ್ನು ಸ್ಥಾಪಿಸಿ. ಅದರ ಮೂಲಕ ಸತ್ಯ ಸಂಗತಿಗಳು ಹೊರಗೆ ಬರಲಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಮಾಡೋಣ. ಸದನ ಸಮಿತಿಯನ್ನು ರಚಿಸಿ ದಾಖಲೆಗಳ ಸಮೇತ ಇಡುತ್ತೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ರೀತಿ ವಿವಾದಿತ ವ್ಯಕ್ತಿಯನ್ನು ಅಲ್ಪ ಸಂಖ್ಯಾತರಿಂದ ಮತ ಓಲೈಸುವ ಕಾರಣಕ್ಕಾಗಿ ಕಾಂಗ್ರೆಸ್‌ನವರು ಮಾಡುತ್ತಿರುವ ರಾಜಕಾರಣವನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಇದು ಮತಗಳಿಸುವ ರಾಜಕಾರಣವಿದು. ಇದು ಓಲೈಕೆ ಮಾಡುವ ರಾಜಕಾರಣವಿದು.

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಟಿಪ್ಪು ಜಯಂತಿಯನ್ನು ನೆಪವಾಗಿಟ್ಟುಕೊಂಡು ಗಲಾಟೆ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ (ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಸಚಿವರು): ಬಿಜೆಪಿಯವರು ರಾಜಕಾರಣ ಮಾಡುತ್ತಿರುವುದು, ನಮಗೆ ಬೇಕಾಗಿಲ್ಲ. ನೀವೇ ಮಾಡುತ್ತಿರುವುದು. ಕೋಮು ಗಲಭೆ ಉಂಟು ಮಾಡುವುದಕ್ಕೆ ನಿಮ್ಮ ಪಕ್ಷ ರಾಜಕಾರಣ ಮಾಡುತ್ತಿದೆ. ನೀವು ಅಲ್ಲಿ ಶಾಂತಿಯಿಂದ ಕೂಡಿ ಟಿಪ್ಪು ಜಯಂತಿಯನ್ನು ಮಾಡಿದಾಗ ಹೋಗಿ ಅಲ್ಲಿ ಪ್ರಾರ್ಥನೆ ಮಾಡಿಸಿ ಗಲಾಟೆ ಮಾಡಿಸುವಂಥ ಕೆಲಸ ಮಾಡಿದ್ದು ನೀವು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನೀವು ಬೆಂಕಿ ಹಚ್ಚಿದ್ದರಲ್ಲ. ನೀವು ಕೇರಳದಿಂದ ಭಯೋತ್ಪಾದಕರನ್ನು ಕರೆಸಿಕೊಂಡು ಮಾಡಿಸಿದವರು ನೀವು. ನೀವೇ. ಮೊದಲು ಕೊಡಗಿನಲ್ಲಿ ಮಾಡಲಿಕ್ಕೆ ಅನುಮತಿ ಕೊಟ್ಟರಲ್ಲಾ.

ಶ್ರೀ ಕೆ.ಜೆ.ಜಾರ್ಜ್: ನೀವೇ ಬಿಜೆಪಿಯವರು ಮಾಡಿರುವುದು. ನಾವಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಿಮ್ಮ ಕುಮ್ಮಕ್ಕಿನಿಂದಲೇ ಕೇರಳದಿಂದ ಜನ ಬಂದಿದ್ದು, ನಾವು ನೆಮ್ಮದಿಯಿಂದ ಇದ್ದೆವು. ನಮ್ಮ ಜಿಲ್ಲೆಯಲ್ಲಿ ನೀವು ಉಸ್ತುವಾರಿ ಸಚಿವರಾಗಿದ್ದಾಗ ಏನೂ ಅಭಿವೃದ್ಧಿ ಮಾಡಲಿಲ್ಲ. ಇಡೀ ಜಿಲ್ಲೆಯ ಅಭಿವೃದ್ಧಿಯನ್ನು ನೀವು ಹಾಳು ಮಾಡಿದ್ದೀರಿ. ಕೊಡಗು ಜಿಲ್ಲೆಯ ನಾಶ ಮಾಡಿದಿರಿ. ನಮ್ಮ ಜಿಲ್ಲೆಗೆ ಕೊಟ್ಟ ಅನುದಾನ ಬಿಡುಗಡೆ ಆಗಿಲ್ಲ. ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Law and Order ಪಾಲಿಸುವ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆಯೇ ಉಪಾಧ್ಯಕ್ಷರೆ? ಕೇರಳದಿಂದ ಬಂದಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಇಲ್ಲಿ ಕೇಳಿ, Law and Order ಸರಿಯಾಗಿದೆ. ನೀವು ಅಲ್ಲಿ ಪ್ರಚೋದನೆ ಮಾಡಿಸಿದ್ದೀರಿ. Communal ಇರುವವರನ್ನು ಸೇರಿಸಿ ನೀವೇ ಮಾಡಿಸಿರುವುದು, ಬೇರೆ ಯಾರೂ ಮಾಡಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಸರಿಯಾಗಿದೆ. ನೀವು ಅಲ್ಲಿ ಗಲಾಟೆ ಮಾಡಿಸಿದ್ದು. ಅಲ್ಲಿ ಕೊಲೆ ಮಾಡಿಸಿದ್ದು ಎಲ್ಲ ನೀವು ಮಾಡಿಸಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇರಳದಿಂದ ಜನರನ್ನು ಕರೆಸಿ ಗದ್ದಲ ಮಾಡಲಿಕ್ಕೆ ಅವಕಾಶ ಕೊಟ್ಟವರು ಯಾರು? ಅವರನ್ನು ಬರಲಿಕ್ಕೆ ಏಕೆ ಬಿಟ್ಟಿರಿ ಹೇಳಿ.

(ಗೊಂದಲ)

***( ಈ ಹಂತದಲ್ಲಿ ಆಡಳಿತ ಪಕ್ಷದ ಹಲವು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)***

ಶ್ರೀ ಅಭಯಚಂದ್ರ ಜೈನ್: ಎಲ್ಲಾ ಅಲ್ಲಿನವರೆ ಗಲಾಟೆ, ಕೊಲೆ ಮಾಡಿರುವುದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಯು.ಟಿ.ಖಾದರ್: ಹರೀಶ್ ಪೂಜಾರಿ ಬಗ್ಗೆ ಏಕೆ ಮಾತನಾಡುತ್ತಿಲ್ಲ?

ಶ್ರೀ ವಿ.ಸುನಿಲ್ ಕುಮಾರ್: ಟಿಪ್ಪು ಜಯಂತಿಯ ನೆಪ ಇಟ್ಟುಕೊಂಡು ಸರ್ಕಾರ ಗಲಾಟೆ ಮಾಡಿಸಿದ್ದು. ಕೇರಳದಿಂದ ಜನ ಬಂದಾಗ ನೀವೇಕೆ ಸುಮ್ಮನಿದ್ದಿರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೇರಳದಿಂದ ಯಾವ ಯಾವ ಗಾಡಿಯಲ್ಲಿ ಜನರು ಬಂದರು ಹೇಳಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಕೇರಳದಿಂದ ಯಾರೂ ಬಂದಿಲ್ಲ. ಎಲ್ಲಾ ಅಲ್ಲಿಯವರೆ ಇದ್ದಾರೆ. ಅವರೆ ಅಲ್ಲಿ ಗಲಾಟೆ ಮಾಡಿಸಿ ಕೊಲೆ ಮಾಡಿಸಿದವರು. ಕೇರಳದವರು ಏನು ವಿದೇಶಿಯರೇ? ಬಿಜೆಪಿಯವರು, ರಾಮಸೇನೆಯವರು ಏನೂ ಬೇಕಾದರೂ ಮಾಡಬಹುದು. ಇನ್ಯಾರೂ ಏನು ಮಾಡುವಂತಿಲ್ಲ, ಯಾರದ್ದು ಜನ್ಮದಿನಾಚರಣೆ ಆಚರಿಸುವಂತಿಲ್ಲ. ಇವತ್ತು ನೀವು ಪ್ರಚೋದನೆ ಮಾಡುತ್ತಿರುವುದು. ನಾವಲ್ಲ.

(ಗೊಂದಲ)

ಶ್ರೀ ವಿ.ಸುನಿಲ್ ಕುಮಾರ್: ಖಾದರ್‌ರವರೆ ನಿಮ್ಮ ಪೂರ್ವಜರಾಗಿದ್ದ ಹಿಂದೂಗಳು ಟಿಪ್ಪು ಕಾಲದಲ್ಲಿ ಮತಾಂತರವಾದವರು.

(ಗೊಂದಲ)

ಶ್ರೀ ಯು.ಟಿ.ಖಾದರ್: ಹರೀಶ್ ಪೂಜಾರಿಯವರನ್ನು ಕೊಂದವರು ಯಾರು? ಆ ಬಗ್ಗೆ ನೀವು ಏಕೆ ಮಾತನಾಡುತ್ತಿಲ್ಲ. ಅವರನ್ನು ಚಾಕು ಹಾಕಿ ಕೊಂದಿದ್ದಾರೆ ಅದರ ಬಗ್ಗೆ ಯಾರು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಅಭಯಚಂದ್ರ ಜೈನ್: ಸುನಿಲ್‌ಕುಮಾರ್‌ರವರು ಇದರಲ್ಲಿ ನಿಮ್ಮೆಲ್ಲರ ಪಾತ್ರ ಇದೆ.

(ಗೊಂದಲ)

ಉಪಾಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**( ಸದನದ ಕಲಾಪವು ಮಧ್ಯಾಹ್ನ 1.37 ಗಂಟೆಗೆ ಭೋಜನ ವಿರಾಮಕ್ಕೆ ಮುಂದೂಡಿ ಪುನ: ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ನಿರ್ಣಯಿಸಿತು)**

ದಿನಾಂಕ:25.11.2015-03.10(21)-GM-HS

(ಭೋಜನ ವಿರಾಮದ ನಂತರ ಸದನವು ಅಪರಾಹ್ನ 3 ಗಂಟೆ 10 ನಿಮಿಷಕ್ಕೆ ಪ್ರಾರಂಭವಾಯಿತು.

ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿಯವರು ಪೀಠವನ್ನು ಅಲಂಕರಿಸಿದರು.)

* * *

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, Time waste ಆಗುತ್ತದೆಂದು, ಈಗ Home Ministerರವರು ಇನ್ನೂ ಬರಲಿಲ್ಲ. ಮಾಜಿ Home Minister ಇದ್ದಾರೆಂದು ನಾನು ಚರ್ಚೆಯನ್ನು ಚಾಲೂ ಮಾಡಿದೆನು.

ಉಪಾಧ್ಯಕ್ಷರು: ಕೃಷ್ಣಾ ಭೈರೇಗೌಡರು ಇದ್ದಾರೆ, Home Ministerನ್ನು ಕರೆಸಿ.

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಕೃಷ್ಣ ಭೈರೇಗೌಡರು ಬೇರೆ ವಿಚಾರವನ್ನು ಸಮರ್ಥನೆ ಮಾಡಬಹುದು. ಆದರೆ, ಈ ವಿಚಾರವನ್ನು ಹೇಗೆ ಸಮರ್ಥನೆ ಮಾಡುತ್ತೀರಿ ನೀವು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, Time waste ಮಾಡುವುದು ಬೇಡವೆಂದು ನಾನೇ request ಮಾಡಿದೆನು. ಲಘೂನ start ಮಾಡಿ ಅಧಿವೇಶನ ಎಂದು ಹೇಳಿದೆನು. ಏಕೆಂದರೆ ನಾವು ಮಧ್ಯಾಹ್ನ ಎರಡೂವರೆಯಿಂದ ನಾವು ಕಾಯುತ್ತಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಮುಂದಿನ ಎರಡು ಸಾಲಿನಲ್ಲಿ ಯಾರೂ ಇಲ್ಲ. ಕಿಮ್ಮನೆ ರತ್ನಾಕರ್‌ರವರು ಬೇಕಂತಲೇ ಮುಂದೆ ಬಂದು ಕುಳಿತುಕೊಂಡಿದ್ದಾರೆ. ಮುಂದಿನ ಎರಡು ಸಾಲಿನಲ್ಲಿ ಒಬ್ಬರಾದರೂ ಹಿರಿಯ ಸಚಿವರು ಇರಬೇಕಲ್ಲ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಉಪಾಧ್ಯಕ್ಷರೆ,ಕಿಮ್ಮನೆ ರತ್ನಾಕರ್‌ರವರು ಬಂದಿರುವುದನ್ನು ನೋಡಿದರೆ ಕೆಂಪೇಗೌಡರ ವಿಷಯಕ್ಕೆ ಬಂದಂತೆ ಕಾಣುತ್ತಿದೆಯಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸಚಿವರುಗಳು ಬರಬೇಕಲ್ಲ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಬರುತ್ತಾರೆ.

(ಗೊಂದಲ)

ಶ್ರೀ ಕೆ.ಷಡಕ್ಷರಿ: ಬರುತ್ತಾರೆ, ನೀವು ಮಾತನಾಡುವುದಕ್ಕೆ ಶುರು ಮಾಡಿರಿ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಹೋಗಲಿ, ನಿಮ್ಮನ್ನಾದರೂ ಕ್ಯಾಬಿನೆಟ್ ದರ್ಜೆ ಸಚಿವರನ್ನಾಗಿ ಮಾಡಿದ್ದಾರೆಯೇ? ನೀವಿಬ್ಬರು ಕ್ಯಾಬಿನೆಟ್ ದರ್ಜೆ ಸಚಿವರಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಕ್ಯಾಬಿನೆಟ್ ದರ್ಜೆ ಸಚಿವರು ಒಬ್ಬರೂ ಇಲ್ಲ. ಕ್ಯಾಬಿನೆಟ್ ಮಿನಿಸ್ಟರ್ಸ್ ಎಂದು ಯಾರಿದ್ದಾರೆ ಹೇಳಿ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಏಕೆ ಕಾಗೇರಿಯವರಿಗೆ, ನಮ್ಮ ಮೇಲೆ ವಿಶ್ವಾಸ ಕಡಿಮೆಯಿದೆಯೇ?

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಅಲ್ಲಿಯವರೆಗೆ, ಬರ ಸಂಬಂಧ ಚರ್ಚೆಯಾಗಲಿ, ನಂತರ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ವಿ.ಸುನೀಲ್‌ಕುಮಾರ್: ಕೃಷ್ಣ ಭೈರೇಗೌಡರೆ, ನೀವು ಇದನ್ನೆಲ್ಲಾ ಸಮರ್ಥನೆ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸಾರ್ವಜನಿಕ ಮಹತ್ವದ ಗಂಭೀರ ವಿಷಯಗಳಿಗೆ . . . .

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಇದನ್ನೇಕೆ ನೀವು ಸಮರ್ಥನೆ ಮಾಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಬರುತ್ತಾರೆ. ಇವರು ಮಾತನಾಡಲಿ. ಅಧಿಕಾರಿಗಳು. . . . . .

(ಗೊಂದಲ)

ಶ್ರೀ ಅಶೋಕ್ ಮಹದೇವ ಪಟ್ಟಣ್: ನೀವು ಪ್ರಾರಂಭ ಮಾಡಿ, ಐದು ನಿಮಿಷದಲ್ಲಿ ಬರುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ. ಐದು ನಿಮಿಷದಲ್ಲಿ ಅವರನ್ನು ಕರೆಸಿ. ಏಕೆಂದರೆ ನಾವು ಅರ್ಧ ಗಂಟೆಯಿಂದ wait ಮಾಡುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು: ಕೆಲವರು permission ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಸಚಿವರುಗಳಿಲ್ಲದೆ ಮಾತನಾಡುವುದು ಸರಿ ಕಾಣಲಿಕ್ಕಿಲ್ಲ. ಸರಿ ಅಲ್ಲ ಎಂದು. ಯಾರೂ ಇಲ್ಲ ಇದು ಚೆನ್ನಾಗಿ ಕಾಣುವುದಿಲ್ಲವೆಂದು ಹೇಳುತ್ತಿದ್ದೇನೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಉಪಾಧ್ಯಕ್ಷರು: ಅವರು ಮಾತನಾಡಲಿ ಬಿಡಿ. ಅವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ನನ್ನ objection ಏನೂ ಇಲ್ಲ. ಸ್ವಲ್ಪ . . .

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ವೈಫಲ್ಯತೆ ಅಥವಾ ಪೊಲೀಸ್ ಇಲಾಖೆ ವೈಫಲ್ಯತೆ ಏನೂ ಇಲ್ಲ. ಅದರ ಮೇಲೆ ಮಾತನಾಡಲಿ. ವಿವಾದಗಳನ್ನು ಸೃಷ್ಟಿ ಮಾಡುವುದು ಬೇಡ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ಏನು ಮಾತನಾಡುತ್ತೇವೆಯೋ ಅದು ನಮಗೆ ಬಿಟ್ಟ ವಿಚಾರ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ವಿವಾದಗಳನ್ನು ಸೃಷ್ಟಿ ಮಾಡುವುದು ಬೇಡ.

(ಗೊಂದಲ)

ಉಪಾಧ್ಯಕ್ಷರು: ಆಯಿತು ಬಿಡಿ, ಅವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವೇ ವಿವಾದವನ್ನು ಸೃಷ್ಟಿ ಮಾಡಿದ್ದೀರಿ, ಏನು ಮಾಡುವುದಿದೆ?

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಸತ್ಯವನ್ನು ಹೇಳುತ್ತಾರೆ, ತಾವು ಕೇಳಿ ಸ್ವಲ್ಪ. ಕಟು ಸತ್ಯವನ್ನು ಹೇಳುತ್ತಾರೆ ಕೇಳಿ ಸ್ವಲ್ಪ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ಸತ್ಯದ ಅರ್ಥವನ್ನು ನಾನು ಮಾಡಿಸುತ್ತಿರುವುದು.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಉಪಾಧ್ಯಕ್ಷರೆ, ಇದನ್ನು ಹುಟ್ಟುಹಾಕಿದ್ದೇ ಕಾಂಗ್ರೆಸ್‌ನವರು. ಅನಾವಶ್ಯಕವಾಗಿ ಕೆಂಪೇಗೌಡರನ್ನು ಎಳೆದುಕೊಂಡು ಬಂದು, ಏತಕ್ಕಾಗಿ ಕೆಂಪೇಗೌಡರ ಹೆಸರನ್ನು ತಂದಿರಿ? ಕೆಂಪೇಗೌಡರು ನಿಮಗೇನು ಮಾಡಿದರು?

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಅಪ್ಪಚ್ಚು ರಂಜನ್‌ರವರೆ ದಯಮಾಡಿ ನೀವು ಕುಳಿತುಕೊಳ್ಳುತ್ತೀರಾ? ಟಿಪ್ಪುಸುಲ್ತಾನ್ ಬಗ್ಗೆ ನೀವು ಅರ್ಥ ಮಾಡಿಕೊಂಡಿದ್ದೀರಾ? ಟಿಪ್ಪುಸುಲ್ತಾನ್ ಬಗ್ಗೆ ಅರ್ಥ ಮಾಡಿಕೊಂಡಿದ್ದರೆ ಈ ರೀತಿಯೆಲ್ಲಾ ನೀವು ಮಾತನಾಡುತ್ತಿರಲಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ನಾವು ಬೇಕಾದಷ್ಟು ಅರ್ಥ ಮಾಡಿಕೊಂಡಿದ್ದೇವೆ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮೊದಲು ಅರ್ಥ ಮಾಡಿಕೊಂಡು ಮಾತನಾಡಿ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, 3ನೇ ಕ್ಲಾಸ್, 4ನೇ ಕ್ಲಾಸ್ ಮಕ್ಕಳಿಗೆ ಕೇಳಿದರೆ ಟಿಪ್ಪುಸುಲ್ತಾನ್ ಬಗ್ಗೆ ಹೇಳುತ್ತಾರೆ. ಟಿಪ್ಪುಸುಲ್ತಾನ್ ಯಾರು ಎಂದು ಹೇಳುತ್ತಾರೆ. ಮೊದಲು ಟಿಪ್ಪುಸುಲ್ತಾನ್ ಬಗ್ಗೆ ಅರ್ಥ ಮಾಡಿಕೊಳ್ಳಬೇಕು, ಆಮೇಲೆ ಅವರ ಬಗ್ಗೆ ಮಾಡನಾಡಬೇಕು. ಟಿಪ್ಪುಸುಲ್ತಾನ್ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಯಾವುದೇ ನೈತಿಕ ಹಕ್ಕು ಇಲ್ಲ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಟಿಪ್ಪು ಹಿಂದೂ ದೇವಸ್ಥಾನಗಳನ್ನು ಹೊಡೆದು ಹಾಕಿದವ. . .

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಉಪಾಧ್ಯಕ್ಷರೆ, ಟಿಪ್ಪು ಸುಲ್ತಾನ್ ದರೋಡೆಕೋರ, ಲೂಟಿಕೋರ ಎಲ್ಲವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ನಮಗೆ ಗೊತ್ತಿದೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ಟಿಪ್ಪುಸುಲ್ತಾನ್ ಬಗ್ಗೆ ಇತಿಹಾಸ subjectನಲ್ಲಿದೆ. 3ನೇ ಕ್ಲಾಸ್ ಮಕ್ಕಳಿಗೆ ಗೊತ್ತಿದೆ. ಅವರನ್ನು ಕೇಳಿ ಟಿಪ್ಪುಸುಲ್ತಾನ್ ಯಾರು ಎಂದು, ಅವರು ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು: ಜಮೀರ್ ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಟಿಪ್ಪುಸುಲ್ತಾನ್ ದೇವಸ್ಥಾನ ಲೂಟಿ ಮಾಡಿದವನು, ದರೋಡೆಕೋರ, ಮತಾಂತರ ಮಾಡಿದವನು ಎಲ್ಲವನ್ನೂ ಅರ್ಥ ಮಾಡಿಕೊಂಡಿದ್ದೇವೆ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಆಯಿತು ಸಾರ್, ಟಿಪ್ಪು ಬಗ್ಗೆ ನೀವು ಭಾರಿ ಹೇಳಿದ್ದೀರಲ್ಲ, ನಿಮ್ಮ ಧರ್ಮದಲ್ಲಿ ಜಯಂತಿ ಮಾಡಬಹುದೇ ಎಂದು ಹೇಳಿ ಹೋಗಲಿ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಯಾರು ಸಾರ್ ಹೇಳಿದ್ದು, ನಾವು ಜಯಂತಿ ಮಾಡಿಕೊಂಡೇ ಬರುತ್ತಿದ್ದೇವೆ. ಯಾರು ನಿಮಗೆ ಹೇಳಿದ್ದು ನಾವು ಜಯಂತಿ ಮಾಡುವುದಿಲ್ಲ ಎಂದು?

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ನಿಮ್ಮ ಧರ್ಮ ಒಪ್ಪುತ್ತದೆಯೇ ಎಂದು ಹೇಳಿ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಇಷ್ಟು ಜಯಂತಿಗಳನ್ನು ನೀವು ಮಾಡಿಕೊಂಡು ಬರುತ್ತಿದ್ದೀರಲ್ಲ, ಎಂದಾದರೂ ಯಾವತ್ತಾದರೂ ಜಯಂತಿಗಳಿಗೆ ನಾವು ವಿರೋಧ ಮಾಡಿದ್ದೇವೆಯೇ? ಎಲ್ಲರೂ ಅಣ್ಣ-ತಮ್ಮಂದಿರಂತೆ ಹೋಗುತ್ತಿದ್ದೇವೆ. ಈ ರಾಜಕೀಯ ದೃಷ್ಟಿಯಿಂದ ನೀವು ಬಿಜೆಪಿಯವರು,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಆರ್.ಎಸ್.ಎಸ್‌ನವರು ರಾಜಕೀಯ ಲಾಭಕ್ಕೋಸ್ಕರ . . . ರಾಜಕೀಯ ಮಹತ್ವಕ್ಕೋಸ್ಕರ. . . . ನನಗೆ ಬಹಳ ಜನ ಬಿಜೆಪಿಯ ಸ್ನೇಹಿತರು ಹೇಳಿದರು.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ನೀವು ಏನಾದರೂ ಮಾತನಾಡಿ. ಆದರೆ, RSS ಬಗ್ಗೆ ಮಾಡನಾಡುವುದು ಸರಿಯಲ್ಲ. RSS ಬಗ್ಗೆ ನೀವೇನು ಮಾತನಾಡುವುದು? ಅವಶ್ಯಕತೆ ಇಲ್ಲದೆ ಇರುವುದನ್ನೆಲ್ಲಾ ಇವರು ಮಾತನಾಡುವುದು ಬೇಡ. ನೀವು ಮಾತನಾಡಬೇಕಾಗಿರುವುದನ್ನು ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ದಯಮಾಡಿ, ಹಿಂದೂಸ್ಥಾನದಲ್ಲಿ ಎಲ್ಲಾ ಹಿಂದೂ-ಮುಸಲ್ಮಾನ್‌ರೆಲ್ಲರೂ ಅಣ್ಣ-ತಮ್ಮಂದಿರಂತೆ ಹೋಗುತ್ತಿದ್ದೇವೆ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಇವರು ಏನು ಬೇಕಾದರೂ ಮಾತನಾಡುವಂತೆ ಇಲ್ಲ. ರಾಜಕೀಯ ಲಾಭಕ್ಕೆ ಇವರು ಏನೇನು ಮಾತನಾಡಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ನನ್ನ ನೋವನ್ನು ಮಾಧ್ಯಮದಲ್ಲಿ ವ್ಯಕ್ತಪಡಿಸಿದ್ದೇನೆ. ಮಡಿಕೇರಿಯಲ್ಲಿ ಬಿಜೆಪಿ ಪಕ್ಷದವರು ಯಾರು ತೀರಿ ಹೋದರೋ ಅವರು ನನ್ನ ಒಬ್ಬ ಅಣ್ಣನಿದ್ದಂತೆ, ನಾನು ಇದನ್ನು ಮಾಧ್ಯಮದಲ್ಲಿ ವ್ಯಕ್ತಪಡಿಸಿದ್ದೇನೆ. ನನ್ನ ಆತ್ಮೀಯರು ತೀರಿ ಹೋದರೆಂದು ನಾನು ಕಣ್ಣಲ್ಲಿ ನೀರು ಹಾಕಿದ್ದೇನೆ. ದಯಮಾಡಿ ಈ ಪ್ರಸ್ತಾಪವನ್ನು ಕೈಬಿಡಬೇಕು. ದಯಮಾಡಿ ಕೈಬಿಡಬೇಕು.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಉಪಾಧ್ಯಕ್ಷರೆ, ನಾವು ಆರ್.ಎಸ್.ಎಸ್.ನವರು, ಹಾಗಾದರೆ ಇವರು ಐ.ಎಸ್.ಎಸ್.ನವರೇ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, ಬರಗಾಲ, ಕುಡಿಯುವ ನೀರಿನ ಸಮಸ್ಯೆಯಿದೆ. ದಯಮಾಡಿ ಅದರ ಬಗ್ಗೆ ಮಾತನಾಡಲಿ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಮಾತನಾಡಲಿ, ಇವರ್‍ಯಾಕೆ ಮಧ್ಯೆ ಮಾತನಾಡುತ್ತಿದ್ದಾರೆ?

(ಗೊಂದಲ)

ಶ್ರೀ ಎಸ್.ಎನ್.ನಾರಾಯಣ ರೆಡ್ಡಿ.ಕೆ.ಎಂ.: ನೀವು ಸಹ ಮಧ್ಯೆ ಮಾತನಾಡಬೇಡಿ.

(ಗೊಂದಲ)

ಶ್ರೀ ಸಿ.ಟಿ.ರವಿ: ನೀವು ಐ.ಎಸ್.ಎಸ್.ನವರೇ? ನಾನು ಪಕ್ಕಾ ಆರ್.ಎಸ್.ಎಸ್.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಸಿ.ಟಿ.ರವಿಯವರೆ, ಟಿಪ್ಪು ಸುಲ್ತಾನ್ ಬಗ್ಗೆ ನಿಮಗೂ ಗೊತ್ತಿದೆ. ನೀವು ಪಕ್ಕಾ ಆರ್.ಎಸ್.ಎಸ್. ಅದಕ್ಕಾಗಿಯೇ ಈ ರೀತಿ ಮಾಡುತ್ತಿರುವುದು.

(ಗೊಂದಲ)

ಶ್ರೀ ಸಿ.ಟಿ.ರವಿ: ನೀವು ಪಕ್ಕಾ ಐ,ಎಸ್,ಎಸ್.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ನಾನು ಪಕ್ಕಾ ಟಿಪ್ಪು ಅಭಿಮಾನಿ. ನೀವು ಎದೆ ತಟ್ಟಿಕೊಂಡು ಆರ್,ಎಸ್,ಎಸ್, ಎಂದು ಹೇಗೆ ಹೇಳುತ್ತಿದ್ದೀರೋ ಅದೇ ರೀತಿ ನಾನು ಸಹ ಎದೆ ತಟ್ಟಿಕೊಂಡು ಹೇಳುತ್ತಿದ್ದೇನೆ, ನಾನು ಒಬ್ಬ ಮುಸಲ್ಮಾನ್, ನಾನು ಒಬ್ಬ ಟಿಪ್ಪು,

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ನಾವು secularisamನಲ್ಲಿ ನಂಬಿಕೆಯಿಟ್ಟವರು. ಎಲ್ಲಾ ಭಾಷೆಯವರು, ಎಲ್ಲಾ ಜಾತಿಯವರು ಈ ಭಾರತ ದೇಶದಲ್ಲಿರಬೇಕು, ಈ ಕರ್ನಾಟಕದಲ್ಲಿರಬೇಕು ಎಂದು ನಂಬಿರುವವರು ನಾವು.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ನಾವು ಅಣ್ಣ-ತಮ್ಮಂದಿರಂತೆ ಬಾಳುತ್ತಿದ್ದೇವೆ. ದಯಮಾಡಿ ನಿಮ್ಮಲ್ಲಿ ಕೈ ಜೋಡಿಸಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ನೀವು ಮೊದಲು ಎದೆ ಮುಟ್ಟಿಕೊಂಡು ಯಾವ ಪಾರ್ಟಿ ಎಂದು ಹೇಳಿ. ನಂತರ ಟಿಪ್ಪು ಎಂದು ಹೇಳಿ. ಆಮೇಲೆ ನಾವು ಮಾತನಾಡೋಣ

(ಗೊಂದಲ)

ಶ್ರೀ ಎಸ್.ಎನ್.ನಾರಾಯಣ ರೆಡ್ಡಿ.ಕೆ.ಎಂ.: ಅವರನ್ನು ಮೊದಲು ಕುಳಿತುಕೊಳ್ಳುವುದಕ್ಕೆ ಹೇಳಿ ಉಪಾಧ್ಯಕ್ಷರೆ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮೊದಲು ಎದೆ ಮುಟ್ಟಿಕೊಂಡು ಯಾವ ಪಾರ್ಟಿ ಎಂದು ಹೇಳಿ. ಆಮೇಲೆ ಮಾತನಾಡೋಣ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ಎದೆ ಮುಟ್ಟಿಕೊಂಡು ಹೇಳುತ್ತಿದ್ದೇನೆ. ಮೊದಲು ನಾನು ಒಬ್ಬ ಹಿಂದೂಸ್ತಾನಿ. ಈ ದೇಶದ ಮುಸಲ್ಮಾನ್ ನಾನು. ಇದನ್ನು ಎದೆ ತಟ್ಟಿಕೊಂಡು ಹೇಳುತ್ತಿದ್ದೇನೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ಎದೆ ತಟ್ಟಿ ಹೇಳುತ್ತಿದ್ದೇನೆ. ನಾನು ಯಾವ ಭಾಷಣದಲ್ಲಿ, ಯಾವ speechನಲ್ಲಿ ಬೇರೆ ರೀತಿ ಮಾತನಾಡುವುದಿಲ್ಲ. ನಾನು ಮುಸಲ್ಮಾನ್ ಇರಬಹುದು, ಅದಕ್ಕಿಂತ ಮುಂಚೆ ನಾನು ಒಬ್ಬ ಹಿಂದೂಸ್ತಾನಿ. ಒಬ್ಬ ಕನ್ನಡಿಗ ಮುಸಲ್ಮಾನ್ ಎಂದು ಹೇಳುತ್ತೇನೆ. ಕರ್ನಾಟಕದ ಮುಸಲ್ಮಾನ್ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ನಾವು ಕರ್ನಾಟಕದವರು, ನಮಗೆ ಸಿ.ಟಿ.ರವಿಯವರಿಂದ ಸರ್ಟಿಫಿಕೇಟ್ ಬೇಕಾಗಿಲ್ಲ. ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಎಸ್.ಎನ್.ನಾರಾಯಣಸ್ವಾಮಿ.ಕೆ.ಎಂ.: ಮಾನ್ಯ ಉಪಾಧ್ಯಕ್ಷರೆ, ಆರ್.ಎಸ್.ಎಸ್.ನವರು ಯಾರನ್ನು ಉದ್ದಾರ ಮಾಡಿದ್ದಾರೆ?

(ಗೊಂದಲ)

ಶ್ರೀ ಕೆ.ಷಡಕ್ಷರಿ: ಚರ್ಚೆ ಮಾಡುವುದಿದ್ದರೆ ಒಬ್ಬೊಬ್ಬರು ಚರ್ಚೆ ಮಾಡಿ. ಒಬ್ಬೊಬ್ಬರು ಮಾತನಾಡಿ. ಇಲ್ಲದಿದ್ದರೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಬೋಪಯ್ಯನವರು ಕೊಡಗಿನವರನ್ನೆಲ್ಲಾ ಮುಸ್ಲಿಮ್ಸ್ ಆಗಿ ಮಾಡಿದರು ಎಂದು ಹೇಳಿದರಲ್ಲ, ಆ ರೀತಿ ಆಗಿದ್ದರೆ ಕೊಡವ ಮುಸ್ಲಿಮ್ಸ್ ಎಷ್ಟು ಜನ ಇದ್ದಾರೆ? ನಿಮ್ಮನ್ನೇನಾದರೂ ಮಾಡಿದ್ದಾರೆಯೇ? ನಿಮ್ಮ ಮನೆಯವರನ್ನೇನಾದರೂ ಮಾಡಿದ್ದಾರೆಯೇ? ಟಿಪ್ಪು ಸುಲ್ತಾನ್‌ರವರು ಕೊಡಗಿನಲ್ಲಿದ್ದವರನ್ನೆಲ್ಲಾ ಮುಸಲ್ಮಾನರನ್ನಾಗಿ ಮಾಡಿಲ್ಲ. ಅವರು ಒಪ್ಪಿ ಕೊಳ್ಳದ ಹೊರತು ಯಾರನ್ನೂ ಬಲವಂತವಾಗಿ ಮತಾಂತರ ಮಾಡಿಲ್ಲ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಲೀಡರ್ ಮಾತನಾಡಲಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಕೊಡಗಿನಲ್ಲಿ ಬಂದು ಹೇಳಿ ಮತಾಂತರ ಮಾಡಿಲ್ಲ ಎಂದು. ಜಾತಿಯನ್ನು ನಾಶ ಮಾಡಿಲ್ಲ ಎಂದು.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಈಗಲೂ ಕೊಡಗಿನವರು ಕೊಡಗಿನವರಾಗಿದ್ದಾರೆ. ಕೊಡಗಿನ ಗೌಡರು ಗೌಡರಾಗಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ತನ್ವೀರ್ ಸೇಠ್‌ರವರು intervene ಆಗಿರುವುದರಿಂದ. . . . .

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಕೊಡಗಿನಲ್ಲಿ ಮುಸ್ಲಿಂರವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಸುಮ್ಮನೆ ಆರೋಪ ಮಾಡಬೇಡಿ. ಅವರ ಧರ್ಮವನ್ನು ಅವರು ಅನುಸರಿಸುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಉತ್ತರ ಕೊಡುವುದು ಬೇಕಾಗಿಲ್ಲ. ಸರ್ಕಾರ ಉತ್ತರ ಕೊಡುತ್ತದೆ. ನೀವು ಕುಳಿತುಕೊಳ್ಳಿ. ನೀವು ಸ್ಪಷ್ಟೀಕರಣ ಕೊಡುವುದು ಬೇಕಾಗಿಲ್ಲ.

(ಗೊಂದಲ)

ಶ್ರೀ ತನ್ವೀರ್ ಸೇಠ್: ವಿವಾದಗಳನ್ನು ಸೃಷ್ಟಿ ಮಾಡುವುದು ಬೇಡ. ಎಲ್ಲಾ ಕಾಲದಲ್ಲಿ ಏನಾಗಿದೆಯೆಂದು ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಬೇಕಾದರೆ ಟಿಪ್ಪು ಸುಲ್ತಾನ್ ಬಗ್ಗೆ ಸಂಶೋಧನೆ ಮಾಡಿ, ಯಾರೂ ಬೇಡ ಎನ್ನುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಡಾ:ಎಸ್.ರಫೀಕ್ ಅಹಮದ್: ದಯವಿಟ್ಟು ಸದನಕ್ಕೆ ತಾವು ತಪ್ಪು ಮಾಹಿತಿ ಕೊಡಬೇಡಿ. ಪ್ರಚೋದನೆ ಮಾಡಬೇಡಿ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲರಲ್ಲಿಯೂ ನಾನು ಮನವಿ ಮಾಡುತ್ತೇನೆ. ದೇಶವನ್ನು ಒಂದುಗೂಡಿಸುವ ಕೆಲಸವನ್ನು ನಾವು ಮಾಡಬೇಕು. ಇವತ್ತು ಹೊರಗಡೆ ನಡೆಯುತ್ತಿರುವುದರ ಬಗ್ಗೆ. . . . . . ಒಂದು ನಿಮಿಷ ಸ್ವಾಮಿ, ನಾನು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ ಸ್ವಾಮಿ. ನಾನೇನಾದರೂ ತಪ್ಪು ಹೇಳಿದರೆ ನನಗೂ ಬುದ್ದಿ ಹೇಳಿ, ನಾನೂ ತಿದ್ದುಕೊಳ್ಳುತ್ತೇನೆ ಸ್ವಾಮಿ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ದೇಶವನ್ನು ಒಂದು ಮಾಡಬೇಕೆಂದು ಹೇಳುವುದಾದರೆ, ಮಣಿಶಂಕರ್ ಅಯ್ಯರ್‌ರವರು ಕೊಟ್ಟ ಹೇಳಿಕೆ ಏನು? ಮಣಿಶಂಕರ್ ಐಯ್ಯರ್‌ರವರು ಹೇಳಿಕೆ ಕೊಟ್ಟ ಉದ್ದೇಶ ದೇಶವನ್ನು ಒಂದು ಮಾಡುವುದಕ್ಕೆ ಹೇಳಿಕೆ ಕೊಟ್ಟಿದ್ದೇ?

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ನಿಮ್ಮಿಂದ ನಾವು ಬುದ್ದಿ ಕಲಿಯಬೇಕಾಗಿಲ್ಲ. ಮಣಿಶಂಕರ್ ಅಯ್ಯರ್‌ರವರು ಕೊಟ್ಟ ಹೇಳಿಕೆ ಏನಿದೆ? ಮಣಿಶಂಕರ್ ಅಯ್ಯರ್‌ರವರು ಒಬ್ಬರು ಪಾಕಿಸ್ತಾನದ ಪರವಾಗಿ ಹೇಳಿಕೆ ಕೊಡುತ್ತಾರೆ. ಇವರು ದೇಶವನ್ನು ಒಂದು ಮಾಡಬೇಕೆಂದು ನಮಗೆ ಬುದ್ದಿ ಹೇಳುವುದಕ್ಕೆ ಬರುತ್ತಿದ್ದಾರೆ. ನೀವು ಮಾತನಾಡಬೇಡಿ. ಇವರು ನಮಗೆ ದೇಶಭಕ್ತಿ ಬಗ್ಗೆ ಪಾಠ ಹೇಳಿಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಅನಿರ್ವಾಣವನ್ನು support ಮಾಡಿ ಮಾತನಾಡುವ ಜನ ಇವರು.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಸನ್ಮಾನ್ಯ ಉಪಾಧ್ಯಕ್ಷರೆ, ಅವರಿಗೆಷ್ಟು ದೇಶದ ಮೇಲೆ ಪ್ರೀತಿ ಇದೆಯೋ ಅದರ ಎರಡರಷ್ಟು ಪ್ರೀತಿ ನಮಗೂ ಇದೆ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ದೇಶಭಕ್ತಿ ಏನು ಎಂದು ಗೊತ್ತಾಗಬೇಕಾದರೆ ನಮ್ಮ ಪಕ್ಷಕ್ಕೆ ಬನ್ನಿ ಹೇಳಿಕೊಡುತ್ತೇವೆ.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ಅವರೊಬ್ಬರಿಂದಲೇ ದೇಶ ನಡೆಯುತ್ತಿರುವುದು.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ನಾಚಿಕೆಯಾಗಬೇಕು ನಿಮಗೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಇದೆಲ್ಲಾ ಓಲೈಕೆ ರಾಜಕಾರಣ. ಮತ ಬ್ಯಾಂಕ್‌ನಿಂದಾಗಿ, ಮತ ರಾಜಕಾರಣದಿಂದಾಗಿ . . . . .

(ಗೊಂದಲ)

ಉಪಾಧ್ಯಕ್ಷರು: ಚರ್ಚೆ ನಡೆಯಬೇಕೋ, ಬೇಡವೋ? ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಮಣಿಶಂಕರ್ ಅಯ್ಯರ್‌ರವರ ಹೇಳಿದ ಹೇಳಿಕೆ ಏನು? ದೇಶಕ್ಕೆ ಏನು ಮಾಡಬೇಕೆಂದು ಹೊರಟಿದ್ದಾರೆ ಇವರು?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್: ಮಾನ್ಯ ಉಪಾಧ್ಯಕ್ಷರೆ, ಬಿಜೆಪಿಯವರು ಟಿಪ್ಪು ಜಯಂತಿಗೆ ಹೋಗಬಾರದು ಎಂದು ಹೇಳಿದರು. ಅವರ ಪಕ್ಷದ ಎಷ್ಟು ಜನ ಶಾಸಕರು ಟಿಪ್ಪು ಜಯಂತಿಗೆ ಹೋಗಿದ್ದರು ಎನ್ನುವ ಬಗ್ಗೆ ನಾನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಇವರಿಗೆ ಅಪ್ರಿಯವಾದಂಥ ಸಂಗತಿಗಳನ್ನು ಕೇಳುವುದಕ್ಕೆ ಮನಸ್ಸಿಲ್ಲ. ಕೇಳಿ ಮೊದಲು, ಆಮೇಲೆ ಉತ್ತರ ಕೊಡಲಿ. ಅಪ್ರಿಯವಾದ ಸಂಗತಿಗಳು ಇವರಿಗೆ ಬೇಕಾಗಿಲ್ಲ. ನಿಜವಾದ ವಸ್ತುಸ್ಥಿತಿ ಇವರಿಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ ಹೋರಾಟ ಮಾಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನಾನು yield ಆಗುವುದಿಲ್ಲ. ನಾನು continue ಮಾಡುತ್ತೇನೆ. I will continue. ನಾನು ಏನು ಮಾತನಾಡಬೇಕೆಂದು ನನಗೆ ಗೊತ್ತಿದೆ.

ಶ್ರೀ ಕೃಷ್ಣ ಭೈರೇಗೌಡ: ತಮಗಲ್ಲ ಸಾರ್, ಇಡೀ ಸದನಕ್ಕೆ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನಾನು ಪ್ರತಿಪಕ್ಷದ ನಾಯಕನಾಗಿ, ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವನು. ಯಾವ ವಿಷಯದ ಬಗ್ಗೆ ಎಷ್ಟು ಮಾತನಾಡಬೇಕೆಂದು, ಎಲ್ಲಿಯವರೆಗೆ ಮಾತನಾಡಬೇಕೆಂದು ನನಗೆ ಗೊತ್ತಿದೆ. ತನ್ವೀರ್ ಸೇಠ್ ಎದ್ದು ನಿಂತು ಮಾತನಾಡಿದ್ದರಿಂದ ಇದೆಲ್ಲ ಗೊಂದಲ ನಿರ್ಮಾಣವಾಯಿತು. I will continue Sir.

(ಗೊಂದಲ)

ಶ್ರೀ ಬಿ.ಝಡ್.ಜಮೀರ್ ಅಹ್ಮದ್‌ಖಾನ್: ಮಾನ್ಯ ಉಪಾಧ್ಯಕ್ಷರೆ, ಈ ಚರ್ಚೆ ಅಗತ್ಯವಿಲ್ಲ. ರಾಜ್ಯದಲ್ಲಿ ರೈತರು ಸಾಯುತ್ತಿದ್ದಾರೆ. ರೈತರ ಬಗ್ಗೆ ಚರ್ಚೆ ಮಾಡಿ.

(ಮುಂದು. . . . .)

25.11.2015 / 03.20(22) MPL-HS

**(ಗೊಂದಲ)**

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇಂದು ಈ ಸರ್ಕಾರ ಮಾಡಿರುವ ಗೊಂದಲಗಳ ನಿರ್ಣಯದಿಂದ ಇವತ್ತು ಈ ರೀತಿಯಾದ . . .

(ಗೊಂದಲ)

ಶ್ರೀ ತನ್ವೀರ್ ಸೇಠ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಹೆಸರನ್ನು ಪ್ರಸ್ತಾಪ ಮಾಡಿರುವುದರಿಂದ ನಾನು ಸ್ಪಷ್ಟೀಕರಣ ಕೊಡಲೇಬೇಕಾಗುತ್ತದೆ.

ಉಪಾಧ್ಯಕ್ಷರು : ತನ್ವೀರ್ ಕುಳಿತುಕೊಳ್ಳಿ. ಹೀಗೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಚರ್ಚೆ ಬಗ್ಗೆ ಮಾತನಾಡಿ. Law & order ಬಗ್ಗೆ. ಅದನ್ನು ಹೇಳುತ್ತಿದ್ದಾರೆ.

ಶ್ರೀ ತನ್ವೀರ್ ಸೇಠ್ : ನನ್ನ ಹೆಸರನ್ನು ಪ್ರಸ್ತಾಪ ಮಾಡಿರುವುದರಿಂದ . . .

ಶ್ರೀ ಕೃಷ್ಣ ಭೈರೇಗೌಡ : ನೀವು ಆಮೇಲೆ ಮಾತನಾಡಿ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಾನೂನು ವ್ಯವಸ್ಥೆ ಬಗ್ಗೆ ಯಾರು ಏನು ಬೇಕಾದರೂ ಮಾತನಾಡಲಿ. ಅದನ್ನು ಬಿಟ್ಟು ಬೇರೆ ವಿಚಾರಗಳನ್ನು ತೆಗೆದುಕೊಂಡು ಬಂದು ಕಲುಷಿತ ಮಾಡುವುದು ಬೇಡ.

ಶ್ರೀ ಜಗದೀಶ ಶೆಟ್ಟರ್ : ನಾನು yield ಆಗಿಲ್ಲ. ನಾನು ಯಾವುದಾದರೂ un-parliamentary ಶಬ್ಧ ಉಪಯೋಗ ಮಾಡಿದ್ದರೆ Speaker ಅವರಿದ್ದಾರೆ. ಅವರು ತೆಗೆಯುತ್ತಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕೃಷ್ಣ ಭೈರೇಗೌಡರೆ ಅವರು yield ಆಗಿಲ್ಲ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಅದನ್ನು ಬಿಟ್ಟು ಯಾವ ವಿಷಯವನ್ನು ಮಾತನಾಡಬೇಕು, ಏನು ಮಾತನಾಡಬೇಕು ನನಗೆ ಗೊತ್ತದು. ನೀವೇನು advise ಮಾಡುವುದು ಬೇಕಾಗಿಲ್ಲ. ನಿಮ್ಮ ಮುಖ್ಯಮಂತ್ರಿಗಳಿಗೆ, ನಿಮ್ಮ ಮಂತ್ರಿಗಳಿಗೆ advise ಮಾಡಿ. ಯಾವ ವಿಷಯವನ್ನು ಎಷ್ಟು ಮಾತನಾಡಬೇಕು, ಏನು ಮಾತನಾಡಬೇಕೆಂದು ನನಗೆ ಗೊತ್ತಿದೆ. ನಿಮಗೆ ಪ್ರೀತಿಯಾಗುವ ಸಂಗತಿಗಳನ್ನು ಹೇಳಲಾಗುವುದಿಲ್ಲ. ಅಪ್ರಿಯವಾದ ಸಂಗತಿ ನಿಮ್ಮ ಮನಸ್ಸಿಗೆ ಬರುವುದಿಲ್ಲ.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಕಾನೂನು ವೈಫಲ್ಯವಾಗಿದ್ದರೆ ಸರಿ ಮಾಡೋಣ. ಸರ್ಕಾರ ಎಲ್ಲಿಯಾದರೂ ಕಾನೂನು ಕಾಪಾಡುವುದರಲ್ಲಿ ತಪ್ಪು ಮಾಡಿದ್ದರೆ ಎಚ್ಚರಿಸಲಿ. ಅದು ಬಿಟ್ಟು ಬೇರೆ ಯಾವುದೋ ವಿಚಾರಗಳನ್ನು ತಂದು ವಿಭಾಗ ಮಾಡುವುದು ಬೇಡ.

ಡಾ: ರಫೀಕ್ ಅಹಮದ್ : ಸದನದಲ್ಲಿ ತಪ್ಪು ಮಾಹಿತಿ ಕೊಡಬೇಡಿ. ಸರಿಯಾದ ಮಾಹಿತಿ ಕೊಡಿ.

ಶ್ರೀ ಅರವಿಂದ ಲಿಂಬಾವಳಿ : ಏನು ಮಾತನಾಡಬೇಕೆಂದು ಇವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ. ಇವರಿಂದ ಹೇಳಿಸಿಕೊಳ್ಳುವುದಕ್ಕೆ ನಾವು ಸದನದೊಳಗೆ ಬಂದಿಲ್ಲ. ಅವರು ಮಾಡುತ್ತಿರುವ ಕೆಲಸವನ್ನು ಜನ ಹೇಳುತ್ತಿದ್ದಾರೆ. ಅದನ್ನು ಹೇಳುವುದಕ್ಕೆ ಬಂದಿರುವುದು. . . . (ಗೊಂದಲ). . . ಅವರಿಗೆ ಬುದ್ಧಿ ಹೇಳಲು ಹೇಳಿ.

ಶ್ರೀ ಕೃಷ್ಣ ಭೈರೇಗೌಡ : ನೀವು ಮಾಡುತ್ತಿರುವ ಕೆಲಸಕ್ಕೆ ಹೇಳುತ್ತಿರುವುದು. ನೀವು ಅಂತಹ ಕೆಲಸ ಮಾಡುತ್ತಿರುವುದಕ್ಕೆ ಹೇಳುವ ಅವಶ್ಯಕತೆ ಇದೆ. ನೀವು ಅಂತಹ ಕೆಲಸ ಮಾಡುತ್ತಿರುವುದಕ್ಕೆ ಇಡೀ ದೇಶದಲ್ಲಿ, ಕೇವಲ ಕರ್ನಾಟಕದಲ್ಲಿ ಅಲ್ಲ. ನೀವು ಬುದ್ಧಿ ಕಲಿಯಬೇಕಾಗಿರುವುದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ತಮ್ಮ permission ತೆಗೆದುಕೊಳ್ಳದೆ ಮಾತನಾಡುತ್ತಿದ್ದಾರೆ. ಮಂತ್ರಿಗಳಾಗಿ ಇವರಿಗೆ ಜವಾಬ್ದಾರಿ ಇಲ್ಲವೆ? ಒಬ್ಬರು ವಿರೋಧ ಪಕ್ಷದ ನಾಯಕರು ನಿಂತು ಮಾತನಾಡುತ್ತಿದ್ದಾರೆ. ಮಂತ್ರಿಗಳಾಗಿ ಇವರಿಗೆ ಜವಾಬ್ದಾರಿ ಇದೆಯೋ, ಇಲ್ಲವೋ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಕರ್ನಾಟಕವನ್ನು ಮಾತ್ರವಲ್ಲ, . . .(ಗೊಂದಲ). . . ನೀವು ಬುದ್ಧಿ ಕಲಿಯಬೇಕಾಗಿರುವುದು. ನಿಮಗೆ ಬುದ್ಧಿ ಕಲಿಸಿದ್ದಾರೆಯೇ ಎಂದು ಹೇಳುತ್ತೀರಲ್ಲ, ಅವರು ಬುದ್ಧಿ ಕಲಿಸಿದ್ದಾರೆ, ನೀವು ಬುದ್ಧಿ ಕಲಿಯಬೇಕಾಗಿರುವುದು. ಇಡೀ ದೇಶವನ್ನು . . . .

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಗೃಹ ಮಂತ್ರಿಗಳು ಉತ್ತರ ಕೊಡಲಿ. ಇವರಿಗೆ ಸದನ ನಡೆಸುವ ಮನಸ್ಸಿಲ್ಲ, ಅಪ್ರಿಯ ಸಂಗತಿಗಳನ್ನು ಕೇಳುವ ಮನಸ್ಸಿಲ್ಲ. ಟಿಪ್ಪು ಸುಲ್ತಾನ್ ಏನು ಗೊಂದಲ ನಿರ್ಮಾಣ ಮಾಡಿದ್ದಾನೆ, ಅದೇ ಗೊಂದಲ ಇಂದು ಸರ್ಕಾರದಲ್ಲಿ ನಿರ್ಮಾಣವಾಗಿದೆ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಬಿಹಾರದಲ್ಲಿ ಸೋತಿದ್ದೀರಿ, ನಿಮಗೆ ಇನ್ನೂ ಬುದ್ಧಿ ಬಂದಿಲ್ಲ. ಬಿಹಾರದಲ್ಲಿ ಮತ ಕೊಡದೆ ಬುದ್ಧಿ ಕಲಿಸಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : ಇಡೀ ದೇಶದಲ್ಲಿಯೇ ಕೊಟ್ಟಿದ್ದಾರೆ ಮತ.

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್) ಶಾಸಕರಾದ ಶ್ರೀ ಎನ್.ಹೆಚ್.ಕೋನರೆಡ್ಡಿ ಯವರು ಭಿತ್ತಿಪತ್ರ ಹಿಡಿದುಕೊಂಡು ಸದನದ ಬಾವಿಯಲ್ಲಿ ಮಾತನಾಡುತ್ತಿದ್ದರು.)

ಉಪಾಧ್ಯಕ್ಷರು : ಕಳಸಾ-ಬಂಡೂರಿ ಬಗ್ಗೆ ಚರ್ಚಿಸಲು ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಇದು ಮುಗಿಯಲಿ. ನಿಮ್ಮ ಸ್ಥಳಕ್ಕೆ ನೀವು ಹೋಗಿ. ನಿಮಗೂ ಅವಕಾಶ ಕೊಡುತ್ತೇನೆ. ಅದನ್ನು ತಗೊಳ್ಳಿ, ಅದನ್ನು ಕಿತ್ತುಕೊಳ್ಳಿ (ಶ್ರೀ ಎನ್.ಹೆಚ್.ಕೋನರೆಡ್ಡಿ ಯವರ ಕೈಯ್ಯಲ್ಲಿದ್ದ ಭಿತ್ತಿಪತ್ರವನ್ನು ಅವರಿಂದ ತೆಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಿದುಕೊಳ್ಳುವಂತೆ ಸೂಚಿಸಿದರು.) ಇದಾದ ಮೇಲೆ ನಿಮಗೆ ಅವಕಾಶ ಕೊಡುತ್ತೇವೆ. ನಿಮ್ಮ ಸೀಟಿಗೆ ಹೋಗಿ

.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಇರುವುದು ಇನ್ನು ಒಂದು ದಿನ ಇದೆ. ದಯಮಾಡಿ ಕೊಡಿ. ಬಹಳ important ಇದೆ.

(ಗೊಂದಲ)

ಉಪಾಧ್ಯಕ್ಷರು : ಕೋನರೆಡ್ಡಿಯವರೆ ಅವರದು ಆದ ತಕ್ಷಣ ನಿಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ ನಿಮ್ಮ ಸೀಟಿಗೆ ಹೋಗಿ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, . . .

ಉಪಾಧ್ಯಕ್ಷರು : ಈಗ ಆಯಿತು ಬಿಡಿ. ಅವರಿಗೂ ಅವಕಾಶ ಕೊಡೋಣ.

ಶ್ರೀ ಗೋವಿಂದ ಎಂ.ಕಾರಜೋಳ : ನಾವು ಹಾಗೆಯೇ ಮಾತನಾಡುತ್ತಿಲ್ಲ. Notice ಕೊಟ್ಟಿದ್ದೇವೆ, agenda ದಲ್ಲಿ ಬಂದಿದೆ. ನಿಯಮಾವಳಿಗಳ ಪ್ರಕಾರ ಮಾತನಾಡುತ್ತಿದ್ದೇವೆ.

ಉಪಾಧ್ಯಕ್ಷರು : ಆಯಿತು ಬಿಡಿ. . .(ಗೊಂದಲ) . . .ಸಮಯ ಹಾಳಾಗುತ್ತಿದೆಯಲ್ಲ ಎಂದು.

ಶ್ರೀ ಗೋವಿಂದ ಎಂ.ಕಾರಜೋಳ : ಹೇಳಿ. ಆ ತರಹ ಅಲ್ಲ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇಂದು ಎಲ್ಲಾ ವಿಚಾರಗಳ ಕುರಿತು ಬರಗಾಲದ ಬಗ್ಗೆ, ರೈತರ ಆತ್ಮಹತ್ಯೆ ಬಗ್ಗೆ, ಕಳಸಾ-ಬಂಡೂರಿ ಬಗ್ಗೆಯೂ ನಾವು ಮಾತನಾಡಲು ತಯಾರಿದ್ದೇವೆ. ಎಲ್ಲದಕ್ಕೂ ತಯಾರಿದ್ದೇವೆ. ಒಂದೊಂದು ವಿಷಯ ಅಷ್ಟೇ ಮಹತ್ವ ಇರುತ್ತದೆ.

ಉಪಾಧ್ಯಕ್ಷರು : ಕೋನರೆಡ್ಡಿಯವರೆ, ನಿಮಗೆ ಅವಕಾಶ ಕೊಡುತ್ತೇನೆ. ಇದಾದ ಮೇಲೆ ನಿಮಗೇ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೆ, ಎಲ್ಲ ನೋಟೀಸ್ ಕೊಟ್ಟಿದ್ದೇವೆ. ನಿಯಮ 69ರ ವಿಷಯಗಳು ಎಲ್ಲಾ pending ಇದೆ. ಅಧಿವೇಶನ ಇನ್ನೊಂದು ದಿನವಿದೆ. ಚರ್ಚೆ ಮಾಡುವುದು ಬೇಡವೇನು?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಉಪಾಧ್ಯಕ್ಷರು : ನಿಮ್ಮ ಸೀಟಿಗೆ ಹೋಗಿ, ನಿಮಗೂ ಅವಕಾಶ ಕೊಡುತ್ತೇನೆ. ದಯವಿಟ್ಟು ಹೋಗಿ.

(ಈ ಹಂತದಲ್ಲಿ ಶ್ರೀ ಎನ್.ಹೆಚ್.ಕೋನರೆಡ್ಡಿ ಯವರು ತಮ್ಮ ಸ್ಥಾನಕ್ಕೆ ತೆರಳಿದರು.)

ಉಪಾಧ್ಯಕ್ಷರು : ಈಗ ಚರ್ಚೆಯಾದರೂ ವಿವಾದ ಆಗುವುದು ಬೇಡ. ವಿವಾದವಾಗುವ ರೀತಿಯಲ್ಲಿ ಮಾತನಾಡುವುದು ಬೇಡ. ಸುಮ್ಮನೆ ಏಕೆ? ದಯವಿಟ್ಟು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಏನಾಗಿದೆ, ಟಿಪ್ಪು ಸುಲ್ತಾನ್ ಹೆಸರು ತೆಗೆದುಕೊಂಡರೆ ಹೊರಗಡೆಯೂ ಗೊಂದಲ, ಸದನದಲ್ಲಿಯೂ ಗೊಂದಲ.

(ಗೊಂದಲ)

ಡಾ: ರಫೀಕ್ ಅಹಮದ್ : ಹೊರಗಡೆಯೂ ನೀವೇ ಗೊಂದಲ ಮಾಡುತ್ತಿರುವುದು, ಒಳಗಡೆಯೂ ನೀವೇ ಗೊಂದಲ ಮಾಡುತ್ತಿರುವುದು. ಗೊಂದಲ ಸೃಷ್ಟಿ ಮಾಡುತ್ತಿರುವವರು ನೀವು.

(ಗೊಂದಲ)

ಶ್ರೀ ಬಿ.ಜಡ್.ಜಮೀರ್ ಅಹ್ಮದ್‌ಖಾನ್ : ಗೊಂದಲ ಸೃಷ್ಟಿ ಮಾಡುತ್ತಿರುವವರು ನೀವು. ಎಲ್ಲೂ ಗೊಂದಲ ಇಲ್ಲ. ಅದನ್ನು ಸೃಷ್ಟಿ ಮಾಡುತ್ತಿರುವವರು ನೀವು.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ನನಗೆ ಅವರು ಮಾತನಾಡಲು ಬಿಡುವುದಿಲ್ಲ.

ಶ್ರೀ ತನ್ವೀರ್ ಸೇಠ್ : ಇವರಿಗೆ ಚರ್ಚೆನೇ ಬೇಕಾಗಿಲ್ಲ.

ಶ್ರೀ ಬಿ.ಜಡ್.ಜಮೀರ್ ಅಹ್ಮದ್‌ಖಾನ್ : ಈ ಚರ್ಚೆಯನ್ನು ಬಿಟ್ಟು ಹಾಕಿ ಜಗದೀಶ್ ಶೆಟ್ಟರ್ ಸಾಹೇಬರೆ.

ಶ್ರೀ ತನ್ವೀರ್ ಸೇಠ್ : Law & order ವಿಚಾರ ಮಾತನಾಡಬೇಕಾದರೆ ಎಲ್ಲೆಲ್ಲಿ ವೈಫಲ್ಯತೆ ಆಗಿದೆ, ಅದನ್ನು ಹೇಳಲಿ.

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ ಅವರು ಮಾತನಾಡುತ್ತಾರೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಟಿಪ್ಪು ಸುಲ್ತಾನ್ ಬಗ್ಗೆ ಯಾರಾದರೂ expert ಅನ್ನು ನೇಮಕ ಮಾಡಿ ಒಂದು ಸದನ ಸಮಿತಿಯನ್ನು ನೇಮಕ ಮಾಡಿ. ನಮ್ಮ ವಾದವನ್ನೂ ಮಂಡನೆ ಮಾಡುತ್ತೇವೆ, ಅವರ ವಾದವೂ ಮಂಡನೆ ಆಗಲಿ. ಇಂದು ಟಿಪ್ಪು ಸುಲ್ತಾನ್ ಬಗ್ಗೆ ಏನು ಗೊಂದಲವಿದೆ, ಏನು ಆ ವ್ಯಕ್ತಿಯ ಬಗ್ಗೆ ಗೊಂದಲವಿದೆ, ಇಲ್ಲಿ ನೋಡಿ, record ಬೇಕಲ್ಲ, record ಅನ್ನೂ produce ಮಾಡಲು ನಾವು ತಯಾರಿದ್ದೇವೆ. ಅದಕ್ಕೆ ಒಂದು Expert Committee ಯನ್ನು ನೇಮಕ ಮಾಡಲಿ. ಸದನ ಸಮಿತಿ ನೇಮಕ ಮಾಡಲಿ. ನಮ್ಮ ವಾದವನ್ನೂ ಮಂಡನೆ ಮಾಡೋಣ, ಅವರ ವಾದವನ್ನು ಮಂಡನೆ ಮಾಡಲಿ. ಇದು ಹಳೆ ಗೆಜೆಟ್. ಅದರಲ್ಲಿ ಎಲ್ಲಾ ವಿಚಾರವೂ ಇವೆ. ಎಲ್ಲವನ್ನು detail ಆಗಿ ಹೇಳಬೇಕಾದರೆ ಅರ್ಧ ಗಂಟೆಯಾದರೂ ಬೇಕಾಗುತ್ತದೆ.

ಉಪಾಧ್ಯಕ್ಷರು : ಬೇಡ, ಬೇಡ.

ಶ್ರೀ ಜಗದೀಶ ಶೆಟ್ಟರ್ : ಇನ್ನೂ ಹಲವಾರು ದಾಖಲೆಗಳಿವೆ. ಇವೆಲ್ಲವನ್ನೂ ಮಂಡನೆ ಮಾಡುತ್ತೇವೆ. ದಾಖಲೆ ಇಲ್ಲದೆ ನಾವು ಮಾತನಾಡುವುದಿಲ್ಲ. ಇವತ್ತು ಅದರ ಬಗ್ಗೆ ಸಾಕಷ್ಟು ದಾಖಲೆಗಳಿವೆ. ಹೀಗಾಗಿ ನಾವು ಹೇಳುವುದು, ಈ ರೀತಿಯ ವಿವಾದಾತ್ಮಕ ವ್ಯಕ್ತಿಯ ಬಗ್ಗೆ ಆಚರಣೆ ಮಾಡುವ ನಿರ್ಧಾರ ಕೈಗೊಂಡರು. ನಾನು ಆಗಲೇ ಹೇಳುತ್ತಿದ್ದೆ. ಇನ್ನೆರಡು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ಮತ್ತೆ ನಮ್ಮ ಬೋಪಯ್ಯನವರು, ಅಪ್ಪಚ್ಚು ರಂಜನ್‌ರವರು ಎಲ್ಲಾ records ತಂದಿದ್ದು, detail ಆಗಿ ಮಾತನಾಡುತ್ತಾರೆ. ನಾನು ಒಂದೇ ಒಂದು ಹೇಳುವಂತಹುದು ಕನಕ ಜಯಂತಿ ಆಚರಣೆ ಮಾಡಿದೆವು, ಕನಕದಾಸರ ಬಗ್ಗೆ ಯಾರದಾದರೂ ಪ್ರಶ್ನೆ ಇದೆಯೆ? ಬಸವಣ್ಣನವರ ಜಯಂತಿ ಆಚರಣೆ ಮಾಡುತ್ತಿದ್ದೇವೆ, ಸರ್ಕಾರಕ್ಕೆ ಅವರ ಬಗ್ಗೆ ಅಪಸ್ವರ ಇದೆಯೆ? ಅಂಬೇಡ್ಕರ್ ಜಯಂತಿ ಆಚರಣೆ ಮಾಡುತ್ತೇವೆ, ಅದರ ಬಗ್ಗೆ ಯಾರದಾದರೂ ಅಪಸ್ವರ ಇದೆಯೆ? ಸಂಗೊಳ್ಳಿ ರಾಯಣ್ಣ, ವಾಲ್ಮೀಕಿ ಜಯಂತಿ ಆಚರಣೆ ಮಾಡುತ್ತೇವೆ, ಸರ್ಕಾರಿ ಕಾರ್ಯಕ್ರಮ ಆಚರಣೆ ಮಾಡುತ್ತೇವೆ, ಯಾರದಾದರೂ ಅಪಸ್ವರ ಇದೆಯೆ?

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಈ ರೀತಿ ಅಪಸ್ವರ ಇರುವಂತಹ ವ್ಯಕ್ತಿಗಳ ಬಗ್ಗೆ ಆಚರಣೆ ಮಾಡಿ ಅದರಿಂದ ಏನಾಗುತ್ತದೆ?

ಶ್ರೀ ಬಿ.ಜಡ್.ಜಮೀರ್ ಅಹ್ಮದ್‌ಖಾನ್ : ಇದಕ್ಕೆ ಅಪಸ್ವರ ನೀವೇ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಮಡಿಕೇರಿಯಲ್ಲಿ ಈ ಆಚರಣೆ ಮಾಡಲು ಹೋಗಿ 4 ಜನರು ಹತ್ಯೆಯಾಗಿದೆ. ಈ ರೀತಿಯಾದ ವಾತಾವರಣವಿದ್ದಾಗ ಸರ್ಕಾರ ಕಾಳಜಿ ತೆಗ ೆದುಕೊಳ್ಳಬೇಕು.

ಶ್ರೀ ದಿನೇಶ್ ಗುಂಡುರಾವ್ : ಮಾನ್ಯ ಉಪಾಧ್ಯಕ್ಷರೆ, ಅವರು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಜನತೆಗೆ ಈ ರೀತಿಯ ತಪ್ಪು ಮಾಹಿತಿ ಹೋಗಬಾರದು. ವಿರೋಧ ಪಕ್ಷದ ನಾಯಕರೆ, ತಾವು ದಯವಿಟ್ಟು ತಪ್ಪು ಮಾಹಿತಿಯನ್ನು ಕೊಡಬೇಡಿ.

ಶ್ರೀ ಜಗದೀಶ ಶೆಟ್ಟರ್ : ಈ ಆಡಳಿತ ವ್ಯವಸ್ಥೆ, ಕಾನೂನು ಸುವ್ಯವಸ್ಥೆ ಹೇಗಿದೆ ಎಂದರೆ, ಆ ರೀತಿಯಾದ ಪರ ಮತ್ತು ವಿರೋಧ ಹೇಳಿಕೆಗಳು, ಮೆರವಣಿಗೆ ನಡೆಯುವಂತಹುದು. . .

ಶ್ರೀ ದಿನೇಶ್ ಗುಂಡುರಾವ್ : ವಿರೋಧ ಪಕ್ಷದ ನಾಯಕರೆ, ತಾವು ದಯವಿಟ್ಟು ತಪ್ಪು ಮಾಹಿತಿಯನ್ನು ಕೊಡಬೇಡಿ. 4 ಜನ ಏನೂ ತೀರಿ ಹೋಗಿಲ್ಲ ಅಲ್ಲಿ. ಇಬ್ಬರು ತೀರಿ ಹೋಗಿರುವುದು. ಏಕೆ ಇಷ್ಟ ಬಂದಂತೆ ಹೇಳುತ್ತೀರಿ? ಬೋಪಯ್ಯ ಅವರಿಗೂ ಕೂಡಾ ಗೊತ್ತಿದೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನಾನು ಯಾರಿಗೂ yield ಆಗಿಲ್ಲ. ನಾನೇನಾದರೂ un-parliamentary ಶಬ್ಧ ಬಳಸಿದ್ದರೆ ಸಭಾಧ್ಯಕ್ಷ note ಮಾಡಲಿ. ನಾನು yield ಆಗಿಲ್ಲ. ಆಮೇಲೆ ಹೇಳಿ ನೀವು.

ಉಪಾಧ್ಯಕ್ಷರು : ದಿನೇಶ್ ಕುಳಿತುಕೊಳ್ಳಿ, ಅವರು ಮಾತನಾಡಲಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಉಪಾಧ್ಯಕ್ಷರೆ, ಅವರು wrong information ಕೊಡುತ್ತಿದ್ದಾರೆ. ಅವರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸತ್ಯಕ್ಕೆ ದೂರವಾರ ಮಾತುಗಳನ್ನು ಹೇಳಿದರೆ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್ : ನೋಡಿ ನಾನು ಮಾತನಾಡುತ್ತಿದ್ದೇನೆ. ನನ್ನದೇನಾದರೂ ತಪ್ಪು ಇದ್ದರೆ ಹೇಳಿ. ನಾನು un-parliamentary ಶಬ್ಧ ಪ್ರಯೋಗ ಮಾಡಿದ್ದರೆ ತೆಗೆಯಿರಿ.

ಶ್ರೀ ದಿನೇಶ್ ಗುಂಡೂರಾವ್ : ಸತ್ಯಕ್ಕೆ ದೂರವಾರ ಮಾತುಗಳನ್ನು ಹೇಳಿದರೆ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ಈ ರೀತಿ ಜಯಂತಿ ಮಾಡುವ ಸಂದರ್ಭದಲ್ಲಿ . . .

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ವಿರೋಧ ಪಕ್ಷದ ನಾಯಕರೆ, . . .

ಶ್ರೀ ಅರವಿಂದ ಲಿಂಬಾವಳಿ : ಸದನದಲ್ಲಿ ಅನೇಕ ಸಂಗತಿ ಹೇಳುತ್ತೀರಿ, ಅವೆಲ್ಲಾ ಸತ್ಯ ಇವೆಯೆ? ಸುಮ್ಮನೆ ಸತ್ಯಕ್ಕೆ ದೂರವಾದುದು ಎಂದರೆ, . . . (ಗೊಂದಲ). . . record ಇರುತ್ತದಲ್ಲ, ಅದನ್ನು ನಮಗೂ ಹೇಳಬೇಕಪ್ಪ. ಹೇಳಿ ಸ್ವಲ್ಪ ನಿಮಗೂ ಜ್ಞಾನೋದಯ ಆಗಬಹುದು ಆಗ.

ಉಪಾಧ್ಯಕ್ಷರು : ದಿನೇಶ್ ಕುಳಿತುಕೊಳ್ಳಿ.

ಶ್ರೀ ದಿನೇಶ್ ಗುಂಡೂರಾವ್ : ಇಬ್ಬರು ಜನರು ತೀರಿ ಹೋಗಿರುವುದು. ಸುಮ್ಮನೆ ನೀವು ಅದನ್ನು ಬರಿ ಪ್ರಚೋದನೆ ಮಾಡಬೇಡಿ. ತಪ್ಪು ಮಾಹಿತಿ ಕೊಡಬೇಡಿ. ಬರಿ ಬೆಂಕಿಗೆ ತುಪ್ಪ ಹಾಕುವ ಕೆಲಸವಾಗಿದೆ ನಿಮ್ಮದು. 4 ಜನ ಸತ್ತಿಲ್ಲ. ಬರಿ ಬೆಂಕಿಗೆ ಪೆಟ್ರೋಲ್ ಹಾಕುವುದೇ ಕೆಲಸವಾಗಿದೆ ನಿಮ್ಮದು.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಸಾವಿರಾರು ಜನ ಸತ್ತು ಹೋಗಿದ್ದಾರೆ ಎನ್ನುತ್ತೀರಲ್ಲ, ನೀವು ಯಾರನ್ನಾದರೂ ಸಾಯಿಸಿದ್ದೀರಾ? ಹೇಳಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ಆಯಿತು, ಇಲ್ಲ ಎನ್ನುವುದಕ್ಕೆ ಸ್ಪಷ್ಟೀಕರಣ ಕೊಡಿ ನೀವು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ನಾವು ಸ್ಪಷ್ಟೀಕರಣ ಕೊಡುತ್ತೇವೆ. ಅದರೆ ನೀವೂ ಕೂಡಾ ಎಲ್ಲ ಗೊತ್ತಿದೆ ನಿಮಗೆ. ನೀವು ಬಂದು ಹೋಗಿದ್ದೀರಿ. ಗೊತ್ತಿದ್ದರೂ ಕೂಡಾ ಏಕೆ ಸುಳ್ಳು ಹೇಳುತ್ತಿದ್ದೀರಿ ತಾವು.

ಶ್ರೀ ಜಗದೀಶ ಶೆಟ್ಟರ್ : ನೋಡಿ, ನೀವು ಅದರ ಬಗ್ಗೆ ಸ್ಪಷ್ಟೀಕರಣ ಕೊಡಿ. ಬೇಡ ಎನ್ನುವುದಿಲ್ಲ. ಗೃಹ ಮಂತ್ರಿಗಳು ಇರಲಿ, ನೀವು ಸರ್ಕಾರದಿಂದ ಉತ್ತರ ಕೊಡಿ.

ಶ್ರೀ ದಿನೇಶ್ ಗುಂಡೂರಾವ್ : ಸ್ಪಷ್ಟ ಮಾಹಿತಿ ನಿಮ್ಮ ಬಳಿಯೂ ಇದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಸ್ಪಷ್ಟೀಕರಣ ಕೊಡಿ.

ಶ್ರೀ ಅಪ್ಪಚ್ಚು ರಂಜನ್ : ನಮ್ಮ ಬಳಿ ದಾಖಲೆ ಇವೆ.

ಶ್ರೀ ದಿನೇಶ್ ಗುಂಡೂರಾವ್ : ಬೋಪಯ್ಯ ಅವರಿಗೂ ಗೊತ್ತಿದೆ, ಅಪ್ಪಚ್ಚು ಅವರಿಗೂ ಗೊತ್ತಿದೆ. ಮತ್ತೆ ಏಕೆ ಇವರು...

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : Celebration ಅನ್ನು 5000 ಜನ ಸೇರಿ ಮಾಡಿದರು. ನೀವು 150 ಜನ ಸೇರಿ ಗಲಭೆ ಮಾಡಿದಿರಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ನಿಮ್ಮ ಹೇಳಿಕೆಯಿಂದಲೇ ಗಲಭೆಯಾಗಿದ್ದು. . . .(ಗೊಂದಲ). . . ಕೊಡಗಿನ ಮುಸಲ್ಮಾನರು ಏನೂ ಮಾಡಲಿಲ್ಲ. ಅದು ಎಲ್ಲದಕ್ಕೂ ಮೂಲ ಕಾರಣ ನೀವೇ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : ನೀವು ಮಾಡಿರುವ ಕೆಲಸ ಅದು. ನಿಮ್ಮಿಂದಲೇ ಆಗಿರಬೇಕು. ಅದಕ್ಕೆ . . .

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ : ನಿಮ್ಮ ಖಾತೆ ಬದಲಾವಣೆ ಆಯಿತು ಎಂದು ಗಲಭೆ ಇಡಿಸಿದ್ದೀರೇನು? ನಿಮ್ಮ ಉಸ್ತುವಾರಿ ಹೋಯಿತು.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಕುಶಾಲನಗರ ಮತ್ತು ವಿರಾಜಪೇಟೆಯಲ್ಲಿ ನಾನೇ ಸ್ವತ: ಎಸ್.ಪಿ ಜೊತೆ ಮಾತನಾಡಿದ್ದೇನೆ. ನಾವು ಮೆರವಣಿಗೆಯನ್ನು ರದ್ದು ಮಾಡುತ್ತೇವೆ. ಅವರು ಬಂದ್ ವಾಪಸ್ಸು ತೆಗೆದುಕೊಳ್ಳಲಿ ಎಂದು. ಮಡಿಕೇರಿಯಲ್ಲಿ ವ್ಯವಸ್ಥಿತವಾಗಿ ಮಾಡಿರುವುದು ಇದು. ವ್ಯವಸ್ಥಿತವಾಗಿ ನಡೆದಿರುವುದು ಇದು. ಯಾವುದೇ ಗೊಂದಲವಿಲ್ಲದೆ ನಡೆಯುತ್ತಿತ್ತು.

ಉಪಾಧ್ಯಕ್ಷರು : ಆಯಿತು ನೀವು ಕುಳಿತುಕೊಳ್ಳಿ. ಎಷ್ಟು ಸಲ ಹೇಳುವುದು?

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಎಲ್ಲಿ ಆಕ್ರೋಶವಿರುತ್ತದೆ ಅಲ್ಲಿ ಸರ್ಕಾರವೂ ಸ್ವಲ್ಪ ಕಾಳಜಿ ವಹಿಸಬೇಕಾಗುತ್ತದೆ. ಅಲ್ಲಿ ಪರ, ವಿರೋಧ ಹೇಳಿಕೆಗಳೆಲ್ಲವೂ ಇದ್ದಾಗ ಮೆರವಣಿಗೆ ಮಾಡಬಾರದೆಂದು ಇದ್ದಾಗೂ ಸಹಿತ ಮಡಿಕೇರಿಯ ಡಿ.ಸಿ. ರವರು ರಜೆ ಹಾಕಿ ಹೋದರು. ಎಸ್.ಪಿ ಯಾವುದೋ ಬ್ಯಾಟ್‌ಮಿಂಟನ್ನೋ ಮತ್ತೊಂದು ಆಡಲು ಹೋದರು.

ಶ್ರೀ ಕೆ.ಜೆ.ಜಾರ್ಜ್ : ನೋಡಿ ಉಪಾಧ್ಯಕ್ಷರೆ, ಸುಮ್ಮನೆ ಇಲ್ಲದ. . .

ಶ್ರೀ ಜಗದೀಶ ಶೆಟ್ಟರ್ : ನೋಡಿ ನಾನು ಹೇಳುತ್ತೇನೆ. ನೀವು ಇಲ್ಲವೆಂದು ಹೇಳಿ.

ಶ್ರೀ ಕೆ.ಜೆ.ಜಾರ್ಜ್ : ಎಸ್.ಪಿ ಅಲ್ಲಿಯೇ ಇದ್ದರು. 3-4 ದಿನ ಮೊದಲು All India Sports ಗೆ official ಆಗಿ ಕಳುಹಿಸಿದ್ದೆವು.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಹೇಳುವಾಗ ಅವರು ಹೇಳಲಿ. ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಬಿಡುವುದಿಲ್ಲ. ಉತ್ತರ ಹೇಳುವಾಗ ನಿಮ್ಮ ಬಳಿ ಏನು material ಇದೆ, ಎಲ್ಲವನ್ನೂ ಹೇಳಿ. ಈಗ ವಿರೋಧ ಪಕ್ಷದ ನಾಯಕರನ್ನು ಮಾತನಾಡಲು ಬಿಡಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ.ಜಾರ್ಜ್ : ನೀವು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುವಾಗ ನಾವು ಹೇಳಬೇಕಾಗು ತ್ತದೆ. ಮಡಿಕೇರಿಯಲ್ಲಿ 4 ಜನ ಸತ್ತಿದ್ದಾರೆ, ಎಸ್.ಪಿ ಆಟ ಆಡಲಿಕ್ಕೆ ಹೋದರು ಎಂದರೆ...

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ಆಯಿತು, ನೀವು ಇಲ್ಲ ಎಂದು ಹೇಳಿ ಆಮೇಲೆ. ಇಲ್ಲ ಎಂದು ಹೇಳಿ ನೀವು ಉತ್ತರ ಹೇಳುವಾಗ. ಸರ್ಕಾರ ಇದ್ದೀರಿ ನೀವು. ಅದು ಬಿಟ್ಟು ಈ ರೀತಿ ಅಡ್ಡಿ ಮಾಡುವುದಲ್ಲ. ನಮ್ಮ ಮಾಹಿತಿಯ ಪ್ರಕಾರ ನಾವು ಹೇಳುತ್ತೇವೆ, ನಿಮ್ಮ ಮಾಹಿತಿಯ ಪ್ರಕಾರ ನೀವು ಉತ್ತರ ಕೊಡಿ. ಸರ್ಕಾರದ ಬಳಿ ಅಧಿಕೃತ ದಾಖಲೆ ಇರುತ್ತದೆಯಲ್ಲ.

ಶ್ರೀ ಕೆ.ಜೆ.ಜಾರ್ಜ್ : ನಾವು ಉತ್ತರ ಹೇಳುವುದು ನಾಳೆಯಾಗುತ್ತದೆ. ಇವತ್ತೆಲ್ಲಾ ನೀವು ಪ್ರಚಾರ ತೆಗೆದುಕೊಳ್ಳುತ್ತೀರಿ. ನೀವು ಪ್ರಚಾರಕ್ಕೋಸ್ಕರವಾಗಿ ಭಾಷಣ ಮಾಡುತ್ತಿದ್ದೀರಿ ಅಷ್ಟೆ. ಏನು ಗಲಭೆಯಾಗುತ್ತಿದೆ, ಅದಕ್ಕೆ ಇನ್ನಷ್ಟು ಪೆಟ್ರೋಲ್ ಹಾಕುತ್ತಿದ್ದೀರಿ ಅಷ್ಟೆ. ನಿಮಗೆ ಶಾಂತಿ ಸಮಾಧಾನ ಬೇಕಾಗಿಲ್ಲ. ನಿಮಗೆ ಕಾನೂನು ಸುವ್ಯವಸ್ಥೆ ಬೇಕಾಗಿಲ್ಲ.

ಶ್ರೀ ಜಗದೀಶ ಶೆಟ್ಟರ್ : ನಿಮಗೆ ಬೇಕಾಗಿಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ : ನೋಡಿ ನೀವು ವಿರೋಧ ಪಕ್ಷದವರ ಬಾಯಿ ಮುಚ್ಚಿಸಲಾಗು ವುದಿಲ್ಲ. ಸಂಖ್ಯಾ ಬಲದ ಮೇಲೆ ಗಲಭೆ ಮಾಡಬಹುದು, ಆದರೆ ಹೊರಗೆ ಜನ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ : ನೋಡಿ ಇವರೊಬ್ಬರು ಜವಾಬ್ದಾರಿಯುತ ಮಂತ್ರಿಯಾಗಿ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆಂದರೆ ಏನು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಜೆ.ಜಾರ್ಜ್ : ಜವಾಬ್ದಾರಿ ಬಗ್ಗೆ ನೀವು ಕಲಿಸಬೇಕಾಗಿಲ್ಲ. ನನಗೆ ಗೊತ್ತಿದೆ.

(ಮುಂದು. . . )

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 (23) 3.30 NM SSD

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಿ.ಸುನಿಲ್ ಹೆಗಡೆ: ನೀವು ಇಷ್ಟೆಲ್ಲ ಹೇಳುತ್ತೀರಲ್ಲ ಕುಟ್ಟಪ್ಪ ಸತ್ತಾಗ ಕಾಲು ಜಾರಿ ಬಿದ್ದ ಎಂದು ಇಲ್ಲಿ ಹೇಳಿಕೆ ಕೊಡುತ್ತೀರಲ್ಲ, ಏನು ಗೊತ್ತಿತ್ತು ನಿಮಗೆ. . . .

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಮ್ಮ ಮಂತ್ರಿಗಳು ಎಲ್ಲಾ ಸೇರಿ ಅವರ ಮನೆಗೆ ಹೋಗಿದ್ದೇವೆ. ಯಾರೇ ಸತ್ತರೂ ನಮಗೆ ದು:ಖ ಇದೆ. ಯಾವುದೇ ಸಾವು ಆಗಬಾರದು. ಅದೇ ರೀತಿಯಲ್ಲಿ ಒಬ್ಬ ಮುಸ್ಲಿಂ ಯುವಕ ಸತ್ತಿದ್ದಕ್ಕೂ ನಮಗೆ ದು:ಖ ಇದೆ. ನೀವು ಏನು ಅಲ್ಲಿಗೆ ಹೋಗಿದ್ದೀರಾ? ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬ ಪೂಜಾರಿಯನ್ನು ಸಾಯಿಸಿದ್ದಿರಿ ಅದಕ್ಕೆ 10 ಲಕ್ಷ ರೂ. ಕೊಟ್ಟರಲ್ಲ ಅದನ್ನು ಯಾರು ಮಾಡಿದ್ದು? ಪೂಜಾರಿ ಹೇಗೆ ಸತ್ತಿದು, ನೀವೇ ಸಾಯಿಸುವುದು ನೀವೇ ದುಡ್ಡು ಕೊಡುವುದಾ?

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನೀವು ದೊಡ್ಡದಾಗಿ ಟಿ.ವಿ.ಯವರಿಗೆ ಹೇಳಿಕೆ ಕೊಟ್ಟರಲ್ಲ, ನಿಮಗೆ ನಾಚಿಕೆಯಾಗಬೇಕು. ನಿಮ್ಮ ಹೇಳಿಕೆಯಿಂದಲೇ ಗಲಾಟೆಯಾದದ್ದು. ಬೆಂಗಳೂರಿನಲ್ಲಿ ಕೂತುಕೊಂಡು ಹೇಳಿದಿರಲ್ಲ. . . (ಗೊಂದಲ) ಎರಡುವರೆ ವರ್ಷ ಗೃಹ ಇಲಾಖೆಯನ್ನು ಹಾಳು ಮಾಡಿದ್ದೇ ನೀವು. ರಬ್ಬರ್ ಸ್ಟ್ಯಾಂಪ್ Home Minister ಆಗಿದ್ದಿರಿ. ನಿಮ್ಮ ದೌರ್ಬಲ್ಯ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೆ, He is a Minister. As a Minister he should have patience. ಅವರು ಏನು ಹೇಳುತ್ತಾರೆ ಕೇಳಿ ಉತ್ತರ ಕೊಡಲಿ. ಪ್ರತಿ ಕ್ಷಣವೂ ಎದ್ದು ನಿಂತುಕೊಂಡು ಮಾತನಾಡುವುದು ಒಳ್ಳೆಯದಲ್ಲ. ದಯವಿಟ್ಟು ನೀವು ಕುಳಿತುಕೊಳಿ. ಅವರು ಮಾತನಾಡಿದ ಮೇಲೆ ನಿಮಗೆ ಮಾತನಾಡುವುದಕ್ಕೆ ಅವಕಾಶವಿದೆ ನೀವು ಮಾತನಾಡಿ. You are the Government. ಕೇಳುವುದು ಮೊದಲು ಕಲಿತುಕೊಳ್ಳಿ. ಕೇಳುವ ತಾಳ್ಮೆ ಇರಲಿ ನಿಮಗೆ.

ಶ್ರೀ ಕೆ.ಜೆ. ಜಾರ್ಜ್: ನಮಗೂ ಒಂದು ಅವಕಾಶ ಕೊಡಿ. ನೀವು ಮಾತನಾಡುತ್ತಿರುವುದು ಕಾನೂನು ಸುವ್ಯವಸ್ಥೆ ವಿಚಾರ.

ಶ್ರೀ ಗೋವಿಂದ ಎಂ. ಕಾರಜೋಳ: ನಿಮಗೆ ಉತ್ತರ ಕೊಡುವುದಕ್ಕೆ ಅವಕಾಶವಿದೆ. ನೀವು ಸರ್ಕಾರ ಉತ್ತರ ಕೊಡಿ. ನಾವು ಆರೋಪ ಮಾಡಿದ್ದಕ್ಕೆ ಉತ್ತರ ಕೊಡಿ.

ಶ್ರೀ ಕೆ.ಜೆ. ಜಾರ್ಜ್: ತಪ್ಪು ಮಾಹಿತಿಯನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವುದು. ಆರೋಪಕ್ಕೆ ಉತ್ತರ ಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಉತ್ತರ ಕೊಡುವಾಗ ಹೇಳಿ ಈಗಲೇ ಸರಿ ಮಾಡಬೇಕಾಗಿಲ್ಲ ಅದನ್ನು. ಸಂಸದೀಯ ನಡವಳಿಕೆ ಏನು? ಕೇಳಿದ ನಂತರ ಸರ್ಕಾರ ಉತ್ತರ ಹೇಳಬೇಕು.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಕಾರಜೋಳರವರೆ ಮಾನ್ಯ ವಿರೋಧ ಪಕ್ಷದ ನಾಯಕರ ಹತ್ತಿರ ಎಲ್ಲ ಮಾಹಿತಿ ಇದೆ ಆದರೂ ಏಕೆ ತಪ್ಪು ಮಾಹಿತಿ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ ಅಷ್ಟೆ. ನಾಲ್ಕು ಜನ ತೀರಿಹೋಗಿದ್ದಾರೆಂದು ಏಕೆ ಹೇಳಬೇಕು? ಅವಶ್ಯಕತೆ ಇಲ್ಲ. ನಿಮಗೆಲ್ಲ ಗೊತ್ತಿದೆ. ನೀವು ಬಂದು ಹೋಗಿದ್ದೀರಿ. ಆದ್ದರಿಂದ ಸರಿಯಾದ ಮಾಹಿತಿ ಇಟ್ಟುಕೊಂಡು ಅವರು ಮಾತನಾಡಲಿ. ಸರ್ಕಾರ ಉತ್ತರ ಕೊಡುತ್ತದೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಡಿ.ಕೆ. ಶಿವಕುಮಾರ್: ಮನ್ಯ ಕಾರಜೋಳರವರೆ, ನಾವು ಅಲ್ಲಿ ಕೂತು ಮಾತನಾಡಬೇಕಾದರೆ ಮಧ್ಯ ನಿಮ್ಮವರು ಯಾರೂ embarrass ಆಗದೇ ನೀವು ಹೇಳಿದ ಹಾಗೆ ಕೇಳುತ್ತಿದ್ದರಾ? So, Minister is giving some clarification.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ: ನೀವು ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಉತ್ತರ ನಾಳೆ ಬೆಳಿಗ್ಗೆ ಕೊಡುತ್ತಾರೆ, ಈಗ ಸದ್ಯ ನೀವು ಹೇಳುವುದೆಲ್ಲ ಒನ್ ಸೈಡ್ ಆಗುವುದು ಬೇಡ. ಅವರು ಸುಳ್ಳು ಮಾಹಿತಿ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ನೀವು ಸುಳ್ಳು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಅವರ Advocate ಆಗುತ್ತಿದ್ದೀರಿ. ಅವರು ಏನು ಹೇಳಿದರೆಂದು ನೀವು ಕೇಳಿಸಿಕೊಂಡಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ಇಬ್ಬರು ಸತ್ತಿದ್ದಾರೆ, ನಾಲ್ಕು ಜನ ಸತ್ತಿದ್ದಾರೆಂದು ಹೇಳುತ್ತಾರೆ. ಸತ್ಯಕ್ಕೆ ದೂರವಾಗಿದ್ದಾಗ ನಾವು ಹೇಳುತ್ತೇವೆ ಹೊರತು, ಉಳಿದದ್ದು ನಾವು ಉತ್ತರದಲ್ಲಿ ಹೇಳುತ್ತೇವೆ.

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚು (ರಂಜನ್) : ನೀವು ಉತ್ತರ ಕೊಡುವಾಗ ಹೇಳಿ ಸ್ವಾಮಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನೀವು ಉತ್ತರ ಕೊಡುವಾಗ ಹೇಳಿ ಯಾರು ಬೇಡವೆಂದು ಹೇಳುತ್ತಾರೆ. ಇವತ್ತು ಈ ರೀತಿಯಾದ ಘಟನೆ ಅಲ್ಲಿ ಜಯಂತಿ ಆಚರಣೆ ಮಾಡುವ ಸಂದರ್ಭದಲ್ಲಿ ಯಾವ ರೀತಿಯ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಾತಾವರಣ ಅಲ್ಲಿ ಕೊಡಗು ಹಾಗೂ ಮಡಿಕೇರಿ ಜಿಲ್ಲೆಯಲ್ಲಿತ್ತು? ಆ ಸಂದರ್ಭದಲ್ಲಿ ಜಿಲ್ಲಾಡಳಿತ ಏನು ಪ್ರಿಕಾಷನ್ ತೆಗೆದುಕೊಳ್ಳಬೇಕಾಗಿತ್ತು ಅದರಲ್ಲಿ ವಿಫಲವಾಗಿದೆ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ಬಹುಶ: ನನಗನ್ನಿಸುವ ಮಟ್ಟಿಗೆ ಅವತ್ತು D.C.ಯವರು ರಜ ಹಾಕಿ ಹೋಗಿದ್ದರು. D.C.ಯವರು ಇರಲಿಲ್ಲ. ಏಕೆ ರಜ ಹಾಕಿದ್ದರು ಅಂತಹ ಉದ್ವಿಗ್ನವಾದ ವಾತಾವರಣ ಇದ್ದಾಗ D.C. ಇರಬೇಕಾಗುತ್ತದೆ. SP ನೂ ಇಲ್ಲ ಎನ್ನುವಂಥದ್ದು ನಮಗಿರುವಂತಹ ಮಾಹಿತಿ. ಇದ್ದರೆ ಇದ್ದಾರೆಂದು ಹೇಳಲಿ. ಹಿರಿಯ ಅಧಿಕಾರಿಗಳಾದ B.K. Sing ಅವರಿಂದ investigation ಮಾಡಿಸಿದರು. investigation ಮಾಡಿ ಒಂದು ವರದಿಯನ್ನೂ ಕೊಟ್ಟಿದ್ದಾರ. ಆ report ಬಹಿರಂಗ ಪಡಿಸಲಿ. ಯಾರು ಅಧಿಕಾರಿ ತಪ್ಪೆಸಗಿದ್ದಾರೆ, ಜಿಲ್ಲಾಡಳಿತ ವೈಫಲ್ಯವಾಗಿದೆ ಎನ್ನುವಂತಹ ಮಾಹಿತಿ ಇದೆ. ವೈಫಲ್ಯ ಇದ್ದರೆ ಯಾವ ಅಧಿಕಾರಿಯಿಂದ ವೈಫಲ್ಯವಾಗಿದೆ, ಅವರ ತಪ್ಪಿನಿಂದ ಈ ಘಟನೆ ನಡೆದಿದೆ ಅಂತಹವರ ಬಗ್ಗೆ ನೀವು action ತೆಗೆದುಕೊಳ್ಳಿ. ಅವತ್ತು ವಿಶ್ವ ಹಿಂದು ಪರಿಷತ್ತಿನ [VHP] ನಾಯಕರಾದ ಕುಟ್ಟಪ್ಪ ಆ ಗಲಭೆಯಲ್ಲಿ ಈಗ ಇರುವ ಮಾಹಿತಿ ಪ್ರಕಾರ ಆತನ ತಲೆಗೆ ಕಲ್ಲು ಹೊಡೆದು ಆತ ಜೀವ ಉಳಿಸುವುದಕ್ಕೆ ಆಸ್ಪತ್ರೆ ಹತ್ತಿರ ಹೋದಾಗ ಜಾರಿ ಬಿದ್ದಿದ್ದು ಎಂದು ಹೇಳುತ್ತಾರೆ.

ಶ್ರೀ ಬಿ.ಜಡ್. ಜಮೀರ್ ಅಹಮದ್ ಖಾನ್: ಕುಟ್ಟಪ್ಪ ಬಿಲ್ಡಿಂಗ್‌ನಿಂದ ಜಾರಿ ಬಿದ್ದು ಸತ್ತಿರುವುದು. ಅವತ್ತೇ ಬಿ.ಕೆ. ಸಿಂಗ್ ಐ ಜಿ ಯವರು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇದು ನನಗಿರುವಂತಹ ಮಾಹಿತಿ ಅದು ಇಲ್ಲವೆಂದು ಅವರು ಹೇಳಲಿ.

(ಗೊಂದಲ)

ಶ್ರೀ ಕೆ. ಜೆ. ಜಾರ್ಜ್: ಅವರು ಸದನವನ್ನು ತಪ್ಪು ದಾರಿಗೆ ಎಳೆದುಕೊಂಡು ಹೋಗುತ್ತಿದ್ದಾರೆ. ಕುಟ್ಟಪ್ಪರವರು ಕಲ್ಲು ಹೊಡೆದು ಸತ್ತಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಸರ್ಕಾರದ ರಿಪೋರ್ಟ್ ಏನಿದೆ ಹೇಳಿ. ಈ ರೀತಿಯಾದ ಘಟನೆ ನಡೆದಾಗ ಸರ್ಕಾರದ ಗೃಹ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಕುಟ್ಟಪ್ಪನ ಸಾವು ಆಕಸ್ಮಿಕ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಾವು natural death ಎಂದು suddenಆಗಿ ಹೇಳಿದರು. ಅಲ್ಲಿ ಜಾರಿ ಬಿದ್ದಿದ್ದಾನೆಂದು ಹೇಳಿದರು. ನಾನೂ ಮೊನ್ನೆ ನಮ್ಮ ಶಾಸಕರ ಜೊತೆ ಅಲ್ಲಿಗೆ ಹೋಗಿದ್ದೆ. ಮಾನ್ಯ ಬೋಪಯ್ಯನವರು ಹಾಗೂ ಮಾನ್ಯ ಅಪ್ಪಚ್ಚುರಂಜನ್‌ರವರ ಜೊತೆ ಅಲ್ಲಿಗೆ ಹೋಗಿ ವಿಸಿಟ್ ಮಾಡಿದೆ. ಆ ಆಸ್ಪತ್ರೆಯ ಪಕ್ಕ ಎಲ್ಲಿ ಬಾಡಿ ಬಿದ್ದಿತ್ತು ಅಲ್ಲಿ ಹೋಗಿ ನೋಡಿದಾಗ ಏನು ಗಟರ್ ಮೋರಿ ಇದೆ ಆ ಫೋಟೋ ನೋಡಿದೆ ಆ ಮೋರಿಯಲ್ಲಿ ಬಾಡಿ ಬಿದ್ದಿದೆ. ಹಾಗಾದರೆ ಮೇಲಿನಿಂದ ಆ ಬಾಡಿ ಕೆಳಗೆ ಬಿದ್ದಿದ್ದರೆ ಅಥವಾ ಅವರು ಜೀವಂತವಾಗಿ ಅಲ್ಲಿ ಬಿದ್ದಿದ್ದರೆ ಆ ಮೋರಿಯಲ್ಲಿ ಬೀಳುವುದಕ್ಕೆ ಸಾಧ್ಯವೇ ಇಲ್ಲ. ಬೇಕಾದಷ್ಟು ಸ್ಟಡಿ ಮಾಡಿಕೊಳ್ಳಲಿ. ಈ ರೀತಿ ವಸ್ತು ಸ್ಥಿತಿ ಇದ್ದಂತಹ ಸಂದರ್ಭದಲ್ಲಿ ಇವತ್ತು ಮರ್ಡರ್ ಮಾಡಿದ್ದಾರೆಂದು ನಾವು ಹೇಳಿದ್ದೇವೆ. ಇದು ಆಕಸ್ಮಿಕ ಸಾವಲ್ಲ, ಜಾರಿ ಬಿದ್ದು ಸತ್ತಿದ್ದಲ್ಲ ಎಂದು ಹೇಳಿದ್ದೇವೆ. ಹಾಗಾದರೆ ಘಟನೆ ಆಗಿ ಅರ್ಧ ಗಂಟೆಯಲ್ಲಿಯೇ ಇವರು ಇಲ್ಲ ಇದು ಆಕಸ್ಮಿಕ ಸಾವು ಕಾಲು ಜಾರಿ ಬಿದ್ದು ಸತ್ತಿರುವುದು ಎಂದು reaction ಬಂತು. ಅಲ್ಲಿ ನೀವು ನೋಡಿ, ಕಾಲು ಜಾರಿ ಬೀಳುವುದಕ್ಕೆ ಸಾಧ್ಯವೇ ಇಲ್ಲ. ಒಂದು ವೇಳೆ ಅಲ್ಲಿ ಬಾಡಿ ಬಿದ್ದಿದ್ದರೆ ಪಕ್ಕದಲ್ಲಿಯೇ ಬೀಳಬೇಕು, ಮೋರಿಯಲ್ಲಿ ಬೀಳುವುದಕ್ಕೆ ಸಾಧ್ಯವಿಲ್ಲ. ಕಾಂಪೌಂಡ್ ವಾಲ್ ಮೇಲಿಂದ ಬಿದ್ದರೂ ಅಲ್ಲಿ ಬೀಳುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಪರಿಸ್ಥಿತಿ ಇದ್ದಾಗ ತಕ್ಷಣವೇ ಒಂದು ನಿರ್ಣಯಕ್ಕೆ ಬರುವುದು. ಹಿಂದೆ ಡಿ.ಕೆ. ರವಿ ತೀರಿಕೊಂಡಾಗ ಆತ್ಮಹತ್ಯೆ ಎಂದು ಹೇಳಿಬಿಟ್ಟರು. ಅದೇ ರೀತಿ ಇವತ್ತು ಕುಟ್ಟಪ್ಪ. ಇದರ ಬಗ್ಗೆ ಹೈ ಲೆವಲ್ ತನಿಖೆಯಾಗಲಿ.

ಶ್ರೀ ಕೆ.ಜೆ. ಜಾರ್ಜ್: ಡಿ.ಕೆ. ರವಿ ಕೇಸ್ CBI ಗೆ ಕೊಟ್ಟಿದ್ದೇವೆ ಏನಾಯಿತು? ನೀವು ಹೇಳಿದ ಪ್ರಕಾರ CBIಗೆ ಕೊಟ್ಟಿದ್ದೇವೆ ಪುನ: ಅದನ್ನೇ ಚರ್ಚೆ ಮಾಡುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್: ನಾನು ಚರ್ಚೆ ಮಾಡುತ್ತಿಲ್ಲ, ಅವತ್ತು ನೀವು reaction ಕೊಟ್ಟಿದ್ದು ಹೇಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್: CBIಗೆ ಕೊಟ್ಟು ಒಂದು ವರ್ಷವಾಗಿದೆ ಏನಾಯಿತು. ಮತ್ತೆ ಅದನ್ನೇ ಇಲ್ಲಿ ಪ್ರಸ್ತಾಪ ಮಾಡುತೀರಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ತನಿಖೆ ಪೂರ್ಣವಾಗಿ ಬರಲಿ. ಇವತ್ತು ಈ ರೀತಿಯಾದ ವಿಚಾರಗಳನ್ನು ಮುಚ್ಚಿಡುವುದು ಈ ರೀತಿ ಘಟನೆಗಳನ್ನು ಮುಚ್ಚಿ ಹಾಕುವುದು ತಾವು ಆಡಳಿತ ವೈಫಲ್ಯವನ್ನು ಮುಚ್ಚಿ ಹಾಕಿ ಕೊಳ್ಳುವ ಸಲುವಾಗಿ ಈ ರೀತಿಯ ಘಟನೆಗಳಿಗೆ ಸ್ಕೋಪ್ ಕೊಟ್ಟು ಇಡೀ ನಾಡಿನಲ್ಲಿ ಇದರ ಬಗ್ಗೆ ವಾದ ಪ್ರತಿವಾದ ಚರ್ಚೆ ಮಾಡುವುದು ಪ್ರಾರಂಭವಾಯಿತು. ಈ ರೀತಿಯಾದ ಒಂದು ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಟಿಪ್ಪುಸುಲ್ತಾನ್ ಹಿಂದುಗಳ ಮತಾಂತರ ಮತ್ತೊಂದು ಮಾಡಿರುವುದರ ಬಗ್ಗೆ ದಾಖಲೆಗಳಿವೆ. ಚಿತ್ರದುರ್ಗದಲ್ಲಿ ಮದಕರಿ ನಾಯಕ ಅಲ್ಲಿದ್ದಂತಹ ಜನರನ್ನು ಸೈನಿಕರನ್ನು ಕರೆದುಕೊಂಡು ಬಂದು ಕೊಂದು ಹಾಕಿದ್ದು ಕ್ರೂರ ಹಿಂಸೆ ಕೊಟ್ಟಿದ್ದು ಇದೆ. ಕ್ರಿಶ್ಚಿಯನ್ ಚರ್ಚ್‌ಗಳನ್ನು ಧ್ವಂಸ ಮಾಡಿರುವುದು, ಕ್ರಿಶ್ಚಿಯನ್ ಸಮುದಾಯಕ್ಕೆ ಕ್ರೂರ ಹಿಂಸೆ ಕೊಟ್ಟಿರುವುದು ದಾಖಲೆಗಳಿವೆ. ಮೊನ್ನೆ ಜಯಂತಿ ಆಚರಣೆ ಸಂದರ್ಭದಲ್ಲಿ ಕ್ರಿಶ್ಚಿಯನ್ ಕಮ್ಯುನಿಟಿ ಅಸೋಸಿಯೇಷನ್‌ನವರು ಇದನ್ನು ವಿರೋಧ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದು ನಮ್ಮ ಗಮನಕ್ಕೆ ಬಂದಿದೆ. ಹಾಗಾದರೆ ಇಷ್ಟೊಂದು ಜನ ಇದರ ಬಗ್ಗೆ ವಿರೋಧ ಇದ್ದಾಗ ಯಾವುದೋ ಒಂದು ಸಂಘ ಸಂಸ್ಥೆ ಅಲ್ಲ ಈ ರೀತಿ ಎಲ್ಲೆಲ್ಲಿ ಅವರಿಗೆ ತೊಂದರೆಯಾಗಿದೆ ಅವರೆಲ್ಲರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದು ನಿಮಗೆ ಏಕೆ ಬೇಕಾಗಿತ್ತು ಎಂದು ನಾನು ನಿಮಗೆ ಪ್ರಶ್ನೆ ಕೇಳುತ್ತಿದ್ದೇನೆ. ಸುಮ್ಮನೆ ಮೈಮೇಲೆ ಹಾಕಿಕೊಳ್ಳುವುದು ಏಕೆ ಬೇಕಾಗಿತ್ತು? ಶಾಂತ ರೀತಿಯಿಂದ ಒಳ್ಳೆಯ ರೀತಿಯಿಂದ ಸೌಹಾರ್ದ ರೀತಿಯಲ್ಲಿ ಕರ್ನಾಟಕದ ಜನ ಇರಲಿಕ್ಕೆ ನಿಮಗೆ ಮನಸ್ಸು ಇಲ್ಲವೆ ಹೇಗೆ? ಈ ರೀತಿ ವಾತಾವರಣ ಕಲುಷಿತಗೊಳಿಸುವ ಕೆಲಸವನ್ನು ರಾಜ್ಯ ಸರ್ಕಾರ ನಮ್ಮ ಮುಖ್ಯ ಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ಮಾಡುತ್ತಿದ್ದಾರೆ. ಹೀಗಾಗಿ ಇದನ್ನು ನಾನು ಖಂಡಿಸುತ್ತಿದ್ದೇನೆ. ಇದು ಸರ್ಕಾರ ನಡೆಸುವಂತಹ ರೀತಿ ಅಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಡಿಕೇರಿ ಘಟನೆ ಇರಬಹುದು, ಮಂಗಳೂರು ಘಟನೆ ಇರಬಹುದು, ಮಡಿಕೇರಿ ಘಟನೆ ಕುಟ್ಟಪ್ಪನದಂತೂ ನಾನು ಹೇಳುತ್ತೇನೆ, ಇದನ್ನು CBIಗೆ ಕೊಡಿ CBI ಎಂದರೆ ಬೇಡವೆಂದು ಹೇಳುತ್ತೀರಿ. ಕೊನೆಗೆ ನ್ಯಾಯಾಂಗ ತನಿಖೆಗಾದರೂ ಕೊಡಿ. ಪಕ್ಕದಲ್ಲಿ ಮೈಸೂರು D.C. ಅವರ ಮುಖಾಂತರ ತನಿಖೆ ಮಾಡಿಸುತ್ತಿದ್ದೀರಿ. ನಾನು ಹೇಳುತ್ತೇನೆ,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇದರಿಂದ ನ್ಯಾಯ ಸಿಗುವುದಿಲ್ಲ. ನ್ಯಾಯಾಂಗ ತನಿಖೆಗೆ ಆದೇಶ ಕೊಡಿ. ಕುಟ್ಟಪ್ಪನ ಸಾವು ಮರ್ಡರೋ ಮತ್ತೊಂದೋ ಅದರಲ್ಲಿ ಯಾರು involve ಆಗಿದ್ದಾರೆ, ಈಗಾಗಲೇ ತಾವು ಇಬ್ಬರನ್ನು ಅರೆಸ್ಟ್ ಮಾಡಿದ್ದೀರಿ. ಹಾಗಾದರೆ ಆಕಸ್ಮಿಕ ಸಾವಾಗಿದ್ರೆ ನೀವು ಅರೆಸ್ಟ್ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಈ ರೀತಿ ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲಿ ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು, ಅದು ನ್ಯಾಯಾಂಗ ತನಿಖೆಯೇ ಆಗಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಮಂಗಳೂರು ಮತ್ತು ಇನ್ನಿತರೆ ಬೇರೆ ಬೇರೆ ಕಡೆಗಳಲ್ಲಿ ಏನು ಘಟನೆಗಳು ಆಗಿವೆ ಪ್ರಶಾಂತ್ ಪೂಜಾರಿದು ಆಯಿತು, ಮತ್ತೊಂದು ಘಟನೆ ಇವೆಲ್ಲವುಗಳ ಬಗ್ಗೆ ತನಿಖೆಯಾಗಬೇಕು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮುಂದು. . . .

25-11-2015/3-40/24/HRV/SSD

ಶ್ರೀ ಜಗದೀಶ್ ಶೆಟ್ಟರ್(ಮುಂ.ವ)

ಇವತ್ತು ಜಗತ್ತಿನಲ್ಲಿ ಉಗ್ರಗಾಮಿಗಳ ಉಪಟಳ ಜಾಸ್ತಿಯಾಗುತ್ತಿದೆ. ಮೊನ್ನೆ ಪ್ಯಾರಿಸ್‌ನಲ್ಲಿ ಆದ ಘಟನೆ ಗೊತ್ತಿದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಇವತ್ತು ರಾಜ್ಯ ಸರ್ಕಾರ ಕೂಡ, ಇಡೀ ದೇಶದಲ್ಲಿ ಈಗಾಗಲೇ ಉಗ್ರಗಾಮಿಗಳ ಬಗ್ಗೆ ಎಚ್ಚರಿಕೆಯನ್ನು ಏನು ತೆಗೆದುಕೊಳ್ಳಲಾಗುತ್ತಿದೆಯೋ, ಇವತ್ತು ಐ.ಎಸ್.ಐ.ಎಸ್. ಹ್ಯಾಂಡ್ಸ್ ಎಲ್ಲಾ ಕಡೆ ಕಾಣುತ್ತಿದೆ, ಉಗ್ರಗಾಮಿಗಳ ನಿಗ್ರಹದ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಲಾಗಬೇಕಾಗುತ್ತದೆ, ಇಲ್ಲದಿದ್ದರೆ ನಾಳೆ ಯಾವುದೋ ಒಂದು ಸಂದರ್ಭದಲ್ಲಿ ಉಗ್ರಗಾಮಿಗಳು ನಮ್ಮ ರಾಜ್ಯದಲ್ಲಿ ಅಶಾಂತಿಯನ್ನು ಉಂಟು ಮಾಡುವಂಥ ಸಾಧ್ಯತೆಗಳಿವೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಬಂದಂಥ ಸುದ್ದಿಯನ್ನು ನೋಡಿದರೆ ಮೂರು ಜನರು ಐ.ಎಸ್.ಐ.ಎಸ್. ಟ್ರೈನಿಂಗ್‌ಗೆ ಹೋಗಿದ್ದು ಹೊರಗಡೆ ಬಂದಿರುವಂಥ ಸುದ್ದಿಯಿದೆ. ಈ ರೀತಿಯಿದ್ದಂಥ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಈ ಒಂದು ಜಯಂತಿಯನ್ನು ಆಚರಣೆ ಮಾಡುವ ಹಿನ್ನಲೆಯನ್ನಿಟ್ಟುಕೊಂಡು ಇವತ್ತು ಗೊಂದಲ ಉಂಟುಮಾಡುವಂಥದ್ದು, (X X X X ) ಮಾಡುವಂಥದ್ದನ್ನು ಈ ಸರ್ಕಾರ ಮಾಡುತ್ತಿದೆ, ಬೇರೆ ಯಾವುದೇ ಉದ್ದೇಶವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ತನ್ವೀರ್ ಸೇಠ್:-ಮಾನ್ಯ ಉಪಾಧ್ಯಕ್ಷರೆ, ನನ್ನ ಆಕ್ಷೇಪಣೆಯಿದೆ. (X X X X ) ಹಾಗಾದರೆ ಬೇರೆ ಜಯಂತಿಗಳನ್ನೆಲ್ಲವನ್ನು ಮಾಡುವುದು (X X X X )

ಉಪಾಧ್ಯಕ್ಷರು:- (X X X X ) ಎನ್ನುವುದನ್ನು ಕಡತದಿಂದ ತೆಗೆದು ಹಾಕಿದೆ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಉಪಾಧ್ಯಕ್ಷರೆ, ಭಟ್ಕಳದಲ್ಲೇನು ಹಿಂದೆ ಘಟನೆಗಳಾಗುತ್ತಿದ್ದವೋ ಆ ಗಲಭೆಗಳ ಹಿನ್ನಲೆಯಲ್ಲಿ ಅವತ್ತು ನ್ಯಾಯಾಧೀಶರಾದಂಥ ಜಗನ್ನಾಥ ಶೆಟ್ಟಿ ನೇತೃತ್ವದಲ್ಲಿ ಎನ್‌ಕ್ವೈರಿ ಕಮಿಷನ್ ಮಾಡಲಾಗಿತ್ತು. ಆ ಜಗನ್ನಾಥಶೆಟ್ಟಿಯವರು ಕೊಟ್ಟಿರುವ ವರದಿ ಸರ್ಕಾರದ ಸುಪರ್ದಿಯಲ್ಲಿದೆ. ನಾನು ಒಂದು ಮಾತನ್ನು ಹೇಳುತ್ತೇನೆ, ಇವತ್ತು ರಾಜ್ಯದಲ್ಲಿ ಕೋಮು ಸೌಹಾರ್ದತೆ ಉಳಿಯಬೇಕು,



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಯಾರೇ ಉಗ್ರಗಾಮಿಗಳಿರಲಿ, ಎಂಥವರೇ ಇರಲಿ, ಈ ರೀತಿ ಅಶಾಂತಿಯನ್ನು ಯಾರು ನಿರ್ಮಾಣ ಮಾಡುತ್ತಾರೋ ಅಂಥವರನ್ನು ಬಗ್ಗುಬಡಿಯಬೇಕು. ಎಲ್ಲಿಂದ ಯಾರು ಬರುತ್ತಾರೆ ಏನು ಎನ್ನುವಂಥದ್ದು, ಎಲ್ಲವೂ ಆ ಜಗನ್ನಾಥಶೆಟ್ಟಿಯವರ ಒಂದು ವರದಿಯಲ್ಲಿ ಎಲ್ಲವೂ ಅಡಕವಾಗಿದೆ. ಅದರನ್ವಯ ನೀವೇನಾದರೂ ಕ್ರಮಗಳನ್ನು ಕೈಗೊಂಡರೆ ಬಹುಷ: ನನಗನ್ನಿಸುತ್ತದೆ, ಇವೆಲ್ಲಾ ಇಂಥ ಶಕ್ತಿಗಳನ್ನು ಧಮನಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಹೀಗಾಗಿ ನ್ಯಾಯಮೂರ್ತಿ ಜಗನ್ನಾಥಶೆಟ್ಟಿ ಆಯೋಗದ ವರದಿಯೇನಿದೆಯಲ್ಲ ಅದು ಬಹಳ ಮುಖ್ಯವಾದಂಥದ್ದು. ಅದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಂಡು ಅದರ ಪ್ರಕಾರ ಕ್ರಮವನ್ನು ಕೈಗೊಳ್ಳಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ. ಇನ್ನು ಮಡಿಕೇರಿ ವಿಚಾರವಾಗಿ, ಅಲ್ಲಿ ಕೇರಳದಿಂದ ಯಾರು ಬಂದರು, ಏನು ಎನ್ನುವಂಥದ್ದರ ಬಗ್ಗೆ ಅವರು detail

( X X X X ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ)

ಆಗಿ ಮಾತನಾಡುತ್ತಾರೆ. ಅದಕ್ಕಾಗಿ precautions ಅವತ್ತು ತೆಗೆದುಕೊಳ್ಳಬೇಕಾಗಿತ್ತು. ಆದರೆ ಅವರು ತೆಗೆದುಕೊಳ್ಳಲಿಲ್ಲ. ಈಗ ಈ popular front ಮತ್ತೊಂದು front ಎಂದು ಈಗೆಲ್ಲಾ ಬಂದುಬಿಟ್ಟಿವೆ. ಅಂಥವರಿಗೆ ನೀವು ಇವತ್ತು encourage ಮಾಡಿದರೆ ಬಹಳ ಸಮಸ್ಯೆಗಳು ಇರುತ್ತವೆ. ಇತ್ತೀಚೆಗೆ ನೀವು ಮೈಸೂರಿನಲ್ಲಿ ಕೇಸ್‌ನ್ನು withdraw ಮಾಡಿದಿರಿ, popular front ದು. ಆ popular front ದು ಕೇಸ್‌ನ್ನು ನೀವು withdraw ಮಾಡುತ್ತೀರಿ. ಆ ಕೇಸ್ withdraw ಮಾಡಿದ್ದರಿಂದ ಏನು ಅನಾಹುತಗಳಾಗಿದೆ ಎನ್ನುವಂಥದ್ದು ಇವತ್ತು ಉದಾಹರಣೆಗಳಾಗಿವೆ.

ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್:-Popular front ದವರು ಇರಲಿ, ಈ ಆರ್.ಎಸ್.ಎಸ್. ನವರನ್ನು ಬ್ಯಾನ್ ಮಾಡಬೇಕು ಮೊದಲು. Popular front ಬಗ್ಗೆ ಹೇಳುತ್ತೀರಿ, ಹಾಗಾದರೆ ಆರ್.ಎಸ್.ಎಸ್. ನವರನ್ನು ಏನು ಮಾಡಬೇಕು?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್:-ನಾವು Popular front ಎಂದು ಬೇರೆಯದ್ದಲ್ಲ. ಅಮಾಯಕರ ಮೇಲೆ ಇದ್ದಂಥ ದಾವೆಗಳನ್ನು ಹಿಂಪಡೆದುಕೊಂಡಿರುವಂಥದ್ದು. ಇದೇನು ಹೊಸದೇನಲ್ಲ. ಹಿಂದೆ ಯಾರ ಯಾರ ಮೇಲೆ, ನಮ್ಮ ಜನಾರ್ಧನ ರೆಡ್ಡಿಯವರ ಮೇಲೆ ಇದ್ದಂಥ ದಾವೆಗಳನ್ನೇ ಹಿಂದಕ್ಕೆ ಪಡೆದುಕೊಂಡಿರುವುದು. ಅಮಾಯಕ ಯುವಕರು......ಮುಧೋಳ್‌ದಲ್ಲಿ ನಡೆದಂಥದ್ದು, ಶಿವಮೊಗ್ಗದಲ್ಲಿ ನಡೆದಂಥದ್ದು,

( ಗೊದಲ )

ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-ಮಾನ್ಯ ಉಪಾಧ್ಯಕ್ಷರೆ, ಜಗದೀಶ್ ಶೆಟ್ಟರ್‌ರವರ ಬಗ್ಗೆ ನನಗೆ ಬಹಳ ಗೌರವವಿತ್ತು. ಅವರನ್ನು ಬಹಳ secular ಎಂದು ನಾನು ತಿಳಿದುಕೊಂಡಿದ್ದೆ. ಅವರು ಬಿ.ಜೆ.ಪಿ. ಯಲ್ಲಿದ್ದರೂ ಕೂಡ ಜಗದೀಶ್ ಶೆಟ್ಟರ್‌ರವರು ಬಹಳ secular ಎಂದು ನಾನು ಭಾವಿಸಿದ್ದೆ. ಅವರ ಬಗ್ಗೆ ನನಗೆ ಹೆಚ್ಚಿನ ಗೌರವವಿತ್ತು. ಇವತ್ತು ಎಲ್ಲೋ ಒಂದು ಕಡೆ...

ಶ್ರೀ ಜಗದೀಶ್ ಶೆಟ್ಟರ್:-ನೀವು secular ಏನು ಎಂದು ನಮಗೆ ಗೊತ್ತಿದೆ. ನಮಗೇನು ನೀವು ಹೇಳುವುದು ಬೇಡ. ನೀವೇನು ನಮ್ಮ ಬಗ್ಗೆ ಏನು ಮಾತನಾಡುವುದು ಬೇಡ.

( ಗೊಂದಲ )

ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-ಸಾರ್, ಒಂದ್ನಿಮಿಷ,

ಉಪಾಧ್ಯಕ್ಷರು:-ವಿರೋಧ ಪಕ್ಷದ ನಾಯಕರು ಈಲ್ಡ್ ಆಗಿಲ್ಲ. ತಾವು ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ:-ಜೆ.ಡಿ.ಎಸ್. secular ಇರುವುದರಿಂದ ಅವರು secular ಎಂದುಕೊಂಡಿದ್ದೆ. ಇವತ್ತು ಗೊತ್ತಾಯಿತು he is most communal. ಹೆಸರು ಮಾತ್ರ secular party but he is a communal.

ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-ಕುಟ್ಟಪ್ಪರವರು accidentally dead ಎಂದು IG ಹೇಳಿದ್ದಾರೆ, ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಸಿ.ಬಿ.ಐ. ತನಿಖೆಯಾಗಬೇಕೆಂದು ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಕೇಳಿಕೊಂಡಿದ್ದಾರೆ. ನಾನು ಅದಕ್ಕೆ ಆಗಲಿ ಸಿ.ಬಿ.ಐ. ತನಿಖೆ, ಅದಕ್ಕೆ ಅಭ್ಯಂತರವಿಲ್ಲವೆಂದು ಹೇಳುತ್ತೇನೆ. ಇನ್ನೊಂದು ದು:ಖದಿಂದ ನಾನು ಹೇಳುವುದೇನೆಂದರೆ, ಅಲ್ಲಿ ಒಬ್ಬ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹುಡುಗ ಸುಹೇಲ್ ಎನ್ನುವ 24 ವರ್ಷದ ಹುಡುಗನನ್ನು ಗುಂಡು ಹೊಡೆದು ಸಾಯಿಸಿದ್ದಾರೆ. ಅವನ ಬಗ್ಗೆ ಜಗದೀಶ್ ಶೆಟ್ಟರ್‌ರವರು ತನಿಖೆ ಮಾಡಬೇಕೆಂದು ಕೇಳಿಕೊಳ್ಳಲಿಲ್ಲ. ಆ ಬಗ್ಗೆ ತನಿಖೆಯಾಗಬೇಕೆಂದು ಕೇಳಿಕೊಳ್ಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:-ಅದು ಕೂಡ ತನಿಖೆಯಾಗಲಿ. ಅಲ್ಲಿ ನಡೆದಂಥದ್ದೆಲ್ಲದರ ಬಗ್ಗೆ ತನಿಖೆಯಾಗಲಿ.

ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್:-ಒಬ್ಬ ಮುಸ್ಲಿಂ ಹುಡುಗನನ್ನು ಗುಂಡು ಹೊಡೆದು ಸಾಯಿಸಿದ್ದಾರೆ. ಅವನ ಸಾವಿನ ಬಗ್ಗೆ ತನಿಖೆ ಬೇಡವೇ?

ಶ್ರೀ ಕೆ.ಆರ್. ರಮೇಶ್‌ಕುಮಾರ್:-ಮಾನ್ಯ ಉಪಾಧ್ಯಕ್ಷರೆ, I am on a point of order.

ಉಪಾಧ್ಯಕ್ಷರು:-ಜಮೀರ್, ರಮೇಶ್‌ಕುಮಾರ್‌ರವರು point of order ಎಂದಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:-ಮಾನ್ಯ ಉಪಾಧ್ಯಕ್ಷರೆ, ನಾನು 1978 ನೇ ಇಸವಿಯಲ್ಲಿ ಕಾಲಿಟ್ಟೆ. ಸದನದಲ್ಲಿ ಯಾವುದೇ ವಿಷಯದಲ್ಲಿ ಆಗತಕ್ಕಂಥ ಚರ್ಚೆಗಳು ಹೊರಗಡೆ ಸಮಾಜದ ಶಾಂತಿಯನ್ನು ಕದಡುವುದಕ್ಕೆ ಕಾರಣವಾಗಬಾರದು. ಹೊರಗಡೆ ಒಂದು ವೇಳೆ ಅಂಥ ವಾತಾವರಣವಿದ್ದರೂ ಕೂಡ ಸದನದಲ್ಲಿ ನಡೆಯುವ ಕಲಾಪಗಳು ಅದನ್ನು ಶಮನಗೊಳಿಸುವುದಕ್ಕೆ ಅನುಕೂಲವಾಗಿರಬೇಕು. ನಾವು ಗಂಭೀರವಾಗಿ ಕುಳಿತಿದ್ದೇವೆ. ಅದು ಅವರ ಹಕ್ಕು, ಅವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿರುವುದು ಸರಿಯೋ, ಸಯಿಯಿಲ್ಲವೋ, ಅದು ತಮ್ಮ ವಿವೇಚನೆಗೆ ಬಿಟ್ಟದ್ದು. ಒಂದು ಕಡೆ ಜಮೀರ್ ನಿಲ್ಲುತ್ತಾರೆ, ಇನ್ನೊಂದು ಕಡೆಗೆ ತನ್ವೀರ್ ಸೇಠ್ ನಿಲ್ಲುತ್ತಾರೆ. ಅವರು ಇವರ ಮೇಲೆ ಬೀಳುತ್ತಾರೆ, ಇದೆಲ್ಲಾ ನಾಳೆ ರಿಪೋರ್ಟ್ ಆಗಿ ಮೀಡಿಯಾ ಮುಖಾಂತರ ಹೊರಗೆ ಹೋದರೆ ಇವರನ್ನು ಡಿಫೆಂಡ್ ಮಾಡುವುದಕ್ಕೆ ಯಾರೂ ಇಲ್ಲ, ಇವರೇ ಮಾಡಿಕೊಳ್ಳಬೇಕು ಎನ್ನುವಂಥ ಒಂದು ಅಭಿಪ್ರಾಯ ಬರುತ್ತದೆ. ಈ ಸದನದಲ್ಲಿ ನಾವು we are divided on communal lines ಎಂದಾಗುತ್ತದೆ. ನಾನು ತಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ, ನಮ್ಮ ವೈಚಾರಿಕ ಅಭಿಪ್ರಾಯಗಳು ಏನೇ ಇದ್ದರೂ ಕೂಡ ಈ ದೇಶದ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಂವಿಧಾನಕ್ಕೆ ನಾವೆಲ್ಲರೂ ಕೂಡ ಬದ್ಧರಾಗಿದ್ದೇವೆ. ಸಂವಿಧಾನದ ಮೂಲ ಆಶಯಗಳನ್ನು ವಿರೋಧಿಸುವ ಹಕ್ಕು ನಮಗ್ಯಾರಿಗೂ ಇಲ್ಲ, ವಿರೋಧಿಸುವುದು ಎಂದರೆ ನಾವು ಈ ದೇಶದಲ್ಲಿ ಇರುವುದಕ್ಕಾಗುವುದಿಲ್ಲ. Let us all try to confine ourselves with implicit faith to the doctrine called Constitution of India. ಎಲ್ಲೋ ಒಂದು ಕಡೆಗೆ I think we are trying to cause damage to the fabric. That should not happen. With folded hands, ನಿಮಗೂ appeal ಮಾಡುತ್ತೇನೆ ಮತ್ತು ಅವರಿಗೂ appeal ಮಾಡುತ್ತೇನೆ, ನಮ್ಮ ಚರ್ಚೆ ನಮ್ಮ ಕಲಾಪಗಳು ಕೆಟ್ಟ ಅರ್ಥವನ್ನು ಹೊರಗಡೆಗೆ ಬಿಂಬಿಸಬಾರದು, ತಾವು ನಿಗ್ರಹಿಸಬೇಕಾಗುತ್ತದೆ ಸನ್ಮಾನ್ಯ ಉಪಾಧ್ಯಕ್ಷರೆ,

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ರಮೇಶ್‌ಕುಮಾರ್‌ರವರು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತಿದ್ದೇನೆ. ಸದನದಲ್ಲಿ ಈ ವಿಚಾರ ಏಕೆ ಪ್ರಸ್ತಾಪಕ್ಕೆ ಬಂತು, ಸರ್ಕಾರ ಈ ರೀತಿ ನಿರ್ಣಯ ಕೈಗೊಂಡಾಗ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಯಾವುದೇ ಸಂದರ್ಭದಲ್ಲಿ ಇಂಥವುಗಳ ಬಗ್ಗೆ ನಾವು ಚರ್ಚೆಯನ್ನೇ ಮಾಡಿಲ್ಲ. ಸರ್ಕಾರ ಮಾಡಿದಂಥ ಒಂದು ಘೋಷಣೆಯಿಂದ ಇವತ್ತು ಏನು ಅನಾಹುತಗಳಾಗುತ್ತಿವೆ ಎನ್ನುವುದಕ್ಕೆ ಉದಾಹರಣೆಯನ್ನು ಕೊಡುತ್ತಿದ್ದೇನೆ. ಇಲ್ಲದಿದ್ದರೆ ಟಿಪ್ಪು ಸುಲ್ತಾನ್ ಬಗ್ಗೆ ನಾನೇಕೆ ಇಲ್ಲಿ ಮಾತನಾಡುವುದಕ್ಕೆ ಹೋಗಲಿ. ಮಾತನಾಡುವಂಥ ಪ್ರಶ್ನೆಯೇ ಬರುತ್ತಿರಲಿಲ್ಲ. ಸರ್ಕಾರ ನಡೆಸುವಂಥವರು ಬಹಳ careful ಇರಬೇಕಾಗುತ್ತದೆ. ಇವತ್ತು ಮುಖ್ಯಮಂತ್ರಿಗಳಾದವರು ಎಲ್ಲಾ ವರ್ಗದವರಿಗೂ ಮುಖ್ಯಮಂತ್ರಿಗಳಾಗಿರುತ್ತಾರೆ. ಕರ್ನಾಟಕದಲ್ಲಿರುವ ಇಡೀ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇಂಥದ್ದನ್ನು ಮಾಡುವಾಗ ಒಳ್ಳೆಯ ನಿರ್ಣಯವನ್ನು ಸರಿಯಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅದು ಆಗಿಲ್ಲದಿರುವುದರಿಂದ ಅನಿವಾರ್ಯವಾಗಿ ಇಲ್ಲಿ ನಾವು ಪ್ರಸ್ತಾಪ ಮಾಡಬೇಕಾಗಿದೆ. ಅದಕ್ಕಾಗಿ ನಾನು ಈ ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ ಲಕ್ಷ್ಮಣರೇಖೆಯನ್ನು ಮೀರಿ ನಾನು ಹೋಗಿಲ್ಲ ಎನ್ನುವುದು ನನ್ನ ಒಂದು ಅಭಿಪ್ರಾಯ. ವಾದ ವಿವಾದಗಳು ಸದನದಲ್ಲಿ ಆಗುತ್ತದೆ. ಕೆಲವು ಶಾಸಕರು ಮಾತನಾಡುತ್ತಾರೆ. ಹೀಗಾಗಿ ಇಂಥ ಒಂದು ನಿರ್ಣಯಗಳನ್ನು ಕೈಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ./ Uncorrected - Not for Publication.

ೊಳ್ಳುವಾಗ ಸರ್ಕಾರ ಬಹಳ ಒಂದು ಒಳ್ಳೆಯ ರೀತಿಯಿಂದ ಆಡಳಿತ ನಡೆಸತಕ್ಕಂಥವರು ಮಾಡಬೇಕು ಎನ್ನುವಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗಾಗಿ ಅಲ್ಲಿ ನಡೆದಿರುವ ಎಲ್ಲ ಘಟನೆಗಳ ಬಗ್ಗೆ, ಯಾರು ಅಲ್ಲಿ ಸತ್ತಿರಬಹುದು, ಮತ್ತೊಂದು, ಯಾವ ಕಮ್ಯುನಿಟಿಯಿರಲಿ, ಅದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯಾಗಬೇಕು ಎನ್ನುವಂಥದ್ದು, ಇವತ್ತು ಡಿ.ಸಿ. ಗಳ ಮುಖಾಂತರ ಎಂದು ಹೇಳಿದ್ದಾರೆ. ಈ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಇತ್ತೀಚೆಗೆ , , ,

ಶ್ರೀ ಖಮರುಲ್ ಇಸ್ಲಾಂ:-ಮಾನ್ಯ ಉಪಾಧ್ಯಕ್ಷರೆ, , , ,

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಉಪಾಧ್ಯಕ್ಷರೆ, ನಾನು ಈಲ್ಡ್ ಆಗಿಲ್ಲ.

ಉಪಾಧ್ಯಕ್ಷರು:-ಮಾನ್ಯ ಸಚಿವರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ Minister ಆಗಿರುವ ನೀವು ಮಧ್ಯೆ ಮಾತನಾಡಿದರೆ ಹೇಗೆ ಹೇಳಿ. ತಾವು ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಉಪಾಧ್ಯಕ್ಷರೆ, ಇವತ್ತು ನಾವೆಲ್ಲರೂ ಶಾಂತಿ ರೀತಿಯಿಂದ ಬದುಕಬೇಕು, ಇಲ್ಲಿರಬೇಕು ಎನ್ನುವಂಥ ವಾತಾವರಣ ಇವತ್ತು ಹೋಗುತ್ತಿದೆ. ಇವತ್ತು ಆಧುನಿಕವಾದಂಥ ಸೌಲಭ್ಯಗಳೇನು ಸಿಗುತ್ತಿವೆ, ಇವತ್ತು ಎಸ್.ಎಂ.ಎಸ್. ಮೆಸೇಜ್ ಇರಬಹುದು, ವ್ಯಾಟ್ಸ್‌ಪ್ ಇರಬಹುದು, ಅದರ ಮುಖಾಂತರ ಬರುವಂಥ ಕೆಲವೊಂದು ಮೆಸೇಜ್‌ಗಳು, ಅದರಿಂದ ಎಷ್ಟು ಅನಾಹುತಗಳಾಗಿವೆ. ಯಾರೋ ಧರ್ಮಗುರುಗಳಿಗೆ ಒಂದು ಕೆಟ್ಟ ಸಂದೇಶವನ್ನು ಕಳುಹಿಸುವಂಥದ್ದು, ಮತ್ತೊಂದು, ಅವರು ಕಂಪ್ಲೇಂಟ್ ಕೊಡುವಂಥದ್ದು, ಅವರನ್ನು ಅರೆಸ್ಟ್ ಮಾಡುವಂಥದ್ದು, ಇದು ಎಲ್ಲಾ ಕಡೆಯಲ್ಲಿಯೂ ನಡೆಯುತ್ತಿದೆ. ಇದನ್ನು ತಡೆಹಿಡಿಯುವಂಥದ್ದರ ಬಗ್ಗೆ ಏನೊಂದು ಕಾನೂನನ್ನು ತರಬೇಕು, ಏನು ಮಾಡಬೇಕು, ಬಿಗಿ ಹೇಗೆ ಮಾಡಬೇಕು ಎನ್ನುವಂಥದ್ದರ ಬಗ್ಗೆ ಸರ್ಕಾರ ಇವತ್ತು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ವಿಪಕ್ಷ ನಾಯಕರಾದಂಥ ಈಶ್ವರಪ್ಪನವರಿಗೆ ಬೆದರಿಕೆ ಕರೆಗಳು ಬಂದವು. ಅದಕ್ಕೆ ಸಂಬಂಧಪಟ್ಟಂತೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದರ ಬಗ್ಗೆ ಇನ್‌ವೆಸ್ಟಿಗೇಶನ್ ಆಗಬೇಕು. ಇತ್ತೀಚೆಗೆ ಇಲ್ಲಿ ಸಚಿವರಾಗಿರುವಂಥ ರಮಾನಾಥ ರೈಗಿರಬಹುದು,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಭಯಚಂದ್ರ ಜೈನ್‌ರವರಿಗಿರಬಹುದು, ಅವರಿಗೆ ಯಾರು ಭೂಗತ ಡಾನ್ಸ್ ಎಂದು ಹೇಳುತ್ತಾರಲ್ಲ, ಅಂಥ ವ್ಯಕ್ತಿಗಳಿಂದಲೇ ಇವತ್ತು ಮಂತ್ರಿಗಳಿಗೇ threatening calls ಬಂದರೆ ಅವರು ಹೇಗೆ ಕೆಲಸ ಮಾಡಬೇಕು ಹೇಳಿ. ಇಂಥ ಮಂತ್ರಿಗಳಿಗೇ threatening calls ಬಂದರೆ ನಾಳೆ ಜನ ಸಾಮಾನ್ಯರ ಗತಿಯೇನು? ಬ್ಲಾಕ್‌ಮೇಲ್ ಮಾಡುವಂಥದ್ದು, ವಸೂಲಾತಿ ದಂಧೆ ಮಾಡುವಂಥದ್ದು, ಇವೆಲ್ಲಾ ಏನಿದೆಯಲ್ಲಾ ಈ ರೀತಿಯಾದಂಥ ಒಂದು ವ್ಯವಸ್ಥೆ ತಂದರೆ. . . .

ಶ್ರೀ ಕೆ.ಆರ್. ರಮೇಶ್‌ಕುಮಾರ್:-ಅಲ್ರಿ ಜಗದೀಶ್ ಶೆಟ್ಟರ್ ಸಾಹೇಬರೆ, ಬರೀ threats, ಅವು ಒಂದು ನಿಜ ಆಗಲೇ ಇಲ್ಲ. ಯಾವುದಾದರೂ ಒಂದಾದರೆ ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳೋಣವಪ್ಪಾ. ಆ ಡಾನ್ಸ್ ಹೇಳಿದ್ದನ್ನು ಯಾವುದನ್ನಾದರೂ ಮಾಡಲಿ. ಆಮೇಲೆ ಸೀರಿಯಸ್ ಆಗಿ ಅದನ್ನು ತೆಗೆದುಕೊಳ್ಳೋಣ.

ಶ್ರೀ ಸಿ.ಟಿ. ರವಿ:-ಹಾಗಾದರೆ ನಿಮ್ಮ ಉದ್ದೇಶವೇನು, ರಮೇಶ್‌ಕುಮಾರ್‌ರವರೆ ನೀವು ಬಹಳ ಒಳ್ಳೆಯವರು ಎಂದುಕೊಂಡಿದ್ದೆ. ಈ ಮೂಲಕ ಒಂದು ವಿಕೆಟ್ ಬೀಳಲಿ, ಒಂದು ಸೀಟ್ ಖಾಲಿಯಾಗಲಿ ಎಂದು ಯೋಚನೆ ಮಾಡುವುದು ನಿಮ್ಮಂಥವರಿಗೆ ಶ್ರೇಯಸ್ಕರವಲ್ಲ. ನಾನು ನಿಮ್ಮ ಬಗ್ಗೆ ಯೋಚನೆ ಮಾಡಿದ್ದ ರೀತಿಯೇ ಬೇರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:-ಇವನಿಗೆ ವಿಕೆಟ್ ಅಷ್ಟೇ ಮುಖ್ಯ. ಇವನಿಗೆ ಕ್ರಿಕೆಟ್ ಮುಖ್ಯವಲ್ಲ, ಬರೀ ವಿಕೆಟ್ ಮುಖ್ಯ. ನಾನು ಕ್ರಿಕೆಟ್ ಬೇಕು ಎಂದು ಕೇಳುವವನು.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

D 25.11.2015/3.50/25/HBU-HS

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇವನಿಗೆ ವಿಕೆಟ್ ಅಷ್ಟೆ ಮುಖ್ಯ, ಇವನಿಗೆ ಕ್ರಿಕೆಟ್ ಮುಖ್ಯ ಅಲ್ಲ. ನಾನು ಕ್ರಿಕೆಟ್ ಬೇಕು ಎಂದು ಕೇಳುವವನು. ನೋಡಿ, ನಿಮಗೂ ನನಗೂ ಇರುವ ವ್ಯತ್ಯಾಸ ಅಷ್ಟೆ. ನೀವು ವಿಕೆಟ್ ಗಿರಾಕಿ, ನಾನು ಕ್ರಿಕೆಟ್ ಗಿರಾಕಿ.

ಶ್ರೀ ಸಿ.ಟಿ. ರವಿ: ನೀವು ಅಭಯಚಂದ್ರ ಜೈನ್ ತರಹ ಪಾಪದ ಪ್ರಾಣಿ, ಒಂದು ಕೋಳಿ ಕೂಡ ತಿಂದಿಲ್ಲ. ಅಂತಹವರು ನೀವು threat ಮಾಡಿದ್ದು ನಿಜವಾಗಲಿ ಎಂದು ಬಯಸಿದರೆ ಹೇಗೆ? ರಮಾನಾಥ್ ರೈ ರವರು ಪರವಾಗಿಲ್ಲ ಕುರಿ ಕೋಳಿ ಎಲ್ಲಾ ತಿಂದಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಕಲಾಪದ ಮಧ್ಯದಲ್ಲಿ ಎಲ್ಲಾದರೂ ಸ್ವಲ್ಪ ಹಾಸ್ಯ ಇರಬೇಕಾಗುತ್ತದೆ. ನಾನೇನು ಹೇಳಿದೆ ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಅವರೆಲ್ಲರಿಗೂ threat ಬಂದಿದೆ ಎಂದು ಹೇಳಿದರು. ಯಾವುದಾದರೂ ಒಂದು ನಿಜವಾಗಲಿ, ಆಮೇಲೆ ಸೀರಿಯಸ್ ಆಗೋಣ ಎಂದು ಹೇಳಿದೆ. ಎಲ್ಲಾದರೂ ಸ್ವಲ್ಪ ನಗಬೇಕಲ್ಲ. ಮುಖ ಗಂಟು ಹಾಕಿಕೊಂಡು ಎಷ್ಟೊತ್ತು ಕುಳಿತಿರುತ್ತೀರಿ? ನೀವು ಮಾತನಾಡುವ ಮಾತಿನಲ್ಲಾದರೂ ನಮಗೆ ಸಂತೋಷವಾಗುತ್ತದೆ ಎಂದರೆ ಅದೂ ಆಗುವುದಿಲ್ಲ. ಹೊರಗಡೆ ಹೋಗೋಣವೇ ಎಂದರೆ ಜವಾಬ್ದಾರಿ ಇಲ್ಲವೆಂದು ಹೇಳುತ್ತಾರೆ. ಏನು ಮಾಡುವುದು? ನನಗೆ ಸುರೇಶ್ ಕುಮಾರ್ ರೀತಿ ಗಂಭೀರವಾಗಿ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಏನು ಮಾಡಲಿ ಹೇಳಿ. ಯಾವುದಾದರೂ ಒಂದು ಆಗಬೇಕಲ್ಲ. ನೀವಾದರೂ ಹೋಗಿ ಅಂತಾದ್ದು ಏನಾದರೂ ಒಂದು ಮಾಡಿ. ಆಮೇಲೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಮೇಶ್ ಕುಮಾರ್ ರವರು ಇದ್ದರೆ ಎಲ್ಲಾ ಬರೋಬ್ಬರಿ ಇರುತ್ತದೆ. ಹಿಂದೆ ಒಬ್ಬ ದೊಡ್ಡ ಉದ್ಯಮದಾರನಿಗೆ ಒಂದು threatening call ಬಂದಿತ್ತು. ಆಂದು ನಾನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಿಎಂ ಮತ್ತು ಗೃಹ ಸಚಿವರಿಗೆ ಫೋನ್ ಮಾಡಿದ್ದೆ. ಭೂಗತ ದೊರೆಗಳು, ಡಾನ್‌ಗಳು ಎಂದು ತಾವೇ ಕರೆದುಕೊಳ್ಳುತ್ತಾರೆ. ಕೆಲವು ವಿಚಾರದಲ್ಲಿ ಏನಾಗಿದೆ ಎಂದರೆ ಕೆಲವರು complaints ಕೊಡುವುದಿಲ್ಲ. ಅಲ್ಲಿ ಒಂದು ಸ್ವಲ್ಪ ಪೇಮೆಂಟ್ ಮಾಡಿ ಅಡ್ಜಸ್ಟ್ ಮಾಡಿಕೊಂಡು ನಮಗೆ ಹೆದರಿಕೆ ಹಾಕಬೇಡಿ ಎಂದು ಹೇಳಿ ಬಿಡುತ್ತಾರೆ. ಅಂತಹ ಉದಾಹರಣೆಗಳು ಕೂಡ ಆಗಿವೆ. ಅದಕ್ಕೆ ಈ ರೀತಿ ಬಹಳಷ್ಟು complaints ಬಂದಿವೆ. ಇಲ್ಲಿ ಆ ವ್ಯಕ್ತಿ ಹೆಸರನ್ನು ಹೇಳಿ ನಾನು ದೊಡ್ಡದು ಮಾಡುವುದಕ್ಕೆ ಹೋಗುವುದಿಲ್ಲ. ಆ ವ್ಯಕ್ತಿ ಯಾರು ಎನ್ನುವ ಹೆಸರು ಪತ್ರಿಕೆಯಲ್ಲಿ ಬಂದಿದೆ. ಅಂತಹವರ ಬಗ್ಗೆ ನೀವು ಯಾವ ರೀತಿ ಕ್ರಮ ಕೈಗೊಳ್ಳಬೇಕಾಗಿದೆ ಎಂದು ನೋಡಿ ಅವರನ್ನು ಅರೆಸ್ಟ್ ಮಾಡುವುದು ಮತ್ತೊಂದು ಮಾಡಬೇಕು. ಅವರು ಬೇರೆ ಬೇರೆ ದೇಶದಲ್ಲಿ ಇರಬಹುದು.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಒಬ್ಬ ಉದ್ಯಮಿಯನ್ನು ಕೊಲೆ ಮಾಡಿ, ಅವರ ವಿಚಾರದಲ್ಲಿ ಟಿವಿಯಲ್ಲಿ ಬಂದಿದ್ದರೂ ಸಹ ಮೊರಾಕ್‌ನಲ್ಲಿ ಇದ್ದರೂ ಸಹ ನಮ್ಮ ಪೊಲೀಸ್‌ನವರು ತಮ್ಮ ಸಾಮರ್ಥ್ಯದಿಂದ ಮೊರಾಕ್‌ಗೆ ಹೋಗಿ, ಕೋರ್ಟ್‌ನಿಂದ ಆರ್ಡರ್ ತೆಗೆದುಕೊಂಡು, ಅವರನ್ನು ಕರೆದುಕೊಂಡು ಬಂದಿದ್ದಾರೆ. ತಾವು ಹೇಳಿದ ವಿಚಾರದಲ್ಲಿ ಕೂಡ ನಮ್ಮ ಸರ್ಕಾರ ಮತ್ತು ಪೊಲೀಸ್ ಇಲಾಖೆಯಿಂದ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದಷ್ಟು ಬೇಗ ಅವರನ್ನು ಬಂಧಿಸುವಂತಹ ಕೆಲಸವನ್ನು ಮಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಅದಕ್ಕಾಗಿ ಈ ರೀತಿ ಘಟನೆ ನಡೆದಾಗ ಅದರ ಬಗ್ಗೆ ಶೀಘ್ರಗತಿಯಾಗಿ action, investigation ಆಗಬೇಕು. ಅಂತಹ ವ್ಯಕ್ತಿಗಳು ಎಲ್ಲಿದ್ದರೂ ಅರೆಸ್ಟ್ ಮಾಡಿ ಕರೆದುಕೊಂಡು ಬರುವಂತಹ ಕೆಲಸವಾಗಬೇಕು ಎನ್ನುವಂತಹ ಸಲಹೆಯನ್ನು ನಾನು ಈ ಸರ್ಕಾರಕ್ಕೆ ಮಾಡುತ್ತಿದ್ದೇನೆ. ಇದರ ಜೊತೆಗೆ threatening call ಬರುವುದು ಒಂದು ಕಡೆಯಾದರೆ, ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಬೇಕು. ಅದರಲ್ಲೂ ಇವತ್ತು ಬೆಂಗಳೂರಿನಲ್ಲಿ ಪ್ರತಿನಿತ್ಯ ಮಹಿಳೆಯರ ಮೇಲೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅತ್ಯಾಚಾರ, ಗ್ಯಾಂಗ್‌ರೇಪ್ ಆಯಿತು ಎನ್ನುವಂತಹ ಸುದ್ದಿಯನ್ನು ನೋಡುತ್ತೇವೆ. ಈ ರೀತಿಯ ಘಟನೆಗಳು ನಡೆದಾಗ ಮಹಿಳೆಯರಿಗೆ ಯಾವ ರೀತಿ ಸುರಕ್ಷತೆ ಕಾಣಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮಹಿಳೆಯರ ಅತ್ಯಾಚಾರ ಏನಾಗುತ್ತಿದೆ, ಅದನ್ನು ತಡೆಹಿಡಿಯುವುದಕ್ಕೆ ಏನು ಮಾಡಬೇಕು ಹಾಗೂ ಮುಂಜಾಗ್ರತಾ ಕ್ರಮ ಏನು ತೆಗೆದುಕೊಳ್ಳಬೇಕೆಂದು ನೋಡುವುದಕ್ಕೆ ಒಂದು ಸಮಿತಿ ನೇಮಕವಾಯಿತು. ಆ ಸಮಿತಿಗೆ ಮೊದಲು ಮಾನ್ಯ ಎಂ.ಸಿ. ನಾಣಯ್ಯನವರು ಇದ್ದರು, ಈಗ ಆ ಸಮಿತಿಯಲ್ಲಿ ಮಾನ್ಯ ಉಗ್ರಪ್ಪನವರು ಇದ್ದು, ಅವರು ನೇಮಕವಾಗಿ 6-8 ತಿಂಗಳಾಗಿರಬಹುದು, ನನಗೆ ಸರಿಯಾಗಿ ಗೊತ್ತಿಲ್ಲ. ಮೊದಲು ಆ ಸಮಿತಿಯಲ್ಲಿ ಇದ್ದಂತಹ ನಾಣಯ್ಯನವರು ರಾಜೀನಾಮೆ ಕೊಟ್ಟರು, ನಂತರ ಮಾನ್ಯ ಉಗ್ರಪ್ಪನವರು ಬಂದರು. ಅವರು ತಕ್ಷಣ ಒಂದು ಮೀಟಿಂಗ್ ಮಾಡಿ, ಸರ್ಕಾರಕ್ಕೆ advice ಮಾಡುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಇನ್ನುವರೆಗೂ ಆ ಸುದ್ದಿಯಿಲ್ಲ. ನಾನು ಒಂದು ವಿಚಾರವನ್ನು ಹೇಳುತ್ತೇನೆ. ಈ ರೀತಿ ಮಹಿಳೆಯರು ವಾಹನಗಳಲ್ಲಿ ಹೋಗುವಂತಹ ಸಂದರ್ಭದಲ್ಲಿ ಅವರ ಮೇಲೆ ಅತ್ಯಾಚಾರ, ದೌರ್ಜನ್ಯ ಹಾಗೂ ದೆಹಲಿಯಲ್ಲಿ ಆದಂತಹ ಘಟನೆ ಇದನ್ನೆಲ್ಲ ನೋಡುತ್ತಿದ್ದೇವೆ. ಈ ರೀತಿಯ ಘಟನೆಗಳಾದಾಗ ಜನರಿಗೆ ಯಾವಾಗ ಹೆದರಿಕೆ ಹುಟ್ಟುತ್ತದೆ ಎಂದರೆ ಅವರನ್ನು ಅರೆಸ್ಟ್ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆ ಆಗುವಂತಹ ರೀತಿಯಲ್ಲಿ ಕಾನೂನು ಕ್ರಮ ಕೈಗೊಂಡರೆ ಮಾತ್ರ ಬೇರೆಯವರಿಗೂ ಕೂಡ ಹೆದರಿಕೆ ಹುಟ್ಟುತ್ತದೆ. ಅವರನ್ನು ಅರೆಸ್ಟ್ ಮಾಡಿ ಕ್ರಮ ತೆಗೆದುಕೊಂಡರೂ ಕೂಡ ಪದೇ ಪದೇ ನಡೆಯುತ್ತಿದೆ ಎನ್ನುವಂತಹ ವಿಚಾರ ಇದೆ. ಈ ವಿಚಾರದಲ್ಲಿ ನಮ್ಮ ಅಧಿಕಾರಿಗಳೂ ಕೂಡ ಬಹಳ alert ಇರಬೇಕು. ನಾನು ಜುಲೈ ಅಧಿವೇಶನದಲ್ಲಿ ಹಾಸನದಲ್ಲಿ ಆಲೂರು ಪೊಲೀಸ್ ಠಾಣೆಯಲ್ಲಿ ಕೊಟ್ಟಿರುವಂತಹ complaint ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಅಲ್ಲಿ ಬಿ.ಎಂ. ಸೋಮಶೇಖರ್ ಎಂಬುವರ ಮಗಳ ಮೇಲೆ ಅತ್ಯಾಚಾರವಾಗಿದೆ. ಆತ ಓಪನ್ ಆಗಿ ದೂರು ಕೊಟ್ಟ. ಆ ಬಗ್ಗೆ statement ಕೂಡ ತೆಗೆದುಕೊಂಡರು. ಅಲ್ಲಿ ಏನಾಗಿದೆ ಎಂದರೆ ಅಲ್ಲಿದ್ದಂತಹ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ ಯಾರೂ ಕೂಡ ಇದರ ಬಗ್ಗೆ ಸೀರಿಯಸ್ ಆಗಿ ತೆಗೆದುಕೊಳ್ಳಲಿಲ್ಲ. ಹೀಗಾಗಿ ಅವರು ಪೊಲೀಸ್ ಸ್ಟೇಷನ್, ಹಿರಿಯ ಅಧಿಕಾರಿಗಳನ್ನು ಭೇಟಿಯಾಗುವುದು,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಮ್ಮ ಕಡೆ ಬಂದು ಮನವಿ ಕೊಡುವುದು, ಮುಖ್ಯಮಂತ್ರಿಗಳಿಗೆ ಮನವಿ ಕೊಡುವುದು, ಈ ರೀತಿಯಾಗಿ ಆ ತಂದೆಯ ಪರಿಪಾಟಲು ನೋಡುವುದಕ್ಕೆ ಸಾಧ್ಯವಿಲ್ಲ. Accused ಆಗಿದ್ದಂತಹ ಆರೋಪಿಯನ್ನು ಅರೆಸ್ಟ್ ಮಾಡಿದಿರಿ, ಅವನು ಸ್ವಲ್ಪ ದಿವಸ ಜೈಲಿನಲ್ಲಿದ್ದನು. ನಿಮ್ಮ ಅಧಿಕಾರಿಗಳು ಸರಿಯಾಗಿ ಕ್ರಮ ಕೈಗೊಂಡಿದ್ದರೆ, ಬಹುಶ: ಅವನಿಗೆ ಬೇಲ್ ಕೂಡ ಸಿಗುತ್ತಿರಲಿಲ್ಲ. ಈಗ ಅವನಿಗೆ ಬೇಲ್ ಸಿಕ್ಕಿ ಅರಾಮಾಗಿ ಹೊರಗಡೆ ಅಡ್ಡಾಡುತ್ತಿದ್ದಾನೆ. ಈ ರೀತಿಯಾದಾಗ ಅವರ ಮಗಳ ಗತಿಯೇನಾಗಬೇಕು? ಆಕೆಯನ್ನು ನೋಡಿ ಇನ್ನುಳಿದವರ ಗತಿ ಏನಾಗಬೇಕು? ಮಗಳ ಮೇಲೆ ಅತ್ಯಾಚಾರ ಮಾಡಿ ಆ ಆರೋಪಿ ಬಹಳ ರಾಜಾರೋಷವಾಗಿ ಹೊರಗಡೆ ಅಡ್ಡಾಡುತ್ತಾನೆ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ? ಅವಳ ತಂದೆ ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳು, ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್ಲರೂ endorsement ಮಾಡಿದರು, ಇಲ್ಲಿ ಅವೆಲ್ಲ ಪತ್ರಗಳು ಇವೆ. ನಾನೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಪತ್ರವನ್ನು ಕೊಟ್ಟೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಜಗದೀಶ್ ಶೆಟ್ಟರ್ ರವರೆ, ತಾವು ಮುಖ್ಯಮಂತ್ರಿಯಾಗಿದ್ದವರು. ಯಾವುದೇ ಒಂದು ಪ್ರಕರಣವಾದಾಗ ಪೊಲೀಸ್‌ನವರು ತನಿಖೆ ಮಾಡಿ ಕೋರ್ಟ್‌ಗೆ ಸಾಕ್ಷ್ಯಧಾರಗಳನ್ನು produce ಮಾಡುತ್ತಾರೆ. ಅವನಿಗೆ ಜಾಮೀನು ಕೊಡುವುದು ಕೋರ್ಟ್‌ನ ಜಡ್ಜ್‌ಗೆ ಬಿಟ್ಟದ್ದು. ಅವರು ಒಂದು ಬಾರಿ ಜಾಮೀನು ಕೊಟ್ಟಮೇಲೆ ಮುಖ್ಯಮಂತ್ರಿಯವರಾಗಲಿ ಏನು ಮಾಡುವುದಕ್ಕೆ ಆಗುತ್ತದೆ? ಮುಂದೆ ಕೇಸ್ ಬರುವಾಗ ನಾವು ಸರಿಯಾದ ದಾಖಲೆ ಕೊಟ್ಟು argue ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಈಗ ಓಂಪ್ರಕಾಶ್‌ರವರು, ನಮ್ಮ ಐಜಿ, ಡಿಜಿ ಯವರು ಇಲ್ಲಿಯೇ ಇದ್ದಾರೆ. ಅವರು ಜುಲೈ 31ಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ, ಅದರ ಕಾಪಿ ಇದೆ. ಪತ್ರದ ಸಾರಾಂಶ ಏನೆಂದರೆ 'ಆಲೂರು ಪೊಲೀಸ್ ಠಾಣೆ ಮೊಕದ್ದಮೆ 273/2014ರ ಪ್ರಕರಣದಲ್ಲಿ ತನಿಖೆಯಲ್ಲಿ ಲೋಪವೆಸಗಿದ ಪೊಲೀಸ್ ಅಧಿಕಾರಿ ವಿರುದ್ಧ ಶಿಸ್ತಿನ ಕ್ರಮ ಕುರಿತು - ಆಲೂರು ಪೊಲೀಸ್ ಠಾಣೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮೊಕದ್ದಮ್ಮೆ ಸಂಖ್ಯೆ 273/2014ರ ಪ್ರಕರಣದ ತನಿಖೆಯಲ್ಲಿ ತನಿಖಾಧಿಕಾರಿಗಳು ಸಕಾಲದಲ್ಲಿ ಪ್ರಕರಣದ ತನಿಖೆ ನಿರ್ವಹಣೆ ಬಗ್ಗೆ ಹಾಗೂ ಎಫ್‌ಎಸ್‌ಎಲ್ ಗೆ ವಸ್ತುಗಳನ್ನು ಕಳುಹಿಸಿ, ವರದಿ ಪಡೆಯಲು ವಿಳಂಬ ಮಾಡಿರುವುದು, ಕೃತ್ಯ ಸಮಯದಲ್ಲಿ ಆರೋಪಿ ಧರಿಸಿರುವ ಬಟ್ಟೆಗಳ ಬಗ್ಗೆ ಮಾಹಿತಿ ಸಂಗ್ರಹಿಸದಿರುವುದು, ಕಲಂ ನಂಬರ್ 164 ಸಿಆರ್‌ಪಿಸಿ ರೀತಿ ಪಿರ್ಯಾದುದಾರರ ಹೇಳಿಕೆ ದಾಖಲಿಸಲು ಸಕಾಲದಲ್ಲಿ ಕ್ರಮ ಕೈಗೊಳ್ಳದಿರುವುದು ಮತ್ತು ಪರಿಣಾಮಕಾರಿಯಾದಂಥ ಮತ್ತು ಗುಣಾತ್ಮಕ ತನಿಖೆ ಮಾಡಿದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಕರ್ತವ್ಯ ಲೋಪ ಎಸಗಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಐಜಿಪಿ, ದಕ್ಷಿಣ ವಲಯ ಉಲ್ಲೇಖಿತ ವರದಿಯಲ್ಲಿ ಕೋರಿರುತ್ತಾರೆ. ಸದರಿ ಅವರ ವರದಿ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದವುಗಳನ್ನು ಈ ಟಿಪ್ಪಣಿಯಲ್ಲಿ ಲಗತ್ತಿಸಿ ಈ ವಿಷಯದಲ್ಲಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.' ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಆಡಳಿತ ಪ್ರಧಾನ ಇವರಿಗೆ ನಮ್ಮ ಐಜಿ ಮತ್ತು ಡಿಜಿಯವರು ಜುಲೈನಲ್ಲಿ ಕಳುಹಿಸಿದ್ದಾರೆ. ಈ ಕಡತ ಇನ್ನೂ ಮೋಕ್ಷಗೊಂಡಿಲ್ಲ. ಅದು ಇನ್ನೂ ಪೊಲೀಸ್ ಕಛೇರಿಯಲ್ಲಿಯೇ ಇದೆ. ಈ ರೀತಿಯಾದರೆ ಹೇಗೆ ಸಮಸ್ಯೆ ಪರಿಹರಿಸುವುದಕ್ಕೆ ಆಗುತ್ತದೆ? ಅದರ ಬಗ್ಗೆ ಜುಲೈ ತಿಂಗಳಿನಲ್ಲಿ ರಿಪೋರ್ಟ್ ಕೊಟ್ಟಿದ್ದು, ರಿಪೋರ್ಟ್ ಕೊಟ್ಟಿರುವ ಪ್ರಕಾರ ನೀವು ಕ್ರಮ ಕೈಗೊಳ್ಳಿ ಎಂದು ತಿಳಿಸಿದ್ದರೂ ಕೂಡ ಏನು ಕ್ರಮ ತೆಗೆದುಕೊಳ್ಳದಿರುವುದರಿಂದ ಅವರ ತಂದೆ ಅಡ್ಡಾಡುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತಿರುವುದು.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಮ್ಮ ಗೃಹಮಂತ್ರಿಗಳು ಉತ್ತರ ಕೊಡುವಾಗ, ಏಕೆ ಆಗಲಿಲ್ಲವೆಂದು ಎಲ್ಲಾ ವಿವರವಾಗಿ, ಅದಕ್ಕೆ ಸಮರ್ಥವಾದ ಉತ್ತರವನ್ನು ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು, ಉತ್ತರ ಕೊಡಿ. ನಾಳೆ ನಾಡಿದ್ದು ಎರಡು ದಿವಸ ಅಧಿವೇಶನ ಇದೆ, ತಕ್ಷಣ ಕ್ರಮ ತೆಗೆದುಕೊಳ್ಳಿ. ನಾವು ಈ ವರದಿಯನ್ನು ನೋಡುತ್ತೇವೆ, ಮಾಡುತ್ತೇವೆ ಎಂದು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಹೇಳುತ್ತೀರಿ. ಈ ವರದಿಯನ್ನು ಜುಲೈ ತಿಂಗಳಿನಲ್ಲಿ ಐಜಿ, ಡಿಜಿ ಯವರು ಕೊಟ್ಟು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಿರ್ಲಕ್ಷ್ಯ ಮಾಡಿರುವುದು ಸಾಬೀತಾಗಿದೆ. ಅದಕ್ಕೆ ನಾನು ಜಾರ್ಜ್‌ರವರಿಗೆ ಹೇಳುವುದೇನೆಂದರೆ ಇವತ್ತು ಕೋರ್ಟ್‌ನವರು ಕೇಸ್ ವೀಕ್ ಇದ್ದಾಗ ಬೇಲ್ ಕೊಡುತ್ತಾರೆ. ಆದರೆ ಕೇಸ್ ಸ್ಟ್ರಾಂಗ್ ಮಾಡಿದರೆ ಬೇಲ್ ಸಿಗುವುದಿಲ್ಲ. ಈ ಕೇಸ್ ಸ್ಟ್ರಾಂಗ್ ಮಾಡಲಿಲ್ಲ. ಈ ಪರಿಸ್ಥಿತಿ ನಾಳೆ ಎಲ್ಲಾ ಮಹಿಳೆ ಮತ್ತು ಯುವತಿಯರಿಗೂ ಆಗುತ್ತದೆ. ನೀವು ಬೇರೆ ಬೇರೆ ವಿಷಯದಲ್ಲಿ ಏನೇನೋ ಮಾಡುತ್ತೀರಿ. ನೀವು ಮಹಿಳೆಯರ ಮೇಲೆ ಅತ್ಯಾಚಾರ ನಡೆದಾಗ ಇಂತಹ ಪ್ರಕರಣದಲ್ಲಿ ಎಲ್ಲಾ ರೀತಿಯಿಂದ ಗಟ್ಟಿಮುಟ್ಟಾದ ಕೆಲಸವನ್ನು ಅಧಿಕಾರಿಗಳು ಮಾಡಬೇಕಾಗುತ್ತದೆ. ಅದನ್ನು ಮಾಡದೇ ಹೋದರೆ ಏನಾಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ ಸಾಕು. ನಾನು ಮತ್ತೊಮ್ಮೆ ಎಲ್ಲಾ ಕಾಗದ ಪತ್ರಗಳನ್ನು ಸಿಎಂ ಮತ್ತು ಗೃಹ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ 2-3 ದಿವಸದೊಳಗೆ ಕ್ರಮ ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀಮತಿ ವೈ. ರಾಮಕ್ಕ : ಮಾನ್ಯ ಉಪಾಧ್ಯಕ್ಷರೆ, ಮಹಿಳೆಯರ ಬಗ್ಗೆ ಹೇಳುವುದಾದರೆ ನಾವು ಮಹಿಳೆಯರಾಗಿ, ಮಹಿಳೆಯರಿಗೆ ಸುರಕ್ಷಿತ ಇಲ್ಲವೆಂದಾಗ ನಾವು ಇಲ್ಲಿ ಸದನದಲ್ಲಿ ಕುಳಿತಿರುವುದು ನ್ಯಾಯವಲ್ಲ. ಇಷ್ಟು ಶಾಸಕರು ಮಾತನಾಡುವಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇವೆ. ಇತ್ತೀಚೆಗೆ ಮಹಿಳೆಯರ ಮೇಲೆ ಅತ್ಯಾಚಾರ ಬಹಳ ಜಾಸ್ತಿಯಾಗುತ್ತಿದೆ. ಸರ್ಕಾರ ಕಟ್ಟುನಿಟ್ಟಾಗಿ, ಎಲ್ಲಾ ಹೆಣ್ಣುಮಕ್ಕಳಿಗೆ ಪೊಲೀಸ್ ಸಿಬ್ಬಂದಿಯವರು ರಕ್ಷಣೆ ಕೊಟ್ಟರೆ ಹೇಗೆ ಇಂತಹ ಘಟನೆಗಳು ಆಗುವುದಕ್ಕೆ ಸಾಧ್ಯವಿದೆ? ಇಂತಹ ಘಟನೆಗಳು ಆಗುವುದಿಲ್ಲ. ಹೊಯ್ಸಳ ವಾಹನ ಬರುತ್ತದೆ, ಅದರಲ್ಲಿರುವವರು ಗುಂಪುಗಾರಿಕೆ ಮಾಡಿಕೊಂಡು ಕಾಫಿ, ಟೀ ಕುಡಿಯುತ್ತಿರುತ್ತಾರೆ. ಒಂದುವೇಳೆ ಯಾರಾದರೂ ಫೋನ್ ಮಾಡಿದಾಗ ಮಾತ್ರ ಅಲ್ಲಿಗೆ ತಕ್ಷಣ ಬರುತ್ತಾರೆ. ನಾವು ಇತ್ತೀಚೆಗೆ ರಸ್ತೆಯಲ್ಲಿ ಸುರಕ್ಷಿತವಾಗಿ ಓಡಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಸರ್ಕಾರವನ್ನು ಕೇಳುವುದೇನೆಂದರೆ ಜನ ಕೊಲೆ ಸುಲಿಗೆ ಮಾಡುತ್ತಾರೆ. ಸರಗಳ್ಳತನ ಮಾಡುವಾಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಣ್ಣಪುಟ್ಟ ಸರವಿದ್ದು, ಕಿತ್ತ ತಕ್ಷಣ ಬಂದರೆ ಪರವಾಗಿಲ್ಲ, ಸರ ಗಟ್ಟಿಯಾಗಿದ್ದರೆ ಕಳ್ಳರು ಕತ್ತು ಕೊಯ್ಯುವುದಕ್ಕೂ ಕೂಡ ಹೇಸುವುದಿಲ್ಲ. ಸರ ಅವರ ಕೈಗೆ ಬಂದತಕ್ಷಣ ಹೆಣ್ಣುಮಕ್ಕಳು ಎಲ್ಲಿ ಬಿದ್ದರೂ ಕೂಡ ನೋಡದೆ ಹೋಗಿಬಿಡುತ್ತಾರೆ. ಆ ಕಳ್ಳರು ಜೈಲಿಗೆ ಹೋದರೂ ಕೂಡ ಮತ್ತೆ ವಾಪಸ್ಸು ಬಂದೇ ಬರುತ್ತಾರೆ. ಅವರು ಮತ್ತೇ ಈ ಕೆಲಸ ಮಾಡುವುದಿಲ್ಲವೆನ್ನುವುದು ಏನು ಗ್ಯಾರಂಟಿ? ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕೆಂದರೆ 5 ರಿಂದ 10 ಜನ ಕಳ್ಳರಿಗಾದರೂ ಗಲ್ಲುಶಿಕ್ಷೆಯಾಗಲೇ ಬೇಕು. ಇಲ್ಲವೆಂದರೆ ಹೆಣ್ಣುಮಕ್ಕಳಿಗೆ ಸುರಕ್ಷತೆ ಇಲ್ಲ. ಅದಕ್ಕೆ ನಾವು ಹೇಳುವುದೇನೆಂದರೆ ಸರ್ಕಾರ ಕಾನೂನು ಕೈಗೆ ತೆಗೆದುಕೊಂಡು ಕಟ್ಟುಬದ್ಧವಾಗಿ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.15 - 4.00 - (26) - RD-VR(HS)

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ): ಮಾನ್ಯ ಉಪಾಧ್ಯಕ್ಷರೆ, ಈಗ ಶ್ರೀಮತಿ ರಾಮಕ್ಕನವರು ಹೇಳಿದಂಥ ಮಾತು ಸತ್ಯವಿದೆ. ನಾವೆಲ್ಲಾ ಮಹಿಳಾ ಶಾಸಕರು ಇಲ್ಲಿ ಬಂದು ಹೊರಗಡೆ ತಲೆ ಎತ್ತಿ ಓಡಾಡುವುದಕ್ಕೆ ಅವಕಾಶವಿಲ್ಲ, ಏಕೆಂದರೆ, ಆಡಳಿತ ಪಕ್ಷ, ವಿರೋಧಪಕ್ಷ ಎನ್ನುವುದಕ್ಕಿಂತ ಈಗ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಇಷ್ಟು ವಿಳಂಬವಾಗುತ್ತದೆಂದರೆ, ಈ ವಿಷಯವಾಗಿ ಸ್ವಲ್ಪ ಯೋಚನೆ ಮಾಡಬೇಕು. ನಮ್ಮ ಭಾರತ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಪವಿತ್ರವಾದಂಥ ಸ್ಥಾನವಿದೆ. ಭೂಮಿ ತಾಯಿಯನ್ನು ಹೆಣ್ಣು ಎಂದು ಹೇಳುತ್ತೇವೆ, ಪ್ರಕೃತಿ ಮಾತೆಯನ್ನು ಹೆಣ್ಣು ಎಂದು ಹೇಳುತ್ತೇವೆ, ಭಾರತ ದೇಶವನ್ನು ಹೆಣ್ಣು ಎಂದು ಹೇಳುತ್ತೇವೆ, ನದಿಗಳನ್ನು ಕೂಡ ನಾವು ಹೆಣ್ಣು ಮಕ್ಕಳ ರೂಪದಲ್ಲಿ ನೋಡುತ್ತೇವೆ, ಹೆಣ್ಣಿಗೆ ಇಷ್ಟು ಪವಿತ್ರವಾದ ಸ್ಥಾನವಿದ್ದಾಗ, ನಮಗೆ ಸಂಪತ್ತು ಬೇಕೆಂದರೆ ಲಕ್ಷ್ಮೀ ದೇವಿಯನ್ನು ಪೂಜೆ ಮಾಡುತ್ತೀರಿ, ವಿದ್ಯೆ ಬೇಕೆಂದರೆ ಸರಸ್ವತಿಯನ್ನು ಪೂಜೆ ಮಾಡುತ್ತೀರಿ, ಕಾಳಿಯನ್ನು ಪೂಜೆ ಮಾಡುತ್ತೀರಿ. ಆದರೆ ನಮ್ಮ ಭಾರತ ದೇಶದಲ್ಲಿ ಹೆಣ್ಣು "ಒಲಿದರೆ ನಾರಿ, ಮುನಿದರೆ ಮಾರಿ" ಎನ್ನುವ ಗಾದೆ ಮಾತಿದೆ. ಇವತ್ತಿನ ಪರಿಸ್ಥಿತಿಯನ್ನು ನೋಡುತ್ತಿರಬೇಕಾದರೆ, ಇದೆಲ್ಲಾ ವಿಳಂಬವಾಗುವಂಥದ್ದು, ದಿನ ಬೆಳಗಾದರೆ 2 ವರ್ಷದ ಮಗುವಿನ ಮೇಲೆ, 16 ವರ್ಷದ ಯುವತಿ ಮೇಲೆ ಒಬ್ಬ ಕಾಮುಕ ಕಾಮಾಂಧಕಾರದಲ್ಲಿದ್ದುಕೊಂಡು ಅವಳನ್ನು ರೇಪ್ ಮಾಡುತ್ತಾನೆ. ಒಬ್ಬ 12 ವರ್ಷದ ಯುವತಿ ಮೇಲೆ ಗ್ಯಾಂಗ್ ರೇಪ್ ಆಗುತ್ತದೆ, ಈ ಬಗ್ಗೆ ಸ್ವಲ್ಪ ಯೋಚನೆ ಮಾಡಿ, ನಮಗೆ ಏನಾದರೂ ಸ್ವಲ್ಪ ಆದರೆ ನಮಗೆ ಎಷ್ಟು ಕಷ್ಟವಾಗುತ್ತದೆ. ಆದರೆ ಗ್ಯಾಂಗ್ ರೇಪಿಗೆ ಬಲಿಯಾದಂಥ ಆ ಹೆಣ್ಣು ಮಗಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಎರಡೂ ರೀತಿಯಿಂದಲೂ ಕೂಡ ಅವಳು ಕ್ಷಣ ಕ್ಷಣಕ್ಕೂ ಜೀವನ ಪೂರ್ತಿ ಸಾಯುತ್ತಿರುತ್ತಾಳೆ. ಇವತ್ತು ಸರಗಳ್ಳತನ ಇರಬಹುದು, ಎಲ್ಲಕ್ಕಿಂತ ಮಹತ್ವದ್ದು ಮಹಿಳೆಯರ ಮೇಲೆ ಆಗುವಂಥ ಅನ್ಯಾಯವಿರಬಹುದು, ಬಸ್‌ನಲ್ಲೂ ಕೂಡ ಹೋಗುವ ಆಗಿಲ್ಲ, ಗಾರ್ಡನ್‌ನಲ್ಲಿ ಕೂರುವ ಆಗಿಲ್ಲ, ಮಕ್ಕಳನ್ನು ಶಾಲೆಗೆ ಕಳುಹಿಸುವ ಹಾಗೆ ಇಲ್ಲ, ಈ ರೀತಿಯಾದ ವಾತಾವರಣ ಇತ್ತೆಂದರೆ ನಿಜವಾಗಲೂ ಈ ಸರ್ಕಾರದ ವೈಫಲ್ಯತೆಯನ್ನು ನಾವು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನೋಡುತ್ತಿದ್ದೇವೆ. ಅದಕ್ಕೆ ದಯವಿಟ್ಟು ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ, ಗಂಡು ಮಕ್ಕಳು, ಹೆಣ್ಣು ಮಕ್ಕಳು ಎನ್ನುವುದಕ್ಕಿಂತ, ಈಗ ನಡೆಯುತ್ತಿರುವ ಈ ಒಂದು ಪರಿಸ್ಥಿತಿಯನ್ನು ನೋಡಿ, ಕಾನೂನಿನಲ್ಲಿ ಒಂದು ಕಠಿಣವಾದಂಥ ಶಿಕ್ಷೆಯನ್ನು ಅಂಥ ಕಾಮುಕರಿಗೆ ಕೊಡಬೇಕೆಂದು ನಾವೆಲ್ಲಾ ಮಹಿಳೆಯರು ತಮಗೆ ಒತ್ತಾಯ ಮಾಡುತ್ತೇವೆ. ಏಕೆಂದರೆ, 12ನೇ ಶತಮಾನದಲ್ಲಿ ಬಸವಣ್ಣನವರು "ಮೊಲೆ, ಮುಡಿ ಬಂದರೆ ಹೆಣ್ಣೆಂಬರು, ಗಡ್ಡ-ಮೀಸೆ ಬಂದರೆ ಗಂಡೆಂಬರು, ಆದರೆ ಒಳಗೆ ಸುಳಿಯುವ ಆತ್ಮ ಹೆಣ್ಣು ಅಲ್ಲ, ಗಂಡು ಅಲ್ಲ" ಎಂದು ಹೇಳಿದರು. ಒಂದು ಬಾರಿ ತಾವು ಯಾರು ಕಾನೂನಿನಲ್ಲಿ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಒಂದು ದಿವಸ ನಮ್ಮ ಕರ್ನಾಟಕ ರಾಜ್ಯದ ಹೆಣ್ಣು ಮಕ್ಕಳೆ ಅಂಥವರಿಗೆ ಶಿಕ್ಷೆ ಕೊಡುವ ನಿಟ್ಟಿನಲ್ಲಿ ಉಗ್ರ ರೂಪವನ್ನು ತಾಳಬಹುದೆಂದು ನಾನು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದಕ್ಕೆ ದಯವಿಟ್ಟು ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಸರಗಳ್ಳತನವಿರಬಹುದು, ರೇಪ್ ಕೇಸ್ ಇರಬಹುದು, ಪ್ರತಿಯೊಂದು ಮನೆಯ ಹೆಣ್ಣು ಮಗಳು ನಮ್ಮ ನಾಡಿನ ಒಬ್ಬ ಹೆಣ್ಣು ಮಗಳಿದ್ದಾಳೆ. ಕಳೆದ 2 ವರ್ಷಗಳ ಹಿಂದೆ ದೆಹಲಿಯಲ್ಲಿ ಒಂದು ರೇಪ್ ಆಯಿತು, ಇವತ್ತು ಕರ್ನಾಟಕದಲ್ಲಿ ಬೆಂಗಳೂರಿನಲ್ಲಿ ನಾವು ನೋಡುತ್ತಿದ್ದೇವೆ. ನಾಳೆ ನಮ್ಮ ಜಿಲ್ಲೆಗೆ ಬರಬಹುದು, ನಾಡಿದ್ದು ನಮ್ಮ ಊರಿಗೆ ಬರಬಹುದು, ಆಮೇಲೆ ನಮ್ಮ ಮನೆಗೆ ಒಂದು ದಿವಸ ಈ ರೀತಿಯ ಪರಿಸ್ಥಿತಿ ಬರಬಹುದು. ಅದಕ್ಕೆ ಈ ಸದನದಲ್ಲಿರುವಂಥ 224 ಜನ ಶಾಸಕರು ಇದರ ಬಗ್ಗೆ ಒಂದು ಚಿಂತನೆ ಮಾಡಿ, ಹೆಣ್ಣು ಮಕ್ಕಳಿಗೆ ಸಂರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ನಾನು ಕೂಡ ಇದನ್ನು ಒಪ್ಪುತ್ತೇನೆ. ಆದರೆ ಅದು ಸರ್ಕಾರದ ವೈಫಲ್ಯವಲ್ಲ, ಇಡೀ ಭಾರತದಲ್ಲಿ ಎರಡು ವರ್ಷಗಳ ಮಗುವಿನಿಂದ ಹಿಡಿದು 90 ವರ್ಷಗಳವರೆಗಿನ ಎಲ್ಲಾ ಹೆಣ್ಣು ಮಕ್ಕಳು ಹೆದರುವಂಥ ಸ್ಥಿತಿ ಇದೆ. ಅದಕ್ಕೆ ಜಾತಿ ಇಲ್ಲ, ಪಕ್ಷ ಇಲ್ಲ. ಆ ಕಾಮುಕರ ಬಗ್ಗೆ ಶ್ರೀಮತಿ ರಾಮಕ್ಕನವರು ಹೇಳಿದ ಹಾಗೆ ಸಾರ್ವಜನಿಕವಾಗಿ ಅವನ್ನು ಹ್ಯಾಂಗ್ ಮಾಡಿದರೆ, ಅದನ್ನು ನೋಡಿದರೆ ಇಂಥ ಕೃತ್ಯಗಳು ನಿಲ್ಲಬಹುದು. ಅದಕ್ಕೆ ಸರ್ಕಾರ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹೊಣೆಯಲ್ಲ, ಜನರು ಹೊಣೆಯಾಗಿದ್ದಾರೆ. ನಮ್ಮ ಮನೆಯೊಳಗಿರುವ ನಮ್ಮ ಜನರನ್ನು, ನಮ್ಮ ಕೈ ಕೆಳಗೆ ಕೆಲಸ ಮಾಡುವ ನಮ್ಮವರನ್ನು, ನಾವು ಸರಿ ದಾರಿಗೆ ತರುವುದಕ್ಕೆ ಸಾಧ್ಯವಾದರೆ, ಸಮಾಜ ಸರಿಯಾಗಿ ಇರುತ್ತದೆ. ಎಲ್ಲರ ಮನೆಯಲ್ಲೂ ಅವನಿಗೂ ತಾಯಿ ಇರುತ್ತಾಳೆ, ಅವನಿಗೂ ಒಬ್ಬ ಮಗಳು ಇರುತ್ತಾಳೆ, ಇವತ್ತು ಮಗಳ ಮೇಲೆ ಅತ್ಯಾಚಾರ ಮಾಡುವಂಥ ತಂದೆ ಇದ್ದಾನೆ, ಶಿಷ್ಯೆಯ ಮೇಲೆ ಅತ್ಯಾಚಾರ ಮಾಡುವಂಥ ಗುರು ಹುಟ್ಟಿಕೊಂಡಿದ್ದಾನೆ. ನಾವು ಹಾಗೆ ಸುತ್ತ-ಮುತ್ತಲೂ ನೋಡಿದರೆ, ನಾವು ಹೇಳಿದ ರೀತಿಯಲ್ಲಿ ಇಲ್ಲ. ನಾವು ಈ ಸದನದಲ್ಲೂ ಮಾತನಾಡುವ ಹಾಗೆ ಇಲ್ಲ, ಅಂಥ ನೋವನ್ನು ನಾವೆಲ್ಲಾ ಅನುಭವಿಸಿದ್ದೇವೆ, ನೋಡಿದ್ದೇವೆ, ಕಂಡಿದ್ದೇವೆ, ಯಾರೋ ಅತ್ತಾಗ ನಾವು ಅತ್ತಿದ್ದೇವೆ. ಆದರೆ ಏನು ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕೇಂದ್ರ, ರಾಜ್ಯ ಎಲ್ಲಾ ಸೇರಿಕೊಂಡು ಕಾನೂನಿನಲ್ಲಿ ಬದಲಾವಣೆ ಮಾಡಿ, ಕಾನೂನಿನ ಬಿಸಿ ಮುಟ್ಟಿದಾಗ ಮಾತ್ರ, ಇದು ಸಾಧ್ಯ. ಸ್ಟೇಷನ್‌ಗೆ ಹೋದರೆ ಸ್ಟೇಷನ್‌ನಲ್ಲಿ ಹೊಡೆಯುವ ಹಾಗೆ ಇಲ್ಲ, ತಂದೆ-ತಾಯಿ ಅನ್ಯಾಯ ಮಾಡುವ ಮಗುವಿಗೆ ಹೊಡೆಯುವ ಹಾಗೆ ಇಲ್ಲ, ಶಾಲೆಗೆ ಹೋಗಿ ಮಗು ತಪ್ಪು ಮಾಡಿದ್ದಾನೆಂದು ಹೇಳಿದರೆ, ಶಿಕ್ಷಕ ಹೊಡೆಯುವ ಹಾಗೆ ಇಲ್ಲ, ಸಮಾಜವನ್ನು ತಿದ್ದುವವರು ಯಾರು? ಕಾನೂನು ಗಟ್ಟಿಯಾಗಿದ್ದರೆ ಇದೆಲ್ಲಾ ಸರಿಯಾಗುತ್ತದೆನ್ನುವ ಮಾತಿಗ ೆ ನನ್ನದು ಸಹಮತವಿದೆಯೆಂದು ಹೇಳುತ್ತೇನೆ.

ಶ್ರೀಮತಿ ಶಶಿಕಲಾ ಜೊಲ್ಲೆ: ಮಾನ್ಯ ಉಪಾಧ್ಯಕ್ಷರೆ, ಈಗ ಬರಗಾಲ ಬಂತೆಂದರೆ ತಾವೆಲ್ಲರೂ ನಿಯೋಗ ತೆಗೆದುಕೊಂಡು ಕೇಂದ್ರಕ್ಕೆ ಹೋಗುತ್ತೀರಿ, ಆ ರೀತಿಯಲ್ಲಿ ಹೆಣ್ಣು ಮಕ್ಕಳ ನಿಯೋಗವನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗಿ, ನಾವೆಲ್ಲರೂ ಸೇರಿಕೊಂಡು ಮಾನ್ಯ ಪ್ರಧಾನಮಂತ್ರಿಯವರಿಗೆ ಕ-ಠಿಣವಾದಂಥ ಶಿಕ್ಷೆಯನ್ನು ಕೊಡಬೇಕೆಂದು ವಿನಂತಿ ಮಾಡಿ ಕೊಳ್ಳೋಣ. ಇದರ ಜೊತೆಗೆ ದೇಶವಷ್ಟೆ ಅಲ್ಲ, ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಹೆಚ್ಚಿಗೆ ಯೋಚನೆ ಮಾಡಿ, ಒಂದು ನಿಯೋಗವನ್ನು ಕರೆದುಕೊಂಡು ಹೋಗು ವಂಥ ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಲಿ, ಎಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ, ಅವರು ಹೇಳಿರುವುದರಲ್ಲಿ ಒಂದು ಮಾತು.. .

ಉಪಾಧ್ಯಕ್ಷರು: ಈಗ ಶ್ರೀಮತಿ ವಿನಿಷಾ ನಿರೋರವರು ಮಾತನಾಡಲು ಎದ್ದು ನಿಂತಿದ್ದಾರೆ.

ಶ್ರೀಮತಿ ವಿನಿಷಾ ನಿರೋ(ನಾಮ ನಿರ್ದೇಶನ): ಮಾನ್ಯ ಉಪಾಧ್ಯಕ್ಷರೆ, the rapes and atrocities against women which are happening not only in Karnataka but in the entire country are very disturbing. We as people who sit here, who make laws feel helpless. Because, most of these criminals get away on bail. We should make sure that from Karnataka, irrespective of party lines we should join together and bring very stringent rules. Death penalties are opposed, their castration is opposed. So, what is the other solution? We should make sure that we take very very strict action. We have a committee, we go and visit so many of these victims and we see their helplessness. That is on one part about taking action against these criminals. They are getting away with it because there is no law to hold them back or to give them severe punishment. The second aspect of it is, we need to teach our children from the very small classes. Moral science should be introduced in all our schools to make sure that children learn to respect one and the other irrespective of whether they are boys or girls. The other part of it is that we should make sure that whatever compensation the Government is giving to these victims is given in a speedy manner that the cases

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

are closed without being dragged on for years and months. That's why people become hostile and also the victims should have access to psychological counselling which I find, is missing and that is something we need to address. As women over here, we feel deeply for what happens to our children and I request everybody across all party lines of Karnataka, we should give the representation to the Prime Minister and to all the people concerned, to make sure that we speed up bringing out these laws against atrocities against women and children. Thank you sir.

ಶ್ರೀಮತಿ ವೈ.ರಾಮಕ್ಕ: ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ.. ..

ಉಪಾಧ್ಯಕ್ಷರು: ಅಯಿತು, ನೀವು ಮಾತನಾಡಿದಿರಲ್ಲಾ..

ಶ್ರೀಮತಿ ವೈ.ರಾಮಕ್ಕ: ಮಾನ್ಯ ಉಪಾಧ್ಯಕ್ಷರೆ, ಎಲ್ಲರೂ ಒಂದು ಗಂಟೆ, ಎರಡು ಗಂಟೆಗಳ ಕಾಲ ಮಾತನಾಡುತ್ತಾರೆ. ನಾವು ಹೆಣ್ಣು ಮಕ್ಕಳು ಮಾತನಾಡುವುದು ಒಂದೇ ದಿವಸ, ನಾವು ಮಾತನಾಡುತ್ತೇವೆ. ಏಕೆಂದರೆ, ಈಗ ಸರ್ಕಾರ ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಲಿಲ್ಲವೆಂದರೆ, ಒಂದು ಕಾನೂನು ಮಾಡಿ ಬಿಡಿ. ಪೇಪರ್‌ನಲ್ಲಿ ಮತ್ತು ಟಿ.ವಿ.ಗಳಲ್ಲಿ ಕೊಡಿ. ಹೆಣ್ಣು ಮಕ್ಕಳು ಹುಟ್ಟುವುದೇ ಬೇಡ, ಹೆಣ್ಣು ಮಗು ಹುಟ್ಟಿದ ತಕ್ಷಣ ಸಾಯಿಸಿ ಬಿಡಿ ಎಂದು ಕೊಡಿ, ಗಂಡು ಮಕ್ಕಳು ಹುಟ್ಟಿದರೆ ಅವನು ಆಸ್ತಿಗೆ ವಾರಸುದಾರನಾಗ ುತ್ತಾನೆಂದು ಅವನಿಗೆ ರಕ್ಷಣೆ ಕೊಟ್ಟು ಬಿಡಿ, ಎಲ್ಲಾ ಪೇಪರ್‌ಗಳಲ್ಲೂ ಕೊಟ್ಟು ಬಿಡಿ. ಏಕೆಂದರೆ, ನಾವು ಕೊನೆಯದಾಗಿ ಇದನ್ನು ಕೇಳುತ್ತಿರುವುದು. ಹೆಣ್ಣು ಮಕ್ಕಳಿಗೆ ರಕ್ಷಣೆ ಬೇಕು, ಹೆಣ್ಣು ಮಕ್ಕಳಿಗೆ ಸರ್ಕಾರ

ರಕ್ಷಣೆ ಕೊಡಲಿಲ್ಲವೆಂದರೆ, ನಾವು ಹೆಣ್ಣು ಮಕ್ಕಳೆಲ್ಲಾ ಸದನದ ಬಾವಿಗೆ ಇಳಿದು ಹೋರಾಟ ಮಾಡುತ್ತೇವೆ. ತಮ್ಮ ಮೂಲಕ ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಉಪಾಧ್ಯಕ್ಷರು: ಆಯಿತು.

ಶ್ರೀ ಎನ್.ಎ.ಹ್ಯಾರೀಸ್: ಶ್ರೀಮತಿ ರಾಮಕ್ಕನವರೆ, ಅರಬ್ಬಿ ದೇಶದಲ್ಲಿರುವಂಥ ಕಾನೂನು ಇಲ್ಲಿಗೆ ತಂದರೆ ಇದೆಲ್ಲಾ ಸರಿ ಹೋಗುತ್ತದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಐ.ಜಿ.ಯವರಿಗೆ Southern range Central IGರವರು ಬರೆದಿರುವ ಒಂದು ಪತ್ರವನ್ನು ಓದಿದರು. ಅವರು ಓದಿದ ಪ್ರಕಾರ ಅವರು ಏನು ಹೇಳುತ್ತಾರೆ. ನನ್ನ ಹತ್ತಿರ ಆ document ಇಲ್ಲ, ಯಾರು investigating Officers ಇದ್ದಾರೆ, ಅವರು accused and victim ಯಾರಿದ್ದಾರೆ. ಅವರು commission of crime ಆದಾಗ ಅವರು ಉಪಯೋಗಿಸಿದಂಥ ಬಟ್ಟೆಗಳು in time FSLಗೆ ಕಳುಹಿಸಿಲ್ಲ. ಅದು ಇಲ್ಲದೇ ಹೋದರೆ ಆ ಕೇಸ್ ನಿಲ್ಲುವುದಿಲ್ಲ. ಆ Investigating Officers ಅವರು ಯಾರೇ ಇರಲಿ, ಅವರಿಗೆ ಇದು ಬಹಳ ಅಗತ್ಯ ಇದನ್ನು ಕಳುಹಿಸಲೇಬೇಕೆಂಬ ಅರಿವು ಇಲ್ಲವೇ? ಅವರಿಗೆ ಅರಿವೇ ಇಲ್ಲ, knowledge ಇಲ್ಲವೆಂದರೆ ಒಂದು ಕ್ಷಣ ಕೂಡ ಅವರು departmentನಲ್ಲಿ ಇರಬಾರದು. They should be removed from service. ಅಥವಾ ಗೊತ್ತಿದ್ದೂ, ಬೇಕೆಂದು ಆರೋಪಿಗೆ ಸಹಾಯ ಮಾಡಬೇಕೆಂದು ಮಾಡಿದ್ದರೆ, ಅವರು ಇದುವರೆಗೂ ಅಮಾನತ್ತು ಆಗಿಲ್ಲ, ಅವರ ಮೇಲೆ ಏನು ಕ್ರಮ ಜರುಗಿಸಿಲ್ಲ? ಎಲ್ಲಾ correspondenceನಲ್ಲಿದೆ ಎಂದು ಆದರೆ, ಬಹುಶ: ಆರೋಪಿಗೆ ಜಾತಿಯದ್ದೋ, ಹಣದ್ದೋ, ರಾಜಕೀಯ ಪಕ್ಷದ್ದೋ, ಯಾವುದೋ ಒಂದು ಸಂಬಂಧವಿರುತ್ತದೆ, ಇದು ಮೂರು ಬಿಟ್ಟು ನಾಲ್ಕನೆಯದು ಯಾವುದೂ ಇರುವುದಕ್ಕೆ ಸಾಧ್ಯವಿಲ್ಲ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮುಂದು.. ..

25-11-2015/4.10/27/GG/PS

ಶ್ರೀ ಕೆ.ಆರ್. ರಮೇಶ್ ಕುಮಾರ್ (ಮುಂದುವರೆದುದು): ಒಂದು ಜಾತಿ, ಇನ್ನೊಂದು ಹಣ, ಮೂರನೆಯದು ರಾಜಕೀಯ ಪಕ್ಷ. ಅವರು ಯಾರೇ ಇದ್ದಿರಲಿ, ಕ್ರಮ ಜರುಗಿಸಬೇಕು. I have a daughter. ಇವತ್ತು ಸೋಮಶೇಖರ್ ಇಲ್ಲಿ ಇಲ್ಲ, ಅವರು ಇಲ್ಲಿ ಬಂದು ಮಾತನಾಡುವುದಕ್ಕೆ ಆಗ ುವುದಿಲ್ಲ. ನಾನೇ ಸೋಮಶೇಖರ್ ಎಂದು ತಿಳಿದುಕೊಳ್ಳೋಣ, that girl is my daughter. Home Minister ಬಂದು ಉತ್ತರವನ್ನು ಕೊಡಬೇಕಾಗಿಲ್ಲ. D.G. is here, Home Commissioner is here. Please take the information whether is it a fact, that such correspondence has taken place between I.G., Southern Range and your Head Office. And if that correspondence has taken place in the month of July, what is that the Government has done by now? If you have not done anything now, please take the action in the next half an hour. Otherwise, let me tell you, as a father, I will not sit in this House, even for a fraction of a second. It is not right. ಅವರಿ ಬಹಳ generous ಮನುಷ್ಯರು. ನಾನು ಮಾತನಾಡುವ ಧೋರಣೆಯಲ್ಲಿ ಮಾತನಾಡಲಿಲ್ಲ. ಇದಕ್ಕೆಲ್ಲ ಪಕ್ಷ, ಪಂಗಡ, ಇನ್ನೊಂದು, ಮತ್ತೊಂದು ಇರುತ್ತದೆಯೇ? ಜಗದೀಶ್ ಕುಮಾರ್‌ರವರು ನಿನ್ನೆ ಸತ್ತುಹೋದರು. I may not be here tomorrow. What I speak, what I do, what decision I take will go on record. We are all parents, we are grand parents. My mother is an woman, my wife is an woman, my sister is an woman, my daughter is a girl, she is an woman. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಜುಲೈ ತಿಂಗಳಲ್ಲಿ correspondence ಮಾಡಿ ಒಬ್ಬ

IG ಇಲ್ಲಿಯವರೆಗೂ ಕ್ರಮ ಜರುಗಿಸಿಲ್ಲ ಎಂದರೆ does it bring any credibility to us? ನಮಗೆ ಗೌರವ ಬರುತ್ತದೆಯೇ? ಕ್ರಮ ತೆಗೆದುಕೊಂಡಿದ್ದಾರೆಯೇ, ತೆಗೆದುಕೊಂಡಿಲ್ಲವೋ ಎನ್ನುವುದನ್ನು ತಿಳಿದುಕೊಳ್ಳದೇ ಮಾತನಾಡಲು ನಾನು ತಯಾರಾಗಿಲ್ಲ. ಕ್ರಮ ತೆಗೆದುಕೊಳ್ಳದಿದ್ದರೆ, ಬಹುಶ: ಆತ ಬಹಳ ಪ್ರಭಾವಶಾಲಿ ಇರಬಹುದು. ಕೋರ್ಟ್‌ನಲ್ಲಿ ಬೇಲ್ ಕೊಟ್ಟರೆ ನಾವು ಏನು ಮಾಡಬೇಕು ಎಂದು ಇವರು ಹೇಳಿದರು. ನಾನು ಹೋಂ ಮಿನಿಸ್ಟರ್ ಆಗಿದ್ದರೆ ಏನು ಮಾಡುತ್ತಿದ್ದೆ ಎಂದರೆ; ಆಫೀಸರ್ಸ್‌ಅನ್ನು ಕರೆದು ಹೇಳುತ್ತಿದ್ದೆ, ಇಂಥ ಆರೋಪಿಗಳು ಎಲ್ಲೆಲ್ಲಿ ಇರುತ್ತಾರೆ, ಅವರು ಬೇಲ್ ತೆಗೆದುಕೊಂಡು ಬಂದ ಮೇಲೆ, ಮೂರುಮೂರು ದಿವಸಕ್ಕೆ ಒಂದು ಸುಳ್ಳು ಕೇಸ್ ಹಾಕಿ ಅವರನ್ನು ಕರೆದುಕೊಂಡು ಬನ್ನಿ, ಅವನ ಕೈಕಾಲುಗಳನ್ನು ಕಂಪ್ಲೀಟ್‌ಆಗಿ ಮುರಿದುಬಿಡಿ, ಅವನನ್ನು ಸಾಯಿಸಬೇಡಿ, ಮುಂದಕ್ಕೆ ಅವನು ಓಡಾಡುವುದಕ್ಕೂ ಆಗಬಾರದು, ಏನು ಮಾಡುವುದಕ್ಕೂ ಆಗಬಾರದು, ನಿಮ್ಮ ಮೇಲೆ ಕೇಸೂ ಬರಬಾರದು.

ಶ್ರೀ ಕೆ.ಜೆ. ಜಾರ್ಜ್: ಹಾಗೆಲ್ಲ ಮಾಡಲಿಕ್ಕೆ ಆಗುತ್ತದೆಯೇ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾಡುತ್ತೇನೆ. Yes, we can do it, if we have the will.

ಶ್ರೀ ಕೆ.ಜೆ. ಜಾರ್ಜ್: ಯಾವುದೇ ಹೋಂ ಮಿನಿಸ್ಟರ್ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸರ್ಕಾರ ಎಂದರೆ ಭಯ ಬರಬೇಕು ಎಂದಿದ್ದರೆ, ತಪ್ಪು ಮಾಡಿದವನಿಗೆ ಭಯ ಬರಬೇಕು ಎಂದಿದ್ದರೆ ಆ ರೀತಿ ಮಾಡಿಯೇ ತೀರಬೇಕು.

ಶ್ರೀ ಕೆ.ಜೆ. ಜಾರ್ಜ್: ಇಲ್ಲಿ ಕಾನೂನು, ಕಾಯಿದೆಗಳಿವೆ. ಅದನ್ನು ಬಿಟ್ಟು ಏನೂ ಮಾಡುವುದಕ್ಕೆ ಆಗುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮನುಷ್ಯತ್ವ ಇದ್ದರೆ. ಮಾನವತ್ವ ಇದ್ದರೆ, ಮಾಡಬೇಕು ಎನ್ನುವ ಇಚ್ಛೆ ಇದ್ದರೆ ಮಾಡಿಯೇ ತೀರಬೇಕು.

ಶ್ರೀ ಕೆ.ಜೆ. ಜಾರ್ಜ್: ಆ ರೀತಿ Middle Eastನಲ್ಲಿ ಮಾಡಬಹುದು, ಚೈನಾದಲ್ಲಿ ಮಾಡಬಹುದು. ನಮ್ಮ ದೇಶದಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ನ್ಯಾಯಾಂಗದ ಪ್ರಕಾರ ನಾವು ಹೋಗಬೇಕಾಗುತ್ತದೆ.

Sri K.R. Ramesh Kumar: Channabasappa was a Home Minister. Siddaveerappa was a Home Minister. Rachaiah was a Home Minister. How did Rachaiah bring city under control? He is a Scheduled Caste man. Nobody remembers him. Nobody pays tributes to him. It was B.Rachaiah, ಬೆಂಗಳೂರಿನಲ್ಲಿದ್ದ underworld kings ಎಲ್ಲ ಓಡಿಬಿಟ್ಟರು, ಗೊತ್ತೇ? Then, P.G.Arlankar was a Commissioner of Police. Did not Mr. Rachaiah do it? ನಾನು ಯಾವುದೋ ಶತಮಾನದ್ದು ಹೇಳುತ್ತಿದ್ದೇನೆಯೇ? How can this happen?

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಯವರಿಗೆ ವಿನಂತಿ ಮಾಡೋಣ, ನಮ್ಮ ಹೈಕಮಾಂಡ್‌ಗೆ ವಿನಂತಿ ಮಾಡೋಣ, ನಮ್ಮ ರಮೇಶ್ ಕುಮಾರ್‌ರವರನ್ನು ಹೋಂ ಮಿನಿಸ್ಟರ್‌ಆಗಿ ಮಾಡಿಬಿಟ್ಟು, ಯಾವುದೇ ಅತ್ಯಾಚಾರ ನಡೆಯಬಾರದು, ಯಾವುದೇ ಕೊಲೆ ನಡೆಯಬಾರದು, ಯಾವುದೇ ಘಟನೆ ನಡೆಯಬಾರದು, ಆ ರೀತಿ ನೀವು ಮಾಡುವುದಾದರೆ ಪರವಾಗಿಲ್ಲ.

(ಈ ಹಂತದಲ್ಲಿ ವಿರೋಧ ಪಕ್ಷದ ಅನೇಕ ಸದಸ್ಯರು, ರಮೇಶ್ ಕುಮಾರ್‌ರವರನ್ನು ಹೋಂ ಮಿನಿಸ್ಟರ್ ಮಾಡಿ ಎಂದು ಏಕಕಾಲದಲ್ಲಿ ಹೇಳುತ್ತಿದ್ದರು.)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

Sri K.R. Ramesh Kumar: Alright, I have taken this as a challenge. I will not take it, ನಾನು ಒಂದು ಮಂತ್ರಿ ಸ್ಥಾನ ಎಂದು ತೆಗೆದುಕೊಳ್ಳುವುದಿಲ್ಲ, ಈ ಸದನದಲ್ಲಿ ಪ್ರಮಾಣ ಮಾಡುತ್ತೇನೆ, ಚಾಲೆಂಜ್ ಮಾಡಿ ನನಗೆ ಜವಾಬ್ದಾರಿ ಕೊಡಿ, ಒಂದು ತಿಂಗಳೊಳಗಾಗಿ atmosphere ಬದಲಾಗಲಿಲ್ಲವೆಂದರೆ I will not show my face to this House. ಅಧಿಕಾರವೆಂದರೆ ಏನೆಂದು ತಿಳಿದುಕೊಂಡಿದ್ದೀರಿ? ಅಧಿಕಾರವೆಂದರೆ ಜವಾಬ್ದಾರಿ.

(ಸದಸ್ಯರಾದ ಶ್ರೀ ಕೆ.ಆರ್. ರಮೇಶ್ ಕುಮಾರ್‌ರವರ ಮಾತಿಗೆ ವಿರೋಧ ಪಕ್ಷದ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ರಮೇಶ್ ಕುಮಾರ್‌ರವರ ಭಾವನೆಗಳೇನಿವೆ, ಆ ಭಾವನೆ ಇಡೀ ಸದನದ ಎಲ್ಲ ಶಾಸಕರ ಭಾವನೆಯಾಗಿದೆ. ಅವರು ಹೇಳಿರುವಂಥಾದ್ದು ಏನೆಂದರೆ, ಜನ ಅಧಿಕಾರ ಕೊಟ್ಟಂಥ ಸಂದರ್ಭದಲ್ಲಿ ಜನರ ರಕ್ಷಣೆ ಗೋಸ್ಕರ ಅದನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎನ್ನುವುದನ್ನು ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ರಮೇಶ್ ಕುಮಾರ್‌ರವರನ್ನು ಮಂತ್ರಿಯನ್ನಾಗಿ ಮಾಡೋಣ ಎಂದು ಸಚಿವರಾದ ಜಾರ್ಜ್‌ರವರು ಹೇಳಿದರು. ಅವರು ಅದಕ್ಕೆ ಅರ್ಹರಿದ್ದಾರೆ, ಇಲ್ಲವೆಂದಲ್ಲ. ಅವರಲ್ಲಿನ ಭಾವನೆಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ಇಷ್ಟೊಂದು ಅತ್ಯಾಚಾರ, ಲೈಂಗಿಕ ಕಿರುಕುಳದ ಪ್ರಕರಣಗಳು ನಡೆದಿವೆಯಲ್ಲ, ಅವುಗಳಲ್ಲಿ ಒಂದೇ ಒಂದು ಪ್ರಕರಣದಲ್ಲಿ ಸರ್ಕಾರ, ಅತ್ಯಾಚಾರಕ್ಕೆ ಒಳಗಾದ ಯಾವುದಾದರೂ ಹೆಣ್ಣುಮಗಳಿಗೆ ಪರಿಹಾರ ಕೊಟ್ಟಿರುವಂಥ ಒಂದು ದಾಖಲಾತಿ ಇದ್ದರೆ ತೋರಿಸಲಿ. ಅದು ನಿನ್ನೆ ವಿಧಾನ ಪರಿಷತ್ತಿನಲ್ಲಿ ಕೂಡ ಚರ್ಚೆಯಾಗಿದೆ. ಮಾನಸಿಕವಾಗಿ, ದೈಹಿಕವಾಗಿ ಅತ್ಯಾಚಾರಕ್ಕೆ ಒಳಗಾದಂಥ ಹೆಣ್ಣುಮಗಳಿಗೆ ಸರ್ಕಾರವೇ ಸ್ವತ: ಮುಂದೆ ನಿಂತುಕೊಂಡು ಅವರಿಗೆ ಎಲ್ಲ ರೀತಿಯಾದಂಥ ಸಹಾಯವನ್ನು ಮಾಡಬೇಕಾಗುತ್ತದೆ, ಪರಿಹಾರವನ್ನು ಕೊಡಬೇಕಾಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ುತ್ತದೆ. ಮಾನ್ಯ ಸದಸ್ಯರಾದ ವಿನಿಷಾ ನೀರೋರವರು ಹೇಳಿದ ಹಾಗೆ ಅವರಿಗೆ ಕೌನ್ಸಿಲಿಂಗ್ ಮಾಡಬೇಕಾಗ ುತ್ತದೆ. ಚರ್ಚೆ ಮಾಡುವಂಥ ಸಂದರ್ಭದಲ್ಲಿ ಒಂದು ಪ್ರಕರಣ ಹೊರಗೆ ಬಂತು, ಏನೆಂದರೆ D.G.ಯವರೆ ಲೆಟರ್ ಬರೆದರೂ ಕೂಡ ಜುಲೈ ತಿಂಗಳಿಂದ ಇಲ್ಲಿಯವರೆಗೆ ಆ ಅಧಿಕಾರಿಯನ್ನು ಕನಿಷ್ಟ ಅಮಾನತ್ತು ಮಾಡುವಂಥ ಕೆಲಸವನ್ನು ಸರ್ಕಾರ ಮಾಡದೇ ಹೋದರೆ, ಶಾಸಕರಾಗಿ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ನಮಗೆ ನೈತಿಕತೆ ಇರುವುದಿಲ್ಲ ಎನ್ನುವುದನ್ನು ರಮೇಶ್ ಕುಮಾರ್‌ರವರು ಬಹಳ ಸ್ಪಷ್ಟವಾಗಿ ಸದನಕ್ಕೆ ತಿಳಿಸುವಂಥ ಕೆಲಸವನ್ನು ಮಾಡಿದ್ದಾರೆ. ಇಲ್ಲಿ ಪಕ್ಷ, ಪಂಗಡ ಎನ್ನುವ ಮಾತು ಬೇಡ. ಅದಕ್ಕಾಗಿ, ಆ ಅಧಿಕಾರಿ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ನಾನೂ ಕೂಡ ಆಗ್ರಹ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್: ಸನ್ಮಾನ್ಯ ಉಪಾಧ್ಯಕ್ಷರೆ, ಒಂದು ಸ್ಪಷ್ಟನೆ ಕೊಡುತ್ತೇನೆ, ರಮೇಶ್ ಕುಮಾರ್‌ರವರು ತಮ್ಮ ಭಾವನೆಯನ್ನೇನು ವ್ಯಕ್ತಮಾಡಿದ್ದಾರೆ, ಅದಕ್ಕೆ ನಾವೆಲ್ಲ ಇಡೀ ಸದನ ಒಪ್ಪುತ್ತದೆ. ನಾನು ಗೃಹ ಮಂತ್ರಿಯಾಗಿದ್ದಾಗಲೂ ಸಹ ಅದೇ ಚಿಂತನೆಯಲ್ಲಿದ್ದೆ. ಏಕೆಂದರೆ, ಯಾವುದೇ ಅತ್ಯಾಚಾರ ಆಗ ಬಾರದು, ಯಾವುದೇ ಸರಗಳ್ಳತನ ಆಗಬಾರದು ಎನ್ನುವ ಉದ್ದೇಶದಿಂದಲೇ ಎಲ್ಲ ಕ್ರಮಗಳನ್ನು ತೆಗ ೆದುಕೊಂಡೆವು. ನಡಹಳ್ಳಿಯವರು ಹೇಳಿದ ಹಾಗೆ, ನಾವು ಈಗಾಗಲೇ ಎಸ್.ಪಿ.ಯವರಿಗೆ ಹೇಳಿದ್ದೇವೆ, ಎಲ್ಲಿಯಾದರೂ ಅತ್ಯಾಚಾರದ ಪ್ರಕರಣವಾದರೆ ಅವರ ಮನೆಗಳಿಗೆ ವಿಸಿಟ್ ಮಾಡಬೇಕು, ಮಹಿಳಾ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಅವರಿಗೆ ಎಲ್ಲ ರೀತಿಯ ರಕ್ಷಣೆ ಕೊಡಬೇಕು ಎಂದು ಹೇಳಿದ್ದೇವೆ. ಮತ್ತು ಅವರಿಗೆ ಪರಿಹಾರವನ್ನು ಕೊಡಬೇಕು ಎಂದು ಹೇಳಿದ್ದಾರೆ. ನಾನೇನು ಹೇಳುತ್ತಿದ್ದೇನೆ ಎಂದರೆ ಇಂಥ ಪ್ರಕರಣಗಳು ಬರೀ ಕರ್ನಾಟಕದಲ್ಲಿ ಮಾತ್ರ ನಡೆಯುತ್ತಿಲ್ಲ, ಇಡೀ ರಾಷ್ಟ್ರದಲ್ಲಿ, ಅದು ದೆಹಲಿ ಇರಬಹುದು, ಮಧ್ಯಪ್ರದೇಶ ಇರಬಹುದು, ಗುಜರಾತ್ ಇರಬಹುದು ಎಲ್ಲ ಕಡೆಯೂ ನಡೆಯುತ್ತಿದೆ. ಬರೀ ಕರ್ನಾಟಕದಲ್ಲಿ ಮಾತ್ರ ನಡೆಯುತ್ತಿದ್ದರೆ, ಇದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳಬಹುದು. ಇಡೀ ರಾಷ್ಟ್ರದಲ್ಲಿ ಇಂಥ ಕೆಲವೊಂದು ಘಟನೆಗಳಾಗುತ್ತಿವೆ. ಇಂಥ ಘಟನೆಗಳು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಡೆದರೆ ಅದರ ಮೇಲೆ ತ್ವರಿತವಾಗಿ ಕ್ರಮ ತೆಗೆದುಕೊಳ್ಳಲು ಈಗಾಗಲೇ 10 fast track courts ಮಾಡಿದ್ದಾರೆ. ಅವರು ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಬಹುಶ: ಅದು ಸರ್ಕಾರದ ಗಮನಕ್ಕೆ ಬರುವುದಿಲ್ಲ, D.G.P.ಯವರೇನಾದರೂ ಜುಲೈನಲ್ಲಿ I.G.ಗೆ ಬರೆದಿದ್ದು, ಇಲ್ಲಿಯವರೆಗೆ ಕ್ರಮ ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ನಮ್ಮ ಇಲಾಖೆ ಅದರಲ್ಲಿ ವಿಫಲವಾಗಿದೆ, ಆದಷ್ಟು ಬೇಗನೆ, ಅವರು ಹೇಳಿದಂತೆ ಅರ್ಧ ಗಂಟೆಯಲ್ಲಿಯೇ ಅವರ ಮೇಲೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಗೃಹ ಸಚಿವರ ಪರವಾಗಿ ಹೇಳುತ್ತಿದ್ದೇನೆ. ಯಾವುದೇ ರೀತಿಯಲ್ಲೂ ಕೂಡ ಆ ರೀತಿಯ ಲೋಪದೋಷ ನಮ್ಮ ಕಡೆಯಿಂದ ಆಗಬಾರದು ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ, ಅದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಸಾ.ರಾ. ಮಹೇಶ್: ಮಾನ್ಯ ಉಪಾಧ್ಯಕ್ಷರೆ ಒಂದು ನಿಮಿಷ. ಕಳೆದ ವಿಧಾನಸಭೆಯಲ್ಲಿ ಇವರು ಗೃಹ ಸಚಿವರಾಗಿದ್ದಾಗ ಮಾತು ಕೊಟ್ಟಿದ್ದರು, ಮೈಸೂರಿನಲ್ಲಿ ಹಣ ಲೂಟಿಯಾದ ಪ್ರಕರಣದಲ್ಲಿ I.G. ಮೇಲೆ ಮತ್ತು Dy.S.P. ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಉಪಾಧ್ಯಕ್ಷರು: ಆಯಿತುಬಿಡಿ, ಅದು ಬೇರೆ ವಿಷಯವಾಗುತ್ತದೆ.

ಶ್ರೀ ಸಾ.ರಾ. ಮಹೇಶ್: ಹಾಗಾದರೆ ಅವರನ್ನು ನೀವೇ ರಕ್ಷಣೆ ಮಾಡುವಿರಾ?

ಉಪಾಧ್ಯಕ್ಷರು: ರಕ್ಷಣೆಯ ಪ್ರಶ್ನೆಯಿಲ್ಲ.

ಶ್ರೀ ಕೆ.ಜೆ. ಜಾರ್ಜ್: ಅದಕ್ಕೆ ಅವರು ಬೇರೊಂದು ಪ್ರಶ್ನೆ ಹಾಕಲಿ, ಅದಕ್ಕೆ ಉತ್ತರ ಕೊಡುತ್ತೇವೆ. ಮಹೇಶ್‌ರವರೇ ಆ ವಿಚಾರವನ್ನು ನೀವು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿ, ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೇವೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಾರಾ. ಮಹೇಶ್: ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಕಳೆದ ವಿಧಾನಸಭೆಯಲ್ಲಿ ಹೇಳಿದ್ದಿರಿ. ಇದರಲ್ಲಿರುವ ಪಕ್ಷಪಾತವನ್ನು ನೋಡಿದರೆ ಮತ್ತೆ ಹೇಗೆ ರಕ್ಷಣೆ ಸಿಗುತ್ತದೆ? ಅಲ್ಲಿಗೆ ರಮೇಶ್ ಕುಮಾರ್‌ರವರು ಹೇಳಿದುದು ಸರಿಯಾಯಿತಲ್ಲವೇ? ಲೂಟಿ ಮಾಡಿದಂಥ I.G. ಮತ್ತು Dy.S.P.ಗೆ ನೀವು ರಕ್ಷಣೆ ಕೊಟ್ಟರೆ ಹೇಗೆ?

ಶ್ರೀ ಕೆ.ಜೆ. ಜಾರ್ಜ್: ನೀವು ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕಳುಹಿಸಿ. ನಮ್ಮ ಗೃಹ ಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಸಾ.ರಾ. ಮಹೇಶ್: ಆವತ್ತು ಇಲ್ಲೇ ಕೇಳಿದ್ದೆನಲ್ಲ, ಚರ್ಚೆ ಮಾಡಿದೆವಲ್ಲ.

ಉಪಾಧ್ಯಕ್ಷರು: ನೀವು ಬೇರೆ ರೂಪದಲ್ಲಿ ಕೇಳಿ, ಉತ್ತರ ಕೊಡುತ್ತಾರೆ.

ಶ್ರೀ ಕೆ.ಜೆ.ಜಾರ್ಜ್: ಜನರಲ್‌ಆಗಿ ಎದ್ದುಬಿಟ್ಟು ಕೇಳಿದರೆ ಆಗುವುದಿಲ್ಲ.

ಉಪಾಧ್ಯಕ್ಷರು: ಆಯಿತುಬಿಡಿ, ಜಗದೀಶ ಶೆಟ್ಟರ್‌ರವರೇ, ನೀವು ಪೂರೈಸಿ.

ಶ್ರೀ ಸಿ.ಟಿ. ರವಿ: ಈಗ ಚರ್ಚೆ ನಡೆಯುತ್ತಿರುವುದೇ ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಹಾಗೆ. ಆಗ ಿಲೇ ನೀವೇ ಮಾತನಾಡುತ್ತಾ ಹೇಳಿದಿರಿ, ನಾವು ಅರಬ್ ದೇಶದಲ್ಲಿಲ್ಲ, ಸಂವಿಧಾನಕ್ಕೆ ಅನುಗುಣವಾಗಿ ನಾವು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದಿರಿ. F.S.L. reportಅನ್ನು ಮಾಡಿಸಬಾರದು ಎಂದು ಸಂವಿಧಾನ ಹೇಳಿತ್ತೇ? ನಿಮ್ಮ ಪೊಲೀಸ್ ಅಧಿಕಾರಿ ನಿರ್ಲಕ್ಷ್ಯ ವಹಿಸಿದ್ದಾನಲ್ಲ, ಅವನ ಮೇಲೆ ಕ್ರಮ ತೆಗ ೆದುಕೊಳ್ಳಬಾರದು ಎಂದು ಸಂವಿಧಾನ ಹೇಳಿದೆಯೇ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ. ಜಾರ್ಜ್: ರವಿಯವರೇ, ಅದಕ್ಕೆ ಉತ್ತರ ಕೊಟ್ಟಿದ್ದೇನಲ್ಲ, ಅರ್ಧ ಗಂಟೆಯಲ್ಲಿ ಮಾಡುತ್ತೇವೆ ಎಂದು ಹೇಳಿದ್ದೇನಲ್ಲ.

ಉಪಾಧ್ಯಕ್ಷರು: ಹೇಳಿದ್ದಾರೆ ಬಿಡಿ.

ಶ್ರೀ ಸಿ.ಟಿ. ರವಿ: ಇದು ಸರ್ಕಾರದ ನಿರ್ಲಕ್ಷ್ಯ ಎನ್ನುವುದನ್ನೇ ಆಗಲೇ ರಮೇಶ್ ಕುಮಾರ್‌ರವರು ಹೇಳಿದುದು.

ಶ್ರೀ ಕೆ.ಜೆ. ಜಾರ್ಜ್: ವಿರೋಧ ಪಕ್ಷದ ನಾಯಕರು ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ, ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್: ರವಿಯವರೇ, ನಿಮ್ಮ ಕಾಲದಲ್ಲಿ ನಿಮ್ಮ ಗೃಹ ಸಚಿವರು ಯಾವ ರೀತಿ ಕೆಲಸ ಮಾಡಿದರು, ನಿಮ್ಮ ಗೃಹ ಇಲಾಖೆ ಯಾವ ರೀತಿ ಕೆಲಸ ಮಾಡಿತು ಎನ್ನುವುದರ ಬಗ್ಗೆ ಮಾತನಾಡಬೇಕೇ?

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ನಿಮ್ಮದು ಇದೇ ಉತ್ತರವೇ? ನಿಮಗೆ ಜವಾಬ್ದಾರಿಯಿಲ್ಲವಾ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಸರಿಪಡಿಸುತ್ತೇವೆ ಎಂದು ಹೇಳಿದ್ದಾರಲ್ಲ. ಅದರ ಬಗ್ಗೆ ಕ್ರಮ ತೆಗ ೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಹಿಂದೆ ನೀವು ಯಾವತ್ತಾದರೂ ಈ ರೀತಿ ಹೇಳಿರುವಿರಾ? ಯಾವತ್ತಾದರೂ ಈ ರೀತಿ ಉತ್ತರ ಕೊಟ್ಟಿರುವಿರಾ?

(ಗೊಂದಲ)

ಶ್ರೀ ಬಿ. ರಮಾನಾಥ ರೈ: ನೀವು ಇದ್ದಾಗ ಎಲ್ಲವೂ ಬಹಳ ಚೆನ್ನಾಗಿ ಇತ್ತು, ಈಗ ಕೆಟ್ಟು ಹೋಗಿದೆಯಲ್ಲವೇ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: ನಿಮ್ಮ ನಾಯಕರು ಮಾತನಾಡುತ್ತಿದ್ದಾರಲ್ಲ, ಅವರಿಗೆ ಅವಕಾಶ ಕೊಡಿ. ಅವರು ಏನು ಹೇಳುತ್ತಾರೋ ಹೇಳಲಿ, ಅದಕ್ಕೆ ನಾವು ಉತ್ತರ ಕೊಡುತ್ತೇವೆ. ನೀವೂ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿ, ಆಗ ಗೃಹ ಮಂತ್ರಿಗಳು ನಿಮಗೆ ಉತ್ತರ ಕೊಡುತ್ತಾರೆ. ನೀವು ಎಲ್ಲಿಯೋ ನಿಂತು ಮಾತನಾಡಿದರೆ ಯಾರು ಉತ್ತರ ಕೊಡುತ್ತಾರೆ?

(ಗೊಂದಲ)

ಶ್ರೀ ಸಾ.ರಾ. ಮಹೇಶ್: ನಮ್ಮ ಸ್ಥಾನದಲ್ಲೇ ನಿಂತು ಮಾತನಾಡುತ್ತಿದ್ದೇವಲ್ಲ.

(ಗೊಂದಲ)

(ಮುಂದುವರೆದಿದೆ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.


ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015 :4-20 [28] KKD:PS

1

ಶ್ರೀ ಕೆ.ಜೆ. ಜಾರ್ಜ್ (ಮುಂದು)

ನೀವು ಎಲ್ಲಿಯೋ ನಿಂತು ಮಾತನಾಡಿದರೆ ಯಾರು ಉತ್ತರ ಕೊಡುತ್ತಾರೆ?

ಶ್ರೀ ಸಾ.ರಾ. ಮಹೇಶ್: ನಮ್ಮ ಸ್ಥಾನದಲ್ಲಿಯೇ ನಿಂತು ಮಾತನಾಡುತ್ತಿದ್ದೇವಲ್ಲ ಸರ್. ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಇಡೀ ಸದನದ, ಇಡೀ ಕರ್ನಾಟಕದ ಎಲ್ಲಾ ಮನೆಗಳ ಭಾವನೆಯನ್ನು ಇಲ್ಲಿ ಬಿಂಬಿಸಿದ್ದಾರೆ. ಆ ಭಾವನೆಯನ್ನು ಇಟ್ಟುಕೊಂಡು ದಯವಿಟ್ಟು ಕೆಲಸ ಮಾಡಿ.

ಶ್ರೀ ದಿನೇಶ್ ಗುಂಡೂರಾವ್(ಆಹಾರ ಸಚಿವರು): ಅದಕ್ಕೆ ಉತ್ತರ ಅವರು ಹೇಳಿದ್ದಾರಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಮತ್ತೆ ನೀವು, ನಾವು ಎಂದು ಹೇಳುವುದನ್ನು ಬಿಟ್ಟುಬಿಡಿ. Here is the government, which means business ಎಂದು ಈ ಸದನದಿಂದ ಆ ಹೆಣ್ಣುಮಕ್ಕಳಿಗೆ ಒಳ್ಳೆಯ ಸಂದೇಶ ಹೋಗಲಿ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ದಿನೇಶ್ ಗುಂಡೂರಾವ್: ಸರ್ ಸುರೇಶ್‌ಕುಮಾರ್‌ರವರೆ, ಆ ಭಾವನೆಗೆ ಸ್ಪಂದನೆ ಮಾಡಿ ಮಾನ್ಯ George ಸಾಹೇಬರು ಹೇಳಿರತಕ್ಕಂಥದ್ದು ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನೂ ಕೂಡ ನೀವು ಮೆಚ್ಚಬೇಕು. ಆ ಭಾವನೆಗೆ ಸ್ಪಂದನೆ ಮಾಡಿರತಕ್ಕಂಥದ್ದಕ್ಕೆ ಆ ರೀತಿ ಉತ್ತರ ಬಂದಿರತಕ್ಕಂಥದ್ದು. ನಿಮ್ಮ ಕಾಲದಲ್ಲಿ ಒಂದು ಉತ್ತರ ಸಹ ಬಂದಿಲ್ಲವಲ್ಲ.

ಅಧ್ಯಕ್ಷರು: ಸಾಕು, ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೆ, ಬೇಗ ಮಾತನಾಡಿ ಮುಗಿಸಿ.

ಶ್ರೀ ಸಾ.ರಾ. ಮಹೇಶ್: Last Assembly ಚರ್ಚೆ ಮಾಡಿದ್ದೇವಲ್ಲ ಸರ್.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಕುಳಿತುಕೊಳ್ಳಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಾ.ರಾ. ಮಹೇಶ್: ಮಾನ್ಯ ಅಧ್ಯಕ್ಷರೆ, ಇದೇ ವಿಚಾರ ಚರ್ಚೆ ಮಾಡುತ್ತಿದ್ದಾರೆ.

ಅಧ್ಯಕ್ಷರು: ಆಗುವುದಿಲ್ಲ, ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರೆ, ಬೇಗ ಪೂರೈಸಿರಿ. ನೀವು ಹೇಳಿದ್ದು 1 ಗಂಟೆ ಮಾತನಾಡುತ್ತೇನೆಂದು. ಈಗಾಗಲೇ ಒಂದೂವರೆ ಗಂಟೆ ಆಯಿತು.

ಶ್ರೀ ಸಾ.ರಾ. ಮಹೇಶ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾನು ಮಧ್ಯಾಹ್ನ 2-30 ಗಂಟೆಗೆ ಬಂದು ಕುಳಿತುಕೊಂಡರೆ ಸಭೆಯಲ್ಲಿ ಮಂತ್ರಿಗಳು ಇಲ್ಲ. ಹಾಗಾಗಿ ಅರ್ಧ ಗಂಟೆ ಅದರಲ್ಲಿಯೇ ಹೋಯಿತು.

ಶ್ರೀ ಸಾ.ರಾ. ಮಹೇಶ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಸುಮ್ಮನಿರಿ. ಕುಳಿತುಕೊಳ್ಳಿ.

ಶ್ರೀ ಸಾ.ರಾ. ಮಹೇಶ್: ನೀವು ಕೂಗಿದ ತಕ್ಷಣಕ್ಕೆ...

ಶ್ರೀ ಎಂ.ಟಿ. ಕೃಷ್ಣಪ್ಪ: ಯಾವುದಾದರೂ ಒಂದನ್ನು ಚರ್ಚೆಗೆ ಕೇಳಿದರೆ ನೀವು ಅದನ್ನೇ ಮಾಡುತ್ತೀರಿ.

ಶ್ರೀ ಸಾ.ರಾ. ಮಹೇಶ್: ಏಕೆ ಕೂಗುತ್ತೀರಿ? ನಮಗೂ ಗೌರವವಿದೆ.

ಅಧ್ಯಕ್ಷರು: ರೀ, ಬನ್ನಿ ಇಲ್ಲಿ.

ಶ್ರೀ ಸಾ.ರಾ. ಮಹೇಶ್: ಏನು, ಆಚೆಗೆ ಹಾಕುತ್ತೀರಾ?

ಅಧ್ಯಕ್ಷರು: I have no option, but to throw you.

ಶ್ರೀ ಸಾ.ರಾ. ಮಹೇಶ್: ನೀವು ನಿನ್ನೆ ಉಗ್ರಪ್ಪಂಗೆ ಹಾಕಬೇಕಾಗಿತ್ತು.

ಅಧ್ಯಕ್ಷರು: Please resume.

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವನು ಮಧ್ಯೆ ಎದ್ದು request ಮಾಡಿ ಮಾತನಾಡುತ್ತಿದ್ದ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ರೀ ಚೆಲುವರಾಯಸ್ವಾಮಿ ಇದಲ್ಲರೀ, ಅವರು ಮಾತು, ಅವರು ರುಜು ಹಾಕಿದ್ದಾರೇನ್ರಿ? ಎಲ್ಲಿ ಹಾಕಿದ್ದಾರೆ?

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ: ಈಗ clarify ಮಾಡಲಿಕ್ಕೆ ಮಾನ್ಯ ವಿರೋಧ ಪಕ್ಷದ ಮಧ್ಯದಲ್ಲಿ request ಮಾಡಿ ಮಧ್ಯದಲ್ಲಿ ಅವರು ಮಾತನಾಡುತ್ತಿದ್ದರು. ನೀವು ಹೊರಗಡೆ ಬಂದಿರಿ. ಅದನ್ನು ಮುಂದುವರಿಸಲಿಕ್ಕೆ 2 ನಿಮಿಷ clarify ಮಾಡಲಿಕ್ಕೆ ನಿಂತಿದ್ದು, ಅಷ್ಟೇ ಅಧ್ಯಕ್ಷರೆ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ಹೇಳಿ, ಬೇಗ ಪೂರೈಸಿರಿ.

ಶ್ರೀ ಸಾ.ರಾ. ಮಹೇಶ್: ಬೇರೆಯವರು ಸಹಿ ಮಾಡಿದವರಿಗೆ ಮಾತ್ರ ಮಾತನಾಡುವುದಕ್ಕೆ ಕೊಟ್ಟಿದ್ದೀರಾ?

ಅಧ್ಯಕ್ಷರು: ಬೇರೆ subject ಇದೆ, ಅದರ ಬಗ್ಗೆ ಸದನ ಚರ್ಚೆ ಮಾಡುವುದು ಬೇಡವೇ?

ಶ್ರೀ ಸಾ.ರಾ. ಮಹೇಶ್: ನಾನು ಮಾತನಾಡುವುದಕ್ಕೆ ಕೇಳಿದರೆ ಸಿಟ್ಟು ಮಾಡಿಕೊಳ್ಳುತ್ತೀರಿ.

ಅಧ್ಯಕ್ಷರು: ಓಹೋ, ನಮಗೂ ನಿಮಗೆ ಜಿದ್ದು ಇದೆ ಅದಕ್ಕೋಸ್ಕರ!

ಶ್ರೀ ಸಾ.ರಾ. ಮಹೇಶ್: ಆಯಿತು ಸರ್, ನೀವು ಏನು ಬೇಕಾದರೂ ಅಂದುಕೊಳ್ಳಿ.

ಅಧ್ಯಕ್ಷರು: ಹಾಗೆಲ್ಲ ಮಾತನಾಡಕೂಡದು. ನನಗೂ ಮಾತನಾಡುವುದಕ್ಕೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ಇಂಥ ವಿಷಯ ಚರ್ಚೆ ಮಾಡಬೇಕೆಂದು notice ಕೊಡಿ, ಅವಕಾಶ ಕೊಡುತ್ತೇನೆ.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ನನ್ನದು ಇಷ್ಟೇ ಚರ್ಚೆ. Last ಸಾರಿ ಚರ್ಚೆ ನಡೆಯುವಾಗ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಗೃಹ ಮಂತ್ರಿಗಳೇ ಹೇಳಿದ್ದರು. IGP ಮತ್ತು Dy.SP ಇಬ್ಬರೂ ಸಹ ಮೈಸೂರಿನಲ್ಲಿ 5 ಕೋಟಿ ರೂಪಾಯಿಗಳಷ್ಟು ಲೂಟಿ ಮಾಡಿದ್ದರು. ಅವರನ್ನು ಕೈಬಿಟ್ಟು ಬರೀ ...

ಅಧ್ಯಕ್ಷರು: ಪ್ರತ್ಯೇಕ notice ಕೊಟ್ಟು ಅದರ ಬಗ್ಗೆ ಚರ್ಚೆ ಮಾಡಿರಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಾ.ರಾ. ಮಹೇಶ್: ಮಾನ್ಯ ಅಧ್ಯಕ್ಷರೆ, ಇದು ಅದೇ ಸಂದರ್ಭ ಅಲ್ಲವೇ?

ಅಧ್ಯಕ್ಷರು: ಇದು ಬರುವುದಿಲ್ಲ. ಅವರು ಏನೋ ಹೇಳುತ್ತಾರೆ. ಹೇಳಿ.

ಶ್ರೀ ಸಾ.ರಾ. ಮಹೇಶ್: ಇದು ಅದೇ ಸಂದರ್ಭ ಅಲ್ಲವೆ ಮಾನ್ಯ ಅಧ್ಯಕ್ಷರೆ?

ಶ್ರೀ ಎಂ.ಟಿ. ಕೃಷ್ಣಪ್ಪ: Law and Order ಚರ್ಚೆಯೊಳಗೆ intervene ಆಗಿರುವುದು ಅಷ್ಟೇ ಅಧ್ಯಕ್ಷರೆ.

ಶ್ರೀ ಸಾ.ರಾ.ಮಹೇಶ್: Law and Order ಬಗ್ಗೆ ಚರ್ಚೆ ನಡೆಯುವಾಗ ಮಧ್ಯೆ ಪ್ರವೇಶ ಮಾಡಿ ಹೇಳಿದೆ.

ಅಧ್ಯಕ್ಷರು: ಅಯ್ಯೋ ದೇವರೆ, ಇದು ಶಾಸನ ಸಭೆಯೇ ಅಥವಾ ಹಳ್ಳಿ ಕಟ್ಟೆಯೋ?

ಶ್ರೀ ಎನ್. ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಅದು ಬಹಳ important ವಿಷಯವೇ ಆಗಿದೆ.

ಅಧ್ಯಕ್ಷರು: ಏನು ಮಾತನಾಡುತ್ತೀರಿ, ಅದನ್ನು ಚರ್ಚೆ ಸಲುವಾಗಿ notice ಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ: ಅವಕಾಶ ಕೊಟ್ಟರೆ ಒಂದು ನಿಮಿಷದಲ್ಲಿ ಮುಗಿದುಹೋಗುತ್ತದೆಲ್ಲಾ ಅಧ್ಯಕ್ಷರೆ. ಒಂದು ನಿಮಿಷದಲ್ಲಿ ಮುಗಿದುಹೋಗುತ್ತದೆ. ಅದರ ಕಡೆಗೆ ಸಂಬಂಧಪಟ್ಟವರು ಗಮನಹರಿಸುತ್ತಾರೆ.

ಅಧ್ಯಕ್ಷರು: ಆಗುವುದಿಲ್ಲ. ವಿರೋಧ ಪಕ್ಷದ ನಾಯಕರೆ ಮಾತನಾಡಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಏನೋ ತನಿಖೆ ನಡೆಯುತ್ತಿರುವುದು, ನೀವು mislead ಏಕೆ ಮಾಡುತ್ತೀರಿ? Speaker ರವರ ಮೇಲೆ ಏಕೆ ಕೂಗಾಡುತ್ತೀರಿ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿರಿ. ವಿರೋಧ ಪಕ್ಷದ ನಾಯಕರೆ ಮಾತನಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ಕೆಲವೊಂದು ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದೆ ಅದಕ್ಕೆ ಮಾನ್ಯ ರಮೇಶ್ ಕುಮಾರ್‌ರವರು ಧ್ವನಿಗೂಡಿಸಿದರು ಮತ್ತು ಈ ರೀತಿ ಸರ್ಕಾರದ ವ್ಯವಸ್ಥೆಯಲ್ಲಿ ಏನು ಆಡಳಿತ ವ್ಯವಸ್ಥೆ ಕುಸಿದು ಹೋಗಿದೆ, ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಜುಲೈ ತಿಂಗಳಲ್ಲಿ ಅದಂಥ ಘಟನೆ ಬಗ್ಗೆ, ಆ file, ವರದಿ ಇದರ ಮೇಲೆಯೂ ಏನೂ action ತೆಗೆದುಕೊಳ್ಳಲಿಲ್ಲ. ಅದಕ್ಕೆ ತಕ್ಷಣ action ಆಗಬೇಕೆನ್ನುವ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಗೃಹ ಸಚಿವರು ಸದನದಲ್ಲಿಲ್ಲ. ಸರ್ಕಾರಕ್ಕೆ ಹೇಳುವುದು ಇಷ್ಟೇ. ಇವೆಲ್ಲ ಸೂಕ್ಷ್ಮವಾದ ವಿಚಾರ. ಇವತ್ತು 2015ನೇ ಇಸವಿಯಲ್ಲಿ, 21ನೇ ಶತಮಾನದಲ್ಲಿದ್ದೇವೆ. ನಮ್ಮ ಆಡಳಿತಕ್ಕೆ ಹೊಸ ದೃಷ್ಟಿಕೋನ ಇರಬೇಕು, ಹಳೆ ತರಹ ಅಲ್ಲ. ದಯವಿಟ್ಟು ಇದನ್ನು ಗಂಭೀರವಾಗಿ ಪರಿಗಣಿಸಿ ಯಾರಾದರೂ ಇರಲಿ, ನಮ್ಮ ನೆಂಟರೋ, ಬಾವನೋ, ಬೇಕಾದವನೋ, ಬೇಡದಿದ್ದವನೋ, ಎಲ್ಲಿ ತಪ್ಪಿದೆ ಅಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ಒಂದು ಚಿಂತನೆಯನ್ನು ನಡೆಸಿರಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಗಳಲ್ಲಿ ನೈತಿಕತೆ ಕಡಿಮೆಯಾಗುತ್ತಿದೆ. ಇನ್ನೊಂದು ಏನಾಗಿದೆ ಎಂದರೆ, ಬಹಳ ರಾಜಕಾರಣ ಆಗುವಂಥದ್ದು, ಪೊಲೀಸರು ಸಹಿತ ರಾಜಕಾರಣ ಮಾಡುವಂಥದ್ದು, ಈ ವ್ಯವಸ್ಥೆಯಲ್ಲಿ ಏನೊಂದು ಬಿಗಿಯಾಗಿ ಕೆಲಸ ಮಾಡಬೇಕಾಗಿತ್ತೋ, impartial ಆಗಿ ಕೆಲಸ ಮಾಡಬೇಕಾಗಿತ್ತೊ, ಪಾರದರ್ಶಕವಾಗಿ ಕೆಲಸ ಮಾಡಬೇಕಾಗಿತ್ತೊ ಅದು ಆಗುತ್ತಿಲ್ಲ. ಇವತ್ತು ಯಾರ್‍ಯಾರೋ direction ನಲ್ಲಿ ಏನು ಬೇಕಾದರೂ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆಗಲೇ ನಾನು ನಿಮ್ಮ ಆಡಳಿತದ ಬಿಗಿ ಏನೂ ಇಲ್ಲ ಎನ್ನುವುದರ ಬಗ್ಗೆ ಒಂದು ಉದಾಹರಣೆ ಕೊಟ್ಟೆ. ಯಾವ ರೀತಿಯಾಗಿದೆ, ಆ ಮಹಿಳೆಗೆ ಏನು ಅನ್ಯಾಯವಾಯಿತು ಎನ್ನುವಂಥದ್ದನ್ನು.

ಅಧ್ಯಕ್ಷರು: ಹೇಳಿದ್ದನ್ನು repeat ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್: ಇನ್ನು ನಿಮ್ಮ ಅಧಿಕಾರಿಗಳು ದಬ್ಬಾಳಿಕೆ ಮಾಡುವುದಕ್ಕೆ ಹೊರಟರೆ ಯಾವ ರೀತಿ ಮಾಡುತ್ತಾರೆನ್ನುವುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ಬೆಳಗ್ಗೆ ರೈತನ ಆತ್ಮಹತ್ಯೆ ಬಗ್ಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಾವು ಇಲ್ಲಿ ಚರ್ಚೆ ಮಾಡಿದೆವು. ಬೆಳಗಾಂ ಜಿಲ್ಲೆಯಲ್ಲಿ ಒಬ್ಬ ರೈತನು ತನ್ನ tractor ಕಳವು ಆಗಿದೆ ಎಂದು complaint ಕೊಡುವುದಕ್ಕೆ ಹೋಗುತ್ತಾನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ಬೇರೆ ವಿಷಯಗಳನ್ನು ಬಿಟ್ಟುಕೊಂಡು ವಿಶೇಷ ಪ್ರಕರಣ ಎಂದು ನಿಮಗೆ ಒಂದು ಗಂಟೆ ಅವಕಾಶ ಕೊಟ್ಟಿದ್ದೇನೆ. ನೀವು ಅದನ್ನು ದುರುಪಯೋಗ ಮಾಡಿಕೊಳ್ಳುವುದಾದರೆ ನಾನು ಇನ್ನೊಂದು ಸಾರಿ ಈ ರೀತಿ ಅವಕಾಶ ಕೊಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಅಧಿಕಾರಿಗಳನ್ನು ಯಾವ ರೀತಿ ಹೇಗೆ ಮಾಡಿದ್ದಾರೆ ಎನ್ನುವಂಥದ್ದಕ್ಕೆ ನಾನು ಉದಾಹರಣೆಗಳನ್ನು ಕೊಡುತ್ತಿದ್ದೇನೆ. ನಾನು ಕೆಲವೊಂದು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. ಇನ್ನೂ detail ಆಗಿ ಪ್ರಸ್ತಾಪ ಮಾಡಬೇಕೆಂದರೆ 4-5 ತಾಸು ಮಾತನಾಡಬಹುದು. ಅಷ್ಟು ವಿಚಾರಗಳಿವೆ. ಆದರೆ, ಕೆಲವೊಂದು ವಿಚಾರಗಳನ್ನು ಮಾತ್ರ ನಾನು ಮಾತನಾಡುತ್ತಿದ್ದೇನೆ. ಇಲ್ಲಿ ಯಾವ ರೀತಿ ದೌರ್ಜನ್ಯ ಮಾಡುತ್ತಾರೆಂದರೆ, ಈ photo ಅನ್ನು ಕಳುಹಿಸಿಕೊಡುತ್ತೇನೆ. ಆಂಜನೇಯ ಎನ್ನುವ ಒಬ್ಬ PSI ಯಾವ ರೀತಿ ಒಬ್ಬ ರೈತನನ್ನು ಹಿಡಿಯುತ್ತಾನೆ, ದೌರ್ಜನ್ಯ ಮಾಡುತ್ತಾನೆ, ದೈಹಿಕವಾಗಿ ಹಲ್ಲೆ ಮಾಡುತ್ತಾನೆ ಎನ್ನುವ ಬಗ್ಗೆ ತಾವು ನೋಡಬಹುದು. ಇದನ್ನು ಶಶಿಕಾಂತ್ ನಾಂಯಕ್ ಎನ್ನುವ ಒಬ್ಬರು ಮಾಜಿ ಮಂತ್ರಿಗಳು ಪ್ರತಿಭಟನೆ ಮಾಡಿ ಅಲ್ಲಿಯ SP office ಗೆ ಹೋದರೆ ಏಕವಚನದಲ್ಲಿ ಒಬ್ಬ ಮಾಜಿ ಸಚಿವರ ಬಗ್ಗೆ, ಜನಪ್ರತಿನಿಧಿ ಬಗ್ಗೆ ಮಾತನಾಡುತ್ತಾರೆ, ದಬ್ಬಾಳಿಕೆ ಮಾಡುವಂಥದ್ದನ್ನು ಮಾಡುತ್ತಾರೆ. ಇದಕ್ಕೆ ಉದಾಹರಣೆ ಈ photo. ನೀವು ನೋಡಿ, examine ಮಾಡಿ, investigation ಮಾಡಿ. ಹಿರೇಮಠ್ ಎನ್ನುವ ಒಬ್ಬ ರೈತ police station ಗೆ complaint ಕೊಡುವುದಕ್ಕೆ ಹೋದರೆ ಆತನ ಮೇಲೆ ಪೊಲೀಸ್‌ನವರು ದೌರ್ಜನ್ಯ ಮಾಡುತ್ತಾರೆ, ಹಲ್ಲೆ ಮಾಡುತ್ತಾರೆ. ಇದು ಉದಾಹರಣೆ, ಇದರ photo ಅನ್ನು ತಮಗೆ ಕಳುಹಿಸಿಕೊಡುತ್ತೇನೆ. ಪೊಲೀಸರು ಈ ರೀತಿ ದಬ್ಬಾಳಿಕೆ ಮಾಡುವುದಕ್ಕೆ ಇದ್ದಾರೆಯೇ? ಕಳ್ಳರನ್ನು ಹಿಡಿಯಿರಿ, ದರೋಡೆಕೋರರನ್ನು ಹಿಡಿಯಿರಿ, rape ಮಾಡುವವರನ್ನು ಹಿಡಿಯಿರಿ ಎಂದರೆ, ಇವತ್ತು ಈ ರೀತಿಯಾದಂಥದ್ದು ನೋಡಿದರೆ ಬಹಳ ಗಾಬರಿಯಾಗುತ್ತದೆ. ದರೋಡೆಕೋರರನ್ನು, ಕಳ್ಳರನ್ನು ಹಿಡಿಯುವುದನ್ನು ಬಿಟ್ಟುಬಿಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಅದನ್ನು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸ್ವಲ್ಪ ಗಮನಿಸಬೇಕು. ಕೊಪ್ಪಳದಲ್ಲಿ ಲೋಕಸಭಾ ಸದಸ್ಯರು - ಕೆಲವರಿಗೆ ಅನ್ಯಾಯವಾಗಿದೆ, ಗುಡಿಸಲು ಏಕೆ ಕೆಡವಿದಿರಿ ಎಂದು ಮನವಿ ಕೊಡುವುದಕ್ಕೆ ಹೋದರೆ ಅವರ ಜೊತೆ DC, Special DC ಅಸಭ್ಯ ವರ್ತನೆ ಮಾಡುತ್ತಾರೆ. ಅಂದರೆ, ಯಾವ ರೀತಿ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ?

ಶ್ರೀ ಕೆ.ಜೆ. ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು): ನಾವು ನಮ್ಮ ಸರ್ಕಾರ ಬಂದಾಗ ಹೊಸದಾಗಿ ಏನೂ ತೆಗೆದುಕೊಂಡು ಬರಲಿಲ್ಲ. ಎಲ್ಲಾ ಅಧಿಕಾರಿಗಳು ಇದ್ದರು. ಅದರಲ್ಲಿ ಕೆಲವರು ಒಳ್ಳೆಯವರು ಇದ್ದರು.

ಶ್ರೀ ಜಗದೀಶ್ ಶೆಟ್ಟರ್: ಎಲ್ಲಾ ಅಧಿಕಾರಿಗಳು ಎಂದು ನಾವು ಹೇಳಲಿಲ್ಲ. ಕೆಲವರು ಇದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಕೆಲವರು ಇರುತ್ತಾರೆ. ನಮ್ಮ ಗಮನಕ್ಕೆ ಬಂದಕೂಡಲೆ ಅದರ ವಿಚಾರದಲ್ಲಿ ನಾವು ವಿಚಾರಣೆ ಮಾಡಿ ಯಾರು ತಪ್ಪಿತಸ್ಥರು ಇರುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಇನ್ನು ಚಾಮರಾಜನಗರ ಜಿಲ್ಲೆಯದು ಹೇಳುತ್ತೇನೆ. ಅಲಿ ಬಹಳಷ್ಟು ಪ್ರಕರಣಗಳು ನಡೆದಿವೆ. ದಲಿತರ ಮೇಲೆ ಹಲ್ಲೆಯಾದ ಪ್ರಕರಣವನ್ನು ಉದಾಹರಣೆಯಾಗಿ ಹೇಳುತ್ತೇನೆ. ಅದರ detail ನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಚಾಮರಾಜನಗರದಲ್ಲಿ ಸಂತೆಮಾರನಹಳ್ಳಿ ಮತ್ತು ಬೇರೆ ಬೇರೆ ಹಳ್ಳಿಗಳಲ್ಲಿ ದಲಿತರ ಮೇಲೆ ಹಲ್ಲೆ ನಡೆಯುತ್ತದೆ. ಅಲ್ಲಿ ಪೊಲೀಸ್‌ನವರು response ತೆಗೆದುಕೊಳ್ಳುವುದಿಲ್ಲ, complaint ತೆಗೆದುಕೊಳ್ಳುವುದಿಲ್ಲ. ದಲಿತರ ಮೇಲೆಯೇ ದಬ್ಬಾಳಿಕೆ ಮಾಡುವಂಥದ್ದು, ಅವರ ಮೇಲೆಯೇ case ಹಾಕುವಂಥದ್ದು ಇವೆಲ್ಲ ಉದಾಹರಣೆ ಇವೆ. ಆ details ಅನ್ನೂ ನಿಮಗೆ ಕಳುಹಿಸಿಕೊಡುತ್ತೇನೆ. ಅವರ ಮೇಲೆ immediate ಆಗಿ action ತೆಗೆದುಕೊಳ್ಳುತ್ತೀರಾ? ಆ complaint ಮೇಲೆ file ಮಾಡುತ್ತೀರಾ? ಯಾರು ಅವರ ಮೇಲೆ ದೌರ್ಜನ್ಯ ಮಾಡಿದ್ದಾರೆ, ಅವರನ್ನು ಒಳಕ್ಕೆ ಹಾಕುತ್ತೀರಾ? ಇವೆಲ್ಲ details ಅನ್ನು ಕಳುಹಿಸಿಕೊಡುತ್ತೇನೆ. ಈ ರೀತಿಯಾದಂಥ ಪರಿಸ್ಥಿತಿ ಇವತ್ತು ಇದೆ. ಎಲ್ಲಿಯೇ ಗಲಭೆ ಆಗಲಿ, ಮತ್ತೊಂದು ಆಗಲಿ, ಅದರಲ್ಲಿ ಅಮಾಯಕರು suffer ಆಗುತ್ತಾರೆ. ಇವತ್ತು CCTV ಎಲ್ಲ ಇವೆ. ಆ CCTV ಯಲ್ಲಿ ಯಾರು ಏನು ಎಂದು record ಆಗಿರುತ್ತದೆ. ಅದನ್ನು ತೆಗೆದು ನೋಡಿ. ಅಂಥವರ ಮೇಲೆ action ತೆಗೆದುಕೊಳ್ಳಿ. ಯಾವುದೇ ಗಲಭೆ ಆಗಲಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹೊಸದಾಗಿ ವ್ಯವಸ್ಥೆ ಮಾಡಿದ್ದಾರೆ. CCTV ಎಲ್ಲ ಇರುತ್ತದೆ, record ಆಗಿರುತ್ತದೆ. ಯಾರು ನಿಜವಾಗಿ ತಪ್ಪು ಮಾಡಿದ್ದಾರೆ, ಯಾರು ಲೂಟಿ ಮಾಡಿದ್ದಾರೆ, ಯಾರು ಗದ್ದಲ ಮಾಡಿದ್ದಾರೆ, ಅವರ action ತೆಗೆದುಕೊಳ್ಳಿ, ಏನು ಬೇಕಾದರೂ ಮಾಡಿ. ಆದರೆ, ಇವತ್ತು ಬಹಳ ಕಡೆ ಅಮಾಯಕರ ಮೇಲೆ case ಹಾಕುವಂಥದ್ದು. ಅದೂ ಕೂಡ Section 307 case. ಹಾಸನದಲ್ಲಿ Section 307 ಮೇಲೆ case ಹಾಕಿ ನೂರಾರು ಜನರನ್ನು ಒಳಕ್ಕೆ ಹಾಕುವಂಥ ಕೆಲಸ ಮಾಡುತ್ತೀರಿ. ಇಂಥವನ್ನೆಲ್ಲ ಬಿಡಿ. ಹೀಗಾಗಿ ಈ ರೀತಿಯಾದಂಥ ನಡವಳಿಕೆಯಿಂದ ಬಹಳಷ್ಟು ಅಮಾಯಕರಿಗೆ ತೊಂದರೆಯಾಗುತ್ತದೆ, police harassment ಆಗುತ್ತದೆ. ಇದನ್ನು ನಿಲ್ಲಿಸಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಶ್ರೀ ಬಿ.ಎ. ಮೊಯಿದ್ದೀನ್ ಬಾವಾ: ವಿಧಾನಪರಿಷತ್ತಿನ ಸದಸ್ಯರು sting operation ನಲ್ಲಿ..

ಅಧ್ಯಕ್ಷರು: ರೀ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ನಾನು yield ಆಗಿಲ್ಲ. ನೀವು ಮಾನ್ಯ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಬೇಕಾದರೆ ಆಮೇಲೆ ಮಾತನಾಡಿ. ನಾನು ಇಲ್ಲಿ ಸರ್ಕಾರಕ್ಕೆ ಒಂದು ಮಾತು ಹೇಳುವುದೇನೆಂದರೆ, ಮೊನ್ನೆ ಗಂಗಾವತಿಯಲ್ಲಿ ಮಾಜಿ ಶಾಸಕರಾದ ಪರನ್ನ ಮುನವಳ್ಳಿ ಅವರ ಮನೆಯಲ್ಲಿ ದರೋಡೆ ಯತ್ನವಾಯಿರು. ದರೋಡೆ ಮತ್ತು ಕಳ್ಳತನ ಇವು common ಆಗಿಬಿಟ್ಟಿವೆ. ಆಯಾ police station ನವರು ಯಾವುದೇ ನಿಯಂತ್ರಣವಿಲ್ಲ, ಏನೂ control ಇಲ್ಲ. ಹಾಗೆಯೇ ಬೆಂಗಳೂರಿನಲ್ಲಂತೂ ಸರಗಳ್ಳತನ ಸರಣಿಯಲ್ಲಿ ನಡೆಯುತ್ತಿದೆ. ಅವರ ಮೇಲೆ ಏನೂ action ಇಲ್ಲ.

ಶ್ರೀ ಕೆ.ಜೆ. ಜಾರ್ಜ್: ನೀವು ವಿರೋಧ ಪಕ್ಷದ ನಾಯಕರು. ಅವರ ಮೇಲೆ action ಇಲ್ಲ ಎಂದು ಹೇಳುತ್ತಿದ್ದೀರಿ. ಸರಗಳ್ಳತನ ಯಾರು ಮಾಡಿದ್ದಾರೆ ಅವರನ್ನು ಬಹಳಷ್ಟು ಮಂದಿಯನ್ನು ಹಿಡಿದಿದ್ದೇವೆ, recover ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಆಯಿತು, ಅದನ್ನು ಸರ್ಕಾರದ ಕಡೆಯಿಂದ ಉತ್ತರ ಕೊಡುವಾಗ ಹೇಳಿ. ಬೇಡ ಎಂದು ಯಾರು ಹೇಳುತ್ತಾರೆ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ. ಜಾರ್ಜ್: ಎಲ್ಲ action ಮಾಡುತ್ತಿದ್ದಾರೆ. ದಯವಿಟ್ಟು ಪೊಲೀಸ್ ಇಲಾಖೆಯನ್ನು ಸಂಪೂರ್ಣವಾಗಿ demoralize ಮಾಡುವಂಥ ಕೆಲಸವನ್ನು ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್: De morale ಮಾಡಿಲ್ಲ. ಕೆಲವು ಅಧಿಕಾರಿಗಳ ನಿರ್ಲಕ್ಷ್ಯದಿಂದ...

ಶ್ರೀ ಕೆ.ಜೆ. ಜಾರ್ಜ್: ನೋಡಿ, ಒಳ್ಳೆಯ ಕೆಲಸಗಳನ್ನು ಸಾಕಷ್ಟು ಮಾಡಿದ್ದಾರೆ. ಅವರಿಗೆ ಉತ್ತೇಜನ ಕೊಡಿ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015-(29)-4-30-ಎಸ್ಕೆ-ವಿಜಿ

ಶ್ರೀ ಬಿ.ಎ.ಮೊಹಿದ್ದೀನ್ ಬಾವಾ : ನಿಮ್ಮ ವಿಧಾನ ಪರಿಷತ್ತಿನ ಸದಸ್ಯರು ಹೇಳುತ್ತಾರೆ, string operation ನಲ್ಲಿ ನಮ್ಮ RSS ರವರೇ ಇದ್ದಾರೆಂದು ಹೇಳುತ್ತಾರೆ police ಇಲಾಖೆಯಲ್ಲಿ.

(ಗೊಂದಲ)

ಅಧ್ಯಕ್ಷರು : ಬೇಗ ಬೇಗ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು ಅಧ್ಯಕ್ಷರೆ, ಇನ್ನೊಂದೆರಡು ನಿಮಿಷದಲ್ಲಿ ನಾನು ಮುಗಿಸಿ ಬಿಡುತ್ತೇನೆ, ಬಹಳ ಏನಿಲ್ಲ. ಇನ್ನೂ details ಬಹಳ ಇವೆ ನಾನು ಅವುಗಳೆನ್ನೆಲ್ಲಾ ಮಾತನಾಡುವುದಿಲ್ಲ. 5-6 ನಿಮಿಷದಲ್ಲಿ ನಾನು ಮುಗಿಸುತ್ತೇನೆ, ಇನ್ನೂ ನಮ್ಮವರು ಕೆಲವು ವಿಚಾರಗಳ ಬಗ್ಗೆ ಮಾತನಾಡುವವರು ಇದ್ದಾರೆ.

(ಗೊಂದಲ)

ಅಧ್ಯಕ್ಷರು : ನೋಡಿ ನೀವು ಕೇಳಿದ್ದಕ್ಕಿಂತಲೂ ನಾನು ನಿಮಗೆ ಜಾಸ್ತಿ ಅವಕಾಶ ಕೊಟ್ಟಿದ್ದೇನೆ. ಈಗ ನೀವು close ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಾವು 2-30 ಕ್ಕೆ ಬಂದೆವು, 3-00 ಗಂಟೆಯವರೆಗೆ ಮಂತ್ರಿಗಳೇ ಇರಲಿಲ್ಲ. 3-00 ಗಂಟೆಯವರೆಗೆ ಸದನ ನಡೆಯಲಿಲ್ಲ ಅದು ನನ್ನ ತಪ್ಪಲ್ಲ. ಆಡಳಿತ ಪಕ್ಷದ ಸದಸ್ಯರು intervene ಆಗುತ್ತಾರೆ ಗದ್ದಲ ಎಬ್ಬಿಸುತ್ತಾರೆ ಅದು ನನ್ನ ತಪ್ಪಲ್ಲ.

ಅಧ್ಯಕ್ಷರು : ಬೇರೆ ವಿಚಾರಗಳನ್ನು ತೆಗೆದುಕೊಳ್ಳಬೇಕೊ ಬೇಡವೋ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಒಂದು ವಿಚಾರ ಏನೆಂದರೆ, ಡಾ:ಕಲಬುರ್ಗಿಯವರ ಹತ್ಯೆಯಾಗಿ 3-4 ತಿಂಗಳಾಯಿತು. ಅವರೊಬ್ಬ ವಿಚಾರವಾದಿ ಇದ್ದಂಥ ವಿಚಾರಗಳನ್ನು ಸ್ಪಷ್ಟವಾಗಿ ಹೇಳುವಂಥ ವ್ಯಕ್ತಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಅವರ ಬಗ್ಗೆ investigation ಏನಾಗಿದೆ ಎಂಬುದನ್ನು ದಯವಿಟ್ಟು ಸದನಕ್ಕೆ ನೀವೊಂದು report ಕೊಡಬೇಕು. ಅಲ್ಲಿಂದ ಇಲ್ಲಿಯವರೆಗೆ ಏನು investigation ಆಗಿದೆ, ಏನಾಗಿದೆ, ಏನಾದರೂ ಒಂದಿಷ್ಟು ಸುಳಿವು ಸಿಕ್ಕಿದೆಯೋ ಹೇಗೆ, ಹೀಗಾಗಿ ಇದು ಕೇವಲ ನಮ್ಮ ನಾಡಿನಲ್ಲಿ ಅಲ್ಲ, ನಮ್ಮ ರಾಜ್ಯದಲ್ಲಿ ಅಲ್ಲ, ಇಡೀ ದೇಶದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಡಾ:ಕಲಬುರ್ಗಿಯವರ ಹತ್ಯೆಯ ವಿಚಾರ ಚರ್ಚೆಯಾಗುತ್ತಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಏನು ಮಾಡುತ್ತಿದೆ, ಇಲ್ಲಿಯವರೆಗೆ ಯಾರು investigation ಮಾಡುತ್ತಿದ್ದಾರೆ, ಯಾರಾದರೂ ಒಬ್ಬ ಹಿರಿಯ higher officer ಕಡೆಯಿಂದ investigation ಮಾಡಿಸಿರಿ. ನಿಮಗೆ ನೀಗುವುದಿಲ್ಲವೆಂದರೆ CBI ಗೆ ಕೊಡಿ. ಏನಾದರೂ ಮಾಡಿ ಈ ಬಗ್ಗೆ ನಿರ್ದಿಷ್ಟವಾದಂಥದ್ದು ಮಾಡಿ. ಅದರ ಬಗ್ಗೆ ಯಾರೊಬ್ಬರನ್ನೋ ಗುರಿಯಿಟ್ಟುಕೊಂಡು ಚರ್ಚೆ ಮಾಡುವಂಥದ್ದು ನಡೆಯುತ್ತಿದೆಯಲ್ಲವೇ ಅದು ಸರಿಯಲ್ಲ. ಅದರ ಹಿನ್ನೆಲೆಯಿಟ್ಟುಕೊಂಡು ಇಡೀ ದೇಶದಲ್ಲಿ ಅಸಹಿಷ್ಣುತೆಯ ಬಗ್ಗೆಯೂ ಚರ್ಚೆಯಾಗುತ್ತಿದೆ. ದಾಬೋಲ್ಕರ್‌ರವರ ಹತ್ಯೆಯಾಯಿತು, ಪನ್ಸಾರ್‌ರವರದ್ದು ಆಯಿತು, ಸಿಖ್ ಹತ್ಯೆಯಾಯಿತು, award ಗಳನ್ನು ಹಿಂದಕ್ಕೆ ಪಡೆಯುವಂಥ ಒಂದು ಅಭಿಯಾನವೇ start ಆಯಿತು. ಇದಕ್ಕೆ ಯಾರು ಜವಾಬ್ದಾರಿ? ಏನು ತನ? ಇನ್ನೂ investigation ಆಗಿಲ್ಲ, ಒಂದು clue ಸಿಕ್ಕಿಲ್ಲ. ಅಂದರೆ, ಯಾರೊಬ್ಬರನ್ನೊ target ಇಟ್ಟು ಮಾಡುವಂಥದ್ದು. ಬಿಹಾರ ಚುನಾವಣೆ ಬಂದಿತ್ತು ಆಗ ಚಾಲೂ ಆಯಿತು, ಈಗ ಪ್ರಶಸ್ತಿ ವಾಪಸ್ ಮಾಡುವುದು ಇಲ್ಲ ಏನೂ ಇಲ್ಲ. ಈಗ ಎಲ್ಲಾ silent ಆಗಿದೆ. ಆಗ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಅಂದರೆ, ಯಾವ ವ್ಯವಸ್ಥೆ ನಡೆಯುತ್ತಿದೆ? ಅದಕ್ಕಾಗಿ ನಾನು ರಾಜ್ಯ ಸರ್ಕಾರದ ದೊಡ್ಡ ಜವಾಬ್ದಾರಿ ಇದೆ ಎಂದೆ. ಡಾ:ಕಲಬುರ್ಗಿಯವರ ಹತ್ಯೆಯ ಹಿನ್ನೆಲೆ ಏನು? ಯಾರು ಮಾಡಿದರು? ನಿಮಗೇನಾದರೂ ಇಲ್ಲಿಯವರೆಗೆ ಮಾಹಿತಿ ಸಿಕ್ಕಿದೆಯೆ? ಇನ್ನು ಎಷ್ಟು ದಿವಸದಲ್ಲಿ investigation complete ಮಾಡುತ್ತೀರಿ? ನೀವು ಅವರನ್ನು ಯಾವಾಗ arrest ಮಾಡುತ್ತೀರಿ? ಈ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಸರ್ಕಾರ ಕೊಡಬೇಕೆನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಅದಕ್ಕಾಗಿ ರಾಜ್ಯ ಸರ್ಕಾರ ಈ ಕಾನೂನು ಸುವ್ಯವಸ್ಥೆ ಸರಿಯಾಗಿಡಲಿಕ್ಕೆ complete



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಆಗಿ ವಿಫಲವಾಗಿದೆ, ವೈಫಲ್ಯವಾಗಿದೆ ಎನ್ನುವ ಮಾತುಗಳನ್ನು ಹೇಳುತ್ತೇನೆ. ಇದಕ್ಕೆ ರಾಜ್ಯದಲ್ಲಿ ಇವತ್ತೇನು ಹಲವಾರು ಗೊಂದಲಗಳು ನಿರ್ಮಾಣವಾಗಿವೆ ಅದಕ್ಕೆ ಸಂಪೂರ್ಣವಾಗಿ ರಾಜ್ಯ ಸರ್ಕಾರ ಮತ್ತು ಗೃಹ ಇಲಾಖೆ ಹಾಗೂ ಮುಖ್ಯಮಂತ್ರಿಗಳೇ ಜವಾಬ್ದಾರಿ ಎನ್ನುವಂಥ ಮಾತುಗಳನ್ನು ಹೇಳುತ್ತೇನೆ. ಹಲವಾರು ಗೊಂದಲಗಳು, ಮತ್ತೊಂದು, ಸರ್ಕಾರದ ತಪ್ಪು ನೀತಿಗಳು, ಆಡಳಿತದ ಶಿಥಿಲ, ಈ ಆಡಳಿತದ ವ್ಯವಸ್ಥೆ ಕುಸಿದು ಹೋಗಿದೆ ಇದರಿಂದಾಗಿ ಕಾನೂನು ಸುವ್ಯವಸ್ಥೆಯೂ ಕೂಡ ಹದಗೆಡುತ್ತಿದೆ. complete ಆಗಿ ವಿಫಲವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಅದಕ್ಕಾಗಿ ಎಚ್ಚರಿಕೆ ಕೊಡುತ್ತೇನೆ. ಇದೇ ರೀತಿ ನಿಮ್ಮ ಆಡಳಿತ ಶಿಥಿಲ ಮುಂದುವರೆದರೆ ಸರಿಯಾದಂಥ ಕ್ರಮ ಕೈಗೊಳ್ಳದಿದ್ದರೆ, ಬರುವಂಥ ದಿವಸಗಳಲ್ಲಿ ಇನ್ನೂ ಗಂಭೀರವಾದಂಥ ಅನಾಹುತಗಳಾಗುವುದಕ್ಕೆ ಸಾಧ್ಯವಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ನಿನ್ನೆ ಕುವೆಂಪುರವರ ಮನೆಯಲ್ಲಿಯೂ ಕೂಡ ಕಳುವು ಮಾಡಿದರು. ಆಮೇಲೆ ಕೊನೆಯದಾಗಿ ನಾನೊಂದು ಮಾತನ್ನು ಹೇಳುತ್ತೇನೆ. ನೀವು ಹಿಂದೆ ಗೃಹ ಮಂತ್ರಿಗಳಾಗಿದ್ದಾಗ Advisor ಎಂದು retired IPS officer ಕೆಂಪಯ್ಯ ಎಂಬುವವರೊಬ್ಬರನ್ನು appoint ಮಾಡಿದಿರಿ. ಹೊಸ ಮಂತ್ರಿಗಳಾದ ಮೇಲೆ ಅವರು ಈಗ ಮುಂದುವರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಯಾವ ರೀತಿಯಾಗಿ ಇವರ ಆಡಳಿತ ಇದೆ ಎಂದರೆ, ಅವರು ತಮ್ಮ ಕಛೇರಿಯಲ್ಲಿ ಕುಳಿತು advise ಮಾಡಿ, home department ಸುಧಾರಣೆ ಮಾಡಲಿಕ್ಕೆ police ವ್ಯವಸ್ಥೆ ಸುಧಾರಣೆ ಮಾಡುವ ಬದಲು ಅವರು ಒಬ್ಬ ಮಂತ್ರಿಯಾಗಿ ಯೇ ನಡೆದುಕೊಳ್ಳುತ್ತಿದ್ದಾರೆ. ಗೃಹ ಮಂತ್ರಿಗಳು ಎಲ್ಲಿ press address ಮಾಡಿದರೆ ಅಲ್ಲಿ ಅವರ ಬಾಜೂಕ್ಕೆ ಕುಳಿತುಕೊಳ್ಳುವುದು. ಯಾವುದಾದರೊಂದು ಕಾರ್ಯಕ್ರಮ ನಡೆದರೆ ಅಲ್ಲಿನೂ ತಮ್ಮ ಹೆಸರನ್ನು ಮುಖ್ಯ ಅತಿಥಿ ಎಂದು ಹಾಕಿಸಿಕೊಳ್ಳುವುದು, ಇಲ್ನೋಡಿ ಅಧ್ಯಕ್ಷರೆ, ಈಗಾಗಲೇ ತಮಗ ೊಂದು ಮಾಹಿತಿ ಕಳುಹಿಸಿ ಕೊಟ್ಟಿದ್ದೇನೆ. ಈ ಬಗ್ಗೆ ತಮಗೆ ಪತ್ರ ಬರೆದಿದ್ದೇನೆ, ಮುಖ್ಯಮಂತ್ರಿಗಳಿಗೂ ಹಾಗೂ DPAR ಗೂ ಪತ್ರ ಬರೆದಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಹುಬ್ಬಳ್ಳಿಯಲ್ಲಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಡೆದಂಥ ಗೃಹ ಇಲಾಖೆಯ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯಲ್ಲಿ ಉದ್ಘಾಟನೆ ಕಾರ್ಯಕ್ರಮ ಮಾನ್ಯ ಸಿದ್ದರಾಮಯ್ಯನವರು, ಮುಖ್ಯಮಂತ್ರಿಗಳು..,

(ಗೊಂದಲ)

ಅಧ್ಯಕ್ಷರು : ಮಂತ್ರಿಯನ್ನಾಗಿ ಮಾಡಿರಬೇಕಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ : ಅವರನ್ನು ಮಂತ್ರಿಯನ್ನಾಗಿ ಮಾಡಿ ಬಿಡುವುದು ಚಲೋ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : Minister of State status ಕೊಟ್ಟಿದ್ದೇವೆ.

ಅಧ್ಯಕ್ಷರು : ಕೊಟ್ಟಿದ್ದೀರಾ?

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : ಕೊಟ್ಟಿದ್ದೇವೆ.

ಶ್ರೀ ಜಗದೀಶ ಶೆಟ್ಟರ್ : ಅದರಲ್ಲಿ ಇರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉದ್ಘಾಟನೆ : ಮಾನ್ಯ ಮುಖ್ಯಮಂತ್ರಿಗಳು, ಮುಖ್ಯ ಅತಿಥಿ : ಕೆ.ಜೆ.ಜಾರ್ಜ್, ಅಂದು ಅವರು Home Minister ಆಗಿದ್ದರು. ಆಮೇಲೆ ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿಗಳು, next ನನ್ನ ಹೆಸರು ಇದೆ. ಇದಾದ ಮೇಲೆ ದಿನೇಶ್ ಗುಂಡೂರಾವ್, ಉಸ್ತುವಾರಿ ಮಂತ್ರಿ. ಇದಾದ ಮೇಲೆ ಕೆಂಪಯ್ಯನವರು ಹೆಸರು.

ಅಧ್ಯಕ್ಷರು : ಮಹಾದೇವಪ್ಪನವರು ಇಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಹಾದೇವಪ್ಪನವರು ಇಲ್ಲ ಮತ್ಯಾರೂ ಇಲ್ಲ. ಮುಂದೆ MPಗಳು, MLA ಗಳು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಕೊನೆಗೆ ಎಲ್ಲರೂ., ಅಂದರೇನು super minister ಆಗಿದ್ದಾರೆಯೋ? Super CM ಆಗಿದ್ದಾರೆಯೋ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ.ಜಾರ್ಜ್ : ರಾಥೋಡ್ ಎನ್ನುವವರು military ಯಲ್ಲಿ ಕರ್ನಲ್ ಆಗಿದ್ದವರು. ಅವರು ಈಗ ಮಂತ್ರಿಯಾಗಿದ್ದಾರೆ. ಅವರಿಗೆ ಮಂತ್ರಿಸ್ಥಾನ ಕೊಡಬಾರದು ಎಂದು ಇದೆಯೆ? ಅದಕೋಸ್ಕರ ಯಾರಿಗೆ ಯಾವ status ಕೊಡಬೇಕೋ ಆ status ಕೊಡಬೇಕು.

ಅಧ್ಯಕ್ಷರು : ಬಂದೇ ಬಿಟ್ಟರು.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ : ಸಾರ್ ನಿಜವಾಗಿಯೂ Adviser ಮಹಾದೇವಪ್ಪನವರು. ಅವರ ಹೆಸರು ಏಕೆ ಇಲ್ಲವೆಂದು ನಮ್ಮ ಆಕ್ಷೇಪಣೆ.

ಅಧ್ಯಕ್ಷರು : ಹುಬ್ಬಳ್ಳಿಯಲ್ಲಿ ಯಾವುದೊ ಒಂದು function ನಲ್ಲಿ ಎಲ್ಲರೂ ಇದ್ದರಂತೆ ಮಹಾದೇವಪ್ಪನವರು ಏಕೆ ಇಲ್ಲ ಎಂದೆ? ಆಯಿತು ಬೇಗ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾನು ಮುಗಿಸುತ್ತೇನೆ. ಈ ರೀತಿ Super Minister, Super CM, Super Advisor ಎಲ್ಲರೂ ಈ ಸರ್ಕಾರದಲ್ಲಿದ್ದಾರೆ. ಹೀಗಾಗಿ ಆಡಳಿತ ಹೇಗೆ ಆಗಿದೆ ಎಂದು ಹೇಳುತ್ತಿದ್ದೇನೆ. ಇಂಥ ಕೆಂಪಯ್ಯನವರನ್ನು ನೀವು Advisor ಆಗಿ ತೆಗೆದುಕೊಂಡರೆ, ನೋಡಿ ಈ ರೀತಿಯ intervene ಆಗಿದ್ದರಿಂದ ಈ ರೀತಿಯ Advisor ಆಗಿದ್ದರಿಂದ ಬಹಳಷ್ಟು ಅಧಿಕಾರಿಗಳು ಬಹಳ ಬೇಜಾರಿನಲ್ಲಿದ್ದಾರೆ. ಹೀಗಾಗಿ ನಿಮಗೆ co-operation ಸಿಗುತ್ತಿಲ್ಲ. ಹೊಸದಾಗಿ Home Minister ಬಂದಿದ್ದಾರೆ ಅವರಾದರೂ ಈ ಬಗ್ಗೆ ಗಂಬೀರವಾಗಿ ವಿಚಾರ ಮಾಡಬೇಕಾಗುತ್ತದೆ. ಇದೇ Advisorನ್ನು ಮುಂದುವರಿಸಿದರೆ Home Department ಹೇಗೆ ಇರುತ್ತದೆಯೋ ಹಾಗೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ಮತ್ತು ಸರ್ಕಾರಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಇದರ ಬಗ್ಗೆ ನಾನೇನು ಪತ್ರ ಬರೆದಿದ್ದೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ದಯವಿಟ್ಟು ತಾವು direction ಕೊಡಬೇಕು, ಮುಖ್ಯಮಂತ್ರಿಗಳು action ತೆಗೆದುಕೊಳ್ಳಬೇಕು, ಈ ರೀತಿಯಾಗಿ ಉದ್ಘಾಟನೆಯ protocol ಉಲ್ಲಂಘನೆ ಎಲ್ಲವೂ ನಡೆದು ಹೋಗಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದೆ. ಈ ರೀತಿಯ ಅಧಿಕಾರಿಗಳಿಗೆ ಈ ರೀತಿಯಾಗಿ ಕುಮ್ಮಕ್ಕು ಕೊಡುವುದರಿಂದ, ಇಡೀ ಆಡಳಿತ ವ್ಯವಸ್ಥೆ ಶಿಥಿಲವಾಗುತ್ತದೆ. ಹೀಗಾಗಿ ಈ ರೀತಿಯಾದ ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇಂದು ಬೆಳಿಗ್ಗೆ ಪತ್ರಿಕೆಯನ್ನು ನೋಡಿದಾಗ, ತಮ್ಮ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಕುವೆಂಪುರವರ ಮನೆ ಏನಿದೆ, ಅಲ್ಲಿ ಪದಕಗಳನ್ನು ಕಳುವು ಮಾಡುವಂಥದ್ದು ನಡೆಯುತ್ತಿದೆ. ಅಂದರೆ, ಯಾವ ರೀತಿ ಸರ್ಕಾರ ನಡೆಯುತ್ತಿದೆ, ಆಡಳಿತದ ವ್ಯವಸ್ಥೆ ನಡೆಯುತ್ತಿದೆ ಎನ್ನುವಂಥದ್ದಕ್ಕೆ ಇದೊಂದು ಉದಾಹರಣೆ.

(ಗೊಂದಲ)

ಅಧ್ಯಕ್ಷರು : ಆಗಲೇ ಹೇಳಿದಿರಿ ಮುಂದೆ ಹೋಗ್ರಿ.

ಶ್ರೀ ಜಗದೀಶ್ ಶೆಟ್ಟರ್ : ನನ್ನದೂ ಮುಗಿಯಿತು ಮುಂದೆ ಹೋಗುವ ಪ್ರಶ್ನೆನೇ ಇಲ್ಲ. ಉಳಿದವರು ನಮ್ಮವರು ಹೇಳುತ್ತಾರೆ. ಒಂದೇ ಒಂದು ಹೇಳುವುದು ಏನೆಂದರೆ, ಈ ಸರ್ಕಾರ ಎಲ್ಲಾ ವಿಚಾರದಲ್ಲಿಯೂ complete ಆಗಿ ಕಾನೂನು ಸುವ್ಯವಸ್ಥೆಯಲ್ಲಿ ವಿಫಲವಾಗಿದೆ ಎನ್ನುವಂಥದ್ದನ್ನು ನಾನು ಈ ಸಂಧರ್ಬದಲ್ಲಿ ಹೇಳಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಬೋಪಯ್ಯನವರೇ ನನ್ನ ಹತ್ತಿರ ನೀವು ಬಂದಾಗ ಒಂದು ಗಂಟೆಯೊಳಗೆ ಪೂರೈಸುತ್ತೇವೆಂದು ಹೇಳಿದಿರಿ. ಅದಕೋಸ್ಕರ ಹಿಂದೆ ಇದ್ದದ್ದನ್ನು ಮುಂದಕ್ಕೆ ಹಾಕಿ ನಿಮಗೆ ಅವಕಾಶ ಕೊಟ್ಟೆ.

ಶ್ರೀ ಕೆ.ಜಿ.ಬೋಪಯ್ಯ : ಪೂರೈಸುತ್ತಿದ್ದೆ ಅಧ್ಯಕ್ಷರೆ, ಆ ಕಡೆಯಿಂದ ಎಲ್ಲಾ .,

(ಗೊಂದಲ)

ಅಧ್ಯಕ್ಷರು : ನಾನು ಹೇಳುವವರೆಗೆ ಸ್ವಲ್ಪ ಕೇಳಿ. ವಿರೋಧ ಪಕ್ಷದವರೆಲ್ಲರೂ ಬಂದಿದ್ದಾರೆ ಎನ್ನುವ ಕಾರಣಕ್ಕಾಗಿ ಹಿಂದೆ ಇದ್ದದ್ದನ್ನು ತೆಗೆದು ಇಲ್ಲಿ ಹಾಕಿಕೊಂಡಿದ್ದೇನೆ. ನೀವು ಸಮಯಕ್ಕೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಂಟಿಕೊಳ್ಳದೆ ಹೋದರೆ ನಾನು ಇನ್ನೊಂದು ಸಾರಿ ನನ್ನ Agenda ಬಿಟ್ಟು ಮುಂದಕ್ಕೆ ಹೋಗ ುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ : ಮಾತನಾಡುವುದಕ್ಕಿಂತ ಹೆಚ್ಚು interference ಜಾಸ್ತಿಯಾಯಿತು. ಹಾಗಾಗಿ ಈ ರೀತಿಯಾಗಿದೆ.

(ಗೊಂದಲ)

ಶ್ರೀ ಎನ್.ಹಚ್.ಕೋನರೆಡ್ಡಿ : ಸಾರ್ ನಮಗೆ ಅವಕಾಶ ಇದೆಯೇ? ನಮಗೆ ಕಳಸಾ-ಬಂಡೂರಿ ವಿಚಾರಕ್ಕೆ ಅವಕಾಶ ಕೊಡುತ್ತೀರಾ ಸಾರ್?

ಅಧ್ಯಕ್ಷರು : Agenda ದಲ್ಲಿದೆ ಬಂದರೆ ಕೊಡುತ್ತೇನೆ.

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ : ಸಾರ್ Agenda ದಲ್ಲಿ first ಅದು ಇತ್ತು, ತಾವು ಕೊಟ್ಟಿದ್ದೀರಿ, ಇವತ್ತು ಅವಕಾಶ ಕೊಡುತ್ತೀರೋ ಇಲ್ಲವೊ?

ಅಧ್ಯಕ್ಷರು : ಸಮಯ ಇದ್ದರೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಇಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವ ಬಗ್ಗೆ ನಾವು ನಿಯಮ 60 ರಲ್ಲಿ ಕೊಟ್ಟಿದ್ದೇವು, ತಾವು 69 ರಲ್ಲಿ ಇಂದು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಇಡೀ ರಾಜ್ಯದಲ್ಲಿ ವ್ಯವಸ್ಥೆಗಳು ಹೇಗೆ ಇವೆ ಎನ್ನುವ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಇರುವ ಸಮಯದಲ್ಲಿಯೇ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಇನ್ನಷ್ಟು ವಿಚಾರಗಳು ಅವರು ಹೇಳಬೇಕಾಗಿತ್ತು. ಆದರೆ, ಇದರ ಎಲ್ಲರ ಹಿನ್ನೆಲೆ ಬಹುಶ: ರಾಜ್ಯ ಸರ್ಕಾರ. ವಿರೋಧದ ನಡುವೆಯೂ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರ ಪರಿಣಾಮ ಕೊಡುಗು ಜಿಲ್ಲೆಯಲ್ಲಿ ಆದಂಥ ಘಟನೆಗಳು. ಟಿಪ್ಪು ಜಯಂತಿಯನ್ನು ನವೆಂಬರ್ 10 ನೇ ತಾರೀಖಿನಂದು ಆಚರಣೆ ಮಾಡಬೇಕೆಂದು ಸರ್ಕಾರದ ಕಡೆಯಿಂದ ಅದೊಂದು ಸರ್ಕಾರಿ ಉತ್ಸವವನ್ನಾಗಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದ್ದರ ಪರಿಣಾಮ, ಯಾವಾಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಘೋಷಣೆ ಮಾಡಿದರು ಆ ತಕ್ಷಣ ಕೊಡುಗು ಜಿಲ್ಲೆಯಲ್ಲಿ ಅದಕ್ಕೆ ಸಾಕಷ್ಟು ವಿರೋಧಗಳು ಬಂತು. ಏಕೆ ವಿರೋಧಗಳು ಬಂತು ಆ ಹಿನ್ನೆಲೆಯನ್ನು ಎಲ್ಲವನ್ನೂ ಕೇವಲ ರಾಜಕೀಯ ಪಕ್ಷಗಳು ಮಾತ್ರವಲ್ಲ, ಅನೇಕ ಸಂಘಸಂಸ್ಥೆಗಳು ಕೆಲವು ಸಮಾಜದ ಬಂಧುಗಳು ಎಲ್ಲರೂ ಟಿಪ್ಪು ಎಂದರೆ ಕೊಡಗಿಗೆ ಬಹಳಷ್ಟು ಅನ್ಯಾಯ ಮಾಡಿದ್ದಾನೆ, ಮತಾಂತರ ಮಾಡಿದ್ದಾನೆ, ದೇವಾಲಯಗಳ ನಾಶವಾಗಿದೆ, ಈ ರೀತಿ ಜನ ವಿರೋಧಿ ಕೆಲಸ ಆತನಿಂದ ಆಗಿದೆ, ಹೀಗಾಗಿ ಮಾಡಬಾರದು ಎನ್ನುವ ಸ್ಪಷ್ಟ ಸಂದೇಶವನ್ನು ಕೊಟ್ಟಿತ್ತು ಮತ್ತು ಜಿಲ್ಲೆಯಲ್ಲಿಯೂ ಕೂಡ ಈ ಬಗ್ಗೆ ಆಚರಣೆ ಇದನ್ನು ಮೀರಿ ಮಾಡಿದರೆ ಮುಂದಿನ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎನ್ನುವಂಥದ್ದು ಇಡೀ ಜನತೆಯ ಧ್ವನಿಯಾಗಿತ್ತು. ಆದರೆ, ಇದೆಲ್ಲವನ್ನೂ ಗಾಳಿಗೆ ತೂರಿ, ಸರ್ಕಾರ ಇದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡದೇ ಅಲ್ಲಿ ಆದಂಥ ಪರಿಣಾಮ ಏನೆಂದರೆ 4 ಜೀವಗಳು ಹೋಗಿದೆ. 2 ಜೀವಗಳು ಎಂದು ಹೇಳಿದರು. ಒಬ್ಬರು ಈ ಒಂದು ಗಲಭೆಯಲ್ಲಿ ಸತ್ತರು. ಇನ್ನೊಬ್ಬರು ಆ ಗಲಭೆಯಲ್ಲಿ ಸತ್ತ bodyಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅಲ್ಲೊಬ್ಬರು inpatient ಅವರಿಗೆ ಇದನ್ನೆಲ್ಲಾ ನೋಡಿ ಗಾಬಿರಿಯಾಗಿ ಸ್ವಲ್ಪ mental ಆಗಿದ್ದ, ಆ ಆಸ್ಪತ್ರೆಯಿಂದ ಕೆಳಗೆ ಧುಮುಕಿ ಸತ್ತು ಹೋದ. ಇನ್ನೊಬ್ಬರು ಅಲ್ಪಸಂಖ್ಯಾತ ಬಂಧು ಗುಂಡೇಟಿನಿಂದ ಸತ್ತು ಹೋಗಿರುವುದನ್ನು ನಾನು ಹೇಳುತ್ತೇನೆ. ಅದರ ಜೊತೆಗೆ ಅದೇ ದಿವಸ 10 ನೇ ತಾರೀಖು ಮತ್ತೊಬ್ಬ ಕಾರ್ಮಿಕ ನಲ್ಲತಂಬಿ ಎಂಬುವವರು ರಾತ್ರಿ Motor Bike ನಲ್ಲಿ ಹೋದಾಗ ನಿಗೂಢವಾಗಿ ಸಾವನ್ನಪ್ಪಿದ್ದಾನೆ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 4.40(30) KS:VG

ಶ್ರೀ ಕೆ.ಜಿ.ಬೋಪಯ್ಯ:- (ಮುಂದು)

ಮಾನ್ಯ ಸಚಿವರೇ, ನಾನು ಮೊದಲು ಹೇಳುತ್ತೇನೆ. ಆನಂತರ ತಾವು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿ.

ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಈಗಾಗಲೇ investigation ನಡೆಯುತ್ತಿದೆ. Magistrate ಕಡೆಯಿಂದ enquiry ನಡೆಯುತ್ತಿದೆ. ಆದ್ದರಿಂದ, ತನಿಖೆಯ ವರದಿ ಬಂದ ನಂತರ ಎಲ್ಲ ವಿಷಯ ಗೊತ್ತಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಸಚಿವರೇ, ನಾನು ಯೀಲ್ಡ್ ಆಗಿಲ್ಲ. ತಾವು ಈ ರೀತಿಯಾಗಿ ಪ್ರತಿಸಲ interfere ಆದರೆ ನಾನೇನು ಮಾಡಬೇಕು? ನಾನು ಈಗ ನಿಮ್ಮ ಮೇಲೆ ಏನು ಹೇಳಲಿಲ್ಲ. ಆದ್ದರಿಂದ, ತಾವೇಕೆ ಎದ್ದು ನಿಲ್ಲುತ್ತೀರಿ?

ಅಧ್ಯಕ್ಷರು:- ಆಯಿತು. ಈಗ ವಿಷಯದ ಬಗ್ಗೆ ಮಾತ್ರ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಆ ವ್ಯಕ್ತಿ ಬೈಕ್‌ನಲ್ಲಿ ಹೋಗುತ್ತಿರುವಾಗ ಸತ್ತಿದ್ದಾರೆ. ರಸ್ತೆಯ ಒಂದು ಬದಿಯಲ್ಲಿ ಬೈಕ್ ಇನ್ನೊಂದು ಬದಿಯಲ್ಲಿ ಈತನ body ಬಿದ್ದಿದೆ. ಆಕ್ಸಿಡೆಂಟ್ ಆದರೆ ಬೈಕ್‌ಗೆ ಡ್ಯಾಮೇಜ್ ಅಥವಾ ಇನ್ನೇದಾರು ಆಗಬೇಕಾಗಿತ್ತು. ಆದರೆ, ಯಾವುದೇ ಡ್ಯಾಮೇಜ್ ಆಗಿಲ್ಲ. ಈ ಗಲಭೆ ಹಿನ್ನಲೆಯಲ್ಲಿ body ಅಲ್ಲಿ ಇದ್ದ ಪ್ರಯುಕ್ತ ಇದರ ಬಗ್ಗೆ ಕೂಡ ತನಿಖೆ ಆಗಬೇಕೆಂದು ಹೇಳಿದ್ದೇವೆ ಹೊರತು ಯಾರೋ ಕೊಲೆ ಮಾಡಿದ್ದಾರೆಂದು ಯಾರು ಸಹ ಹೇಳಿಲ್ಲ. ಆದರೆ, ಅದರ ಬಗ್ಗೆ ತನಿಖೆ ಆಗ ಬೇಕೆಂದು ಅಲ್ಲಿಯ ಜನತೆಯ ಬೇಡಿಕೆ ಆಗಿದೆ. ಆದರೆ, ಇಲ್ಲಿಯವರೆಗೆ ಆ ಬಗ್ಗೆ ಏನೂ ಸಹ ಆಗಿಲ್ಲ. ಕೊಡಗು ಜಿಲ್ಲೆಯಲ್ಲಿ ವಿಶೇಷವಾಗಿ ಟಿಪ್ಪು ಜಯಂತಿ ಆಚರಿಸಲಾಗಿದೆ. ಚರಿತ್ರೆಯ ಪ್ರಕಾರ ಆತನ ಜನ್ಮ ದಿನ

20ನೇ ನವೆಂಬರ್ 1750 ಆಗಿದೆ. ಆದರೆ, ಆತನ ಜಯಂತಿ ದಿನಾಂಕವನ್ನು ಇವರು ನವೆಂಬರ್ 10ನೇ ತಾರೀಖು ಎಂದು ಏಕೆ ಗುರುತು ಮಾಡಿಕೊಂಡಿದ್ದಾರೆಂದು ಗೊತ್ತಾಗಲಿಲ್ಲ.

ಶ್ರೀ ಖಮರುಲ್ ಇಸ್ಲಾಂ:- ಇದರ ಬಗ್ಗೆ Gazette notification ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಖಮರುಲ್ ಇಸ್ಲಾಂರವರೇ ತಾವು ಆಮೇಲೆ ಹೇಳಿ.

ಅಧ್ಯಕ್ಷರು:- ತುಮ್ ಬೈಟೋಜಿ. ನಮ್ಮ ಶಿವಪ್ಪನಾಯಕ್‌ನದು ಸಹ ನಾಳೆ ದಿವಸ ಮಾಡಿ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಸಚಿವರೇ, ಉತ್ತರ ಕೊಡುವಂಥ ಸಮಯದಲ್ಲಿ ಹೇಳಿ.

ಶ್ರೀ ಖಮರುಲ್ ಇಸ್ಲಾಂ:- ಮಾನ್ಯ ಅಧ್ಯಕ್ಷರೆ, Gazette notification ಪ್ರಕಾರ ಆ ಬಗ್ಗೆ confirm ಮಾಡಿರುವ ಪ್ರಕಾರ 10ನೇ ನವೆಂಬರ್ ಆತನ ಜನ್ಮ ದಿನಾಂಕ ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ:- ಜನರಿಗೆ ಇಷ್ಟ ಬಂದಾಗ ಒಂದು ದಿವಸ ಮಾಡುತ್ತಾರೆ.

ಶ್ರೀ ಖಮರುಲ್ ಇಸ್ಲಾಂ:- ... ಚಾಂದ್, ಎಲ್ಲವನ್ನು ನೋಡಿ ಮಾಡಲಾಗಿದೆ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಅವರು interfere ಆದರೆ ನಾನು ಏನು ಮಾಡಬೇಕು?

ಅಧ್ಯಕ್ಷರು:- ಆಯಿತು. ಅವರು ಹಾಗೆ ಬಿಡಿ. ದಯವಿಟ್ಟು ತಾವು ಬೇಗ ಪೂರೈಸಿ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಬೇಗ ಮುಗಿಸುತ್ತೇನೆ. ಈ ಕಾರ್ಯಕ್ರಮವನ್ನು ಜನರು ಮಾಡುವುದು ಬೇರೆ. ಆದರೆ, ಸರ್ಕಾರ ಮಾಡುವಾಗ ಅದರ ಪೂರಕ ದಾಖಲೆಗಳನ್ನು ನೋಡಬೇಕು. ಮಾನ್ಯ ರಚ್ಚೆ ಬರೆದಂತಹ ಎಲ್ಲಾ ದಾಖಲೆಗಳ ಪ್ರಕಾರ ಆತನ ಜನ್ಮ ದಿನಾಂಕ 20ನೇ ನವೆಂಬರ್ 1750 ಎಂದು ಇದೆ. ಆದ್ದರಿಂದ, ಈ ರೀತಿ ಏಕೆ ಮಾಡಿದ್ದೀರಿ ಎಂಬ ಬಗ್ಗೆ ಕೂಡ ನೀವು ಕ್ಲಾರಿಫೈ ಮಾಡಬೇಕು. ಇದು ಕೂಡ ಗಲಭೆಗೆ ಒಂದು ಕಾರಣವಾಗಿದೆ. ಮತ್ತೊಂದು ವಿಚಾರ ಏನೆಂದರೆ, ಇಷ್ಟು ವರ್ಷ ಇಲ್ಲದೆ ಇದ್ದಂಥದನ್ನು ದಿಢೀರ್ ಏಕೆ ಮಾಡುವುದಕ್ಕೆ ಹೋದಿರಿ? ಇದಕ್ಕೆ ಏನು ಸಮಸ್ಯೆ ಆಗಿದೆ? ಮುಸ್ಲಿಂ ಬಂಧುಗಳು ಅವರ ಇಷ್ಟಕ್ಕೆ ತಕ್ಕಂತೆ ಈ ಒಂದು ಜಯಂತಿಯನ್ನು ನಮ್ಮಲ್ಲಿಯೂ ಸಹ ಮಾಡಿಕೊಂಡು ಹೋಗುತ್ತಿದ್ದರು. ಆದ್ದರಿಂದ, ಅದೇ ರೀತಿಯಾಗಿ ಬಿಡಬಹುದಾಗಿತ್ತು. ಇದನ್ನು ಏಕೆ ಒಂದು ಪ್ರತಿಷ್ಠೆಯಾಗಿ ತೆಗ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಿದುಕೊಂಡಿದ್ದೀರಿ? ಈ ಹಿನ್ನಲೆಯೊಳಗೆ ಈ ಎಲ್ಲಾ ಘಟನೆಗಳು ಆಗಿವೆ. ಮತ್ತೊಂದು ವಿಚಾರ ಏನೆಂದರೆ, ಕೊಡಗಿನಲ್ಲಿ ಇದಕ್ಕೆ ಏಕೆ ಇಷ್ಟೊಂದು ವಿರೋಧ ಇದೆ ಎಂಬ ವಿಚಾರವನ್ನು ನಾನು ಹೇಳಲೇ ಬೇಕಾಗ ುತ್ತದೆ. ಬಹುಶ: ಕೊಡಗು ಜಿಲ್ಲೆಯಲ್ಲಿ ಟಿಪ್ಪು ಸುಲ್ತಾನ್ ಎಂದರೆ, ಆತ ಒಬ್ಬ ಮತಾಂಧ ಹಾಗು ಅಲ್ಲಿರುವ ಆಸ್ತಿ ಮತ್ತು ದೇವಾಲಯಗಳನ್ನು ಲೂಟಿ ಮಾಡಿದ್ದಾನೆಂದು ನಾವು ಬರೆದಿಲ್ಲ. ಈ ಎಲ್ಲಾ ವಿಚಾರಗಳು ಚರಿತ್ರೆಯಲ್ಲಿದೆ.

ಶ್ರೀ ಬಿ. ಜಮೀರ್ ಅಹ್ಮದ್ ಖಾನ್:- ಮಾನ್ಯ ಅಧ್ಯಕ್ಷರೆ, ಟಿಪ್ಪು ಸುಲ್ತಾನ್ ಯಾವುದೇ ದೇವಸ್ಥಾನವನ್ನು ಲೂಟಿ ಮಾಡಿಲ್ಲ. ಟಿಪ್ಪು ಸುಲ್ತಾನ್ ದೇವಸ್ಥಾನಗಳನ್ನು ನಿರ್ಮಾಣ ಮಾಡಿದ್ದಾನೆ. ತಾವು ಸದನಕ್ಕೆ ತಪ್ಪು ಮಾಹಿತಿ ಕೊಡಬಾರದು.

ಶ್ರೀ ಕೆ.ಜಿ. ಬೋಪಯ್ಯ:- ನಾನು ದಾಖಲೆ ಸಮೇತ ಮಾಹಿತಿ ಕೊಡುತ್ತಿದ್ದೇನೆ.

ಶ್ರೀ ಬಿ.ಜಮೀರ್ ಅಹ್ಮದ್ ಖಾನ್:- ತಾವು ಏನು ಬೇಕಾದರು ಹೇಳಿದರೆ ಹೇಗೆ?

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಈ ರೀತಿ ಯಾದರೆ ಹೇಗೆ? ಈ ಬಗ್ಗೆ ನಿಮ್ಮ ಹತ್ತಿರ ದಾಖಲೆ ಇದ್ದರೆ ಕೊಡಿ. ನಾನು ಈ ಬಗ್ಗೆ ದಾಖಲೆ ಸಮೇತ ಹೇಳುತ್ತಿದ್ದೇನೆ. ಕೊಡುಗು ಜಿಲ್ಲೆಗೆ ಟಿಪ್ಪು ಏಳು ಬಾರಿ ಆಕ್ರಮಣ ಮಾಡಿದ್ದಾನೆ. ಆಕ್ರಮಣ ಮಾಡಿದ್ದಂಥ ಸಂದರ್ಭದಲ್ಲಿ 300 ದೇವಸ್ಥಾನಗಳು ನಾಶವಾಗಿ ದೆ.

ಶ್ರೀ ವಿಜಯಾನಂದ್ ಎಸ್.ಕಾಶಪ್ಪನವರ್:- ಮಾನ್ಯ ಅಧ್ಯಕ್ಷರೇ, ಈ ವಿಷಯಗಳನ್ನು ಹೇಳುವುದಕ್ಕೆ ಅವರಿಗೆ ಏಕೆ ಅವಕಾಶ ಕೊಡುತ್ತೀರಿ? ಯಾವ ವಿಷಯದ ಬಗ್ಗೆ ಮಾತನಾಡಬೇಕಾಗಿದೆಯೋ ಅ ವಿಷಯ ಮಾತ್ರ ಮಾತನಾಡಲಿ.

ಅಧ್ಯಕ್ಷರು:- ನೀವು ಕೊಟ್ಟಿರುವ ಮನವಿಯಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿರುವ ಬಗ್ಗೆ ಇದೆ.

ಶ್ರೀ ಕೆ.ಷಡಕ್ಷರಿ:- ಮಾನ್ಯ ಅಧ್ಯಕ್ಷರೆ, ಅವರು ಪ್ರಚೋದನೆ ಮಾಡುತ್ತಿದ್ದಾರೆ. ಆದ್ದರಿಂದ, ಈ ವಿಷಯ ಮಾತನಾಡುವುದು ಬೇಡ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ:- ನನ್ನ ಜಿಲ್ಲೆಯಲ್ಲಿ ನಾಲ್ಕು ಜನ ಸತ್ತಿದ್ದಾರೆ. ಆ ವಿಷಯದ ಹಿನ್ನಲೆಯನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಅಷ್ಟು ಮಾತ್ರ ಹೇಳಿ.

(ಗೊಂದಲ)

ಶ್ರೀ ವಿಜಯಾನಂದ್ ಎಸ್.ಕಾಶಪ್ಪನವರ್:- ಬೆಂಕಿ ಹಚ್ಚುವಂತ ಕೆಲಸ ಮಾಡಬೇಡಿ. ನಿಮ್ಮ ಬಂಡವಾಳ ನಡೆಯುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬೋಪಯ್ಯನವರೇ, ಇವೆಲ್ಲವನ್ನು ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ವಿಜಯಾನಂದ್ ಎಸ್.ಕಾಶಪ್ಪನವರ್:- ಮುಸ್ಲಿಂ ಬಾಂಧವರು ಎಂದರೆ ನಿಮಗೆ ಅಲರ್ಜಿ.

ಶ್ರೀ ಕೆ.ಜಿ.ಬೋಪಯ್ಯ:- ಇದನ್ನು ಇನ್ಮುಂದೆ ಮಾಡಬಾರದೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಷಡಕ್ಷರಿ:- ಸಾಯಿಸುವವರು ನೀವು ಆಗಿದ್ದೀರಿ.

ಅಧ್ಯಕ್ಷರು:- ಚರಿತ್ರೆ ಬಗ್ಗೆ ನಮಗೂ ಮತ್ತು ಯಾರಿಗೂ ಸಹ ಗೊತ್ತಿಲ್ಲ. ಆದ್ದರಿಂದ, ಆ ವಿಷಯವನ್ನು ಹೇಳುವುದಕ್ಕೆ ಹೋಗಬೇಡಿ. ಅಲ್ಲಿ ಏನು ಘಟನೆ ನಡೆದಿದೆ ಆ ಬಗ್ಗೆ ಮಾತ್ರ ಹೇಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಭಾಗಮಂಡಲ ದೇವಸ್ಥಾನ ಬಗ್ಗೆ ದಾಖಲೆ ಏನೆಂಬುದನ್ನು ಎಲ್ಲರೂ ಹೇಳುತ್ತಾರೆ. ಭಾಗಮಂಡಲ ದೇವಸ್ಥಾನವನ್ನು ಆಕ್ರಮಣ ಮಾಡಿ ಅದನ್ನು ಕೋಟೆಯನ್ನಾಗಿ ಮಾಡಲಾಗಿತ್ತು.

ಅಧ್ಯಕ್ಷರು:- ಈಗ ಏನು ಆಗಬೇಕು ಅದನ್ನು ಮಾತ್ರ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ:- ಅದೇ ವಿಚಾರವನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಇಲ್ಲಿರುವ ವಿಚಾರದ ಬಗ್ಗೆ ಮಾತ್ರ ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ತನ್ವೀರ್ ಸೇಠ್:- ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಭಾಗಮಂಡಲ ದೇವಸ್ಥಾನವನ್ನು ಸರ್ಕಾರದ ಕಡೆಯಿಂದ ಜೀರ್ಣೋದ್ಧಾರ ಮಾಡತಕ್ಕಂಥ ಕೆಲಸವನ್ನು ನಾನು ಪ್ರಾರಂಭ ಮಾಡಿದ್ದೆ.

ಶ್ರೀ ಕೆ.ಜಿ.ಬೋಪಯ್ಯ:- ನೀವು ಇದ್ದಾಗ ನಿಮ್ಮ ಸರ್ಕಾರ ಮಾಡಿರಲಿಲ್ಲ. ನಮ್ಮ ಸರ್ಕಾರ ಅದನ್ನು ಮಾಡಿತ್ತು.

(ಗೊಂದಲ)

ಅಧ್ಯಕ್ಷರು:- ಆ ವಿಷಯ ಬಿಡಿ.

(ಗೊಂದಲ)

ಶ್ರೀ ವಿಜಯಾನಂದ್ ಎಸ್.ಕಾಶಪ್ಪನವರ್:- ನೀವು ಪ್ರಚೋದನೆ ಕೊಡುವುದು ಬೇಡ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಆಯಿತು. ನೀವು ಮಾಡಿದ್ದಕ್ಕೆ ನಿಮಗೆ ಅಭಿನಂದನೆ.

ಶ್ರೀ ತನ್ವೀರ್ ಸೇಠ್:- ಅದೆಲ್ಲ ಈಗ ಬೇಕಾಗಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ದಿನೇಶ್ ಗುಂಡೂರಾವ್‌ರವರೆ, ನಾನು ನಿಮಗೆ ಹೇಳುತ್ತಿಲ್ಲ. ಮಾನ್ಯ ತನ್ವೀರ್ ಸೇಠ್‌ರವರು ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದರು. ಆದ್ದರಿಂದ, ಅವರಿಗೆ ಅಭಿನಂದನೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವೈ.ಎನ್.ರುದ್ರೇಶ್ ಗೌಡ:- ಟಿಪ್ಪುಸುಲ್ತಾನ್ ಬಗ್ಗೆ ತಾವು ಹೇಳಿದ ಹಾಗೆ ಆ ರೀತಿ ಹೇಳುವುದೆಲ್ಲ ಬೇಡ.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ: What you are saying, I am not understanding.

(ಗೊಂದಲ)

ಅಧ್ಯಕ್ಷರು:- ಆ ವಿಷಯವನ್ನು ಬಿಡಿ.

(ಗೊಂದಲ)

ಶ್ರೀ ತನ್ವೀರ್ ಸೇಠ್:- ತಾವು ಸದನದಲ್ಲಿ ನನ್ನ ವಿಚಾರ ಪ್ರಸ್ತಾಪ ಮಾಡಬೇಕಾದಾಗ ಮಾತನಾಡುವಂತ ರೀತಿ ತಮಗೆ ಇರಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: You need not advise me.

(ಗೊಂದಲ)

ಅಧ್ಯಕ್ಷರು:- ಆ ವಿಚಾರವೆಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವೈ.ಎನ್.ರುದ್ರೇಶ್ ಗೌಡ:- ಮಾನ್ಯ ಅಧ್ಯಕ್ಷರೆ, ಅವೆಲ್ಲಕ್ಕೂ ತಾವು ಅವಕಾಶ ಕೊಡಬೇಡಿ.

ಶ್ರೀ ಅಪ್ಪಚು (ರಂಜನ್)ಎಂ.ಪಿ.:- ಟಿಪ್ಪು ಸುಲ್ತಾನ್ ಜಯಂತಿ ಆಚರಣೆ ಮಾಡಿದ್ದರಿಂದ ಏನೇನು ಅನಾಹುತ ಆಗಿದೆ ಎಂದು ಹೇಳಬೇಕಲ್ಲವೇ?

ಅಧ್ಯಕ್ಷರು:- ಮಾನ್ಯ ಬೋಪಯ್ಯನವರೇ, ತಾವು ಅನಾವಶ್ಯಕವಾಗಿ ಮಾತನಾಡಿ ಸಮಸ್ಯೆಯನ್ನು ಸೃಷ್ಟಿ ಮಾಡಿಕೊಳ್ಳುತ್ತೀರಿ. ಚರ್ಚೆ ಕಾಲದಲ್ಲಿ ಎಷ್ಟು ಸೂಕ್ಷ್ಮವಾಗಿ ಹೇಳಬೇಕೊ ಅಷ್ಟು ಮಾತ್ರ ಹೇಳಿ ಸರ್ಕಾರದ ಗಮನ ಸೆಳೆಯಿರಿ. ಅದನ್ನು ಬಿಟ್ಟು ಹಳೆಯ ಕತೆ ಹೇಳುವುದು ಬೇಡ. ನೀವು ಹೇಳಿದರೆ ಇನ್ನೊಬ್ಬರು ಇನ್ನೊಂದು ವಿಚಾರ ಹೇಳುತ್ತಾರೆ. ಮತ್ತೊಬ್ಬರು ಮತ್ತೊಂದು ವಿಚಾರ ಹೇಳುತ್ತಾರೆ. ಮನವಿಯಲ್ಲಿ ಏನು ವಿಷಯ ಹೇಳಲಾಗಿದೆಯೋ ಅಷ್ಟು ವಿಷಯ ಮಾತ್ರ ಹೇಳಿ ಸಾಕು.

ಶ್ರೀ ತನ್ವೀರ್ ಸೇಠ್:- ಕೊಡಗು ಜಿಲ್ಲೆಯ ವೀರಾಜಪೇಟೆ ಮತ್ತು ಕುಶಾಲನಗರದಲ್ಲಿ ಏನೇನೂ ಗಲಭೆ ಆಗಿಲ್ಲ. ಮಡಿಕೇರಿಯಲ್ಲಿ ಮಾತ್ರ ಈ ರೀತಿಯಾಗಿದೆ.

ಅಧ್ಯಕ್ಷರು:- ಆಯಿತು ಈ ವಿಷಯ ಸಾಕು ದಯವಿಟ್ಟು ಎಲ್ಲರು ಕುಳಿತುಕೊಳ್ಳಿ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ತನ್ವೀರ್ ಸೇಠ್:- ಮೊದಲಿನಿಂದಲೂ ಟಿಪ್ಪು ಜಯಂತಿ ಆಚರಣೆ ಆಗುತ್ತಾ ಬಂದಿದೆ ಎಂದು ತಾವು ಹೇಳಿದೀರಿ... ಇಷ್ಟೆಲ್ಲಾ ಆಗಿದ್ದು.

ಶ್ರೀ ಕೆ.ಜಿ.ಬೋಪಯ್ಯ;- ಇಲ್ಲವೆಂದು ನಾನು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಬೋಪಯ್ಯನವರೇ, ಗಲಾಟೆ ನಡೆದ ಸಂದರ್ಭದಲ್ಲಿ ಕಾನೂನು ಹದಗೆಟ್ಟಿತ್ತೆಂಬ ವಿಷಯದ ಬಗ್ಗೆ ಮಾತ್ರ ಹೇಳಿ. ಚರಿತ್ರೆಯ ವಿಷಯ ಕೆದಕಿ ಮತ್ತೆ ಗೊಂದಲ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಹಳೆಯ ವಿಚಾರವನ್ನು ನಾನು ಕೆದಕುವುದಕ್ಕೆ ಹೋಗಿಲ್ಲ.

ಶ್ರೀ ಖಮರುಲ್ ಇಸ್ಲಾಂ:- ಒಂದು ನಿಮಿಷ. Don't try to divide the community. Don't bring the intolerance. ನಮ್ಮ ದೇಶದಲ್ಲಿ intolerance ನಡೆಯುತ್ತಿದೆ. Tippu Sultan is the first freedom fighter.. (ಗೊಂದಲ ) ಇವತ್ತಿನದಿವಸ ನಾವು ಯಾವರೀತಿಯಾಗಿ ಬಾಬು ಜಗಜೀವನ್‌ರಾಂ, ಡಾ:ಅಂಬೇಡ್ಕರ್, ವಾಲ್ಮೀಕಿ ಮತ್ತು ಬಸವಣ್ಣನವರ ಜಯಂತಿ ಮಾಡಿಕೊಂಡು ಬರುತ್ತಿದ್ದೇವೆಯೋ ಅದೇ ರೀತಿಯಾಗಿ ಇದನ್ನು ನಮ್ಮ ಸರ್ಕಾರ ಟಿಪ್ಪು ಸುಲ್ತಾನ ಜಯಂತಿ ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು:- ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಬೋಪಯ್ಯನವರೆ, ಬೇರೆ ವಿಷಯದ ಹೇಳುವುದು ಬೇಡ. ಅಲ್ಲಿ ನಡೆದ ಘಟನೆ ಮತ್ತು ಕಾನೂನು ಸುವ್ಯವಸ್ಥೆ ಕೆಟ್ಟಿರುವ ಬಗ್ಗೆ ಮಾತ್ರ ಸೀಮಿತವಾಗಿ ಹೇಳಿ. ಉಳಿದ ವಿಚಾರವನ್ನು ಕೆದಕುವುದಕ್ಕೆ ಹೋಗಬೇಡಿ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಅದೇ ವಿಚಾರಕ್ಕೆ ನಾನು ಸೀಮಿತವಾಗಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಜನರು ಇವತ್ತು ಹೇಗಿದ್ದಾರೆ ಎಂದು ಹೇಳಬೇಕು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು:- ನನಗೆ ತಾವು ಕೊಟ್ಟಿರುವ ಮನವಿಯಲ್ಲಿ ಅಷ್ಟು ಮಾತ್ರ ಇದೆ. ಆದ್ದರಿಂದ, ಅವತ್ತಿನ ಗಲಾಟೆ ವಿಚಾರದಲ್ಲಿ ಪೊಲೀಸ್‌ನವರು ಏನು ತಪ್ಪು ಮಾಡಿದ್ದಾರೆಂಬ ವಿಚಾರದ ಬಗ್ಗೆ ಮಾತ್ರ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ:- ಅಷ್ಟಕ್ಕೆ ಮಾತ್ರ ಹೇಳುತ್ತೇನೆ. ಭಾಗಮಂಡಲ ದೇವಸ್ಥಾನಕ್ಕೆ ಹೆಸರಿಟ್ಟಿದ್ದಾರೆ. ಆತ ಅಪಚಾರ ಮಾಡಿದ್ದಾನೆಂದು ಹೇಳುತ್ತಾರೆ.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ಅವರು ಮತ್ತೆ ಅದೇ ವಿಷಯಕ್ಕೆ ಬರುತ್ತಿದ್ದಾರೆ. ಇದು ಸರಿಯಿಲ್ಲ. ಕಾನೂನು ಸುವ್ಯವಸ್ಥೆ ಕೆಟ್ಟಿರುವ ಬಗ್ಗೆ ಮಾತ್ರ ಮಾತನಾಡಿ. ಈ ವಿಷಯದ ಬಗ್ಗೆ ಬೇರೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಪ್ರಿಯಾಂಕ ಖರ್ಗೆ: ಎಲ್ಲವನ್ನೂ ಕೇಸರೀಕರಣ ಮಾಡಲಿಕ್ಕೆ ಹೊರಟಿದ್ದಾರೆ.

(ಗೊಂದಲ)

ಶ್ರೀ ಬಿ.ಎ.ಮೊಹಿಯುದ್ದೀನ್ ಬಾವಾ: ಇಲ್ಲಿ ಶಾಂತಿ ಉಳಿಯಲಿಕ್ಕೆ ಇವರು ಬಿಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ನೀವ್ಯಾರು ನಮಗೆ ಹೇಳುವುದಕ್ಕೆ? Who are you?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರು ತಮಗೆ ಡೈರೆಕ್ಷನ್ ಕೊಟ್ಟಿದ್ದರೂ ಸಹ ನೀವು follow ಮಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- Who are you? ನನಗೆ ಹೇಳುವುದಕ್ಕೆ ನೀವ್ಯಾರು?

(ಗೊಂದಲ)

ಅಧ್ಯಕ್ಷರು:- ನಾನು ಹೇಳುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಕೆ. ಅಭಯಚಂದ್ರ:- ಇಡೀ ರಾಜ್ಯದಲ್ಲಿ ಚೆನ್ನಾಗಿ ನಡೆಯುತ್ತಿರುವಾಗ ಕೊಡಗಿನಲ್ಲಿ ಮಾತ್ರ ಏಕೆ ಗಲಾಟೆ ಮಾಡಿಸಿದರು?

(ಗೊಂದಲ)

ಅಧ್ಯಕ್ಷರು- ಮಾನ್ಯ ಬೋಪಯ್ಯನವರೆ, ನಿಮ್ಮ ಭಾಷಣದಿಂದ ಉದ್ವೇಗಗೊಳಿಸುವುದಕ್ಕೆ ಹೋಗಬಾರದು. ಘಟನೆ ನಡೆಯುವುದಕ್ಕೆ ಯಾರು ತಪ್ಪು ಮಾಡಿದ್ದಾರೆಂದು ಮತ್ತು ತಪ್ಪು ಮಾಡಿದ್ದವರನ್ನು ಶಿಕ್ಷಿಸುವ ವಿಚಾರದ ಬಗ್ಗೆ ಮಾತ್ರ ಹೇಳಿ. ಬೇರೆ ವಿಷಯ ಇದ್ದರೆ ಅದನ್ನು ಹೊರಗಡೆ ಹೋಗಿ ಮಾತನಾಡಿ ಇಲ್ಲಿ ಮಾತನಾಡುವುದು ಬೇಡ.

(ಗೊಂದಲ)

ಶ್ರೀ ಬಿ.ಎ.ಮೊಹಿಯುದ್ದೀನ್ ಬಾವಾ:- ನಾವೆಲ್ಲರೂ ಪಾಠ ಓದಿಕೊಂಡು ಬಂದಿದ್ದೇವೆ. ಆದ್ದರಿಂದ, ಈ ಬಗ್ಗೆ ನಮಗೆಲ್ಲ ಗೊತ್ತಿದೆ.

ಶ್ರೀ ಕೆ.ಜಿ.ಬೋಪಯ್ಯ:- ನಾನು ನಿಮ್ಮ ಮೇಲೆ ಏನು ಹೇಳಿಲ್ಲ. ಆದ್ದರಿಂದ, ತಾವೇಕೆ ಸಿಟ್ಟು ಆಗುತ್ತೀರಿ? ನಿಮ್ಮ ಮೇಲೆ ಏನಾದರು ಹೇಳಿದ್ದೇನೆಯೇ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:- ನಮ್ಮ ಮೇಲೆ ಅಲ್ಲ, ಈಗ ಇತಿಹಾಸದ ಚರ್ಚೆ ಬೇಡ. ಈ ವಿಷಯವನ್ನು ಹೊರಗಡೆ ಮಾಡೋಣ. ಈಗ ಕಾನೂನು ಸುವ್ಯವಸ್ಥೆ ಬಗ್ಗೆ ಮಾತ್ರ ಮಾತನಾಡಿ.

(ಗೊಂದಲ)

ಶ್ರೀ ಬಿ.ಎ.ಮೊಹಿಯುದ್ದೀನ್:- ಇತಿಹಾಸ ನಮಗೂ ಸಹ ಗೊತ್ತಿದೆ... ದಯವಿಟ್ಟು ಇಡೀ ರಾಜ್ಯದಲ್ಲಿ..

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ./ Uncorrected - Not for Publication.

ಶ್ರೀ ಬಿ.ಝಡ್.ಜಮೀರ್ ಅಹ್ಮದ್ ಖಾನ್:- ಇವರು ಅವರನ್ನು who are you ಎಂದು ಕೇಳುತ್ತಾರೆ. ಟಿಪ್ಪು ಮರ್ಯಾದೆಯನ್ನು ನೀವು ಏಕೆ ಕಳೆಯಬೇಕಾಗಿತ್ತು?

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015-4-50(31)-YBG-CP

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ, ಮಾತನಾಡಿ ಬೇಗ ಪೂರೈಸಿ, ಎರಡೆರಡು ಮಾತು ಹೇಳಿ ಪೂರೈಸುವುದು ಬಿಟ್ಟು ಇದು ಒಳ್ಳೆಯ ಕತೆ ಆಯಿತಲ್ಲಾ, ಈಗ 4.30 ಗಂಟೆ ಮೇಲೆ ಆಯಿತು.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈ ಹಿನ್ನೆಲೆಯೊಳಗೆ ಕೊಡಗಿನ ಜನ ಟಿಪ್ಪು ಜಯಂತಿಯನ್ನು ಬಹಳ ಗಂಭೀರವಾಗಿ ವಿರೋಧ ಮಾಡಿದರು. ಆಗ ಕೆಲವು ಘಟನೆಗಳು ಆಗಿವೆ. ಕುಟ್ಟಪ್ಪ ಎನ್ನುವ ವ್ಯಕ್ತಿ ಮರಣ ಹೊಂದಿದ್ದಾರೆ.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ: ಅದನ್ನು ಮಾಡಿಸಿರುವುದು.

(ಗೊಂದಲ)

ಅಧ್ಯಕ್ಷರು: ಅದನ್ನು ಹೇಳಿದ್ದಾರೆ. ರಿಪೀಟ್ ಮಾಡುವುದು ಬೇಡ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ: ನಿಮಗೆ ಅಲ್ಲಿ ಗಲಾಟೆ ಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಆ ಹಿನ್ನೆಲೆಯೊಳಗೆ ಮೊದಲ ಬಾರಿಗೆ,

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ: ನಿಮಗೆ ಶಾಂತಿ ಬೇಕಾಗಿಲ್ಲ, ಗಲಾಟೆ ಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಸತ್ತು ಅರ್ಧಗಂಟೆ ಆಗಿಲ್ಲ. ಸನ್ಮಾನ್ಯ ಹಿಂದಿನ ಗೃಹ ಸಚಿವರು ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಅದೊಂದು ಆಕಸ್ಮಿಕ ಮರಣ ಎಂದು ಅಂದರು. ಸನ್ಮಾನ್ಯ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮುಖ್ಯಮಂತ್ರಿಗಳು ಕಾಲು ಜಾರಿ ಬಿದ್ದರು ಎಂದರು, ನಾನು ಮುಖ್ಯಮಂತ್ರಿಗಳು ತಪ್ಪು ಮಾಡಿದ್ದಾರೆಂದು ಹೇಳುವುದಿಲ್ಲ. ಆ ಅಧಿಕಾರಿಗಳು ಮುಖ್ಯ ಮಂತ್ರಿಗಳಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅದು ತನಿಖೆ ಆಗಬೇಕು. ಯಾರು ಮುಖ್ಯ ಮಂತ್ರಿಗಳ ಕಡೆಯಿಂದ ಆ ರೀತಿ ಹೇಳಿಸಲಿಕ್ಕೆ ಕಾರಣರಾಗಿದ್ದ ಅಧಿಕಾರಿ ಯಾರಿದ್ದಾರೆ ಅವರ ಮೇಲೆ ಕ್ರಮ ಆಗಬೇಕು. ಮುಖ್ಯಮಂತ್ರಿಗಳು ಏನು ಅಲ್ಲಿ ಬಂದು ನೋಡಿರುವುದಿಲ್ಲ. ಕಾಲು ಜಾರಿ ಬಿದ್ದಿದ್ದು ಎಂದು, ಅವನು ಸತ್ತಿದ್ದಾನೆ, ಬದುಕಿದ್ದಾನೆ ಎನ್ನುವುದರ ಬಗ್ಗೆ ಏನು ಡಿಕ್ಲೇರ್ ಮಾಡಿಲ್ಲ. ಅಷ್ಟೊತ್ತಿಗೆ statement ಬರುತ್ತದೆ. ಹಾಗಾದರೆ ಈ ಅಧಿಕಾರಿಗಳು ಯಾವ ರೀತಿ ಮಾಹಿತಿಯನ್ನು ಇವತ್ತು ಸಂಬಂಧಪಟ್ಟವರಿಗೆ ಕೊಡುತ್ತಿದ್ದಾರೆ ಎನ್ನುವಂಥದ್ದರ ಬಗ್ಗೆ ತನಿಖೆ ಆಗಬೇಕು ಎನ್ನುವುದು ನನ್ನ ಮೊದಲ ಬೇಡಿಕೆ. ಅದು ಆದ ನಂತರ ಒಬ್ಬ ಅಲ್ಪಸಂಖ್ಯಾತ ಬಂದು ಗುಂಡೇಟಿನಿಂದ ಸತ್ತಿದ್ದಾರೆ ಎನ್ನುವಂಥದ್ದು ಇವತ್ತು ಪ್ರಥಮ ವರದಿಯಲ್ಲಿ ಬಂದಿದೆ. ಒಂದಿಷ್ಟು ಹೆಸರುಗಳನ್ನು ಹಾಕಿದೆ. FIR ನಲ್ಲಿ ಮೂರು ಜನರ ಹೆಸರುಗಳನ್ನು ಹಾಕಿದ್ದಾರೆ. ಒಬ್ಬರಿಗೆ ನಡೆಯುವುದಕ್ಕೆ ಆಗುವುದಿಲ್ಲ, ಕುಡಿದು ಕುಡಿದು, ಅದು ಕೊಡಗಿನ ಅಭ್ಯಾಸ. ಆತನಿಗೆ ನಡೆಯುದಕ್ಕೆ ಆಗುವುದಿಲ್ಲ. ಆತನ ಹೆಸರು FIR ನಲ್ಲಿ ಬಂದಿದೆ. ಇನ್ನೊಬ್ಬ ಎಲ್ಲಿದ್ದಾನೆ ಎನ್ನುವುದೆ ಗೊತ್ತಿಲ್ಲ. First, Police ನವರು ಏನು ಮಾಡಿದರೆಂದರೆ, ಗುಂಡೇಟು ಪಾಯಿಂಟ್-32, ರಿವಾಲ್ವರ್ ನಿಂದ ಆಗಿದೆ ಎನ್ನುವಂಥದ್ದನ್ನು ಹೇಳಿ, ಸುಮಾರು 488 ಜನರ ರಿವಾಲ್ವರ್‌ಗಳನ್ನು ಮನೆಗೆ ಹೋಗಿ ತಂದಿರುವುದು. ಅಲ್ಲಿಂದ 88 ರಿವಾಲ್ವರ್‌ಗಳನ್ನು seize ಮಾಡಿದ್ದಾರೆ. ಕೆಲವರದು ಏನಾಗಿದೆ ಎಂದರೆ, ಅಲ್ಲಿಯ ಅಡ್ರೆಸ್ ಇದೆ. ಹೊಟ್ಟೆಪಾಡಿಗೆ ಬೆಂಗಳೂರಿನಲ್ಲಿ ಸೆಕ್ಯೂರಿಟಿ ಆಗಿ ಸೇರಿಕೊಂಡಿದ್ದಾರೆ. ಅಲ್ಲಿ ಗದ್ದೆಯಲ್ಲಿ ನೆಟ್ಟು ಬದುಕುವುದಕ್ಕೆ ಆಗುವುದಿಲ್ಲ, ಅಲ್ಲಿ ಆನೆಗಳ ಕಾಟ. ಇಲ್ಲಿ ಬಂದು ಸೆಕ್ಯೂರಿಟಿ ಆಗಿದ್ದಾರೆ. ಅವರ ಎಲ್ಲಾ ಗನ್‌ಗಳನ್ನು ತೆಗೆದುಕೊಂಡು ಹೋಗಿ ಪೊಲೀಸ್ ಸ್ಟೇಶನ್‌ದಲ್ಲಿ ಕಾನೂನು ಭಾಹೀರವಾಗಿ ಯಾವ procedure ಏನು ಫಾಲೋ ಮಾಡಿಲ್ಲ. 88 ರಿವಾಲ್ವರ್‌ಗಳನ್ನು ತೆಗೆದುಕೊಂಡು ಹೋಗಿ ಇಟ್ಟುಕೊಂಡಿದ್ದಾರೆ. ಈಗ ಮೊನ್ನೆಯಿಂದ ಶುರು ಮಾಡಿದ್ದಾರೆ. ಪಾಯಿಂಟ್-32, ರಿವಾಲ್ವರ್‌ನಿಂದ ಇದು shot ಆಗಿಲ್ಲ, ಈಗ ಪಾಯಿಂಟ್-22 ಅಂದರೆ ಇದೊಂದು ಕೋವಿ ಇದೆ, ಅದರಿಂದ ಆಗಿರುವುದು ಎಂದು ಹೇಳಿ, ಈಗ ಮತ್ತೆ ಮನೆ ರೇಡ್ ಮಾಡುವುದಕ್ಕೆ ಶುರು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡಿದ್ದಾರೆ. ಇದರಿಂದ ಏನಾದರೂ ಕಾನೂನು ಸುವ್ಯವಸ್ಥೆ ಇದೆಯಾ? ಏಕೆ ಹೀಗೆ? ಕುಟ್ಟಪ್ಪನ ಮರ್ಡರ್ ಆದಾಗ ಅದು ಆಕಸ್ಮಿಕ. ಅಲ್ಪಸಂಖ್ಯಾತರ ಬಗ್ಗೆ ನಮಗೂ ನೋವು ಇದೆ. ಯಾರಿಗೂ ಕೂಡ ಆಗಬಾರದು.

ಶ್ರೀ ದಿನೇಶ್ ಆರ್.ಗುಂಡೂರಾವ್(ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಆಕಸ್ಮಿಕ ಎಂದು ಹೇಳಿಲ್ಲ, ಅದನ್ನು ಮರ್ಡರ್ ಕೇಸಿನಲ್ಲಿಯೇ ತೆಗೆದುಕೊಂಡಿದ್ದಾರೆ. ಅಲ್ಲಿ investigation ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಆಯಿತು, ಮಾಡಿರಲಿಲ್ಲವೆಂದು ನಾನು ಹೇಳಿದೇನಾ?

ಶ್ರೀ ದಿನೇಶ್ ಆರ್.ಗುಂಡೂರಾವ್: ಮರ್ಡರ್ ಕೇಸಿನಲ್ಲಿ ತೆಗೆದುಕೊಂಡಿದ್ದಾರಲ್ಲಾ. ಅದು ಇದು ಮರ್ಡರ್ ಕೇಸಿನಲ್ಲಿ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ: ನಾನು ಹೇಳಿದೇನಾ?

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮೊದಲು ಹೇಳಿಕೆ ಬೇರೆ ಕೊಟ್ಟಿದ್ದರು.

ಶ್ರೀ ಝಡ್ ಜಮೀರ್ ಅಹಮದ್ ಖಾನ್ : ಅದನ್ನು ಆಕಸ್ಮಿಕ ಎಂದು ಹೇಳಿದರು ಎಂದು ಅಂದಿರಲ್ಲಾ. ಅಧ್ಯಕ್ಷರೆ, ಒಂದು ನಿಮಿಷ. ಯಾರೋ ಗುಂಡು ಹೊಡೆದಿರುವುದು ಅವನಿಗೆ ನೆಡೆಯುವುದಕ್ಕೆ ಆಗುವುದಿಲ್ಲ, ವಯಸ್ಸಾಗಿದೆ ಎಂದು ಅಂದರಲ್ಲಾ, ಅವನು ಸುಯೇಲ್ ಎನ್ನುವ ಹುಡುಗನನ್ನು ಗುಂಡು ಹೊಡೆದು ಸಾಯಿಸಲಿಲ್ಲಾ? ಅದು ಗುಂಡು ಹೊಡೆದವನಿಗೆ ಇರುತ್ತದೆ. ಅದಕ್ಕೆ ಲೈಸೆನ್ಸ್ ಕೊಡುತ್ತಾರಲ್ಲಾ, ಆ ಒಂದು gap ಇರುತ್ತಾರಲ್ಲ. . .

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನೀವೇ I.O. ಆಗಿ ಬಿಡಿ.

ಶ್ರೀ ಝಡ್ ಜಮೀರ್ ಅಹಮದ್ ಖಾನ್ : ನಾವು ಏಕೆ I.O. ಆಗುವುದು. Police Department ದಿಂದ ಮಾಡಿಸುತ್ತಿದ್ದಾರೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಇದು ಒಳ್ಳೆಯ ಕತೆ ಆಯಿತಲ್ಲಾ.

ಶ್ರೀ ಕೆ.ಜಿ.ಬೋಪಯ್ಯ: ಏನಿದು, ನಾನು ಯಾರ ಮೇಲೆ ಆದರೂ ಆಪಾದನೆ ಮಾಡುತ್ತೇನಾ. ಪೊಲೀಸ್ ವೈಫಲ್ಯತೆಯನ್ನು ಹೇಳಿದ್ದೇನೆ.

ಅಧ್ಯಕ್ಷರು: ಆಯಿತು. ಈ ಕಡೆ ನೋಡಿ, ಅವನ ಕಡೆ ಏನು ನೋಡುತ್ತೀರಿ.

ಶ್ರೀ ಕೆ.ಜಿ.ಬೋಪಯ್ಯ: ಸುಮ್ಮಸುಮ್ಮನೆ ಎದ್ದುನಿಂತುಕೊಂಡು ಹೇಳುತ್ತಾರಲ್ಲಾ. ಪಾಯಿಂಟ್-22 ಎಂದು, ಈಗ ಮತ್ತೆ ಮನೆಮನೆಗೆ ಹೋಗಿ ರೇಡ್ ಮಾಡುವಂಥ ಕೆಲಸ ಜಿಲ್ಲೆಯಲ್ಲಿ ಆಗುತ್ತಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಕ್ರೀಯಾ ಲೋಪ ಇರುತ್ತದೆ. I am on a point of order. ಬೋಪಯ್ಯನವರು ವಕೀಲರಿದ್ದಾರೆ. ಅಧ್ಯಕ್ಷಸ್ಥಾನದಲ್ಲಿ ಕುಳಿತು ಕೆಲಸ ಮಾಡಿದವರು ಇದ್ದಾರೆ. You cannot go into the merits of the case. ತಪ್ಪಾಗುತ್ತದೆ.

ಶ್ರೀ ಕೆ.ಜಿ.ಬೋಪಯ್ಯ: ನಾನು meritಗೆ ಹೋಗಲೇ ಇಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಇಲ್ಲಿ ಕೇಳಿ, I am on a point of order. Point 32 ಎಂದಿರಿ, Point 22 ಎಂದಿರಿ, ಅದು UDR, murder, suicide, 32, 0.32, 22. See, these are all matters for investigation to reveal, when a matter is with the I.O. before the Court, you should not talk. . .

ಶ್ರೀ ಕೆ.ಜಿ.ಬೋಪಯ್ಯ: ನಾನು ಹೇಳಿದ್ದು ಬಹಳ ಸ್ಪಷ್ಟತೆ ಇರಲಿ. ಮಾನ್ಯ ರಮೇಶ್ ಕುಮರ್‌ವರೆ,

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಏನು ಹೇಳುತ್ತೇನೆಂದರೆ, it is my appeal.

ಶ್ರೀ ಕೆ.ಜಿ.ಬೋಪಯ್ಯ: ನಾನು ಹೇಳಿದ್ದು ಇಷ್ಟೆ. ಈ ಹೆಸರಿನಲ್ಲಿ ಇವತ್ತು 88 ಜನರ ಗನ್ ಸೀಜ್ ಮಾಡಿದ್ದಾರೆ. ಬೆಂಗಳೂರಿನಲ್ಲಿರುವವರ ಗನ್‌ಗಳನ್ನು ಸೀಜ್ ಮಾಡಿದ್ದಾರೆ. ಇದನ್ನು ಮಾಡಿರುವುದು ಏಕೆ ಎಂದು ನಾನು ಕೇಳಿರುವುದು ಅಷ್ಟೆ.

(ಗೊಂದಲ)

ಅಧ್ಯಕ್ಷರು: ಹೇಳಿದಿರಲ್ಲಾ, ಸಾಕು ಅಷ್ಟೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ: Point of order ಎಂದರೆ ಏನು?

ಅಧ್ಯಕ್ಷರು: ಸ್ವಲ್ಪ ಕೇಳಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ನಾನು ಏನು ಅಪೀಲ್ ಮಾಡುತ್ತೇನೆಂದರೆ, ತಾವು ಆಗಲಿ, ನಾವಾಗಲಿ, ನಾವು ಅಲ್ಲಿ ಕುಳಿತುಕೊಳ್ಳುವುದು it is not a easy thing ಈ ಸದನದಲ್ಲಿ, ಬಹಳ ದೊಡ್ಡ ಅವಕಾಶ ಇದೆ. ನಾವು we must be a guide to other members in the House, ತಾವು ಮಾತನಾಡುವಾಗ ಎಲ್ಲೋ ಉದ್ವೇಗದಲ್ಲಿ ಹೇಳಿರುವುದರ ಬಗ್ಗೆ ನಾನು ತಮಗೆ ಅಪೀಲ್ ಮಾಡಿಕೊಂಡೆ. ಸದನದ ನಿಯಮಾವಳಿಗಳು ಹೀಗೆ ಇವೆ. ನಾವು ಈ ರೀತಿ ನಡೆದುಕೊಳ್ಳಬೇಕಾಗುತ್ತದೆ. ಮೆರಿಟ್ಸ್‌ಗೆ ಹೋಗುವುದು ಬೇಡವೆಂದು ನಾನು ತಮ್ಮಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಯನ್ನು ಮಾಡಿದೆ.

ಅಧ್ಯಕ್ಷರು: ಆಯಿತು, ನೀವು ಮುಂದೆ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ: ನಾನು merits ಗೆ ಹೋಗಿಲ್ಲ. Point of order ಎಂದ ಮೇಲೆ ಅದಕ್ಕೆ ನಾನು ಉತ್ತರ ಕೊಡಲೇಬೇಕಾಗುತ್ತದೆ. ಬೆಂಗಳೂರಿನಲ್ಲಿ ವಾಸ ಇದ್ದವರ..

ಅಧ್ಯಕ್ಷರು: ಅದನ್ನು ಹೇಳಿದ್ದೀರಿ.

ಶ್ರೀ ಕೆ.ಜಿ.ಬೋಪಯ್ಯ: ಅದಕ್ಕೆ point of order ಎಂದರೆ ಏನು ಮಾಡಬೇಕು.

ಅಧ್ಯಕ್ಷರು: ಆಯಿತು, ಮುಂದೆ ಹೋಗಿ.

ಶ್ರೀ ದಿನೇಶ್ ಆರ್.ಗುಂಡೂರಾವ್: ಅವರು merits ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. I.O. ಈ ತರಹ ಮಾಡಬೇಕಾಗಿತ್ತು, ಆ ತರಹ ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: 88 ಜನ gun shot ಆಗಿದೆಯಾ?

ಶ್ರೀ ದಿನೇಶ ಆರ್. ಗುಂಡೂರಾವ್: ಅವರು investigation procedure ಬಗ್ಗೆ ಏಕೆ ಮಾತನಾಡಬೇಕು.

ಶ್ರೀ ಕೆ.ಜಿ.ಬೋಪಯ್ಯ: ಸೀಜ್ ಮಾಡುವುದಕ್ಕೆ there is a procedure.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಆಯಿತು, ಮುಂದೆ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ: Procedure follow ಮಾಡಿಲ್ಲವೆನ್ನುವುದು ನನ್ನ ಆಪಾದನೆ ಅಷ್ಟೆ. ನಾನು ಸೀಜ್ ಮಾಡಬೇಡಿ ಎಂದು ಹೇಳಿದೇನಾ. Procedure follow ಮಾಡದೆ ಅಕ್ರಮವಾಗಿ ಮನೆ ಮನೆ ನುಗ್ಗುತ್ತಿದ್ದಾರೆಂದು ಹೇಳಿದ್ದೇನೆ. ಎರಡನೆಯ ಹಂತದಲ್ಲಿ ಪಾಯಿಂಟ್-22 ಹೆಸರಿನಲ್ಲಿ ಮನೆಮನೆ ನುಗ್ಗುತ್ತಿದ್ದಾರೆ. ಇದರಿಂದ innocents suffer ಆಗುತ್ತಿದ್ದಾರೆ. ನಾನು ಆ community ಈ community ಎಂದು ಹೇಳುತ್ತಿಲ್ಲ. ಎಲ್ಲರಿಗೂ ತೊಂದರೆ ಆಗುತ್ತಿದೆ, ಇದು ತಕ್ಷಣ ನಿಲ್ಲಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಶಾಂತಿ ಆಗಬೇಕೆಂದು ನಮ್ಮೆಲ್ಲರ ಅಪೇಕ್ಷೆ ಇದೆ, ಅದು ಆಗಲ್ಲ. ಹಾಗಾಗಿ ಇವತ್ತು, ಈ ರೀತಿ ಇಷ್ಟೊಂದು ಗಲಭೆ ಆದಾಗ ಅದನ್ನು ನಿಯಂತ್ರಣ ಮಾಡಲಿಕ್ಕೆ ವಿಫಲರಾಗಿದ್ದಾರೆ. ಬಹುಶ: ಇಷ್ಟೊಂದು ಇದ್ದಾಗ ಅಲ್ಲಿ ಒಂದು meeting ಕರೆದಿದ್ದರು, ನಮ್ಮಿಬ್ಬರನ್ನು ಕರೆದಿಲ್ಲ. ಅವರು ಕರೆದಿಲ್ಲವೆಂದು ನಮ್ಮದೇನು ಆಪಾದನೆ ಇಲ್ಲ. Meeting ನಲ್ಲಿ ಒಂದು ತೀರ್ಮಾನ ಮಾಡಿದ್ದಾರೆ. ಎಲ್ಲಾ ಸಂಘ ಸಂಸ್ಥೆಗಳನ್ನು, ಎರಡೂ ಕಮ್ಯೂನಿಟಿಯವರನ್ನು ಕರೆದು ಮೆರವಣಿಗೆಗೆ ಅವಕಾಶವಿಲ್ಲವೆಂದು ಹೇಳಿದರು. ಆದರೆ ಮೆರವಣಿಗೆಗೆ ಅವಕಾಶ ಕೊಟ್ಟಿದ್ದರ ಪರಿಣಾಮ ಈ ಘಟನೆಗಳೆಲ್ಲವೂ ಆಗಲಿಕ್ಕೆ ಆಯಿತು. ಸಾಕಷ್ಟು ಜನ ಹೊರಗಡೆಯಿಂದ ಬಂದಿದ್ದಾರೆ. ಪೊಲೀಸ್ ರೆಕಾರ್ಡ್ ಇದೆ. ಎಲ್ಲಾ KL Registration vehicles ಇದೆ, ಕೊಡಗಿನಲ್ಲಿ KA-12 ಇರುವುದು, ನಿಮಗೆ ಗೊತ್ತಿದೆ. KA-12 ನಲ್ಲಿ 200 ಕ್ಕೂ ಹೆಚ್ಚು ವೆಹಿಕಲ್‌ಗಳ ಬಗ್ಗೆ police ನವರು videograph ಮಾಡಿದ್ದಾರೆ. ಪೊಲೀಸ್‌ನವರು ತಡೆದರು ಕೂಡ ಅವರ ಸಂಖ್ಯೆ ಕೂಡ ಅಷ್ಟಿಲ್ಲ. Police ನವರು particularly ಆ ದಿವಸ ಕ್ರಮ ತೆಗೆದುಕೊಳ್ಳದೆ ಹೋಗಿದ್ದರೆ ಇನ್ನಷ್ಟು death ಆಗುತ್ತಿತ್ತು. ಪೊಲೀಸ್‌ನವರ ವೈಫಲ್ಯ 10ನೇ ತಾರೀಖು ಏನು ಆಗಿಲ್ಲ. ಅವರ ಕೈಯಿಂದ ಆದ ಎಲ್ಲಾ ಪ್ರಯತ್ನವನ್ನು ಅವರು ಮಾಡಿದ್ದಾರೆ. ಆದರೆ ಹೊರಗಿನಿಂದ ಬರುವ ವೆಹಿಕಲ್‌ಗಳು ಕೊಡಗಿಗೆ ಕೇರಳದಿಂದ ಎಂಟರ್ ಆಗುವುದಕ್ಕೆ ಮೂರೆ ಕಡೆ ಅವಕಾಶ ಇದೆ. ಗೇಟಿನಲ್ಲಿ ಚೆಕ್ ಮಾಡಿದ್ದರೆ ಈ ಅನಾಹುತಗಳು ಆಗುತ್ತಿರಲಿಲ್ಲ. ಪೊಲೀಸ್‌ರ ವಿಡಿಯೋ ಗ್ರಾಫ್‌ನಲ್ಲಿ ಲಾರಿಯೊಳಗೆ ಕಲ್ಲು, ಮಚ್ಚು, ಫ್ಲಾಗ್ ಹಿಡಿದಿದ್ದು, ಆ iron rod ಹಿಡಿದಿದ್ದು, ಅದನ್ನು ತೆಗೆದುಕೊಂಡು ಅಟ್ಯಾಕ್ ಮಾಡಿದ್ದು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

preplanned. ಎಲ್ಲಾ ಸ್ಥಳೀಯ ಅಲ್ಪಸಂಖ್ಯಾತ ಮುಸಲ್ಮಾನ ಬಂದುಗಳು ಯಾರು ಈ ರೀತಿ ಉದ್ರೇಕಕಾರಿಗಳು ಇಲ್ಲ. ಹೊರಗಿನಿಂದ ಬಂದಂಥ ಜನ ಏನಿದ್ದಾರೆ, ಕೇರಳದಿಂದ ಬಂದವರು ಇದ್ದಾರೆ. ಎಲ್ಲರೂ ಈ ಗಲಭೆಯನ್ನು ಎಬ್ಬಿಸಬೇಕೆಂದು ಬಂದಿದ್ದಾರೆ. ಹಾಗಾಗಿ ಇದರ ಬಗ್ಗೆ ತನಿಖೆ ಆಗಲೇಬೇಕಾಗಿದೆ. ನೀವು ಹಿನ್ನೆಲೆಯನ್ನು ಹೇಳಬಾರದೆಂದು ಹೇಳಿದ್ದೀರಿ ನಾನು ಹೇಳುವುದಿಲ್ಲ. ಇವತ್ತು ತನಿಖೆ ಯಾರಿಂದ ಮಾಡುತ್ತಿದ್ದಾರೆಂದರೆ, ಮೈಸೂರು ಜಿಲ್ಲಾಧಿಕಾರಿಗಳಿಂದ. ಮೈಸೂರು ಜಿಲ್ಲಾಧಿಕಾರಿಗಳು ಹೇಗೆ ಮಾಡುತ್ತಿದ್ದಾರೆಂದರೆ, ಮೊನ್ನೆ ಒಂದು ದಿವಸ ಜಿಲ್ಲೆಗೆ ಬಂದರು. ಸತ್ತ ಕುಟ್ಟಪ್ಪನ ಮನೆಗೆ ಹೋಗಿದ್ದಾರೆ. ಅವರ ಪ್ರಶ್ನೆಗಳು ಹೇಗೆ ಎಂದರೆ, ಕುಟ್ಟಪ್ಪ ಕಾಲು ಜಾರಿ ಬಿದ್ದದ್ದು ಅಲ್ಲವಾ ಎಂದು ಅವರ ಮನೆಯವರ ಹತ್ತಿರ ಮತ್ತು ಅವರ ಹೆಂಡತಿ ಹತ್ತಿರ ಕೇಳುತ್ತಾರೆ. ಇನ್ನು ಕುಟ್ಟಪ್ಪ ಸತ್ತು 11ನೇ ದಿನದ ಕಾರ್ಯ ಮುಗಿದಿಲ್ಲ. ಈ ರೀತಿ ಜಿಲ್ಲಾಧಿಕಾರಿಗಳು ಪ್ರಶ್ನೆ ಮಾಡಬಹುದಾ? ಕಾಲು ಜಾರಿ ಬಿದ್ದದ್ದಲ್ಲಾ ಎಂದು ಎಲ್ಲಾ ಕಡೆ ಹೇಳುತ್ತಿದ್ದಾರೆ. ಅವರು ಅದಕ್ಕೆ ಉತ್ತರ ಹೇಳಿದರು. ಯಾರು ನಿಮ್ಮ ಮಂತ್ರಿಗಳು ಹೇಳಿ ಇದನ್ನು ಕಳುಹಿಸಿದರಾ ಎಂದು. ಇಂಥವರಿಂದ ನಾವು ಏನಾದರೂ ನ್ಯಾಯ ನಿರೀಕ್ಷೆ ಮಾಡುವುದಕ್ಕಾಗುತ್ತದೆಯಾ? Enquiry ಮಾಡಬೇಕಾದರೆ ಒಂದು procedure ಪ್ರಕಾರ ಗುಟ್ಟಾಗಿ ಮಾಡಬೇಕು. ಇವತ್ತು ನಾಳೆ ಕೊಡಗಿನಲ್ಲಿ ಹುತ್ತರಿ ಹಬ್ಬ. ಜಿಲ್ಲಾಧಿಕಾರಿಗಳು enquiry ಇಟ್ಟುಕೊಂಡಿದ್ದಾರೆ. ಉಸ್ತುವಾರಿ ಸಚಿವರು ತಾವು ಇದ್ದೀರಿ. ಇವತ್ತು ನಾಳೆ enquiry ಇಟ್ಟುಕೊಂಡಿದ್ದಾರೆ. ಕೊಡಗಿನಲ್ಲಿ ಹುತ್ತರಿ ಹಬ್ಬ. ಏಕೆ enquiry ಇಟ್ಟುಕೊಂಡಿದ್ದಾರೆ. ಇವರಿಂದ ಸತ್ಯಾಂಶ ಏನಾದರೂ ಹೊರಗಡೆ ಬರುತ್ತದೆಯಾ?

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015/5.00(32)/UD.CP

ಶ್ರೀ ಕೆ.ಜಿ.ಬೋಪಯ್ಯ (ಮುಂದು. . .)

ಹಾಗಾಗಿ ನನ್ನ ಒತ್ತಾಯ ಇದೆ. ತಕ್ಷಣ ಅವರನ್ನು ಬದಲಾಯಿಸಿ. ಈ ಪ್ರಕರಣವನ್ನು ನ್ಯಾಯಾಂಗ ತನಿಖೆ ಮಾಡಿಸಿ. ನಾನು ಸಿ.ಬಿ.ಐ ಗೆ ವಹಿಸಿ ಎಂದು ಹೇಳುವುದಿಲ್ಲ. ಏಕೆಂದರೆ ಮತ್ತೆ ಗಲಾಟೆ ಶುರು ಆಗುತ್ತದೆ. ಹಾಗಾಗಿ ನ್ಯಾಯಾಂಗ ತನಿಖೆ ಆಗಲೇಬೇಕು. ಸತ್ಯಾಂಶ ಹೊರಗೆ ಬರಬೇಕು. ಈ ಗಲಭೆಯ ಹಿನ್ನೆಲೆಯೊಳಗೆ ಯಾರು ಇದ್ದಾರೆ? ಒಂದು ಕಡೆ ನೇರವಾಗಿ ಅನೇಕರು ನಾನು ಮತ್ತು ಅಪ್ಪಚ್ಚು ರಂಜನ್‌ರವರು ಕಾರಣ ಎಂದು ಹೇಳುವಂಥದ್ದನ್ನು ಎಲ್ಲಾ ಪತ್ರಿಕೆ, ಮತ್ತೊಂದು ಹೆಸರು ಸಮೇತ ಹೇಳಿದ್ದಾರೆ. ಮಂತ್ರಿಗಳೂ ಹೇಳಿದ್ದಾರೆ. ಆದರೆ ನಮ್ಮ ಉಸ್ತುವಾರಿ ಸಚಿವರಾದ ಮಾನ್ಯ ದಿನೇಶ್ ಗುಂಡೂರಾವ್‌ರವರು ತಾವು ಜವಾಬ್ದಾರಿ ಹೇಳಿಕೆಯನ್ನೇ ಕೊಟ್ಟಿದ್ದೀರಿ. ನಾನು ನಿಮ್ಮ ಬಗ್ಗೆ ಏನೂ ಮಾತನಾಡುವುದಿಲ್ಲ. ಉಳಿದವರು ಬೇಜವಾಬ್ದಾರಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಬಹಳ ನೋವಾಗುವಂಥದ್ದು, ನಮ್ಮ ಇಬ್ಬರ ಮೇಲೆ Forest Offence Cases (FOC) ಎಷ್ಟಿದೆ, ಎಷ್ಟು involve ಆಗಿದ್ದಾರೆ ಎಂದು State Intelligence ನವರಿಂದ ಹುಡುಕಾಡಿಸಿದ್ದೆ, ಜಾಲಾಡಿಸಿದ್ದೆ ಜಾಲಾಡಿಸಿದ್ದು. ನಾನು ಹೇಳುತ್ತೇನೆ, ನಾವು ಯಾರೂ Forest Offence Caseನಲ್ಲಿ involve ಆದವರು ಇಲ್ಲ. ಇದ್ದರೆ ಧಾರಾಳ ಮಾಡಿ. ನಾವು ಅರಣ್ಯ ರಕ್ಷಣೆಯನ್ನೂ ಮಾಡುತ್ತೇವೆ. ಅರಣ್ಯದಲ್ಲಿ ಬದುಕುವವರನ್ನು ಬದುಕಿಸುವುದಕ್ಕೂ ಗೊತ್ತಿದೆ. ಆದರೆ Forest offence ಮಾಡಿದವರೆಲ್ಲಾ ಆ ಕಡೆ ಇದ್ದಾರೆ. ಎಲ್ಲಾ ಇದ್ದಾರೆ. Foot ball ಆಡುತ್ತೇನೆ ಎಂದು ಹೇಳಿದವರು ಕೊಡಗಿನಲ್ಲಿ ನಿಮ್ಮ ಪಕ್ಷದ ನಾಯಕರು. ಕೊಡುಗು ಜಿಲ್ಲೆಯನ್ನು foot ball ground ಅನ್ನಾಗಿ ಮಾಡುತ್ತೇನೆ ಎಂದೂ ಹೇಳಿದ್ದಾರೆ.

ಶ್ರೀ ಕೆ.ಜೆ.ಜಾರ್ಜ್ (ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, . . .

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಜಾರ್ಜ್‌ರವರೆ ನೀವೇಕೆ ಎದ್ದೇಳುತ್ತಿದ್ದೀರಿ. ನಾನು ನಿಮ್ಮ ಹೆಸರನ್ನು ಹೇಳಲಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ಯಾರೋ ಸದಸ್ಯರ ಮೇಲೆ ಸಂಶಯ ಮಾಡುತ್ತಾರೆ. Foot ball ground ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಸಂಶಯ ಇಲ್ಲ. ನಾನು ದಾಖಲೆ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ದಯವಿಟ್ಟು ಮಾನ್ಯ ಬೋಪಯ್ಯನವರೆ ತಾವು ಹಿರಿಯ ಸದಸ್ಯರು, ಅಧ್ಯಕ್ಷರಾಗಿದ್ದವರು. ಯಾರ ಮೇಲಾದರೂ ಆರೋಪ ಮಾಡಬೇಕಾದರೆ ನೋಟಿಸ್ ಕೊಟ್ಟು ಮಾಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಮತ್ತೆ ನಮ್ಮ ಮೇಲೆ State Intelligence ನಿಂದ check ಮಾಡಿಸಬಹುದಾ?

(ಗೊಂದಲ)

ಅಧ್ಯಕ್ಷರು: ಆಯಿತು ಹೇಳಿದ್ದೀರಲ್ಲಾ ಮತ್ತೆ ಏಕೆ ಬಿಡಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಯಾವ intelligence ಯಾರಿಗೆ ಗೊತ್ತು?

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಯಾರಿಗೆ ಗೊತ್ತು ಎಂದರೆ ನಾನು ಏನು ಹೇಳಲಿ?

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ನಾವು ಯಾರ ಮೇಲೂ ಮಾಡಿಸಿರಲಿಲ್ಲ. ನಿಮ್ಮ ಮೇಲೂ ಮಾಡಿಸಿರಲಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಬಹುಶ: ನಿಮಗೆ ಮಾಡಿಸುವ ಅಧಿಕಾರ ಈಗ ಇಲ್ಲವಲ್ಲಾ?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ನಾನು ಗೃಹ ಸಚಿವನಾಗಿದ್ದಾಗಲೂ ಮಾಡಿಸಿರಲಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಿಮಗೆ ಈಗ ಅಧಿಕಾರ ಇಲ್ಲ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ನನಗೆ ಅಧಿಕಾರ ಇದ್ದಾಗಲೂ ಮಾಡಿಸಿರಲಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಿಮ್ಮ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಬೋಪಯ್ಯರವರೆ ಹೇಳಿದ್ದೀರಿ ಬಿಡಿ. ನ್ಯಾಯಯುತವಾಗಿ ತನಿಖೆ ಮಾಡಿಸಿ ಎಂದು ಅಷ್ಟೇ ಹೇಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನ್ಯಾಯಯುತವಾಗಿ ತನಿಖೆ ಆಗಲೇಬೇಕು. ನ್ಯಾಯಾಂಗ ತನಿಖೆ ಆಗ ಲೇಬೇಕು. ಹಾಗಾಗಿ ಜಿಲ್ಲಾಧಿಕಾರಿ ಶಿಖಾದ ತನಿಖೆಯನ್ನು ತಕ್ಷಣ ನಿಲ್ಲಿಸುವಂತಹ ಕೆಲಸ ಆಗಬೇಕು. ಹುತ್ತರಿ ಹಬ್ಬದ ದಿವಸ ತನಿಖೆಗೆ ಬರುತ್ತಾರಲ್ಲಾ ಹೇಗೆ? ಅದರ ಜೊತೆಗೆ ನನ್ನದೊಂದು ವಿನಂತಿ ಇದೆ. ಟಿಪ್ಪು ಜಯಂತಿಯನ್ನು ಮುಂದಿನವರ್ಷವಾದರೂ ಹಿಂದೆ ಏನು ಮಾಡುತ್ತಿದ್ದರು ಅದನ್ನು ಮಾಡಲಿ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಆದರೆ ಸರ್ಕಾರಿ ಜಯಂತಿಯನ್ನಾಗಿ ನಮ್ಮ ಜಿಲ್ಲೆಯಲ್ಲಿ ಆಚರಣೆ ಮಾಡಬೇಡಿ. ಅದಕ್ಕೆ ಕಾರಣಗಳು, ಹಿನ್ನೆಲೆ ಎಲ್ಲವನ್ನೂ ಹೇಳಿದ್ದೇನೆ. 80,000 ಜನರನ್ನು conversion ಮಾಡಿದ್ದಾರೆ. ಕೇವಲ ಹಿಂದೂಗಳನ್ನು ಮಾತ್ರವಲ್ಲ, ಕ್ರಿಶ್ಚಿಯನ್ಸ್‌ರನ್ನೂ ಮಾಡಿದ್ದಾರೆ. ವಿರಾಜಪೇಟೆಯ ಚರ್ಚ್‌ಅನ್ನು demolish ಮಾಡಿದ್ದಾರೆ. ಆ ರೀತಿ ಚರ್ಚ್‌ಗಳನ್ನೂ ನಾಶ ಮಾಡಿದ್ದಾರೆ. ಹಾಗಾಗಿ ಟಿಪ್ಪು ಸುಲ್ತಾನ್ ಎಂದರೆ ಕೊಡುಗು ಜಿಲ್ಲೆಯ ಇಡೀ ಜನತೆ ಒಂದು ರೀತಿ ತಾತ್ವಿಕವಾಗಿ, ಪಕ್ಷಾತೀತವಾಗಿ ವಿರೋಧ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇದ್ದಾರೆ. ಇದರಿಂದ ಪುನ: ಗಲಭೆಗೆ ಕಾರಣವಾಗುತ್ತದೆ. ಹಾಗಾಗಿ ಈ ಹಿನ್ನೆಲೆಯೊಳಗೆ ಯಾವುದೇ ಕಾರಣಕ್ಕೂ ಟಿಪ್ಪು ಸುಲ್ತಾನ್ ಜಯಂತಿ ಆಚರಣೆಯನ್ನು ಮಾಡಬೇಡಿ ಮತ್ತು ಏನು ಎರಡು ಕೊಲೆ ಪ್ರಕರಣ ಇದೆ ಒಬ್ಬ ಅಲ್ಪಸಂಖ್ಯಾತ ಬಂಧು ಇದ್ದಾರೆ. ಇನ್ನೊಂದು. . . .

ಅಧ್ಯಕ್ಷರು: ಹೇಳಿದ್ದೀರಿ ಬಿಡಿ.

ಶ್ರೀ ಕೆ.ಜಿ.ಬೋಪಯ್ಯ: ನಿರಪರಾಧಿಗಳಿಗೆ ತೊಂದರೆಯಾಗಬಾರದು. ಅದರ ಜೊತೆಗೆ ಮತ್ತೆ ಮತ್ತೆ ಕೇಸ್‌ಗಳು register ಆಗುವಂಥದ್ದು ಇದೆ. ನಿನ್ನೆಯಲ್ಲ ಮೊನ್ನೆ ಕೇಸ್‌ಗಳು ಆಯಿತು. ಒಂದಿಷ್ಟು ಜನ arrest ಆಗಿದ್ದಾರೆ. ಕೆಲವರು custody ಯಲ್ಲಿದ್ದಾರೆ. Bail ತೆಗೆದುಕೊಂಡಿದ್ದಾರೆ. ಮೊನ್ನೆ ಮತ್ತೆ ಸೋಮವಾರಪೇಟೆಯಲ್ಲಿ ಯಾರೋ ಒಬ್ಬರು complaint ಕೊಟ್ಟು, 307 ಕೇಸ್ ಹಾಕಿ arrest ಮಾಡದೇ, ಇತ್ತೀಚೆಗೆ 2014 ರಲ್ಲಿ ಸುಪ್ರೀಂಕೋರ್ಟ್ judgment ನಲ್ಲಿ very clear ಇದೆ. No arrest can be made, either if the punishable offence is upto 7 years ಇದ್ದರೆ ಅವರನ್ನು arrest ಮಾಡಬಾರದು ಎಂದು ಇದೆ. ಅದನ್ನೂ ಗಮನಕ್ಕೆ ತಂದರೆ, ಅದು ಯಾವುದೋ dowry case gist is very clear ಆಗಿದೆ. ಇದು ಯಾವುದೂ ಗಮನಕ್ಕೆ ತಂದರೂ ಇವರು, ಗಂಡಸಿರಲ್ಲದ ವಯಸ್ಸಾದ ಹೆಂಗಸರಿಗೆ ಕೆಟ್ಟ ಕೆಟ್ಟದಾಗಿ ಮಾತನಾಡುವುದು. ಕೊಡಗಿನ ಜನ ಒಂದು ರೀತಿ ಸಂಸ್ಕೃತಿವುಳ್ಳವರು.

ಅಧ್ಯಕ್ಷರು: ಹೌದು ನನಗೆ ಗೊತ್ತು.

ಶ್ರೀ ಕೆ.ಜಿ.ಬೋಪಯ್ಯ: ಅಲ್ಲಿ ಹೋಗಿ ವಯಸ್ಸಾದ ತಾಯಂದಿರಿಗೆ ಕೆಟ್ಟ ಕೆಟ್ಟದಾಗಿ ಬೈಯುವುದು. . .

ಅಧ್ಯಕ್ಷರು: ಆ ರೀತಿ ಮಾಡುವುದನ್ನು ನಿಲ್ಲಿಸಿ.

ಶ್ರೀ ಕೆ.ಜಿ.ಬೋಪಯ್ಯ: ಈ ರೀತಿ ಮಾಡಿದರೆ ಅಲ್ಲಿ ಶಾಂತಿ ಸುವ್ಯವಸ್ಥೆ ಆಗಲು ಸಾಧ್ಯತೆ ಇದೆಯೇ? ಇದು ಖಂಡಿತಾ ಸಾಧ್ಯತೆ ಇಲ್ಲ. ಹಾಗಾಗಿ ಇದನ್ನು ತಕ್ಷಣ ನಿಲ್ಲಿಸಬೇಕು. ಯಾರು culprits ಇದ್ದಾರೆ ಅವರನ್ನು ಹಿಡಿದು ಇಡೀ ಘಟನೆ ಬಗ್ಗೆ ವಿಚಾರಣೆ ಮಾಡಿ. ಎರಡು ಘಟನೆ ಬಗ್ಗೆ CCTV ಇದೆ. ಸ್ವತ: ಪೋಲೀಸ್‌ನವರು ಎಲ್ಲಾ ಕಡೆ vediograph ಮಾಡಿದ್ದಾರೆ ಅದರಲ್ಲಿ ಇದೆ. ಆದರೆ ಒಂದೇ ಒಂದು ವಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ರ್ಗದವರನ್ನು ಬಂಧಿಸುವುದು, custody ಗೆ ಕಳುಹಿಸುವುದು, ಇನ್ನೊಂದು ವರ್ಗದವರನ್ನು ಬಿಟ್ಟುಬಿಡುವುದು, ಇದರಿಂದ ಗಲಭೆ ನಿಲ್ಲುತ್ತದೆಯೇ? ಈ ಗಲಭೆ ಅಥವಾ clashes ಮಾಡುವವರು ಅವರು ಇವರು ಎಂದು ಏನೂ ಇಲ್ಲ. ಎರಡೂ ಕಡೆಯವರೂ ಇದ್ದಾರೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಬೋಪಯ್ಯರವರೆ, . . .

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ನಾನು ಮಾತನಾಡುವುದನ್ನು ಮುಗಿಸಿಬಿಡುತ್ತೇನೆ. ಆನಂತರ ಮಾತನಾಡಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಬೋಪಯ್ಯರವರೆ, ಇಡೀ ಕರ್ನಾಟಕದಲ್ಲಿ ಎಲ್ಲೆಲ್ಲಿ ಯಾರ್‍ಯಾರು ತಪ್ಪು ಮಾಡುತ್ತಾರೆ, ಯಾವುದೇ ಕೋಮು ಇರಲಿ,.. . . . (ಗೊಂದಲ) ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಯೋ ಹೊರತು ಯಾವ ನಿರ್ದೋಷಿಗಳ ಮೇಲೂ ಕ್ರಮ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಹಾಗಾಗಿ ಈ ಎಲ್ಲಾ ಬೇಡಿಕೆಗಳನ್ನು ಮಾಡಬೇಕು. ನಮ್ಮ ಒಟ್ಟು ಅಪೇಕ್ಷೆ ಏನೆಂದರೆ ಕೊಡಗು ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಆಗಬೇಕು. ಕೊಡಗು ಎಂದೂ communal ವಿಚಾರದಲ್ಲಿ ಇಲ್ಲ. Culprits ಯಾರಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಕೋವಿ seize ಮಾಡುವುದು ಇನ್ನೊಂದು ಮಾಡುವುದು ಜನರಲ್ಲಿ ಭಯದ ವಾತಾವರಣ ನಿರ್ಮಾಣ ಮಾಡುವುದು ತಕ್ಷಣ ನಿಲ್ಲಿಸಬೇಕು. ಇಡೀ ಪ್ರಕರಣ ಕೇರಳದಿಂದ ಬಂದಿದ್ದು, ISI, ಇನ್ನೊಂದು ಯಾವುದೆಲ್ಲಾ ಇದೆ ಅದು ನ್ಯಾಯಾಂಗ ತನಿಖೆಯಿಂದ ಸತ್ಯ ಹೊರಗಡೆ ಬರುತ್ತದೆ. ನ್ಯಾಯಾಂಗ ತನಿಖೆಯಾಗಬೇಕು ಎನ್ನುವುದು ನನ್ನ ಬೇಡಿಕೆ ಇದೆ. ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು: ಈಗ ಚರ್ಚೆ ಮುಕ್ತಾಯವಾಯಿತು. ಶಾಸನ ರಚನೆ ತೆಗೆದುಕೊಳ್ಳೋಣ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಮಡಿಕೇರಿ): ಸಾರ್, ನಾನು ಅದೇ ಕ್ಷೇತ್ರದವನು.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ. . . .

(ಗೊಂದಲ)

ಅಧ್ಯಕ್ಷರು: No, No,. ಕುಳಿತುಕೊಳ್ಳಿ. ಮಾನ್ಯ ಸಚಿವರೆ move ಮಾಡಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ,.. ..

(ಗೊಂದಲ)

ಅಧ್ಯಕ್ಷರು: ನಿಮಗೆ ಎಷ್ಟು ಅವಕಾಶ ಕೊಟ್ಟಿದ್ದೆ ಅದರ ಎರಡರಷ್ಟು ಅವಕಾಶ ಕೊಟ್ಟಿದ್ದೇನೆ. ಸಾಕು. ಸಾಧ್ಯವೇ ಇಲ್ಲ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾವು ಐದು ಜನ ಸಹಿ ಹಾಕಿದ್ದೇವೆ. ನಾವು signatories.

(ಗೊಂದಲ)

ಅಧ್ಯಕ್ಷರು: ನೀವು ಹೇಳಿದ ಮಾತೇನು?

(ಗೊಂದಲ)

ಶ್ರೀ ಸಿ.ಟಿ.ರವಿ: ನಾವು signatories. ನಾವು ಐದು ನಿಮಿಷ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು: ಇರಬಹುದು. ನಾನು ಇಲ್ಲಿ ಕುಳಿತಿದ್ದೇನೆ. ವಿಷಯಗಳಿವೆ ಅಜೆಂಡಾ ಪ್ರಕಾರ complete ಮಾಡಬೇಕು. ಬರೀ ನಿಮ್ಮದೇ ಕೇಳಿದರೆ ಹೇಗೆ?

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ತಾವು ಆ ರೀತಿ ಸಿಟ್ಟು ಮಾಡಿಕೊಂಡರೆ ಹೇಗೆ?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಸಿಟ್ಟು ಅಲ್ಲ. ನೀವು ಏನು ಹೇಳಿದಿರಿ? ಒಂದು ಗಂಟೆ ಸಾಕು ಎಂದು ಹೇಳಿದಿರಿ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಆ ರೀತಿ ಹೇಳಿರುವುದು correct.

(ಗೊಂದಲ)

ಶ್ರೀ ಸಿ.ಟಿ.ರವಿ: ನಾವು signatories, ನಾವು ಹತ್ತು ನಿಮಿಷ ಮಾತಾಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಸಿಟ್ಟಿಗೇಳಬೇಡಿ. ದಯವಿಟ್ಟು ಕುಳಿತುಕೊಳ್ಳಿ. ಐದು ನಿಮಿಷ ಕಾಲಾವಕಾಶ ಕೊಡಿ. ಮಾನ್ಯ ಅಪ್ಪಚ್ಚು ರಂಜನ್‌ರವರು ಒಬ್ಬರು ಮಾತನಾಡುತ್ತಾರೆ. ಮತ್ತೆ ಯಾರೂ ಮಾತನಾಡುವುದಿಲ್ಲ. ಬಹಳಷ್ಟು ಜನರು ಮಾತನಾಡುವವರು ಇದ್ದರು. ಅವರೊಬ್ಬರು ಮಾತನಾಡಿ ಬಿಡುತ್ತಾರೆ. ಐದು ನಿಮಿಷ ಕಾಲಾವಕಾಶ ಕೊಡಿ ಎಂದು ನಾನು request ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಸಾರ್, ಮುಧೋಳ್‌ನಲ್ಲಿ ಗಲಭೆಯಾಗಿ 119 ಜನ ಜೈಲಿನಲ್ಲಿದ್ದಾರೆ. ನಾನು ಅದರ ಬಗ್ಗೆ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು ಬಿಡಿ ಸಾಕು.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಸಾರ್, 119 ಜನ ಜೈಲಿನಲ್ಲಿದ್ದಾರೆ.

(ಗೊಂದಲ)

ಅಧ್ಯಕ್ಷರು: ಇರಬಹುದು ಬಿಡಬಹುದು ಇಲ್ಲವೆಂದು ಯಾರಾದರೂ ಹೇಳಿದರೆ?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಇರಬಹುದು ಅಂದರೆ ಇನ್ನೂ ನಿಂತಿಲ್ಲ. ಅದಕ್ಕೆ ನಾನು ಪ್ರಸ್ತಾಪ ಮಾಡುವುದಕ್ಕೆ ಐದು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ನಾನು ಆ ಕ್ಷೇತ್ರದವನು. ತಾವು ಈ ರೀತಿ ಸಿಟ್ಟು ಮಾಡಿಕೊಂಡರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಮೊದಲು ನೀವೇ initiate ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಮಡಿಕೇರಿ): ನಾನು ಆಗಾಗ ಯಾವತ್ತೂ ಮಧ್ಯೆಯಲ್ಲಿ interfere ಆಗುವುದಿಲ್ಲ ಸಾರ್. ಆ ರೀತಿ ಮಾಡಿರುವುದನ್ನು ತಾವು ಯಾವತ್ತಾದರೂ ನೋಡಿದ್ದೀರಾ? ನಾನು ಮಧ್ಯೆ ಮಧ್ಯೆ ಯಾವತ್ತೂ ಏಳುವುದಿಲ್ಲ. ಯಾವುದೋ ಸಂದರ್ಭದಲ್ಲಿ ಬಂದಾಗ, ಇದೂ ಕೂಡ ನನ್ನ ಕ್ಷೇತ್ರದಲ್ಲಿ ಆದಾಗ ಅದರ ಜೊತೆಗೆ ಆ ಸತ್ತ ಕುಟ್ಟಪ್ಪನವರು ನನಗೆ ಏಳು ವರ್ಷ P.A ಆಗಿ ಕೆಲಸ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ ಆವತ್ತು ಆ ಗಲಭೆಗೆ ಮುಖ್ಯ ಕಾರಣ ಯಾರು ಎಂದರೆ ಜಿಲ್ಲಾಡಳಿತ. ಏಕೆ ನಾನು ಈ ಮಾತನ್ನು ಹೇಳುತ್ತೇನೆ ಎಂದರೆ, ನಮ್ಮ ಕೊಡಗಿನಲ್ಲಿ 'ಶಕ್ತಿ' ಪೇಪರ್ ಎಂದು ಇದೆ. ಆ ಪೇಪರ್‌ನಲ್ಲಿ almost 100ಕ್ಕೆ 90% ಜನ ಟಿಪ್ಪುರವರ ಜಯಂತಿಯನ್ನು ಆಚರಣೆ ಮಾಡಬಾರದು, ಯಾವ ಕಾರಣಕ್ಕಾಗಿ, ಟಿಪ್ಪುರವರು ಏನು ಮಾಡಿದ್ದಾರೆ, ಯಾವ ರೀತಿ ದ್ರೋಹ ಬಗೆದಿದ್ದಾರೆ ಎನ್ನುವ ವಿಚಾರ ದಿನವೂ ಆ ಪತ್ರಿಕೆಯಲ್ಲಿ ಬರುತ್ತಿತ್ತು. ಬಂದಂತಹ ಸಂದರ್ಭದಲ್ಲಿ ಅಲ್ಲಿಯ ಜಿಲ್ಲಾಧಿಕಾರಿಗಳು ಯಾರಿದ್ದಾರೆ, ಪೊಲೀಸ್ ಅಧಿಕಾರಿಗಳು ಯಾರಿದ್ದಾರೆ, ಅವರು ಒಂದು ಸಭೆಯನ್ನೂ ಕರೆಯಲಿಲ್ಲ. Atleast ನಮ್ಮ ಎರಡು ಜನ ಶಾಸಕರನ್ನು ಕರೆದು ಸರ್ಕಾರದ ವತಿಯಿಂದ ಟಿಪ್ಪು ಜಯಂತಿ ಆಚರಣೆ ಮಾಡಬೇಕೆಂದು ಬಂದಿದೆ, ಯಾವ ರೀತಿ ಮಾಡಬೇಕು, ನಿಮ್ಮ ಸಲಹೆ ಏನು ಎಂದು ಕೇಳುವಂತಹ ಸೌಜನ್ಯದ ಮೀಟಿಂಗ್



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅನ್ನೂ ಕೂಡ ಕರೆಯಲಿಲ್ಲ. ಅದರ ಜೊತೆಗೆ ಆವತ್ತು ಒಂದು ದಿವಸ ಮುಂಚೆ ಎಸ್.ಪಿ ಯವರು ಫೋನ್ ಮಾಡಿ ನಮಗೆ ಸಹಕಾರವನ್ನು ಕೊಡಬೇಕು. ಯಾವುದೇ ಕಾರಣಕ್ಕೂ ನಾವು ಮೆರವಣಿಗೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನೂ ಕೂಡ ಹೇಳಿದರು. ಆಯಿತು ಮೆರವಣಿಗೆಯನ್ನು ಮಾಡುವುದಿಲ್ಲ ಎಂದಾದರೆ ಗಲಾಟೆಗೆ ಅವಕಾಶ ಬರುವುದಿಲ್ಲ ಎನ್ನುವ ಮಾತನ್ನೂ ಕೂಡ ನಾವು ಹೇಳಿದೆವು. ಆದರೆ ಬಂದಿದ್ದ ಜನ ಎಷ್ಟು ಎಂದರೆ, ಸುಮಾರು ಎರಡೂವರೆ ಸಾವಿರ ಜನ ಬಂದು ಸೇರಿದ್ದರು. ಎರಡೂವರೆ ಸಾವಿರ ಜನ ಬಂದಿದ್ದರಿಂದ ಅಲ್ಲಿ ಏನು ಟಿಪ್ಪು ಜಯಂತಿ ಆಚರಣೆ ಮಾಡಬಾರದೆಂದು ಕೇವಲ 40 ಜನ ಮಾತ್ರ ಪ್ರತಿಭಟನೆ ಮಾಡುತ್ತಿದ್ದರು. ಆ ಪ್ರತಿಭಟನೆ ಮಾಡುವಂತವರ ಮೇಲೆ ಕಲ್ಲನ್ನು ಒಡೆದು ಅವರು ದಾಂಧಲೆ ಮಾಡಿ ಅವರನ್ನು ಬೆರೆಸಿಕೊಂಡು ಹೋಗಿ ಅವರನ್ನು ಕೊಂದು ಹಾಕಿರುವುದು ಕೂಡ ಅಲ್ಲಿ ರೆಕಾರ್ಡ್ ಆಗಿದೆ. ಸುಮಾರು ಬಿದ್ದಿರುವಂತಹ ಜಾಗ ಎಷ್ಟು ದೂರ ಎಂದರೆ, ಸುಮಾರು 18 ಅಡಿ ಎತ್ತರ ಆ ಕಟ್ಟಡ ಇದೆ.

ಮುಂದು. . . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015-5-10-33-MS-HS.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್:( ಮುಂದು)

ಆ ಕಟ್ಟಡದ height 18 ಅಡಿ ಇದೆ. 18 ಅಡಿ ಕಟ್ಟಡದಿಂದ ಬಿದ್ದರೆ ಕಡಿಮೆ ಪಕ್ಷ ಎಷ್ಟು ಕಡಿಮೆಯಾದರೂ 5 ಅಡಿ ಮುಂದಕ್ಕೆ ಬೀಳಬೇಕು. 18 ಅಡಿ ಕಾಪೌಂಡ್ ಮೇಲೆ ಬಿದ್ದಿರುವಂತಹದ್ದು. ಬಿದ್ದರೆ ನೇರವಾಗಿ ಅದರ ಬುಡಕ್ಕೆ ಬೀಳುವುದಕ್ಕಾಗುವುದಿಲ್ಲ. ಆ drainage ಏನಿದೆ ಬರಿ ಒಂದೂವರೆ ಅಡಿ ಇದೆ. ಆದರಲ್ಲಿ ನೇರವಾಗಿ ಹಾಕುವಂತಹದ್ದು ಹಾಕಿದರೆ ಮಾತ್ರ ಬೀಳುವಂತಹದ್ದು ಎಂದು ಯಾರಿಗಾದರೂ ಗೊತ್ತಾಗುತ್ತದೆ. ಪೊಲೀಸ್‌ನವರು ಬೇಕಾದರೆ ಅಲ್ಲಿಗೆ ಹೋಗಿ demonstration ಮಾಡಲಿ. ಅಷ್ಟೆ weight ಇರುವವರನ್ನು ಯಾರಾದರೂ ಜಾರಿ ಬೀಳುವ ಹಾಗೆ ಬೀಳಿಸಿ, ಅವರು ಬಿದ್ದಾಗ drainage ಗೆ ಬೀಳುತ್ತಾರೆಯೆ ಎನ್ನುವಂತಹ ಕೆಲಸವನ್ನು ಮಾಡಲಿ. ಎಲ್ಲಾ ಸಂದರ್ಭದಲ್ಲಿಯೂ ಮಾಡುತ್ತಾರೆ.

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಬಿಡಿಎ ಸಚಿವರು): ಮಾನ್ಯ ಅಧ್ಯಕ್ಷರೆ, ಎಲ್ಲಾ investigation ಗಳು ನಡೆಯುತ್ತಿದೆ. ಸ್ವಲ್ಪ ತಾವು ಸಮಯವನ್ನು ಕೊಟ್ಟರೆ investigationನಲ್ಲಿ ಎಲ್ಲವೂ ತಿಳಿದುಬರುತ್ತದೆ. ಅಲ್ಲಿ ನಿಜವಾಗಿಯೂ ಮಾಡಿದರೋ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ದಯವಿಟ್ಟು ಪೊಲೀಸ್‌ನವರಿಗೆ investigation ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸನ್ಮಾನ್ಯ ಮಂತ್ರಿಗಳೆ, ತಾವು ಅವತ್ತಿನ ದಿವಸ ಕೊಟ್ಟಂತಹ ಏನು ಅವರು ಕಾಲು ಜಾರಿ ಬಿದ್ದಿದ್ದಾರೆ, ಅಕಸ್ಮಿಕವಾಗಿ ಬಿದ್ದಿದ್ದಾರೆಂದು ಎಂದು ಹೇಳಿರುವುದರಿಂದಾಗಿಯೇ ಜನರಿಗೆ ಸಿಟ್ಟು ಬಂದಿರುವುದು. ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆ, ವಿಚಾರಣೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದರೆ ಸಾಕಿತ್ತು. ಆದರೆ ಕಾಲು ಜಾರಿ ಬಿದ್ದಿದ್ದು ಎಂದು ಹೇಳಿರುವುದರಿಂದಾಗಿಯೇ ಜನರಿಗೆ ಸಿಟ್ಟು ಬರುವಂತಹದ್ದು ಆಯಿತು. ಇದನ್ನು ಎಲ್ಲರೂ ಕೂಡ ನೋಡಿದ್ದಾರೆ. ನಿಮಗೆ ಬೇಕಾದರೆ ನನ್ನ ಹತ್ತಿರ mobileನಲ್ಲಿ record ಆಗಿರುವುದು ಇದೆ. ಅದನ್ನು ನಾನು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಿಮಗೆ ತೋರಿಸಿಕೊಡುತ್ತೇನೆ. ಈ ಬಗ್ಗೆ ನನ್ನ ಹತ್ತಿರ ಇದೆ ನಿಮ್ಮ Police Departmentನವರ ಹತ್ತಿರ ಇದೆ.

ಶ್ರೀ ಕೆ.ಜೆ.ಜಾರ್ಜ್: ದಯವಿಟ್ಟು ತಾವು ಅದನ್ನು Investigating Officerರವರಿಗೆ ಕಳುಹಿಸಿಕೊಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಈ ರೀತಿಯಾಗಿ ಇರುವಂತಹ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅದರಲ್ಲಿಯೂ ಕೂಡ ಕೇರಳದಿಂದ vehicles ಬಂದಿರುವಂತಹದ್ದರಿಂದ ಅಲ್ಲಿ ಗಲಾಟೆಯಾಗ ುವುದಕ್ಕೆ ಅವಕಾಶವಾಗಿದೆ. ಯಾರು ಮಾಡಿದ್ದಾರೆಂದು ಪತ್ತೆ ಹಚ್ಚಿ ಅವರನ್ನು ಬಂಧನ ಮಾಡುವಂತಹ ಕೆಲಸವನ್ನು ಮಾಡಬೇಕು. ಇದುವರೆಗೂ ಎಷ್ಟು ಜನರನ್ನು ಬಂಧನ ಮಾಡಿದ್ದೀರಿ, ಎಷ್ಟು ಕೇರಳದ vehicleಗಳನ್ನು seize ಮಾಡಿದ್ದೀರಿ? ಇದು ಯಾವುದು ಕೂಡ ಆಗಿಲ್ಲ. ಕೇವಲ ಸಿಕ್ಕಿರುವಂತಹ ಜನರನ್ನು ಯಾರು ಎದುರುಗಡೆ ಸಿಕ್ಕಿದ್ದಾರೆ ಯಾರು ಗಲಾಟೆ ಮಾಡುವುದಿಲ್ಲ, ಅಂತಹವರನ್ನು ಕರೆದುಕೊಂಡು ಬಂದು 307 ಕೇಸ್ ಹಾಕಿ ಅವರನ್ನು ಒಳಗೆ ಹಾಕುವಂತಹ ಕೆಲಸ ಮಾಡಿದ್ದಾರೆ. ಈ ರೀತಿಯಾಗಿ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ಹಾಗೆ ಮಾಡಿದರೆ ಇದನ್ನು ನಿಜವಾಗಿಯೂ ಜನರು ಸಹಿಸಿಕೊಳ್ಳುವುದಿಲ್ಲ. ಈ ಟಿಪ್ಪುಸುಲ್ತಾನನ ಬಗ್ಗೆ ಏಕೆ ಇಷ್ಟೊಂದು ಅಕ್ರೋಷ ಎಂದರೆ ನನಗೆ ಗೊತ್ತಿದ್ದ ಹಾಗೆ 1750ನೇ ಇಸವಿಯಲ್ಲಿ ಟಿಪ್ಪು ಸುಲ್ತಾನ್ ಹುಟ್ಟಿರುವುದು.

ಅಧ್ಯಕ್ಷರು: ಸಾಕು ಆ ಪುರಾತನ್ನು ಬಿಡಿ. ಈ ಘಟನೆಗೆ ಸಂಬಂಧಿಸಿದಂತೆ ತಾವು ಹೇಳಿ. ದಯವಿಟ್ಟು ಈ ಮಾತು ಬೇಡ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನಾನು ಜಾಸ್ತಿ ಹೇಳುವುದಿಲ್ಲ. ಮೂರೇ words ಹೇಳುವುದು.

ಅಧ್ಯಕ್ಷರು: ದಯವಿಟ್ಟು ಈ ಮಾತು ಬೇಡ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅವರು 1750ರಲ್ಲಿ ಹುಟ್ಟಿದ್ದು ಅವರು 1799ರಲ್ಲಿ ಸತ್ತಿರುವುದು. ಅವರು ಕೇವಲ 49 ವರ್ಷ ಮಾತ್ರ ಬದುಕಿರುವುದು.

ಅಧ್ಯಕ್ಷರು: ಈ ಘಟನೆಗೆ ಸಂಬಂಧಿಸಿದಂತೆ ತಾವು ಹೇಳಿ. ತನಿಖೆ ಹೇಗೆ ಮಾಡಬೇಕು, ಏನಾಗಿದೆ ಅಷ್ಟನ್ನು ಮಾತ್ರ ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಏಕೆ ಆಕ್ರೋಷ ಎನ್ನುವುದಕ್ಕಾಗಿ ಮಾತ್ರ ಹೇಳುತ್ತಿದ್ದೇನೆ. ಅದರ ಜೊತೆಗೆ ಆಕ್ರೋಷ ಏತಕ್ಕೆ ಎಂದರೆ. ದೇವಟಿ ಫಾರ್ಮ ಎನ್ನುವಂತಹ ಜಾಗದಲ್ಲಿ 13-12-1985ರಲ್ಲಿ ಔತಣ ಕೂಟ ಎಂದು ಕರೆದು.......

ಅಧ್ಯಕ್ಷರು: ಇಲ್ಲಿ ನಾವೆಲ್ಲರೂ ಅನುಭವಿಸಿದ್ದೇವೆ. ಧಾರ್ಮಿಕ ಭಾವನೆಗಳನ್ನು ಕೆರಳಿಸುವುದು ಬಹಳಷ್ಟು ನಮ್ಮಂತಹ ದೇಶದಲ್ಲಿ. ಆದ್ದರಿಂದ ಅದರ ಲಾಭವನ್ನು ಕಂಡವರು ಮಾಡುತ್ತಾರೆ. ಈಗ ಅದು ಬೇಡ. ಮತ್ತೆ ಅದಕ್ಕೆ ಬೆಂಕಿಹಚ್ಚುವುದು ಬೇಡ. ಇವತ್ತು ಏನು ಘಟನೆಯಾಗಿದೆ. ಯಾರಿಗೆ ಅನ್ಯಾಯವಾಗಿದೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನಾವು ಏತಕ್ಕಾಗಿ ಹೇಳುವುದು ಎಂದರೆ,...

ಅಧ್ಯಕ್ಷರು: ನಿಷ್ಪಕ್ಷಪಾತವಾದ ತನಿಖೆಯಾಗಬೇಕೆಂದು ಹೇಳಿ ಸಾಕು.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಈ ಟಿಪ್ಪು ಜಯಂತಿಯನ್ನು ಆಚರಣೆ ಮಾಡಬಾರದು ಎನ್ನುವ ಉದ್ದೇಶಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ಜಯಂತಿಯನ್ನು ಕೈಬಿಡಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ,...

ಶ್ರೀ ಸಿ.ಟಿ.ರವಿ: ನಾವು ಸರ್ಕಾರದ ತೀರ್ಮಾನವನ್ನು ಒಪ್ಪಿಕೊಳ್ಳಬೇಕಾ? ಸರ್ಕಾರ ಏನೇ ತೀರ್ಮಾನ ಮಾಡಿದರೂ ಒಪ್ಪಿಕೊಳ್ಳುವುದಾದರೆ ನಾವು ಏತಕ್ಕಾಗಿ ಇರಬೇಕು?

ಅಧ್ಯಕ್ಷರು: ರವಿಯವರೆ, ನಾನು ಒಪ್ಪಿಕೊಳ್ಳಬೇಕೆಂದು ಹೇಳಲಿಲ್ಲ.

ಶ್ರೀ ಸಿ.ಟಿ.ರವಿ: ಮತ್ತೆ ಇನ್ನೇನು?

ಅಧ್ಯಕ್ಷರು: ಹಾಗಿದ್ದರೆ,. . .

ಶ್ರೀ ಸಿ.ಟಿ.ರವಿ: ಸರ್ಕಾರದ ತೀರ್ಮಾನವನ್ನು ನಾವು ತಪ್ಪು ಎಂದು ಹೇಳಬೇಕೋ ಅಥವಾ ಬೇಡವ್ವೋ?

ಅಧ್ಯಕ್ಷರು: ನಾನು ಹೇಳುವುದನ್ನು ತಾವು ಕೇಳಿ. ಯಾವ ಜಯಂತಿಯನ್ನು ಮಾಡಬೇಕು ಯಾವ ಜಯಂತಿಯನ್ನು ಮಾಡಬಾರದು ಎಂದು separate ಆಗಿ ಪ್ರತ್ಯೇಕ ಮಾಡಿರಿ. ಅದು ಇಲ್ಲಿ ಬೇಡ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಈ ಸದನದಲ್ಲಿ ನಮಗೆ ಇರುವಂತಹ ಒಂದು ಅವಕಾಶ ಇದೆ. ನಮಗೆ ಹೊರಗಡೆ ಮಾತನಾಡುವುದಕ್ಕೆ ನಮಗೆ ಯಾರ ಅಪ್ಪಣೆಯೂ ಬೇಡ.

ಶ್ರೀ ಬಿ.ಜಡ್. ಜಮೀರ್ ಅಹಮದ್‌ಖಾನ್: ಮಾನ್ಯ ರವಿಯರೆ, ನೀವು ಮಾಡಬೇಡಿ. ನಾವು ಮಾಡಿಕೊಳ್ಳುತ್ತೇವೆ. ನೀವು ಮಾಡಬೇಡಿ. ನಾವು ಮಾಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇಸ್ಲಾಂ ಧರ್ಮದಲ್ಲಿಯೇ ಆಗಲಿ...

ಶ್ರೀ ಬಿ.ಜಡ್. ಜಮೀರ್ ಅಹಮದ್‌ಖಾನ್: ನೀವು ಮಾಡಬೇಡಿ ನಾವು ಮಾಡಿಕೊಳ್ಳುತ್ತೇವೆ. ಅದು ನಿಮಗೆ ಬೇಕಾಗಿಲ್ಲ.

ಶ್ರೀ ಸಿ.ಟಿ.ರವಿ: ಸರ್ಕಾರ ಏತಕ್ಕಾಗಿ ಮಾಡಬೇಕು?

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇಸ್ಲಾಂ ಧರ್ಮದಲ್ಲಿಯೇ ಆಗಲಿ, ಖುರಾನ್‌ನಲ್ಲಿಯೇ ಆಗ ೖಲಿ ಷರಿಯತ್‌ನಲ್ಲಾಗಲಿ, ನನಗೆ ತಿಳಿದಮಟ್ಟಿಗೆ ಯಾವುದೇ ಹುಟ್ಟಿದ ಹಬ್ಬವನ್ನು ಆಚರಣೆ ಮಾಡಬಾರದು ಎಂದು ಹೇಳುವಂತಹದ್ದು ಅವರ ಖುರಾನ್‌ನಲ್ಲಿಯೂ ಕೂಡ ಇದೆ. ಹಾಗಿದ್ದಾಗ ಮಾತ್ರ ಇವರು ಟಿಪ್ಪು ಜಯಂತಿಯನ್ನು ಏತಕ್ಕಾಗಿ ಆಚರಣೆ ಮಾಡಿದರು? ಇವತ್ತು ಸ್ವತಂತ್ರ ಹೋರಾಟ ಎಂದು ಪ್ರಥಮಬಾರಿಗೆ ಆಗಿರುವುದು.

ಶ್ರೀ ಬಿ.ಜಡ್. ಜಮೀರ್ ಅಹಮದ್‌ಖಾನ್: ಮಾನ್ಯ ಅಪ್ಪಚ್ಚುರಂಜನ್‌ರವರೆ, ತಾವು ಖುರಾನ್ ಬಗ್ಗೆ ತಿಳಿದುಕೊಂಡಿದ್ದೀರಲ್ಲಾ, ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸಿಪಾಯಿದಂಗೆ ಪ್ರಾರಂಭವಾಗಿದ್ದು ಇಲ್ಲಿ ಟಿಪ್ಪುವನ್ನು ಸ್ವತಂತ್ರ ಹೋರಾಟಗಾರ ಎಂದು ಹೇಳಬೇಕಲ್ಲಾ.

ಶ್ರೀ ಬಿ.ಜಡ್. ಜಮೀರ್ ಅಹಮದ್‌ಖಾನ್: ಒಂದು ನಿಮಿಷ ತಾವು ಕೇಳಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಅವರು ಯಾವ ಸ್ವತಂತ್ರ ಹೋರಾಟಗಾರ ಎಂದು ಹೇಳಬೇಕಲ್ಲವೇ.

ಶ್ರೀ ಬಿ.ಜಡ್. ಜಮೀರ್ ಅಹಮದ್ ಖಾನ್: ತಾವು ಖುರಾನ್ ಬಗ್ಗೆ ಹೇಳುತ್ತಿದ್ದೀರಲ್ಲಾ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಜಮೀರ್‌ರವರೆ ಸುಮ್ಮನೆ ತಾವು ಏತಕ್ಕಾಗಿ ಮಾತನಾಡುತ್ತಿದ್ದೀರಿ

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಸಿಪಾಯಿದಂಗೆ 1857ರಲ್ಲಿ start ಆಗಿದೆ.

ಅಧ್ಯಕ್ಷರು: ಮಾನ್ಯ ಜಮೀರ್‌ರವರೆ, ಸುಮ್ಮನೆ ನೀವುಗಳು ಏತಕ್ಕಾಗಿ interfere ಆಗುತ್ತೀರಿ? ಅವರು ಏನು ಹೇಳುತ್ತಾರೋ ಹೇಳಲಿ ಬಿಡಿ. ಅಗತ್ಯವಿಲ್ಲದಿರುವುದರ ಬಗ್ಗೆ ಮಾತನಾಡಿದರೆ ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಸಿಪಾಯಿದಂಗೆ ಸ್ವತಂತ್ರ ಹೋರಾಟ ಪ್ರಾರಂಭವಾಗಿರುವುದೇ 1857 ರಲ್ಲಿ. ಇವರು ಹೇಗೆ ಸ್ವತಂತ್ರ ಹೋರಾಟಗಾರರಾಗುತ್ತಾರೆ.

ಅಧ್ಯಕ್ಷರು: ಅದು ಬೇಡ. ಅವತ್ತಿನದಿವಸ ಗಲಾಟೆಯಾಗಿರುವಂತಹ ವಿಚಾರದ ಬಗ್ಗೆ ತಾವು ಹೇಳಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇವತ್ತು ಸರ್ಕಾರವೆ ಒಂದು ರೀತಿಯಲ್ಲಿ ಕೋಮುಗಲಭೆ ನಡೆಯುವುದಕ್ಕೆ ಪ್ರಚೋದನೆಯನ್ನು ಕೊಡುತ್ತಿದೆ. ಸರ್ಕಾರವು ಟಿಪ್ಪು ಜಯಂತಿಯನ್ನು ಮಾಡಿ .....

ಶ್ರೀ ಖಮರುಲ್ ಇಸ್ಲಾಂ(ವಕ್ಫ್ ಅಲ್ಪಸಂಖ್ಯಾತರ ಕಲ್ಯಾಣ, ಪೌರಾಡಳಿತ ಸಚಿವರು): ಮಾನ್ಯ ಅಧ್ಯಕ್ಷರೆ, I am on Point of order. Please allow me. Sir, I am on Point of order, allow me.

(ಗೊಂದಲ)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಇವತ್ತಿನ ಪರಿಸ್ಥಿತಿ ಹೇಗೆ ಆಗಿದೆ ಎಂದರೆ, ಸಂಜಯ್‌ಖಾನ್‌ರವರು ಟಿಪ್ಪು ಸುಲ್ತಾನ್ ಧಾರವಾಹಿಯನ್ನು ಮಾಡಿದರು. ಅದರ ಕಥೆ ಏನಾಯಿತು?

(ಗೊಂದಲ)

ಶ್ರೀ ಖಮುರಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, Please, kindly allow me for 5 minutes.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ.

ಶ್ರೀ ಖಮುರಲ್ ಇಸ್ಲಾಂ: Please, I want to set the record straight.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನಮ್ಮ ಮಲ್ಯರವರು ಬ್ರಿಟನ್‌ನಿಂದ ಟಿಪ್ಪು ಖಡ್ಗವನ್ನು ತೆಗೆದುಕೊಂಡು ಬಂದರು ಅವರ ಕಥೆ ಏನಾಗಿದೆ.

(ಗೊಂದಲ)

ಶ್ರೀ ಖಮುರಲ್ ಇಸ್ಲಾಂ: By saying this in the House,....

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನಿಮ್ಮ ಸರ್ಕಾರ ಈ ಕಾಂಗ್ರೆಸ್ ಸರ್ಕಾರ ಟಿಪ್ಪು ಜಯಂತಿಯನ್ನು ಮಾಡುವುದಕ್ಕೆ ಹೊರಟಿದೆ. ನಿಮ್ಮ ಅವಸಾನವಾಗುತ್ತದೆ, ನಿಮ್ಮ ಕಾಂಗ್ರೆಸ್ ಸರ್ಕಾರದ ಅವಸಾನವಾಗುತ್ತದೆ. ಅದಕೋಸ್ಕರವಾಗಿ ನೀವು ಟಿಪ್ಪು ಜಯಂತಿಯನ್ನು ಮಾಡುತ್ತಿದ್ದೀರಿ. ಕೋಮು ಗಲಭೆ ಮಾಡಿಸಿ ಗುದ್ದಾಡುವುದಕ್ಕೆ ಈ ಜಯಂತಿಯನ್ನು ಮಾಡುತ್ತಿದ್ದೀರಿ. ನಿಮ್ಮ ಕುಮ್ಮಕ್ಕಿನಿಂದ ಆಗುತ್ತಿದೆ. ಅವರೆಲ್ಲರೂ ಕೇರಳದಿಂದ ಬರುವುದಕ್ಕೆ ನೀವೇ ಕಾರಣರಾಗಿದ್ದೀರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಅಪ್ಪಚ್ಚುರವರೆ,ಸಾಕು ಬಿಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಕೇರಳದಿಂದ ಬಂದಿದ್ದಂತಹ ಯಾವ vehicles seize ಮಾಡಿದ್ದೀರಿ?

ಅಧ್ಯಕ್ಷರು: ನೀವು ಕುಳಿತುಕೊಳ್ಳುತ್ತೀರೋ ಇಲ್ಲವೋ. Please resume. ಮಾನ್ಯ ಮಂತ್ರಿಗಳೆ, ಕುಳಿತುಕೊಳ್ಳಿರಿ. ಮಾನ್ಯ ಅಪ್ಪಚ್ಚುರವರೆ ತಮ್ಮ ಭಾಷಣವನ್ನು close ಮಾಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: Close ಮಾಡುತ್ತೇನೆ.

ಅಧ್ಯಕ್ಷರು: ತಾವು 10 ನಿಮಿಷ ಮಾತನಾಡಿದ್ದೀರಿ. ತಾವು close ಮಾಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನನಗೆ ಇರುವಂತಹದ್ದು ಕೇರಳಾದ vehiclesನಿಂದ ಸುಮಾರು 2000 ಜನರು ಸೇರಿದ್ದಾರೆ.

ಅಧ್ಯಕ್ಷರು: ಅದನ್ನು ಮೊದಲೆ ಹೇಳಿದ್ದೀರಲ್ಲಾ ಬಿಡಿ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಕೇರಳಾದಿಂದ ಬಂದಿರುವಂತಹ vehicleಗಳನ್ನು ಏತಕ್ಕಾಗಿ seize ಮಾಡಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮತ್ತೆ ಏತಕ್ಕಾಗಿ ಅದನ್ನು repeat ಮಾಡುತ್ತೀರಿ?

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಲ್ಲಾ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, .......

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ನೀವೇನು ನಮಗೆ ಉಸ್ತುವಾರಿ ಮಂತ್ರಿಯೇ? ಅವರು ನೋಡಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಅವರಿಗೇ ಏನು ಹೇಳಬೇಕೋ ಹೇಳುತ್ತೇನೆ ಬಿಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ ತಾವು ಕುಳಿತುಕೊಳ್ಳಿ. ಏನು ನೀವು ಮಂತ್ರಿಗಳಾಗಿ ಈ ರೀತಿ ಮಾಡುತ್ತಿದ್ದೀರಲ್ಲಾ. ನನಗೆ ಎಲ್ಲವೂ ಗೊತ್ತಿದೆ ಕುಳಿತುಕೊಳ್ಳಿ. No permission. Please resume, please resume, please resume. ಮಾನ್ಯ ಅಪ್ಪಚ್ಚುರವರೆ ತಾವು ಮುಕ್ತಾಯ ಮಾಡುತ್ತೀರೋ ಅಥವಾ ಇಲ್ಲವೋ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಮಾನ್ಯ ಅಧ್ಯಕ್ಷರೆ, ಮಾಡುತ್ತೇನೆ.ಇವತ್ತು ಕೊಡಗಿನಲ್ಲಿ KFD, PFI ಬಹಳಷ್ಟು ಗೊಂದಲಗಳು ನಡೆಯುತ್ತಿದೆ. ಈ ಬಗ್ಗೆ ತಮಗೆ ಗೊತ್ತಿರಬಹುದು. ಭಯೋತ್ಪಾದನೆಯಲ್ಲಿ ನಜೀರ್ ಎನ್ನುವವರು ನಮ್ಮ ಕೊಡಗಿನಲ್ಲಿಯೇ ಇದ್ದರು. ಅವರನ್ನು ಅಲ್ಲಿಂದಲೇ arrest ಮಾಡಿದರು. ಅವರು ಯಾವ ರೀತಿಯಾಗಿ ಬಾಂಬ್ ಅನ್ನು ಸ್ಫೋಟನೆ ಮಾಡಿದರು ಎನ್ನುವುದು ಕೂಡ ಎಲ್ಲರಿಗೂ ಗ ೊತ್ತಿರುವಂತಹ ವಿಚಾರವಾಗಿದೆ. ಅದಕೋಸ್ಕರವಾಗಿ ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆ ಮಾಡಿ ತಪ್ಪಿತಸ್ಥರಲ್ಲದವರನ್ನು ಬಿಟ್ಟು ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗ ೆದುಕೊಳ್ಳಬೇಕೆಂಬ ಒತ್ತಾಯವನ್ನು ಮಾಡಿ ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ರವಿಯವರೆ, ಬೇಡ. ನಾನು ನಿಮಗೆ ಕೈಮುಗಿಯುತ್ತೇನೆ.

ಶ್ರೀ ಸಿ.ಟಿ.ರವಿ: ತಾವು 5 ನಿಮಿಷ ಟೈಮ್ ಇಟ್ಟುಕೊಳ್ಳಿ. ಅಷ್ಟರಲ್ಲಿಯೇ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ಸಾಕು, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರೆ ತಾವು ಬಿಲ್ ಅನ್ನು move ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಕಾಗೇರಿಯವರೆ, No... ಮಾನ್ಯ ಪಾಟೀಲ್‌ರವರೆ ತಾವು ಬಿಲ್ ಅನ್ನು move ಮಾಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್:(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

(ಗೊಂದಲ)

( ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಸದನದ ಬಾವಿಗೆ ಬಂದರು )

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ. ರಾತ್ರಿ 9 ಮತ್ತು 10 ಗಂಟೆಯ ತನಕ ಕುಳಿತುಕೊಳ್ಳುತ್ತೇವೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ...

( ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು )

ಅಧ್ಯಕ್ಷರು: ರವಿಯವರೆ, ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಸಿಟ್ಟಾಗಬೇಡಿರಿ. ರಾತ್ರಿ 9 -10 ಗಂಟೆಯತನಕ ಕುಳಿತುಕೊಳ್ಳೋಣ.

ಅಧ್ಯಕ್ಷರು: ನಾನು ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಾಗೇರಿಯವರೆ ನೀವು ಏನು ಹೇಳಿದ್ದೀರಿ?

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: 2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಲು ಈ ಮೂಲಕ ಸೂಚಿಸುತ್ತೇನೆ.

ಅಧ್ಯಕ್ಷರು: ಆಯಿತು ಹೇಳಿ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಪಂಚಾಯತ್ ತಿದ್ದುಪಡಿ ನಮ್ಮ ಕರ್ನಾಟಕದಲ್ಲಿ....

(ಗೊಂದಲ)

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಮಧ್ಯಾಹ್ನ debate start ಮಾಡಿದಾಗ unnecessary intervene ಆಗಿದ್ದರಿಂದ ಈ ರೀತಿ ಆಗಿದೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಹೇಳಿ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಪಂಚಾಯತ್ ತಿದ್ದುಪಡಿ...

ಅಧ್ಯಕ್ಷರು: ನಾನು ದಯವಿಟ್ಟು ತಮಗೆ ಕೈಮುಗಿಯುತ್ತೇನೆ. ದಯವಿಟ್ಟು please, please.....

ಶ್ರೀ ಜಗದೀಶ್ ಶೆಟ್ಟರ್: ಇದು 6 ತಿಂಗಳು...

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮಾನ್ಯ ಕಾಗೇರಿಯವರೆ, ನೀವು ಬಂದು ನನ್ನ ಹತ್ತಿರ ಏನು ಹೇಳಿದ್ದೀರಿ? ನಾವು ವಾಸ್ತವಿಕವಾಗಿ ಅದೆಲ್ಲಾ ಆದಮೇಲೆ ಬರಬೇಕಾಗಿತ್ತು. ಆದರೆ ನಾನು ನಿಮ್ಮ ಮಾತನ್ನು ನಂಬಿ ಮೊದಲು ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಉತ್ತರವನ್ನು ನಾಳೆ ಕೊಡಿ ಎಂದು ಅವರಲ್ಲಿ ಕೇಳಿಕೊಂಡು ಅವಕಾಶ ಕೊಟ್ಟೆ. ನೀವು ಈ ರೀತಿ ಮಾಡಿದರೆ ಇನ್ನು ಮೇಲೆ ನಿಮಗೆ oblige ಮಾಡಬೇಕೇ?

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ......

ಅಧ್ಯಕ್ಷರು: ಸುಮ್ಮನೆ ಇರಿ ಸಾಕು.

ಶ್ರೀ ಜಗದೀಶ್ ಶೆಟ್ಟರ್: ನಾವು within the time, time ನ ಒಳಗಡೆ debate ಮುಗಿಸುತ್ತಿದ್ದೇವು. ಆದರೆ ಏನಾಯಿತು, ಇಲ್ಲಿ intervene ಮಾಡಿರುವುದರಿಂದಾಗಿಯೇ ಬಹಳಷ್ಟು ಟೈಮ್ ಇದರಲ್ಲಿಯೇ ಹೋಯಿತು. ಮೂರು ಗಂಟೆಯವರೆವಿಗೂ ಯಾವ ಮಂತ್ರಿಗಳು ಬರಲಿಲ್ಲ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್:(ಸಹಕಾರ ಸಚಿವರು): ಇಲ್ಲ.

ಶ್ರೀ ಹೆಚ್.ಕೆ.ಪಾಟೀಲ್: ಈಗಾಗಲೇ ಬಹಳಷ್ಟು ಜನರು ಮಾತನಾಡಿದ್ದೀರಿ. ಎಲ್ಲರೂ ಮಾತನಾಡುತ್ತೇವೆಂದರೆ ಹೇಗೇ?

ಶ್ರೀ ಜಗದೀಶ್ ಶೆಟ್ಟರ್: ನಾವು with in the time, timeನ ಒಳಗಡೆ debate ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ನನ್ನ ಹಕ್ಕನ್ನು ನೀವು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ತಿಳಿದುಕೊಳ್ಳಿ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಸ. 25.11.2015/5.20/34/ಎನ್.ಸಿ.ಕೆ/ಹೆಚ್.ಎಸ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಸಿ.ಟಿ.ರವಿಯವರು ಇದಕ್ಕೆ signature ಮಾಡಿದ್ದಾರೆ. ದಯವಿಟ್ಟು ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು: ದಯವಿಟ್ಟು ನೀವು ನನಗೆ ಸಹಕಾರ ಕೊಡಬೇಕು. ನೀವು ಈ ರೀತಿ ಮಾಡಬಾರದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ಬಗ್ಗೆ ದಬ್ಬಾಳಿಕೆಗಳಾಗಿವೆ, ಸಾಕಷ್ಟು ಘಟನೆಗಳಾಗಿವೆ, ಅದರ ಬಗ್ಗೆ ಶಾಸಕರು participate ಮಾಡಬೇಕಾಗುತ್ತದೆ. ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆದಿರುವುದಲ್ಲದೆ ಇಡೀ ರಾಜ್ಯದಲ್ಲಿ ಆಗಿರುವಂಥದ್ದನ್ನು ತಂದು ಇಲ್ಲಿ ಹೇಳಬೇಕಾಗುತ್ತದೆ. ಅವರಿಗೆ ಐದ್ಯೆದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಅಧ್ಯಕ್ಷರೆ, ಮುಧೋಳದಲ್ಲಿ ಈಗ 119 ಜನ ಜೈಲಿನಲ್ಲಿದ್ದಾರೆ. ಇವತ್ತಿನವರೆಗೆ daily ಅಮಾಯಕರನ್ನು ಅರೆಸ್ಟ್ ಮಾಡುತ್ತಲೇ ಇದ್ದಾರೆ.

ಅಧ್ಯಕ್ಷರು: ಆಯಿತು. ರವಿ ಐದು ನಿಮಿಷ ಮಾತನಾಡಿ. ಉಳಿದವರಿಗೆ ಅವಕಾಶ ಕೊಡುವುದಿಲ್ಲ, ಬೇಡ,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ಸರ್, ಐದ್ಯೆದು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ಗೋವಿಂದ.ಎಂ ಕಾರಜೋಳ: ದಯವಿಟ್ಟು 5 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಅವಕಾಶ ಕೊಡಿ.

ಅಧ್ಯಕ್ಷರು: ಇಲ್ಲ, ದಯವಿಟ್ಟು ಇಲ್ಲ, close. ದಯವಿಟ್ಟು ಒತ್ತಾಯ ಮಾಡಬೇಡಿ. ನಾನು ಸಚಿವರನ್ನು ಕರೆದಿದ್ದೇನೆ. ಸಾಕು. close ಮಾಡಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲದಿದ್ದರೆ ಇದಕ್ಕೆ ವಿಶೇಷ ಅಧಿವೇಶನ ಕರೆಯಿರಿ.

(ಗೊಂದಲ)

ಅಧ್ಯಕ್ಷರು: ಐದು ನಿಮಿಷ ಅಷ್ಟೇ, ಬಾಕಿಯವರಿಗೆ ನಿಮಗ್ಯಾರಿಗೂ ಇಲ್ಲ. No, No, ಬೇಡ. ದಯವಿಟ್ಟು ಬೇಡ.

***( ಈ ಹಂತದಲ್ಲಿ ಬಾವಿಯಲ್ಲಿದ್ದ ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ತಮ್ಮ ಸ್ಥಾನಕ್ಕೆ ತೆರಳಿದರು)***

*(ಗೊಂದಲ)*

ಶ್ರೀ ಗೋವಿಂದ ಎಂ.ಕಾರಜೋಳ: ನಮ್ಮ ತಾಲ್ಲೂಕಿನಲ್ಲಿ ಗಲಭೆಯಾಗಿದೆ, 119 ಜನ ಜೈಲಿನಲ್ಲಿದ್ದಾರೆ. ಅಮಾಯಕರನ್ನು ಇವತ್ತಿಗೂ ಅರೆಸ್ಟ್ ಮಾಡುತ್ತಿದ್ದಾರೆ. ದಯವಿಟ್ಟು ನನಗೆ ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಅಧ್ಯಕ್ಷರು: ಆಗುವುದಿಲ್ಲ, ರವಿಯೊಬ್ಬರಿಗೆ ಐದು ನಿಮಿಷ ಅವಕಾಶ ಕೊಡುತ್ತೇನೆ, ಮಾತನಾಡಿ.

ಶ್ರೀ ಗೋವಿಂದ ಎಂ.ಕಾರಜೋಳ: ನಮ್ಮೂರಿನಲ್ಲಿ ಗಲಭೆ ಆಗಿದೆ ನಮಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? 119 ಜನ ಜೈಲಿನಲ್ಲಿದ್ದಾರೆ. ಇವತ್ತಿನವರೆಗೆ everyday arrest ಮಾಡುತ್ತಿದ್ದಾರೆ. ಅಮಾಯಕರು ಜೈಲಿಗೆ ಹೋಗಿದ್ದಾರೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ಸರ್?

ಶ್ರೀ ಸಿ.ಟಿ.ರವಿ: ಸರ್ ನೀವು ನನಗ್ಯಾಕೆ ಅಡ್ಡವಾಗುತ್ತೀರಿ?

(ಗೊಂದಲ)

ಅಧ್ಯಕ್ಷರು: ನಾಯಕರೆ ನಿಮಗೆ ನಾನು ಮುಂಚಿತವಾಗಿ advance ಆಗಿ ಕೊಟ್ಟಿದ್ದು ತಪ್ಪಾಯಿತು.

ಶ್ರೀ ಜಗದೀಶ್ ಶೆಟ್ಟರ್: ಕಾರಜೋಳರವರಿಗೆ ಅವಕಾಶ ಕೊಡಿ. ಮುಧೋಳದಲ್ಲಿ ಬಹಳ ಗದ್ದಲವಾಗಿದೆ.

(ಗೊಂದಲ)

ಅಧ್ಯಕ್ಷರು: ಆಗುವುದಿಲ್ಲ, ಅವರೇನು ಆ ಭಾಗದವರೆ?

ಶ್ರೀ ಗೋವಿಂದ ಎಂ.ಕಾರಜೋಳ: ಸರ್ ಐದು ನಿಮಿಷ ಸಮಯ ಕೊಡಿ. ನಾನೇನು ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮೊದಲು ನಿಮಗೆ ಅವಕಾಶ ಕೊಟ್ಟಿದ್ದು ತಪ್ಪಾಯಿತು.

ಶ್ರೀ ಸಿ.ಟಿ.ರವಿ: ನೀವು ಯಾವತ್ತೂ ಆ ರೀತಿ ತಪ್ಪು ಮಾಡುವುದಿಲ್ಲ ಬಿಡಿ ಸರ್.

ಅಧ್ಯಕ್ಷರು: ಇನ್ನೊಂದು ಸಾರಿ ಗೊತ್ತಾಯಿತು ನನಗೆ.

ಶ್ರೀ ಗೋವಿಂದ ಎಂ.ಕಾರಜೋಳ: ಅಧ್ಯಕ್ಷರೆ, ದಯವಿಟ್ಟು ನೀವು ಆ ರೀತಿ ಹೇಳಬಾರದು. ನಮ್ಮೂರಿನಲ್ಲಿ 119 ಜನ ಅಮಾಯಕರು ಅರೆಸ್ಟ್ ಆಗಿದ್ದಾರೆ. ಇವತ್ತಿಗೂ ಅರೆಸ್ಟ್ ಮಾಡುತ್ತಿದ್ದಾರೆ. ಅಲ್ಲಿಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

CODಯಿಂದ 5 ಜನ officers ಅನ್ನು ಕಳುಹಿಸಿಕೊಟ್ಟಿದ್ದಾರೆ. Everyday ಎಲ್ಲರ ಮನೆಗೆ ಹೋಗಿ ಮಾಡುತ್ತಿದ್ದಾರೆ. ನೀವು ಅದನ್ನು ನನಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ರವಿ ಹೇಳಿ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು ಜಿಲ್ಲೆ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. 6.50 ಕೋಟಿ ಜನಸಂಖ್ಯೆ ಇರುವಂಥ ರಾಜ್ಯದಲ್ಲಿ 125 ಕೋಟಿ ಜನಸಂಖ್ಯೆ ಇರುವಂಥ ದೇಶದಲ್ಲಿ ಅಲ್ಲೊಂದು ಇಲ್ಲೊಂದು ಕೋಮು ಗಲಭೆ ಆಗುವುದನ್ನು unwanted incidents ಆಗುವುದನ್ನು ಯಾರೂ ಕೂಡ ತಡೆಗಟ್ಟುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ ಕೋಮುಗಲಭೆಯನ್ನು ನಿಯಂತ್ರಿಸಬೇಕಾದಂಥ ಸರ್ಕಾರ ಕೋಮು ಪ್ರಚೋದನೆ ಮಾಡುವಂಥ ಕೆಲಸವನ್ನು ಮಾಡಿದ್ದೆಷ್ಟರ ಮಟ್ಟಿಗೆ ಸರಿ ಎನ್ನುವುದಷ್ಟೇ ನನ್ನ ಪ್ರಶ್ನೆ. ಈ ಸರ್ಕಾರದ ಮಾಧ್ಯಮ ಸಲಹೆಗಾರರಾಗಿರುವಂಥ ಶ್ರೀ ದಿನೇಶ್ ಅಮಿನಮಟ್ಟುರವರು ಸರ್ಕಾರದ ಸವಲತ್ತನ್ನು ಪಡೆಯುತ್ತಾರೆ. ಈ ದೇಶದಲ್ಲಿ ಒಂದು ಸಂಸ್ಕೃತಿ ಇದೆ, ಅದು ಕೃಷಿ ಸಂಸ್ಕೃತಿ ಇದೆ. ಕೆಲವರು ಗೋವನ್ನು ಪೂಜೆ ಮಾಡುತ್ತಾರೆ, ಕೆಲವರು ಗೋವನ್ನು ಪೂಜೆ ಮಾಡದೇ ಇರಬಹುದು. ಆದರೆ ಬಹುತೇಕ ಜನರು ಗೋವನ್ನು ಪೂಜೆ ಮಾಡುತ್ತಾರೆ, ಅದು ಈ ದೇಶದ ಸಂಸ್ಕೃತಿ. ಅವರು ಗೋಮಾಂಸ ಭಕ್ಷಣೆಯ ಸಾರ್ವಜನಿಕ ಕೆಲಸ ಮಾಡುವುದರ ಮೂಲಕ ಪ್ರಚೋದನೆ ಕೊಡುತ್ತಾರೆ, ಆ ಮೂಲಕ ಪ್ರಚೋದನೆ ಕೊಡುವವರಿಗೆ ಸರ್ಕಾರದಲ್ಲಿ ಆಯಕಟ್ಟಿನ ಸ್ಥಾನ ಸಿಗುತ್ತದೆ. ಇನ್ನು ಕೆಲವು ಸಾಹಿತಿಗಳಿದ್ದಾರೆ. ಅವರು ದೇವರನ್ನು ನಂಬದೇ ಇರಬಹುದು ಅಥವ ಎಲ್ಲಾ ದೇವರನ್ನು ನಂಬದೇ ಇರಬಹುದು.

ಅಧ್ಯಕ್ಷರು: ವಿಷಯಕ್ಕೆ ಬನ್ನಿ ಮಹರಾಯರೆ,

ಶ್ರೀ ಸಿ.ಟಿ.ರವಿ: ಅಲ್ಲಿಗೆ ಬರುತ್ತೇನೆ. ಎಲ್ಲ ದೇವರನ್ನು ನಂಬದೇ ಇರಬಹುದು. ಅವರವರ ನಂಬಿಕೆ ಪ್ರಶ್ನೆ, ಅವರು ನಂಬದಿದ್ದರೆ ಯಾರದು ಅಭ್ಯಂತರವಿಲ್ಲ. ದೇವರನ್ನು ನಂಬದೇ ಇರುವವರನ್ನು ಒಂದು ಚಾರುವಾಕ ಸಂಸ್ಕೃತಿ ಎಂದು ದೇವರನ್ನು ನಂಬದಿರುವವರು ಋಷಿ ಎಂದು ಗೌರವಿಸಿದಂತಹ ಸಮಾಜವಿದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಆ ಸಾಹಿತಿಗಳು ರಾಮ, ಕೃಷ್ಣರ ಅವಹೇಳನ ಮಾಡುತ್ತಾರೆ. ಅವಹೇಳನ ಮಾಡುವವರಿಗೆ ರಕ್ಷಣೆ ಸಿಗುತ್ತದೆ ಅವರ ಮೇಲೆ ಪೊಲೀಸ್ ಮೊಕದ್ದಮೆ ಆಗುವುದಿಲ್ಲ. ಸರ್ಕಾರವೇ ಸಾಹಿತಿಗಳನ್ನು ಕರೆಯುತ್ತದೆ. ಆ ಸಾಹಿತಿಗಳನ್ನು ಕರೆದಾಗ ಅವರು ಹೇಳುತ್ತಾರೆ, ಟಿಪ್ಪು ಸುಲ್ತಾನ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರ, ದೇಶಭಕ್ತ. ನನ್ನ ಪ್ರಶ್ನೆ ಇರುವುದು, ಟಿಪ್ಪು ಸುಲ್ತಾನ್ ದೇಶಭಕ್ತ ಎಂದು ಹೇಳುವ ಅವರ ಮಾತನ್ನು ಒಪ್ಪಿಕೊಳ್ಳೋಣ. ಟಿಪ್ಪುವಿನ ವಿರುದ್ಧ ಹೋರಾಟ ಮಾಡಿದವರೆಲ್ಲರೂ ದೇಶದ್ರೋಹಿಗಳೇ? ಟಿಪ್ಪುವಿನ ವಿರುದ್ಧ ಕೊಡವರು ಹೋರಾಟ ಮಾಡಿದರು, ಟಿಪ್ಪುವಿನ ವಿರುದ್ಧ ಮಲಬಾರಿಗಳು ಹೋರಾಟ ಮಾಡಿದರು. ಟಿಪ್ಪುವಿನ ವಿರುದ್ಧ ಚಿತ್ರದುರ್ಗದ ಪಾಳೇಗಾರರ ನಾಯಕರು ಹೋರಾಟ ಮಾಡಿದರು, ಟಿಪ್ಪುವಿನ ವಿರುದ್ಧ ನರಗುಂದದ....

ಶ್ರೀ ದಿನೇಶ್ ಗುಂಡೂರಾವ್(ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೆ, ಇವರು ಮತ್ತೆ ಅದೇ ಚರ್ಚೆಗೆ ಹೋಗುತ್ತಿದ್ದಾರೆ. ಟಿಪ್ಪು ಸುಲ್ತಾನ್ ಬಗ್ಗೆ ಮಾತನಾಡುವುದಕ್ಕೆ ತಾವು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಮತ್ತೆ ಅದೇ ಇತಿಹಾಸದ ಚರ್ಚೆಗೆ ಹೋಗುತ್ತಿದ್ದಾರೆ. ಅವರು ಮತ್ತೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಒಳ್ಳೆಯತನವನ್ನು ಮತ್ತೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್: ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಿ ಅಧ್ಯಕ್ಷರೆ, ನಾವು clarify ಮಾಡುತ್ತೇವೆ.

(ಗೊಂದಲ)

ಶ್ರೀ ಸಿ.ಟಿ.ರವಿ: ನಾನು yield ಆಗಿಲ್ಲ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ರಮಾನಾಥ ರೈ: ಯಾರು ಕೋಮು ಪ್ರಚಾರದ ಬಗ್ಗೆ ಭಾಷಣ ಮಾಡುತ್ತಾರೆ ಅವರನ್ನು ತೆಗೆದು ಒಳಗೆ ಹಾಕಿ.

(ಗೊಂದಲ)

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್: ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಸಿ.ಟಿ.ರವಿ: ಕೋಮು ಪ್ರಚೋದನೆಯ ಪ್ರಚಾರದ ಕೆಲಸವನ್ನು ಸರ್ಕಾರದ ಮುಖ್ಯಸ್ಥರೇ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಯಾರು ಕೋಮು ಗಲಭೆಯನ್ನು ನಿಯಂತ್ರಿಸಬೇಕಾಗಿತ್ತು ..

ಅಧ್ಯಕ್ಷರು: ರವಿಯವರೆ, ದಯವಿಟ್ಟು outside of the purview ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಯಾರು ಕೋಮು ಗಲಭೆಯನ್ನು ನಿಯಂತ್ರಿಸಬೇಕಾಗಿತ್ತು ಅವರೇ ಹೇಗೆ ಕೋಮು ಪ್ರಚೋದನೆಗೆ ಅವಕಾಶವನ್ನು ಮತ್ತು ವೇದಿಕೆಯನ್ನು ಒದಗಿಸಿ ಕೊಡುತ್ತಿದ್ದಾರೆ ಎಂದು ಹೇಳುವುದಷ್ಟೇ ನನ್ನ ಉದ್ದೇಶ.

ಅಧ್ಯಕ್ಷರು: ಅಷ್ಟನ್ನೇ ಹೇಳಿ.

ಶ್ರೀ ಸಿ.ಟಿ.ರವಿ: ಗಿರೀಶ್ ಕಾರ್ನಾಡ್ ಎಂಬ ಒಬ್ಬ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಂಥ ಸಾಹಿತಿ...

ಅಧ್ಯಕ್ಷರು: ಅದ್ಯಾಕೆ ಇಲ್ಲಿ ಮಾತನಾಡುತ್ತೀರಿ?

ಶ್ರೀ ಸಿ.ಟಿ.ರವಿ: ವಿಷಯ ಹೇಳಬೇಕಲ್ಲವೇ? ಅವರಿಂದ ಪ್ರಚೋದನೆ ಆಯಿತು ಎಂದು ನಾವು ಹೇಳಬೇಕಲ್ಲವೇ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್.ಮಹದೇವ್‌ಪ್ರಸಾದ್ ( ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು): ಇವರು ಪುನ: ಪ್ರಚೋದನೆ ಮಾಡುವುದಕ್ಕೆ ಹೋಗುತ್ತಿದ್ದಾರೆ.

ಶ್ರೀ ಸಿ.ಟಿ.ರವಿ: ನೀವು ಸರ್ಕಾರದ ವೇದಿಕೆ ಮೇಲೆ ಕರೆಸಿ ಪ್ರಚೋದನೆ ಮಾಡಿಸಿದಿರಿ. ನಾವು ಅದನ್ನು ಹೇಳಬೇಕಲ್ಲವೇ? You are responsible.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮುಖ್ಯಮಂತ್ರಿಯವರ ಪಕ್ಕದಲ್ಲಿಯೇ ಕುಳಿತು ಯಾವ ರೀತಿ ಅವರು ಹೇಳಿಕೆ ಕೊಟ್ಟರು? ಅದಕ್ಕೆ ನಿಮ್ಮ ವೇದಿಕೆ ಕೊಟ್ಟರಲ್ಲ? ಆಮೇಲೆ ಅವರು ಹೆಸರನ್ನು ಬದಲು ಮಾಡಿ ಹೇಳಿಕೆ ಕೊಟ್ಟರು.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ್‌ಪ್ರಸಾದ್: ನೀವು ಸಮಯ ಕೊಟ್ಟಿರುವುದು ಯಾವುದಕ್ಕೆ? ಮಡಿಕೇರಿಯಲ್ಲಿ ನಡೆದ ಘಟನೆ ಬಗ್ಗೆ ಮಾತನಾಡುವುದಕ್ಕೆ ನೀವು ಅವರಿಗೆ ಅವಕಾಶ ಕೊಟ್ಟಿರುವುದು. ಅದನ್ನು ಬಿಟ್ಟು ಎಲ್ಲಿಗೋ ಗಿರೀಶ್ ಕಾರ್ನಾಡ್‌ರವರ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಆಗಲೇ ಅವರಿಗೆ ಮುಖ್ಯಮಂತ್ರಿಗಳು ಈ ರೀತಿ ಮಾತನಾಡಬಾರದು ಎಂದು ಹೇಳಬಹುದಾಗಿತ್ತು. ಎಲ್ಲರಿಗೂ ಪ್ರಚೋದನೆ ಮಾಡುವುದು.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ್ ಪ್ರಸಾದ್: ಪ್ರಚೋದನೆ ಮಾಡುವುದರಲ್ಲಿ ನಿಸ್ಸೀಮರು.

(ಗೊಂದಲ)

ಶ್ರೀ ಪಿ.ಎಂ.ಅಶೋಕ್: ಅಧ್ಯಕ್ಷರೆ, ಅವರಿಬ್ಬರು ಈ ಸದನದ ಸದಸ್ಯರಲ್ಲ, ಅವರ ಬಗ್ಗೆ ಮಾತನಾಡಬಾರದು. ಅಧ್ಯಕ್ಷರೆ, ನಿಯಮಾನುಸಾರ ಅವರಿಬ್ಬರು ಸದನದ ಸದಸ್ಯರಲ್ಲ, ಅವರ ಬಗ್ಗೆ ಇಲ್ಲಿ ಮಾತನಾಡುವಂತಿಲ್ಲ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಸಿ.ಟಿ.ರವಿ: ಈಗ ಸರ್ಕಾರಿ ವೇದಿಕೆಗೆ ಒಬ್ಬರನ್ನು ಅತಿಥಿಯಾಗಿ ಕರೆದ ಮೇಲೆ ಅವರೇನು ಮಾತನಾಡುತ್ತಾರೆ ಅದರ ಜವಾಬ್ದಾರಿ ಸರ್ಕಾರದ ಭಾಗವಾಗುತ್ತದೆ. ಅದು ಸರ್ಕಾರದ ಭಾಗವಾಗಿ ುವುದರಿಂದ ಎರಡು ಸಂಗತಿಗಳನ್ನು ಹೇಳಿದರು. ಒಂದು ಸ್ವಾತಂತ್ರ್ಯ ಹೋರಾಟಗಾರರು ಎಂದು ಹೇಳಿದರು, ನನ್ನ ಪ್ರಶ್ನೆ ಇರುವುದು ಟಿಪ್ಪು ... ನೀವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಸ್ವಾಮಿ, ಅದನ್ನು ಬಿಟ್ಟುಬಿಡಿ, ಆ ಇತಿಹಾಸದ ಭಾಗ ನಮಗೆ ಅಪ್ರಕೃತ, I don't want you to interfere all these. ಈಗ ಗಲಾಟೆ ನಡೆದಿದೆ. ಯಾರು ಅದಕ್ಕೆ ತಪ್ಪಿತಸ್ಥರು, ಯಾರು ಹೊಣೆ? ಅದಕ್ಕೆ ಸರ್ಕಾರ ಏನು ಮಾಡಬೇಕೆಂಬುದಕ್ಕಷ್ಟೇ ಸೀಮಿತವಾಗಿ ಮಾತನಾಡಿ.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಸರ್ಕಾರದ ನಿಲುವುಗಳು ಹೇಗೆ ಕೋಮು ಪ್ರಚೋದನೆಗೆ ಕಾರಣವಾಗಿ ುತ್ತವೆ? ಸಾಮರಸ್ಯಕ್ಕೆ ಹೇಗೆ ಧಕ್ಕೆಯಾಗುತ್ತದೆ ಎಂದು ಹೇಳುವುದಷ್ಟೇ ನನ್ನ ಉದ್ದೇಶವಾಗಿದೆ. ಹಾಗಾಗಿ ಯಾರು ಟಿಪ್ಪುವಿನ ವಿರುದ್ಧ ಹೋರಾಟ ಮಾಡಿದರು, ಅದರಲ್ಲಿ ಕನ್ನಡಿಗರು ಇದ್ದಾರೆ, ಮಲಬಾರಿಗಳು ಇದ್ದಾರೆ, ಕೊಡವರು ಇದ್ದಾರೆ. ಇವರನ್ನೆಲ್ಲಾ ಸರ್ಕಾರ ದೇಶದ್ರೋಹಿಗಳು ಎಂದು treat ಮಾಡುತ್ತದೆಯೇ?

ಅಧ್ಯಕ್ಷರು: ಅದ್ಯಾಕೆ ಈಗ? ಒಳ್ಳೆಯ ಕಥೆಯಾಯಿತಲ್ಲಾ?

ಶ್ರೀ ಸಿ.ಟಿ.ರವಿ: ಟಿಪ್ಪು ದೇಶಭಕ್ತ ಎಂದಾದ ಮೇಲೆ. . .

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್: ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಸಿ.ಟಿ.ರವಿ: ನೀವು ಉತ್ತರ ಕೊಡಿ ಸರ್,

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ : ನಮಗೆ ಉತ್ತರ ಕೊಡಲಿಕ್ಕೆ ಅವಕಾಶ ಮಾಡಿಕೊಡಲಿ. ಅವಕಾಶ ಮಾಡಿಕೊಡುತ್ತಾರೆಯೇ ಕೇಳಿ. ನೀವು ಹೇಳಿದ್ದೆಲ್ಲಾ record ಆದರೆ ನಾವು ಈಗ ಉತ್ತರ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಡಬೇಕಲ್ಲವೇ? ಅವರೇನು ಬೇಕಾದರೂ ಹೇಳಲಿ, ಅದಕ್ಕೆ ನಮಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ಹೇಳಲಿ. ನಮಗೂ ಅವಕಾಶ ಕೊಡಿ. ನಾವು ಅವರಿಗೆ ಉತ್ತರ ಕೊಡುತ್ತೇವೆ.

ಅಧ್ಯಕ್ಷರು: ಇಲ್ಲಿ ಕೇಳಿ, ಈ ದೇಶವನ್ನು ಪಾಳೇಗಾರರು, ರಾಜರು ಎಲ್ಲರೂ ಆಳಿದ್ದಾರೆ. ಜನರಿಗೆ ಕೊಟ್ಟಿದ್ದೆಲ್ಲಾ ಪಂಗನಾಮ.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಒಂದು ವೇಳೆ ಸರ್ಕಾರದ ಮಾತನ್ನು ಒಪ್ಪಿಕೊಳ್ಳೋಣ. ಟಿಪ್ಪು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಾನೆ ಎಂಬುದನ್ನು ಒಪ್ಪಿಕೊಳ್ಳೋಣ. ವಿಷಯಕ್ಕೆ ಬರುತ್ತೇನೆ.

ಅಧ್ಯಕ್ಷರು: ಅದು ಬೇಡ, ಪ್ಲೀಸ್, ವಿಷಯಕ್ಕೆ ಬನ್ನಿ, ಪ್ಲೀಸ್ ಸಹಕಾರ ಮಾಡಿ.

ಶ್ರೀ ಸಿ.ಟಿ.ರವಿ: ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಕ್ಕೆ ತಾನೆ ಅವರನ್ನು ಸ್ವಾತಂತ್ರ್ಯ ಹೋರಾಟಗ ಾರ ಎಂದು ಹೇಳುತ್ತಿರುವುದು. ಅದರ ಬಗ್ಗೆ ಸರ್ಕಾರ ಹೇಳಲಿ.

ಅಧ್ಯಕ್ಷರು: ಇದನ್ನೆ ಮುಂದುವರೆಸುವುದಾದರೆ ನಾನು stop ಮಾಡಬೇಕಾಗುತ್ತದೆ. ರವಿ, ಈ ಗ ಲಾಟೆ ಸಂಬಂಧವಾಗಿ ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡುವುದಾದರೆ ಮಾತನಾಡಿ.

ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್: ಅಧ್ಯಕ್ಷರೆ, ನಮಗೂ ಅವಕಾಶ ಮಾಡಿಕೊಡಿ,

(ಗೊಂದಲ)

ಶ್ರೀ ಸಿ.ಟಿ.ರವಿ: ಯಾವ ಕಾರಣಕ್ಕಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆಂದು ನಾನು ಹೇಳಬೇಕಲ್ಲವೇ? ಈಗ ಬ್ರಿಟಿಷರ ವಿರುದ್ಧ ಟಿಪ್ಪುಸುಲ್ತಾನ್ ಹೋರಾಟ ಮಾಡಿದ್ದರು ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಅಧ್ಯಕ್ಷರು: ಅದು ಬೇಡ. Stop ಮಾಡಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಹೇಳಿ ಹಾಗಾದರೆ ಸರ್ಕಾರಕ್ಕೆ ಟಿಪ್ಪು ಸುಲ್ತಾನ್ ಜಯಂತಿ ಬೇಡ ಎಂದು ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ಜೆಡ್. ಜಮೀರ್ ಅಹ್ಮದ್ ಖಾನ್: ಟಿಪ್ಪು ಸುಲ್ತಾನ್ ಜಯಂತಿ ಬೇಡ ಎಂದು ಏಕೆ ಹೇಳಬೇಕು? ಇವರೊಬ್ಬರೆ ಬೇಡ ಎನ್ನುತ್ತಿರುವುದು, ಇವರೇನು ದೇವರೇ?

(ಗೊಂದಲ)

ಅಧ್ಯಕ್ಷರು: ರವಿ, ಏನು ಮಾತನಾಡುವುದು ನೀವು, ಬರಿ ಇದೇನೆ ಇಲ್ಲಿ ಮಾತನಾಡುವುದು? ಮಾತನಾಡುವುದಕ್ಕೆ ಯಾವುದೇ ರೀತಿ ನೀತಿ ಇಲ್ಲವೇ?

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015/5.30(35)DL.SSD

ಅಧ್ಯಕ್ಷರು: ಮಾನ್ಯ ಸಿ.ಟಿ ರವರೆ, ತಾವು ಏನು ಮಾತನಾಡುವುದು? ಈ ಶಾಸಕಾಂಗಕ್ಕೆ ರೀತಿ ನೀತಿ ಇಲ್ಲವೆ?

(ಗೊಂದಲ)

ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್ : ಮಾನ್ಯ ಅಧ್ಯಕ್ಷರೆ, ಬೇಡ ಎನ್ನುವುದಕ್ಕೆ ಇವರು ದೇವರೇ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ಎಲ್ಲಿ ರೀತಿ ತಪ್ಪಿದ್ದೇನೆ ಹೇಳಿ.

ಅಧ್ಯಕ್ಷರು: ತಾವು ತಪ್ಪಿದ್ದೀರಿ. ವಿಷಯಕ್ಕೆ ಬನ್ನಿ. ಇವತ್ತು ಇರುವುದು ಏನು?

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ರೀತಿ ನೀತಿ ತಪ್ಪಿದ್ದರೆ ತಾವು ಕಡತ ತರಿಸಿ. ಎಲ್ಲಿ ರೀತಿ ತಪ್ಪಿದ್ದೇನೆ ಹೇಳಿ.

ಅಧ್ಯಕ್ಷರು: ಎಲ್ಲಾ ರೀತಿಯಿಂದಲೂ ತಪ್ಪಿದ್ದೀರಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ಅಸಂಸದೀಯ ಶಬ್ಧಗಳನ್ನು ಎಲ್ಲಿ ಬಳಕೆ ಮಾಡಿದ್ದೇನೆ?

ಅಧ್ಯಕ್ಷರು: ವಿವಾದಾತ್ಮಕ ಗಲಾಟೆ ನಡೆದಿದೆ. ಅದರ ಬಗ್ಗೆ ಏನು ತನಿಖೆ, ಯಾವ ಕ್ರಮ? ಅದನ್ನು ಹೇಳಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಿಮಗೆ ಗೌರವಿಸುತ್ತೇನೆ. ನಿಮ್ಮ ಸ್ಥಾನಕ್ಕೂ ಗೌರವಿಸುತ್ತೇನೆ. ಆದರೆ, ನೀವು ಹೇಳಿದ ಮಾತನ್ನು ನಾನು ಒಪ್ಪುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ರವಿಯವರೆ, ತಾವು ಕುಳಿತುಕೊಳ್ಳುತ್ತಿರೋ ಅಥವಾ ಇಲ್ಲವೋ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಈಗ Un parliamentary word ನನ್ನದು ಒಂದು ಶಬ್ದ ಇದ್ದರೆ . . .

ಅಧ್ಯಕ್ಷರು: ನೀವು ಕುಳಿತುಕೊಳ್ಳುತ್ತೀರೋ ಇಲ್ಲವೋ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೀವು ಅವಕಾಶ ನೀಡಿದ್ದೀರಿ. ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ರವಿಯವರೆ, ನಾನು ಹೇಳುವವರೆಗೆ ಕೇಳಿ. ನಾನು relevant ಮತ್ತು irrelevant ಬಗ್ಗೆ ಮಾತನಾಡುತ್ತೇನೆ. ನಾನು parliamentary, Un-parliamentary ಬಗ್ಗೆ ಹೇಳಲಿಲ್ಲ. ಇವತ್ತಿನ ಚರ್ಚೆಗೆ ನೀವು ಹೇಳಿರತಕ್ಕಂಥದ್ದು ಅಪ್ರಕೃತ. ಆದ್ದರಿಂದ, ದಯವಿಟ್ಟು,ಬಿಟ್ಟು ಮುಂದಕ್ಕೆ ಬನ್ನಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ಒಪ್ಪುತ್ತೇನೆ. ನೀವು ಹೇಳಿದ್ದು ಸರಿಯಿದೆ. ಈ ಕಾರಣಕ್ಕೆ ಟಿಪ್ಪು ಜಯಂತಿ ಅಪ್ರಸ್ತುತ.

ಅಧ್ಯಕ್ಷರು: ಹಾಗೆ ಹೇಳಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಆ ಕಾರಣಕ್ಕೆ ನೀವು ಹೇಳಿದ ಮಾತನ್ನೇ ಗೌರವಿಸಿ, ನಿಮ್ಮ ಮಾತಿಗ ೆ endorse ಮಾಡುತ್ತಾ ನೀವು ಹೇಳಿದ ಕಾರಣಕ್ಕೆ ಇತಿಹಾಸದ ತಿಪ್ಪೆಯನ್ನು ಕೆದಕುತ್ತಾ ಹೋದರೆ ಒಳ್ಳೆಯದಕ್ಕಿಂತ ಜಾಸ್ತಿ ವಾಸನೆ ಹೊಡೆಯುತ್ತದೆ. ಆ ವಾಸನೆಯಲ್ಲಿ ಕೊಡವರ ಮೇಲೆ ಮಾಡಿಸಿದಂಥ ದೌರ್ಜನ್ಯದ ಕಹಿ ನೆನಪು ಆಗುತ್ತದೆ. ಆ ಕರಾಳ ನೆನಪು ಆಗುತ್ತದೆ. ಹಾಗಾಗಿ, ಆ ಕರಾಳ ನೆನಪು ಮರುಕಳಿಸಬಾರದು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಇವರಿಗೆ ಬುದ್ಧಿ ಬರುವುದಿಲ್ಲ.

ಶ್ರೀ ತನ್ವೀರ್ ಸೇಠ್ : ಎಲ್ಲದರಲ್ಲೂ ರಾಜಕೀಯ.

ಶ್ರೀ ದಿನೇಶ್ ಗುಂಡೂರಾವ್ : ಇವರದು ನಾಯಿ ಬಾಲ ಡೊಂಕು. ಯಾವಾಗಲೂ ಹೀಗೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಕ್ರಿಶ್ಚಿಯನ್‌ರ ನರಮೇಧ ನೆನಪಾಗುತ್ತದೆ. ಕನ್ನಡದ ಕೊಲೆ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ . . .

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ ಅವಕಾಶ ಕೊಡಬಾರದಿತ್ತು. ಅವರು ಈ ರೀತಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಮಾನ್ಯ ರವಿಯವರೆ, ತಾವು ಪ್ರತಿಯೊಂದಕ್ಕೂ ರಾಜಕೀಯ ಮಾಡಿಕೊಂಡು ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲೇ intolerance ಇದೆ.

(ಗೊಂದಲ)

ಅಧ್ಯಕ್ಷರು: ದಕ್ಷಿಣ ಕನ್ನಡದಲ್ಲಿ ಇಬ್ಬರು ಇದ್ದರಲ್ಲ ಅವರು ಯಾರು? ಕೋಟಿ ಚೆನ್ನಯ್ಯರವರ ಜಯಂತಿ ಮಾಡಿ. ಹಕ್ಕ-ಬುಕ್ಕರದು ಮಾಡಿ. ಸಂಗೋಳ್ಳಿಯ ರಾಯಣ್ಣನದು ಮಾಡಿ. ಎಲ್ಲಾ ಮಾಡಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಮಾಡಬೇಕು. ಸಂಗೋಳ್ಳಿ ರಾಯಣ್ಣನ ಜಯಂತಿ ಮಾಡಬೇಕು. ನರಗುಂದದ ಬಾಬಾಸಾಹೇಬನ ಜಯಂತಿ ಮಾಡಬೇಕು.

(ಗೊಂದಲ)

ಶ್ರೀ ವಿ.ಸುನಿಲ್ ಕುಮಾರ್: ನಮ್ಮದು ಯಾರದೂ ವಿರೋಧ ಇರಲಿಲ್ಲ. ಟಿಪ್ಪು ಜಯಂತಿ ಮಾಡಿರುವುದಕ್ಕೆ ವಿರೋಧ ಇರುವುದು. ಕೋಟಿ ಚೆನ್ನಯ್ಯರದು ಜಯಂತಿ ಮಾಡಿದ್ದರೆ ಯಾರದೂ ವಿರೋಧ ಇರುತ್ತಿರಲಿಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲಾ ಮಾಡಿ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ಮಾಡಿಕೊಂಡು ಬಂದಿರುವುದೇ ರಾಜಕೀಯ ಕಾರಣಕ್ಕಾಗಿ ಆಗಿದೆ.

(ಗೊಂದಲ)

ಅಧ್ಯಕ್ಷರು: ಅದಕೋಸ್ಕರವಾಗಿಯೇ ಕಲಿತುಕೊಂಡಿರುವವರೆಲ್ಲರೂ ಗೇಣಿ ರೈತರು. ಉಳಿದವರು. ಅವರಿಗೆಲ್ಲಾ ಆಗಲೇ ಹಕ್ಕುಪತ್ರ ಕೊಡಬಹುದಾಗಿತ್ತು. ಸುಮ್ಮನಿರಿ ಸಾಕು.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಹಕ್ಕುಪತ್ರ ಕೊಡಬೇಕಾಗಿತ್ತು.

ಅಧ್ಯಕ್ಷರು: ಎಲ್ಲಾ ರಾಜರು ಈ ಸಾಮಾನ್ಯ ಜನರನ್ನು ದುಡಿಸಿಕೊಂಡು ತಿಂದರು. ಅವರಿಗೆ ಕೊಟ್ಟಿರುವುದು ಪಂಗನಾಮ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೀವು ಹೇಳಿದ ಹಾಗೆ ಕೋಟಿ ಚೆನ್ನಯ್ಯ ಜಯಂತಿ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಟಿಪ್ಪುಸುಲ್ತಾನ್ ನನ್ನು ಮುಸಲ್ಮಾನ್ ಎನ್ನುವ ಕಾರಣಕ್ಕಾಗಿ ವಿರೋಧಿಸುತ್ತಿಲ್ಲ. ನೀವು ಸಂತ ಶಿಶುನಾಳ ಷರೀಫ್‌ರ . .

ಅಧ್ಯಕ್ಷರು: ಮಾನ್ಯ ರವಿಯವರೆ, ಅವುಗಳನ್ನು ಮಾಡುವುದಕ್ಕೆ ಹೋಗಬಾರದು. ಇವತ್ತು ಸ್ವಾತಂತ್ರ್ಯ ದೇಶದಲ್ಲಿ ನಾವು ಇದ್ದೇವೆ. ನಮಗೆ ಇವತ್ತು relevant ಆಗಿರುವ ಬಗ್ಗೆ ಮಾಡಬೇಕು. ಸುಮ್ಮನೆ ಹಳೆಯದನ್ನು ಕೆದಕಿಕೊಂಡು ಹೋಗಿ ಮೈಮೇಲೆ ಹಾಕಿಕೊಳ್ಳುವ ವ್ಯವಹಾರ ಇವು.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನೆಮ್ಮದಿಯನ್ನು ಹಾಳು ಮಾಡುವ ಕೆಲಸವನ್ನು ಎಲ್ಲೋ ಕೆಲವರು ಮಾಡುತ್ತಾರೆ. ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರವೇ ಆ ಕೆಲಸಕ್ಕೆ ಮುಂದಾದರೆ ಹೇಗೆ? ಸರ್ಕಾರವೇ ನೆಮ್ಮದಿ ಹಾಳು ಮಾಡುವ ಕೆಲಸಕ್ಕೆ ಮುಂದಾದರೆ, ಸರ್ಕಾರವೇ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಪ್ರಚೋದನೆಗೆ ಮುಂದಾದರೆ ಹೇಗೇ? ಮಾನ್ಯ ಮುಖ್ಯಮಂತ್ರಿಗಳು ಅವರು ಏನು ಬೇಕಾದರೂ ತಿನ್ನಲ್ಲಿ. ತಿನ್ನುವುದು ಅವರ ಸ್ವತಂತ್ರದ ಹಕ್ಕು. ಏನು ತಿಂದರೂ ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಆದರೆ, ತಿನ್ನುತ್ತೇನೆ, ಏನು ಮಾಡಿಕೊಳ್ಳುತ್ತೀರಿ? ಎನ್ನುವುದು ಪ್ರಚೋದನೆ ತಾನೇ? ಈಗ ನಾನು ಗ ೋಮಾಂಸ ಭಕ್ಷ್ಯವನ್ನು ಮಾಡುತ್ತೇನೆ, ಬಿಜೆಪಿಯವರು ಏನು ಮಾಡಿಕೊಳ್ಳುತ್ತಾರೆ ಎನ್ನುವುದು ಪ್ರಚೋದನೆ ತಾನೇ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇವರು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದಾರೆ?

(ಗೊಂದಲ)

ಅಧ್ಯಕ್ಷರು: ನೀವು ಯಾವ ಪಕ್ಷದಿಂದ ಆರಿಸಿ ಬಂದಿದ್ದೀರೋ ನಾವೂ ಅದೇ ಪಕ್ಷದಿಂದ ಆರಿಸಿ ಬಂದಿದ್ದೇವೆ. ಆದರೆ, ನೀವು ಮಾಡಿದೆಲ್ಲಾ ಸರಿ ಎಂದು ಹೇಳುವುದಕ್ಕೆ ಬಂದು ಕುಳಿತಿಲ್ಲ. ಅದನ್ನು ಬಿಟ್ಟು ಬಿಡಿ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಅವರು ವಿಷಯದ ಬಗ್ಗೆ ಮಾತನಾಡಬೇಕು. ಇಲ್ಲಿ ನಿಂತುಕೊಂಡು ರಾಜಕೀಯ ಮಾಡುವುದಕ್ಕೆ ಹೋದರೆ ಹೇಗೆ?

ಅಧ್ಯಕ್ಷರು: ಮಾಡುವ ಕೆಲಸ ಮಾಡಬೇಡಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಆ ಕಾರಣಕೋಸ್ಕರ ಬ್ರಿಟಿಷ್ ವಿರುದ್ಧ ಹೋರಾಟ ಮಾಡಿದ್ದಕೋಸ್ಕರ ಅವರ ಜಯಂತಿ ಮಾಡುವುದು ಸರಿ ಎಂದರೆ ಕಿತ್ತೂರು ಚೆನ್ನಮ್ಮ ರಾಣಿ ಚೆನ್ನಮ್ಮ, ಸಂಗ ೋಳ್ಳಿ ರಾಯಣ್ಣ ಜಯಂತಿ, ನರಗುಂದದ ಬಾಬಾಸಾಹೇಬರ ಜಯಂತಿಯನ್ನು ಮಾಡಬೇಕೆಂದು ನನ್ನ ಆಗ್ರಹ ಇದೆ.

ಅಧ್ಯಕ್ಷರು: ಅಷ್ಟಕ್ಕೆ ಸೀಮಿತ ಮಾಡಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ತಪ್ಪು ಅಭಿಪ್ರಾಯ ಹೋಗಬಾರದು. ಟಿಪ್ಪುಸುಲ್ತಾನ್ ಮುಸಲ್ಮಾನ ಎನ್ನುವ ಕಾರಣಕ್ಕೆ ನಾವು ವಿರೋಧಿಸುತ್ತಿಲ್ಲ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ನಾನು ಎಲ್ಲಾ ರಾಜರ ಜಯಂತಿ ಮಾಡುವುದಕ್ಕೆ ವಿರೋಧಿ.

(ಗೊಂದಲ)

ಶ್ರೀ ಜಮೀರ್ ಅಹಮದ್ ಖಾನ್.ಬಿ.ಜಡ್: ಮಾನ್ಯ ರವಿಯವರೆ, ತಾವು 5 ವರ್ಷ ಸರ್ಕಾರದಲ್ಲಿದ್ದಿರಿ. ಆಗ ಮಾಡಿಕೊಳ್ಳಬೇಕಾಗಿತ್ತು. 5 ವರ್ಷ ನಿಮ್ಮ ಸರ್ಕಾರ ಇರಲಿಲ್ಲವೇ? ಆಗ ಮಾಡಿಕೊಳ್ಳಬೇಕಾಗಿತ್ತು. ನಿಮಗೆ ಯಾರು ಬೇಡ ಎನ್ನುತ್ತಿದ್ದರು? ಕೇವಲ ಮಾತನಾಡುವುದನ್ನು ಕಲಿತ್ತಿದ್ದೀರಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಕುಳಿತುಕೊಳ್ಳಿ. ನಾನು yield ಆಗಿಲ್ಲ.

ಶ್ರೀ ಜಮೀರ್ ಅಹಮದ್ ಖಾನ್.ಬಿ.ಜಡ್: ಆಗ ನಿಮ್ಮದೇ ತಾನೇ ಸರ್ಕಾರ ಇದ್ದಿದ್ದು. ನಿಮಗೆ ಯಾರು ಬೇಡ ಎಂದರು?

ಶ್ರೀ ಸಿ.ಟಿ.ರವಿ: ನಾನು yield ಆಗಿಲ್ಲ.

ಅಧ್ಯಕ್ಷರು: ಮಾನ್ಯ ರವಿಯವರೆ, ಬೇಗನೆ ಪೂರೈಸಿ. 10 ನಿಮಿಷ ಆಯಿತು.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಸಂತ ಶಿಶುನಾಳ ಷರೀಫ್‌ರ ಜಯಂತಿಯನ್ನು ಸರ್ಕಾರ ಮಾಡಲಿ. ಅವರು ಸಾಮರಸ್ಯದ ಬೀಜವನ್ನು ಬಿತ್ತಿದವರು.

ಅಧ್ಯಕ್ಷರು: ಯಾರು?

ಶ್ರೀ ಸಿ.ಟಿ.ರವಿ: ಸಂತ ಶಿಶುನಾಳ ಷರೀಫ್‌ರು.

ಅಧ್ಯಕ್ಷರು: ಓ.ಕೆ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಅಂಥವರ ಜಯಂತಿ ಮಾಡಿದರೆ ಸಾಮರಸ್ಯ ಬೆಸೆಯುತ್ತದೆ.

ಅಧ್ಯಕ್ಷರು: ನಾನು ಹೇಳುವುದು ಯಾರ ಜಯಂತಿಯೂ ಬೇಡ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಅದರ ಬದಲಿಗೆ. . .

(ಗೊಂದಲ)

ಶ್ರೀ ಜಮೀರ್ ಅಹಮದ್ ಖಾನ್.ಬಿ.ಜಡ್: ಮಾನ್ಯ ರವಿಯವರೆ, ನಿಮ್ಮದೇ ಸರ್ಕಾರ ಇತ್ತು. ಆಗ ಸಂತ ಶಿಶುನಾಳ ಷರೀಫ್‌ರ ಜಯಂತಿ ಮಾಡಿಕೊಳ್ಳಬೇಕಾಗಿತ್ತು.

ಶ್ರೀ ಸಿ.ಟಿ.ರವಿ: ನಾನು, ನಿಮಗೆ yield ಆಗಿಲ್ಲ. ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳುವುದೇನೆಂದರೆ, ಒಂದು ಕಡೆ ಹೊಗಳುತ್ತಾ 300 ವರ್ಷಗಳಲ್ಲಿ ಇಂಥ ಕನ್ನಡಿಗನು ಹುಟ್ಟಲಿಲ್ಲವೆಂದು ಹೇಳಿತು. ಆದರೆ, ನನ್ನ ಇತಿಹಾಸದ ತಿಳುವಳಿಕೆ ಮತ್ತು ನಾನು ಶಾಲೆಯಲ್ಲಿ ಓದಿರುವ ಪ್ರಕಾರ, ಟಿಪ್ಪುಸುಲ್ತಾನ್ ಮತ್ತು ಹೈದರಾಲಿ ಆಡಳಿತ ಕಾಲದಲ್ಲಿ ಪರ್ಶಿಯನ್ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಹೇರಿದ್ದರು.

ಅಧ್ಯಕ್ಷರು: ಅದು ಈಗ ಏತಕ್ಕೆ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಮ್ಮೂರಿನ ಪಕ್ಕ ಸಕಲೇಶ್ವರಪುರ. ಆ ಸಕಲೇಶ್ವರಪುರ ಊರನ್ನು ಮಂಜೀರಾಬಾದ್ ಎಂದು ಬದಲಾಯಿಸಿದರು, ಮೈಸೂರನ್ನು ನಜಿರಾಬಾದ್ ಎಂದು ಬದಲಾಯಿಸಿದರು.

ಅಧ್ಯಕ್ಷರು: ದಯವಿಟ್ಟು, ಅದನ್ನೆಲ್ಲಾ ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಕೆ.ಅಭಯಚಂದ್ರ (ಯುವಜನ ಸೇವೆ, ಮೀನುಗಾರಿಕೆ ಸಚಿವರು): ಇತಿಹಾಸ ತಿರುಚಿದವರು ಬಿಜೆಪಿಯವರು. . ...

(ಗೊಂದಲ)

ಅಧ್ಯಕ್ಷರು: ಮಾನ್ಯ ರವಿಯವರೆ, ತಾವು ಹೇಳಿದನ್ನೆಲ್ಲಾ ನಾನು admit ಮಾಡುವುದಕ್ಕೆ ಆಗ ುವುದಿಲ್ಲ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಇದು ಇತಿಹಾಸದ ಸತ್ಯ ಘಟನೆಗಳು. ಸುಳ್ಳು ಇದ್ದರೆ ನನ್ನನ್ನು ನೇಣಿಗೆ ಹಾಕಿ. ನಾನು ಹೇಳಿರುವ ಘಟನೆಗಳು ಸುಳ್ಳು ಇದ್ದರೆ. . . .

(ಗೊಂದಲ)

ಅಧ್ಯಕ್ಷರು: ಇಲ್ಲಿ whip ಇದ್ದೀರಾ?

ಶ್ರೀ ಎನ್.ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಕಥೆಯನ್ನು ಹೇಳುವುದಕ್ಕೆ ಈ ವೇದಿಕೆ ಅಲ್ಲ. ಇದು ಕಥೆ ಹೇಳುವ ಜಾಗ ಅಲ್ಲ.

(ಗೊಂದಲ)

ಶ್ರೀ ನಾರಾಯಣಗೌಡ: ದಯವಿಟ್ಟು, ಇದನ್ನು ನಿಲ್ಲಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಬಿಜೆಪಿಯವರು ಗೊಂದಲ ಸೃಷ್ಟಿ ಮಾಡುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು: ಮುಗಿಸುತ್ತೀರೋ ಇಲ್ಲವೋ?ದಯವಿಟ್ಟು, ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಅವರು ನಡುವೆ ಮಾತನಾಡದಿದ್ದರೆ ನಾನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಟೀಕೆ ಮಾಡುವುದಕ್ಕೂ ಒಂದು ವೇದಿಕೆ ಇರುತ್ತದೆ. ಏನಿದು?

ಶ್ರೀ ಸಿ.ಟಿ.ರವಿ: ನಾನು ಟೀಕೆ ಎಲ್ಲಿ ಮಾಡಿದ್ದೇನೆ? ನಾನು ಹೇಳಿರುವ ಸಂಗತಿಗಳಲ್ಲಿ . . .

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ: ತಾವು ಬುದ್ಧಿವಂತರು ಎಂದು ಗೊತ್ತು. ಆದರೆ, ಅತಿ ಬುದ್ಧಿವಂತಿಕೆ ಬೇಡ.

(ಗೊಂದಲ)

ಶ್ರೀ ಎನ್.ಎಚ್.ಕೋನರೆಡ್ಡಿ: ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆಂದರೆ ಎಲ್ಲರೂ ಹಾಗೆ ಮಾತನಾಡಿದರೆ ಎಲ್ಲಿ ಗೌರವ ಬರುತ್ತದೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಮ್ಮ ಪಾಣಿನಲ್ಲಿ ಖಾತೆ, ಕಿರ್ದು, ಅಮಲ್ದಾರ್, ತಹಶೀಲ್ದಾರ್, ಶಿರೇಸ್ತೆದಾರ್, . . .

ಅಧ್ಯಕ್ಷರು: ಮಾನ್ಯ ರವಿಯವರೆ, ತಾವು ಈಗ ಅದನ್ನೆಲ್ಲಾ ನಿಲ್ಲಿಸುತ್ತೀರೋ ಇಲ್ಲವೋ?

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ಮಾತಿನಲ್ಲಿ ಸುಳ್ಳು ಇದ್ದರೆ ನನ್ನನ್ನು ಇಲ್ಲಿ ನೇಣಿಗೆ ಹಾಕಿ. ನಾನು ನೇಣಿಗೆ ಏರುವುದಕ್ಕೆ ತಯಾರಿದ್ದೇನೆ.

(ಗೊಂದಲ)

ಅಧ್ಯಕ್ಷರು: ಬಿಡಿ ಸಾಕು.

ಶ್ರೀ ಜಮೀರ್ ಅಹಮದ್ ಖಾನ್.ಬಿ.ಜಡ್: ಮಾನ್ಯ ಅಧ್ಯಕ್ಷರೆ, ತಾವು ಮಾತಾಡುವುದಕ್ಕೆ ಅವಕಾಶ ಕೊಟ್ಟಿದ್ದೆ ತಪ್ಪಾಯಿತು.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಸತ್ಯ ಇದ್ದರೆ ಟಿಪ್ಪು ಜಯಂತಿ ವಾಪಸ್ಸು ತೆಗೆದುಕೊಳ್ಳಿ. ಕೋಮು ಪ್ರಚೋದನೆಯನ್ನು ಸರ್ಕಾರ ಮಾಡಬಾರದು. ಇವತ್ತು ಇರುತ್ತೇವೆ ನಾಳೆ ಸಾಯುತ್ತೇವೆ. ಅಧಿಕಾರ ಯಾರಿಗೂ ಶಾಶ್ವತ ಅಲ್ಲ. ಊರಿಗೆ ಬೆಂಕಿ ಹಾಕುವ ಕೆಲಸ ಮಾಡುವುದು ಬೇಡ.

(ಗೊಂದಲ)

ಶ್ರೀ ಕೆ.ಗೋಪಾಲ್ ಪೂಜಾರಿ: ಅದನ್ನು ತಾವು ಮಾಡಬಾರದು.

(ಗೊಂದಲ)

ಶ್ರೀ ಕೆ.ಗೋಪಾಲ್ ಪೂಜಾರಿ: ಮಾನ್ಯ ಅಧ್ಯಕ್ಷರೆ, ಬೆಂಕಿ ಹಾಕುತ್ತಿರುವುದು ಬಿಜೆಪಿಯವರು. ನಾವಲ್ಲ.

(ಗೊಂದಲ)

ಶ್ರೀ ಬಿ.ರಮಾನಾಥ ರೈ: ಇವರು ತುಂಬಾ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಸಾಹಿತಿ ಆದ ಗಿರೀಶ್ ಕಾರ್ನಡ್‌ರವರು ಉದಾಹರಣೆ ಕೊಡುತ್ತಾ, ಕೆಂಪೇಗೌಡ ಅವರ ಹೆಸರನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತೆಗೆದು ಟಿಪ್ಪುಸುಲ್ತಾನನ ಹೆಸರು ಇಡಬೇಕೆಂದು ಹೇಳುತ್ತಾರೆ. ಇದನ್ನು ನಾವು ಒಪ್ಪಿಕೊಳ್ಳಬೇಕಾ? ಈ ಸದನದಲ್ಲಿ ಅಭಿಪ್ರಾಯವನ್ನು ಕೇಳಲಿ. ಹೆಸರನ್ನು ಬದಲಾಯಿಸಬೇಕೇ, ಟಿಪ್ಪುಸುಲ್ತಾನನ ಹೆಸರು ಇಡಬೇಕೇ? ಅಂಥ ಹೇಳಲಿ.

ಅಧ್ಯಕ್ಷರು: ಆಡಳಿತ ಪಕ್ಷದವರೆ ಅವರು ನಾನು ಕೊಟ್ಟಂಥ ಆಜ್ಞೆಯನ್ನು ಪರಿಪಾಲಿಸುತ್ತಿಲ್ಲ. ಈಗ ನಾನು ಅನಿವಾರ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನೀವು ದಯವಿಟ್ಟು, motion move ಮಾಡಿ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಅವರು ಹೇಳಲಿ. ಸರ್ಕಾರಿ ವೇದಿಕೆಯಲ್ಲಿ ಕೆಂಪೇಗೌಡರಿಗೆ ಅಪಮಾನ ಆಗುವಂಥ ಕೆಲಸ ನಡೆದರೆ ನಾವು ಸುಮ್ಮನಿರಬೇಕೇ? ಈ ಸದನ ಹೇಳಲಿ.

(ಗೊಂದಲ)

ಶ್ರೀ ಕೆ.ಗೋಪಾಲ್ ಪೂಜಾರಿ: ಈ ರಾಜ್ಯದಲ್ಲಿ ರಾಜಕೀಯ ಪಿತೂರಿ ಬೇಡ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ನಾಳೆ ದಿವಸ ಯಾರಾದರೂ ಕ್ರಿಶ್ಚಿಯನ್ ಓಟ್ ಬರುತ್ತದೆ ಎಂದು ರಾಬರ್ಟ್‌ಕ್ಲೈವ್ ಹೆಸರನ್ನು. . .

(ಗೊಂದಲ)

ಅಧ್ಯಕ್ಷರು: close. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರೆ, ಬಿಲ್ move ಮಾಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಆಗಿದೆ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಡಿಕೇರಿ ಬಗ್ಗೆ ಮಾತನಾಡುತ್ತೇವೆಂದು ಇಡೀ ಕಥೆಯೆಲ್ಲಾ ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ಬಿಲ್ move ಮಾಡಿ.

<u>ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು</u>

**ಕರ್ನಾಟಕ ಪಂಚಾಯತ್ ರಾಜ್( ಎರಡನೇ ತಿದ್ದುಪಡಿ)ವಿಧೇಯಕ, 2015**

**ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, 2015ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2015ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ)ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಬಿಲ್ ಚರ್ಚೆ ಆಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಂತ್ರಿಗಳು explain ಮಾಡಬೇಕು.

(ಗೊಂದಲ)

ಅಧ್ಯಕ್ಷರು: ಈಗ explain ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಖಂಡ ಖಂಡಕ್ಕೆ ಹೋಗ ುವುದಿಲ್ಲ. ಬೇಕಾದರೆ ಹೇಳಿ.

(ಮುಂದು. . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 / 5.40 (36) / JB-SSD

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇದು ಮಹತ್ವದ ಕಾನೂನು. ಇದನ್ನು ಬೇಕಾದರೆ ನಾಳೆ ಚರ್ಚೆಗೆ ಇಡಿ. ಕೆಲವರು ಮಾತನಾಡುವವರು ಇದ್ದಾರೆ. ಇದನ್ನು ಸ್ವಲ್ಪ ಮುಗಿಸಿಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾವು ಇವತ್ತು ಬೆಳಿಗ್ಗೆಯೂ ಸಹ ತಮ್ಮ ಛೇಂಬರ್‌ಗೆ ಬಂದು request ಮಾಡಿದ್ದೆವು. ಈಗ RDPRಗೆ ಕಾನೂನು ಏನು ಇದೆಯೆಲ್ಲಾ, ತಿದ್ದುಪಡಿ ತರುವುದನ್ನು ಬಹಳ ಸಮಗ್ರವಾಗಿ ಚರ್ಚೆ ಮಾಡಬೇಕಾಗುತ್ತದೆ. ನಿಜವಾಗಿಯೂ ಒಂದು ಹೊಸ ಕಾನೂನನ್ನು ತರಬೇಕಾಗುತ್ತದೆ. ಈ ಬಿಲ್‌ಅನ್ನು ನಾವು ಏನೂ ವಿರೋಧ ಮಾಡುವುದಿಲ್ಲ. ಇನ್ನೂ ಕೆಲವೊಂದು include ಮಾಡುವಂತಹದ್ದು, ತಿದ್ದುಪಡಿ ಮಾಡುವಂತಹದ್ದು ಇವೆ. ಕೆಲವು ಸಲಹೆ ಕೊಡುವಂತಹವು ಇವೆ. ಮಾನ್ಯ ರಮೇಶ್ ಕುಮಾರ್‌ರವರು ಹಿಂದೆ ಏನು ವರದಿ ಕೊಟ್ಟರು ಅದರ ಆಧಾರದ ಮೇಲೆ ಬಹಳಷ್ಟು ವಿಚಾರಗಳಿಗೆ amendment ತಂದಿದ್ದಾರೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಬೇಕಾಗುತ್ತದೆ. ನಿಜವಾಗಿಯೂ ನಾನು ಬೆಳಿಗ್ಗೆಯೂ ಸಹ ತಮ್ಮಲ್ಲಿ request ಮಾಡಿದ್ದೇನೆ. ಪಂಚಾಯಿತಿ act ಬಗ್ಗೆ ಒಂದೆರಡು ದಿವಸ ವಿಶೇಷ ಅಧಿವೇಶನ ಕರೆಯಿರಿ. ಬಹಳ ಸಮಗ್ರವಾಗಿ ಇದರ ಬಗ್ಗೆ ಚರ್ಚೆ ಮಾಡೋಣ. ನಾಳೆ ಹಾಗೂ ನಾಡಿದ್ದು ಎರಡು ದಿವಸಗಳು ಅಧಿವೇಶನವಿದೆ. ಶುಕ್ರವಾರವೂ ಸಹ ಅರ್ಧ ದಿವಸ ಅಧಿವೇಶನ ಇರುತ್ತದೆ. ಏನು ಚರ್ಚೆ ಮಾಡುವುದು? ಇದು ಇನ್ನೂ ಕೌನ್ಸಿಲ್‌ಗೆ ಹೋಗಬೇಕು.

ಶ್ರೀ ಗೋವಿಂದ ಎಂ.ಕಾರಜೋಳ: ಮೂರು ದಿವಸಗಳ ಕಾಲ ಸದನದ ಸಮಯ ವ್ಯರ್ಥವಾಗಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ಇನ್ನೂ ಒಂದು ವಾರ ಅಧಿವೇಶನವನ್ನು ಮುಂದಕ್ಕೆ ಹಾಕಿ. ಅದು ಇಲ್ಲದೇ ಈಗ ಸುಮ್ಮನೆ ಹರಿಬರಿಯಾಗಿ ಅವಸರದಲ್ಲಿ . . .

ಅಧ್ಯಕ್ಷರು: ಹಾಗೆ ಇದ್ದರೆ ಈಗ discussion ಶುರು ಮಾಡಿ. ಚರ್ಚೆಗೆ ಬೇಕಾದರೆ ನಾಳೆಯೂ ಸಮಯಾವಕಾಶ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದು ಒಂದು ದಿವಸದಲ್ಲಿ ಮುಗಿಯುವಂತಹದ್ದಲ್ಲ. ಇದರಲ್ಲಿ ಬಹಳ ಜನರು participate ಮಾಡುವವರಿದ್ದಾರೆ. ಇದು ಸಣ್ಣ ಬಿಲ್ ಆಗಿ ಐದು ನಿಮಿಷಗಳಲ್ಲಿ ಮುಗಿಸುವಂತಹದ್ದಲ್ಲ.

ಅಧ್ಯಕ್ಷರು: ನಾಯಕರೇ, ನನಗೆ ಇರುವಂತಹದ್ದು ಇವತ್ತು ಇದನ್ನು ಪೂರೈಸಬೇಕು. ಇನ್ನು ಎರಡು ದಿವಸಗಳಿದೆ. ವಿಧೇಯಕಗಳನ್ನು ಇಲ್ಲಿ ಮಂಡಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದನ್ನು ಒಪ್ಪಿಕೊಳ್ಳುತ್ತೇವೆ. ನಾವು ಇಲ್ಲಿ ಬಿಲ್‌ಅನ್ನು ವಿರೋಧ ಮಾಡುವಂತಹದ್ದಲ್ಲ. ಆದರೆ, ಬಹಳಷ್ಟು ವಿಚಾರದ ಬಗ್ಗೆ ನಾವು ಮಾತನಾಡಬೇಕಾಗಿದೆ. ಇದರಲ್ಲಿ ನಾನು ಒಬ್ಬನೇ ಅಲ್ಲ. ಬಹುಶ: . . .

ಅಧ್ಯಕ್ಷರು: ಈಗ ನೀವು ಮಾತನಾಡಿ. ಅವಶ್ಯಕತೆ ಇದ್ದರೆ ಸರ್ಕಾರವನ್ನು ಕೇಳುತ್ತೇವೆ. ಅವರು ಒಪ್ಪುವುದಾದರೆ ಮುಂದೆ ಹೋಗೋಣ. ಈಗ ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್: ಅವರು ಇನ್ನೂ explain ಮಾಡಬೇಕು. ಅವರು ಆ ಬಿಲ್‌ಅನ್ನು explain ಮಾಡಬೇಕು.

ಅಧ್ಯಕ್ಷರು: ಅವರು ಹೇಳುವುದನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ವಿಶೇಷವಾದಂತಹ ಅಧಿವೇಶನ ಕರೆಯಿರಿ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು . . .

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ್ ಶೆಟ್ಟರ್: ಇದಕ್ಕೆ ವಿಶೇಷವಾದಂತಹ ಅಧಿವೇಶನ ಕರೆಯಿರಿ. ಇದು ಹರಿಬರಿಯಲ್ಲಿ ಬಿಲ್ ಪಾಸ್ ಮಾಡುವಂತಹದ್ದಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಟಿಪ್ಪುಸುಲ್ತಾನ್ ಜಯಂತಿ ಬಗ್ಗೆ ಮಾತನಾಡುತ್ತಿಲ್ಲ. ಮಂದಿಯನ್ನು ಮುಧೋಳದಲ್ಲಿ ಜೈಲಿನಲ್ಲಿ ಹಾಕಿದ್ದಾರೆ. ಬಡವರೆಲ್ಲಾ ಜೈಲಿನಲ್ಲಿ ಹೋಗಿ ಕುಳಿತಿದ್ದಾರೆ. . . ಅದರ ಬಗ್ಗೆ 5 ನಿಮಿಷ ಮಾತನಾಡುವುದಕ್ಕೆ ಸಮಯಾವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಯಾವುದೂ ಬೇಡ. ಆ ವಿಷಯ close. ಹೇಳ್ರಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಆ ವಿಷಯ close ಆಗಿದೆ. ಮುಂದಿನ ವಿಷಯಕ್ಕೆ ಬಂದಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಸರ್ ನಾನು sign ಮಾಡಿದ್ದೇನೆ. ನಾನು sign ಮಾಡಿದವನು.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ದಯವಿಟ್ಟು ಸಹಕರಿಸಬೇಕು. ಮಾನ್ಯ ಅಧ್ಯಕ್ಷರೆ, . . .

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: 5 ನಿಮಿಷ ಕೊಡಿ.

(ಗೊಂದಲ)

ಅಧ್ಯಕ್ಷರು: ಇಲ್ಲ. ನೀವು ಹೇಳ್ರಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಎಲ್ಲಿ ಮಾತನಾಡಿದ್ದೇನೆ?

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಎಲ್ಲಾ ಸಂದರ್ಭದಲ್ಲಿಯೂ ಅವಕಾಶ ಕೊಟ್ಟಿದ್ದೇನೆ. ಸುಮ್ಮನಿರಿ. ಆಗುವುದಿಲ್ಲ. Close.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಅದು subject ಮುಗಿದು ಹೋಗಿದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ನಾನು ವಿವಾದಕ್ಕೆ ಹೋಗುವ ಮನುಷ್ಯನಲ್ಲ. 5 ನಿಮಿಷ ನಮ್ಮ ಊರಿನಲ್ಲಿ ನಡೆದ ಘಟನೆ ಬಗ್ಗೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಗ ಅದು close ಆಗಿದೆ. ದಯವಿಟ್ಟು ಅದನ್ನು ಒತ್ತಾಯ ಮಾಡಬೇಡಿ. Close ಆಗಿದೆ. ನೀವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಕಾರಜೋಳರವರೆ, subject ಮುಗಿದು ಹೋಗಿದೆ. ಮುಂದಿನ subject ಗೆ ನಾವು ಈಗ ಬಂದಿದ್ದೇವೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಬಡವರಿಗೆ ತೊಂದರೆಯಾಗಿದೆ.

(ಗೊಂದಲ)

ಅಧ್ಯಕ್ಷರು: ಬೇರೆ ಯಾವುದರಲ್ಲಿಯಾದರೂ ಕೊಡೋಣ. ಈಗ ಬಿಡಿ. ನೀವು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಕಾರಜೋಳರವರೆ, ಮುಂದಿನ subject ಗೆ ಬಂದಿದ್ದೇವೆ. ದಯಮಾಡಿ ಸಹಕರಿಸಿ. ಮತ್ತೆ clarification ನಲ್ಲಿ ಕೇಳಿ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಬೇರೆ ರೂಪದಲ್ಲಿ ಕೇಳಿ. ಈಗ ಆಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾಳೆ ಬೆಳಿಗ್ಗೆಯೇ ಕೊಡಿ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ತಮ್ಮ ಗಮನಕ್ಕೆ ತಂದ ಹಾಗೆ ಇದರ ಬಗ್ಗೆ ವಿವರವಾದಂತಹ ಚರ್ಚೆಯಾಗಬೇಕು ಎಂದು ಬಯಸಿದ್ದೀರಿ. ಚರ್ಚೆಯನ್ನು ಪ್ರಾರಂಭ ಮಾಡೋಣ. ಇವತ್ತು ಒಂದೆರಡು ಮೂರು ತಾಸು ಚರ್ಚೆ ಮಾಡೋಣ. ನಾಳೆ ಮುಂಜಾನೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯೂ ಸಹ ಮಾತನಾಡಿ, ಅಧ್ಯಕ್ಷರ ಹತ್ತಿರ ಮಾತನಾಡಿ ಸ್ವಲ್ಪ ಹೆಚ್ಚು ಕಡಿಮೆ time ಬೇಕಾದರೆ ಅದರ ಬಗ್ಗೆ ವಿಚಾರ ಮಾಡೋಣ. ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ . . .

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಂದು request ಮಾಡುವುದೇನೆಂದರೆ, ಬೆಳಿಗ್ಗೆಯೂ ಸಹ ತಮ್ಮ ಛೇಂಬರ್‌ಗೆ ಬಂದು request ಮಾಡಿದ್ದೇವೆ. ಇದು ಬಹಳ ಮುಖ್ಯವಾದಂತಹ ಬಿಲ್. ಆರ್.ಡಿ.ಪಿ.ಆರ್. ಕಾನೂನು ಏನಿದೆ ಅದು ಸಮಗ್ರವಾಗಿ ತಿದ್ದುಪಡಿಯಾಗಬೇಕು. ನಿಜವಾಗಿಯೂ ಹೊಸ ಕಾನೂನನ್ನು ತಂದಿದ್ದರೂ ಸಹ ಇದನ್ನು adopt ಮಾಡಿಕೊಳ್ಳುವಂತಹದ್ದು. ಆ ರೀತಿ ಮಹತ್ವದ ಚರ್ಚೆಯಿದ್ದಂತಹ ಸಂದರ್ಭದಲ್ಲಿ ಮತ್ತು basic ಆಗಿ ಕೆಲವೊಂದು ತಿದ್ದುಪಡಿಯನ್ನು ಏನು ತಂದಿದ್ದಾರೆ, ಅದಕ್ಕೆ ನಮ್ಮ ವಿರೋಧವಿಲ್ಲ. ಬಹಳಷ್ಟು ವಿಚಾರಗಳ ಬಗ್ಗೆ ನಾವೂ ಸ್ವಾಗತ ಮಾಡುತ್ತೇವೆ. ಹಿಂದೆ ಮಾನ್ಯ ರಮೇಶ್ ಕುಮಾರ್‌ರವರು ಇದರ ವರದಿ ಮಂಡನೆ ಮಾಡಿದಾಗ ಸಹ ನಾನು ಬೇಗನೆ ತನ್ನಿ ಎಂದು ಆವತ್ತು ನಾನು ಹೇಳಿದ್ದೆ. ಆವತ್ತು ನಾನು ಇದನ್ನು ಒತ್ತಾಯ ಮಾಡಿದ್ದೆ. ಹೀಗಾಗಿ ಈ ಬಿಲ್‌ಗೆ ವಿರೋಧವಿಲ್ಲ. ಒಂದು decentralization ವ್ಯವಸ್ಥೆ ಏನಿದೆ, ಅಧಿಕಾರ ವಿಕೇಂದ್ರೀಕರಣವೇನಿದೆ, ಗ್ರಾಮ ಪಂಚಾಯಿತಿ ವ್ಯವಸ್ಥೆ ಏನಿದೆ, ಅಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಏನಿದ್ದಾರೆ, ಕೆಳ ಹಂತದ ಜನಪ್ರತಿನಿಧಿಗಳು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಏನಿದ್ದಾರೆ, ಅವರಿಗೆ ಅಧಿಕಾರ ಕೊಡುವಂತಹದ್ದು ಹಾಗೂ ಅವರಿಗೆ ಇನ್ನು ಹೆಚ್ಚಿನ... ನನ್ನದು ಅದಕ್ಕೆ ಸಮಯ ಸಾಲುವುದಿಲ್ಲವೆನ್ನುವುದು ಒಂದೇ ಒಂದು ಕೊರಗು.

ಅಧ್ಯಕ್ಷರು: ಸಮಯ ಸಾಲದಿದ್ದರೆ ಮುಂದೆ ನೋಡೋಣ. ಚರ್ಚೆ ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಇನ್ನೊಂದು ದಿವಸ ಇದಕ್ಕೆ special ಅಧಿವೇಶನ ಕರೆಯಿರಿ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, . .

ಶ್ರೀ ಜಗದೀಶ್ ಶೆಟ್ಟರ್: ವಿಶೇಷ ಅಧಿವೇಶನವನ್ನು ಇದಕ್ಕೆ ಎಂದೇ ಕರೆಯಲಿ. ಯಾವುದೋ BBMP division ಮಾಡುವ ಸಲುವಾಗಿ ವಿಶೇಷ ಅಧಿವೇಶನ ಕರೆದಿದ್ದರು. ಇದಕ್ಕೆ ಕರೆಯಲಿ.

ಅಧ್ಯಕ್ಷರು: ಮಾನ್ಯ ನಾಯಕರೆ, ನೀವು ಚರ್ಚೆ ಪ್ರಾರಂಭ ಮಾಡಿ. ನಿಮ್ಮ ಚರ್ಚೆಯಿಂದ ಇನ್ನೂ ಅವಶ್ಯಕತೆಯಿದೆ ಎಂದರೆ, ಸರ್ಕಾರದವರು ನಿಮ್ಮ ಎದುರಿಗೇ ಇದ್ದಾರೆ. ಅವರನ್ನು ಕೇಳೋಣ.

ಶ್ರೀ ಗೋವಿಂದ ಎಂ.ಕಾರಜೋಳ: ನಾಳೆಗೆ ಮಾಡಿ ಸರ್.

ಶ್ರೀ ಜಗದೀಶ್ ಶೆಟ್ಟರ್: ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಬದಲಾವಣೆ ತರುವುದಕ್ಕೆ ಹೊರಟಿದ್ದೀರಿ. ನಿಜವಾಗಲೂ ಸ್ವಾಗತಾರ್ಹ. ಆದರೆ, ಎಲ್ಲರಿಗೂ ಚರ್ಚೆಗೆ ಅವಕಾಶ ಕೊಟ್ಟು, ಎಲ್ಲರ ಅಭಿಪ್ರಾಯ ತೆಗೆದುಕೊಂಡು ಇದನ್ನು ಮಾಡುವುದರಿಂದ ತಮಗೆ, ಸರ್ಕಾರಕ್ಕೆ, ಮುಖ್ಯಮಂತ್ರಿಗಳಿಗೆ ಗ ೌರವ ಹೆಚ್ಚುತ್ತದೆ. ಅಧ್ಯಕ್ಷರು ದಯಮಾಡಿ ಇದಕ್ಕೆ ಅವಕಾಶ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಮಾನ್ಯಮುಖ್ಯಮಂತ್ರಿಗಳು) : ಮಾನ್ಯ ಚೆಲುವರಾಯಸ್ವಾಮಿಯವರೆ, ಇದನ್ನು ಮಂಡಿಸಿಯೇ 5 ದಿನಗಳಾಗಿದೆ.

ಶ್ರೀಎನ್.ಚೆಲುವರಾಯಸ್ವಾಮಿ:ಆದರೆ ಚರ್ಚೆಗೆ ತೆಗೆದುಕೊಂಡಿರಲಿಲ್ಲವಲ್ಲಾ?

ಶ್ರೀ ಸಿದ್ದರಾಮಯ್ಯ: ಅದಕ್ಕೆ ಈಗ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀಎನ್.ಚೆಲುವರಾಯಸ್ವಾಮಿ: ಹಲವಾರು ಕಾರಣಗಳಿಂದ ತೆಗೆದುಕೊಂಡಿರಲಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಗೋವಿಂದ ಎಂ.ಕಾರಜೋಳ: ಸದನ ಮುಂದೆ ಹಾಕಿ. ಇನ್ನೂ ಮೂರು ದಿವಸಗಳು extend ಮಾಡಿ. ಮೂರು ದಿವಸ ಈಗ ಸದಸ್ಯರು ತೀರಿಕೊಂಡಿದ್ದಕ್ಕೆ ಹೋಗಿದೆ. ಇನ್ನು ಮೂರು ದಿವಸ ಮುಂದಕ್ಕೆ ನಡೆಸಿ.

ಶ್ರೀ ಸಿದ್ದರಾಮಯ್ಯ: election ಬರುತ್ತದೆ.

ಶ್ರೀ ಗೋವಿಂದ ಎಂ.ಕಾರಜೋಳ: extend ಮಾಡಿ.

ಶ್ರೀ ಸಿದ್ದರಾಮಯ್ಯ: election ಬಂದಿದೆ. electionಗೆ ಎಲ್ಲಾ ತಯಾರಾಗಬೇಕು.

ಶ್ರೀ ಎನ್.ಚೆಲುವರಾಯಸ್ವಾಮಿ: ಬೇಕಾದರೆ ಸೋಮವಾರ, ಮಂಗಳವಾರ ಎರಡು ದಿವಸ ಅದಕ್ಕೆ ಎಂದೇ ಮಾಡಿ.

ಅಧ್ಯಕ್ಷರು: ನಾಳೆ ಇಡೀ ದಿವಸ ಮಾಡೋಣ ಬಿಡಿ.

ಶ್ರೀ ಸಿದ್ದರಾಮಯ್ಯ: ನಾಳೆ ಇಡೀ ದಿನವೆಲ್ಲಾ ಮಾಡಿ.

ಅಧ್ಯಕ್ಷರು: ನಾಳೆ ಇಡೀ ದಿವಸ ಬೇಕಾದರೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಯಾರಾದರೂ ಚರ್ಚೆ ಪ್ರಾರಂಭ ಮಾಡಿ. ಪ್ರಾರಂಭವಾಗಲಿ. ಕಾರಜೋಳರವರೆ, ನೀವೇ ಪ್ರಾರಂಭ ಮಾಡಿ.

ಶ್ರೀ ಗೋವಿಂದ ಎಂ.ಕಾರಜೋಳ: ನಮ್ಮದು ಒಂದು ಸಣ್ಣ ಘಟನೆಯಾಗಿದೆ.

ಶ್ರೀ ಹೆಚ್.ಕೆ.ಪಾಟೀಲ್: ಆಮೇಲೆ ಕೇಳಿ. ನಾಳೆ ಅದನ್ನು ಕೇಳಿ. ಅಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾನೂನನ್ನು . . .

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, Point of order. ನಾನು basic ಆಗಿ ಈ ಪಂಚಾಯತ್ ಕಾನೂನಿನ ತಿದ್ದುಪಡಿಗೆ ವಿರೋಧವಿಲ್ಲವೆಂದು ಮೊದಲಿನಿಂದಲೂ ಹೇಳಿದ್ದೇನೆ. ಆದರೆ,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇವತ್ತು ಈ ಒಂದು MLC ಚುನಾವಣೆ ಏನಿದೆ, ಸ್ಥಳೀಯ ಸಂಸ್ಥೆಗಳಿಂದ ಆ ಗ್ರಾಮ ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಯ voters ಏನಿದ್ದಾರೆ, ಅದರದು ಇವತ್ತು election declare ಆಗಿದೆ ಹಾಗೂ calendar of events ಸಹ announce ಮಾಡಿದ್ದಾರೆ. ಯಾವಾಗಲೂ ಚುನಾವಣೆ declare ಆದಮೇಲೆ Code of Conduct start ಆಗುತ್ತದೆ. ಆಗ ಈ ಕಾನೂನಿನ ತಿದ್ದುಪಡಿಗಳೇನಿವೆ, ದಯವಿಟ್ಟು ತಾವು ಅದರ ಬಗ್ಗೆ ಅವಲೋಕನ ಮಾಡಿ. ನಾಳೆ ಅದು Code of Conduct violation ಆಗಬಾರದು. ಇದರ ಬಗ್ಗೆ ಸಹ ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಅದರ ಬಗ್ಗೆ . . .

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಶೆಟ್ಟರ್‌ರವರೆ, ಈ elections ಅನ್ನು ನಡೆಸುವುದು ದ್ವೈವಾರ್ಷಿಕ ಚುನಾವಣೆಗಳು ಎಂದು ಸಂವಿಧಾನಬದ್ಧವಾಗಿ Election Commission of Indiaದವರು ಮಾಡುವಂತಹದ್ದು. ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಆಯ್ಕೆ ಮಾಡುವುದಕ್ಕೆ ಮಾಡುವುದು. ನಾವು ತಂದಿರುವ ತಿದ್ದುಪಡಿ ಏನಿದೆ, ಸ್ಥಳೀಯ ಸಂಸ್ಥೆಗಳಿಗೆ ನಮ್ಮ ಪಂಚಾಯತ್ ರಾಜ್ ಶಾಸನ ಏನಿದೆ ಅದನ್ನು ತಿದ್ದುಪಡಿ ಮಾಡುವುದಕ್ಕೆ ತಂದಿದ್ದೇವೆ. ನಮ್ಮ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡುವುದಕ್ಕೆ ನಮ್ಮದೇ ಆದಂತಹ ಒಂದು State Election Commission ಇದೆ. ನಾವು State elections declare ಮಾಡದೇ ಇದ್ದರೆ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳು ಮಾಡಿದರೆ ನೀವು ಹೇಳುವುದು relevant ಆಗುತ್ತಿತ್ತು. Election Commission of India ಅದು. ಬಸವರಾಜ್ ಬೊಮ್ಮಾಯಿಯವರೆ, you bear with me. You are a very sensible person. Election Commission of India ಯಾವ್ಯಾವ ರಾಜ್ಯದಲ್ಲಿ Upper House ಇರುತ್ತದೆ, ಅಲ್ಲಿ biannual elections from local authorities ಮಾಡತಕ್ಕಂತಹ routine course ನಲ್ಲಿ ಮಾಡಿದ್ದಾರೆ. ನಮ್ಮ ಮುಂದೆ ಇರತಕ್ಕಂತಹ issue, it is relating to amendments to the Panchayath Raj act. They are two different things. Let us not mix up. ನೀವು ಹಾಗೆ ಹೇಳಿದರೆ, ಒಂದು voiceನಲ್ಲಿ ನಾವು support ಮಾಡುತ್ತೇವೆ ಎಂದು ಹೇಳುತ್ತೀರಿ. ಈಗ one month code of

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

conduct ಬರುತ್ತದೆ. ಇದು ಆದಮೇಲೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ elections ಬರುತ್ತದೆ. ಅದು ಆದಮೇಲೆ ಮಾಡುವುದಕ್ಕೆ ಕೆಲಸವಿರುವುದಿಲ್ಲ. ಈ ವರದಿಯನ್ನು ತೆಗೆದುಕೊಂಡು ತಿಪ್ಪೆಗೆ ಬಿಸಾಕುತ್ತೀರಿ. ದಯಮಾಡಿ please be sincere about it. Let us not take a stand which will send a wrong message outside. I am appealing to you with folded hands. Please be sincere about it.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ರಮೇಶ್ ಕುಮಾರ್‌ರವರು ಹೇಳಿದ್ದು ಕರೆಕ್ಟ್ ಇದೆ. biannual election, Central Election Commission ಮಾಡುತ್ತದೆ. ಇಲ್ಲಿ local body state ನಲ್ಲಿ ಇದೆ. ಇಲ್ಲಿ Election Commission ಯಾವುದು ಮಾಡುತ್ತದೆ ಎಂಬುದು important ಅಲ್ಲ. ಯಾವ voters, ಈಗ voters ಯಾರಿದ್ದಾರೆ, ಗ್ರಾಮ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯಿತಿ ಸದಸ್ಯರುಗಳೇ ಈ ಲೋಕಲ್ ಬಾಡಿಯಲ್ಲಿ MLC ಗಳಿಗೆ ವೋಟ್ ಹಾಕುತ್ತಾರೆ. ವೋಟರ್ಸ್ ಬಗ್ಗೆ, ಅವರ ಪವರ್ಸ್ ಬಗ್ಗೆ ನಾವು ಇಲ್ಲಿ amendment ಮಾಡಿ ಪವರ್ಸ್‌ಅನ್ನು ಕೊಡುವುದು, ಬಿಡುವುದು ಅದನ್ನು ನಾವು ಕಾನೂನನ್ನು ಪಾಸ್ ಮಾಡಿದರೆ, it will have its own effect on the elections. Therefore Election Code of Conduct ಅಡಿಯಲ್ಲಿ ಬರುತ್ತದೆ. ಯಾವುದೇ ಸಣ್ಣ Government ನ ಒಂದು ಸಣ್ಣ ನಲ್ಲಿಯನ್ನು ನಾವು open ಮಾಡುವುದಕ್ಕೆ ಬಿಡುವುದಿಲ್ಲ. ಅಂತಹದ್ದರಲ್ಲಿ ಅವರ ಪವರ್ಸ್‌ಅನ್ನು ಕೊಡುವುದಕ್ಕೆ ನಾವು ಇವತ್ತು ಇಲ್ಲಿ ಮಾಡುತ್ತೇವೆಂದರೆ, ಖಂಡಿತವಾಗಿಯೂ it will attract it. ಅದಕ್ಕೆ ಇದರ ಬಗ್ಗೆ ನೀವು ನಾಳೆ Election Commissioner ಜೊತೆಗೆ ಮಾತನಾಡಿ ಇದಕ್ಕೆ ಅವರು allow ಮಾಡಿದರೆ ಮಾಡಬಹುದು. ನಮ್ಮದು ಏನೂ ತಕರಾರಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಸರ್, ನಾನು ಇನ್ನೊಂದು ವಿನಂತಿ ಮಾಡುತ್ತೇನೆ. ಈ ಬಿಲ್‌ಅನ್ನು ಸದನದಲ್ಲಿ ಯಾವಾಗ introduce ಮಾಡಿದ್ದೀರಿ? ಈ ಬಿಲ್‌ಅನ್ನು introduce ಮಾಡಿದ ದಿವಸ elections declare ಆಗಿತ್ತಾ? ಈ ಸದನದ ಸಾರ್ವಭೌಮತ್ವ ಏನಾಗುತ್ತದೆ? ಅವರು ಏನು



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ನಿಮ್ಮನ್ನು ಕೇಳಿ election declare ಮಾಡಬೇಕಾಗಿಲ್ಲ. ಆದರೆ, ನಿಮ್ಮ ಮುಂದೆ ಇರತಕ್ಕಂತಹ ಕೆಲಸವನ್ನು ತಾವು ಮುಗಿಸಬೇಕೋ ಬೇಡವೋ?

ಶ್ರೀ ಬಸವರಾಜ್ ಬೊಮ್ಮಾಯಿ: ಕಾಮಗಾರಿ sanction ಆಗಿದ್ದನ್ನೇ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್: Sir, it is a right of this House. This matter was brought before the Chair . .

ಶ್ರೀ ಬಸವರಾಜ್ ಬೊಮ್ಮಾಯಿ: ಕನಕಜಯಂತಿ ಮಾಡುವುದಕ್ಕೆ ಈಗ ಅಡ್ಡಿ ಬಂದಿದ್ದಾರೆ. ಕನಕಜಯಂತಿ ಒಂದು ವರ್ಷದ ಮುಂಚೆಯೇ fix ಆಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: No way. ನೋಡಿ ತಮ್ಮ ಅಧಿಕಾರ ಈ ಸದನದ ಅಧಿಕಾರವನ್ನು ಮೊಟಕುಗೊಳಿಸಿದಂತಾಗುತ್ತದೆ. ಈ ಬಿಲ್‌ಅನ್ನು, ಮಸೂದೆಯನ್ನು ಮಂಡನೆ ಮಾಡಿದ ದಿವಸ ಚುನಾವಣೆ declare ಆಗಿರಲಿಲ್ಲ.

ಅಧ್ಯಕ್ಷರು: ಈಗ ಒಂದು apprehension ಏನೆಂದರೆ, ಆ ಕೌನ್ಸಿಲ್ election ಗೆ ಪಂಚಾಯಿತಿಯ . .

ಶ್ರೀ ಕೆ.ಜಿ.ಬೋಪಯ್ಯ: ಅವರಿಗೆ ಬೇಕಾದಂತಹ ಅನುಕೂಲ ಇದನ್ನೆಲ್ಲಾ ಕೊಡುತ್ತಿದ್ದೇವೆ. it will be directly . .

ಅಧ್ಯಕ್ಷರು: ಬೋಪಯ್ಯನವರೆ, ಕೇಳಿ. ಪಂಚಾಯಿತಿ ತನ್ನ MLC electionಗೆ ನಮ್ಮ ಪಂಚಾಯಿತಿಯ ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿಯ ಸದಸ್ಯರು ಹಾಗೂ ಜಿಲ್ಲಾ ಪಂಚಾಯಿತಿಯ ಸದಸ್ಯರು ವೋಟರ್ಸ್ ಆಗಿರುತ್ತಾರೆ.

(ಮುಂದು . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದಿ:25-11-2015-05.50(37)-ಜೆ.ಎಲ್ & ವಿ.ಆರ್

ಅಧ್ಯಕ್ಷರು: ಎಂ.ಎಲ್.ಸಿ ಚುನಾವಣೆಗೆ ನಮ್ಮ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರು, ಜಿಲ್ಲಾ ಪಂಚಾಯತ್ ಸದಸ್ಯರು voters. ಈ ತಿದ್ದುಪಡಿ ಮಸೂದೆಯಿಂದ ನೇರವಾಗಿ ಪಂಚಾಯತ್ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳು ವಿಶೇಷವಾಗಿ ಪ್ರಸ್ತಾಪವಾಗಿದೆ. ಈ ತಿದ್ದುಪಡಿಯಿಂದ ಆ voters ಮೇಲೆ ಏನಾದರೂ influence ಆಗಬಹುದಾ ಎಂಬ ಪ್ರಶ್ನೆಯಾಗಿದೆ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, influence ಯಾವಾಗ ಆಗುತ್ತದೆ? ರಾಜಕೀಯವಾಗಿ ತೆಗೆದುಕೊಂಡು, ಪಕ್ಷದ ಬೇಸಿಸ್ ಮೇಲೆ ಹೋಗಿ majority ಇಟ್ಟುಕೊಂಡು division press ಮಾಡಿ ನಾವು ಮಾಡಬೇಕು ಎಂದು ಹೇಳಿದಾಗ influence ಆಗುತ್ತದೆ. ನಿಮ್ಮೆಲ್ಲರನ್ನು consult ಮಾಡಿದ್ದೇವೆ, ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ, ಇದಕ್ಕೆ ಎಲ್ಲಾ ಪಕ್ಷದವರು ಒಪ್ಪಿಕೊಂಡಿದ್ದು, ಬೆಂಬಲಿಸುತ್ತೇವೆಂದು ನೀವೇ ಹೇಳುತ್ತಿದ್ದೀರಿ. Benefit ಆಗುವುದಾದರೆ ನಿಮಗೂ ಆಗುತ್ತದೆ, ಇಡೀ ರಾಜ್ಯಕ್ಕೆ benefit ಆಗುವಂತಹದ್ದು, it is not to any party, you have been impleaded as parties ನೀವೆಲ್ಲರೂ ಕೂಡ ಸಹಕಾರ ಕೊಟ್ಟ ನಂತರವೇ ಇದನ್ನು ಮಾಡಿರುವುದು. ಆ ಪ್ರಶ್ನೆಯೇ ಉದ್ಭವವಾಗುವುದಿಲ್ಲ. Personal mileage, advantage ತೆಗೆದುಕೊಳ್ಳುವಂತಹ ಪ್ರಶ್ನೆ ಬರುವುದಿಲ್ಲ.

(ಗೊಂದಲ)

ಶ್ರೀ ಜಿ.ಹೆಚ್.ಶ್ರೀನಿವಾಸ: ಎರಡು ದಿನ ಮುಂಚೆ ಪ್ರಸ್ತಾಪವಾಗಿದ್ದರೆ ಏನು ಮಾಡುವುದಕ್ಕೆ ಆಗುತ್ತಿರಲಿಲ್ಲ. ಈ ಬಿಲ್ ಮಂಡನೆ ಮಾಡಿ ಐದು ದಿವಸಗಳಾಯಿತು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು ಬುದ್ಧಿವಂತರು ಅವರು ಯಾವ ರೀತಿ ಬೇಕಾದರೂ ಕೂಡ present ಮಾಡುವ ಸಾಮರ್ಥ್ಯವಿರುವವರು. ಎಲ್ಲರೂ ಒಪ್ಪಿಕೊಳ್ಳುತ್ತಿಲ್ಲವೆಂಬ ಕಾರಣಕ್ಕೋಸ್ಕರವೇ ಸಲಹೆಗಳನ್ನು ಕೇಳಿ ಎಂದು ಹೇಳುತ್ತಿರುವುದು. ಎಲ್ಲರೂ ಒಪ್ಪಿಕೊಂಡರೆ ಸಲಹೆ ಕೇಳಬೇಕಾದ ಅವಶ್ಯಕತೆಯಿಲ್ಲ. ಚುನಾವಣಾ ಆಯುಕ್ತರ ಸಲಹೆ ಕೇಳಿ ಅವರು ಮಾಡಬಹುದೆಂದರೆ ಅದರ ಪ್ರಕಾರ ನಾಳೆ present ಮಾಡಿ. ಒಂದು ದಿನದಲ್ಲಿ ಏನಾಗುತ್ತದೆ?

(ಗೊಂದಲ)

ಶ್ರೀ ಜಿ.ಹೆಚ್.ಶ್ರೀನಿವಾಸ: ಈ ವಿಧೇಯಕವನ್ನು ಮಂಡನೆ ಮಾಡಿ ಐದು ದಿನಗಳಾಗಿದ್ದು, ಇದು ಈಗ ೀ ಆಗಲೇಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾವೇ ಇದರ ನೇತೃತ್ವ ವಹಿಸಿಕೊಂಡು code of conduct effect ಇದರ ಮೇಲೆ ಹೇಗೆ ಆಗುತ್ತದೆಂಬ ಬಗ್ಗೆ ತಾವೇ ಚುನಾವಣಾ ಆಯುಕ್ತರು ಹಾಗೂ ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಪರಾಮರ್ಶೆ ಮಾಡಿ ನಾಳೆಯಾದರೂ ಈ ವಿಷಯವನ್ನು ತೆಗೆದುಕೊಳ್ಳಿ. ನಾವೇನು ಬೇಡವೆಂದು ಹೇಳುತ್ತಿಲ್ಲ. ನಾಳೆಯಾದರೂ ತೆಗೆದುಕೊಳ್ಳಿ. ಸತ್ಯಾಸತ್ಯಾತೆಯನ್ನು ತಾವೇ ನೋಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ವಿಶ್ವೇಶ್ವರಯ್ಯ ಹೆಗಡೆ ಕಾಗೇರಿಯವರೆ, ಚುನಾಯುತ ಪ್ರತಿನಿಧಿಗಳಿಗೆ ಅಧಿಕಾರ ಕೊಡಬಾರದು ನಮ್ಮ ಕೈಯಲ್ಲಿ ಇರಬೇಕೆಂಬ ಪಟ್ಟನ್ನು ಅವರು ಹಿಡಿದುಕೊಂಡು ಅವರ ಮೇಲೆ ಸಂಘರ್ಷ ಮಾಡಿ ಜನಪ್ರತಿನಿಧಿಗಳಿಗೆ ಅಧಿಕಾರ ಹೋಗಬೇಕೆಂದು ನಾವು ಈ ತಿದ್ದುಪಡಿ ತಂದರೆ ನೀವು Chief Secretary ರವರನ್ನು ಕೇಳಿ ಎಂದು ಸಲಹೆ ಕೊಡುವುದು ಬಹಳ ಚನ್ನಾಗಿದೆ.

(ಗೊಂದಲ)



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾನು ಪ್ರಸ್ತಾಪ ಮಾಡುತ್ತಿರುವುದು code of conduct ವಿಷಯ. ಈ ವಿಷಯವನ್ನು Election Commission and Chief Secretary ಯವರನ್ನು ಕರೆದು ಕೇಳಿ.

(ಗೊಂದಲ)

Sri K.R.Ramesh Kumar: This reveals your commitment.

ಶ್ರೀ ಸಿ.ಟಿ.ರವಿ: Code of conduct ಇದ್ದಾಗ ಏನು ಬೇಕಾದರೂ ಮಾಡಬಹುದೆಂಬುದು ಅವರ ಆಶಯವಾದರೆ ಮಾಡಿ.

(ಗೊಂದಲ)

SRI K.G.BOPAIAH: ...it indirectly influence the voters ಅಷ್ಟೆ.

ಶ್ರೀ ಹೆಚ್.ಕೆ.ಪಾಟೀಲ್: ಬೋಪಯ್ಯರವರೆ ನಾನು ತಮ್ಮ ಪ್ರಶ್ನೆಗೆ ಉತ್ತರ ಹೇಳುವುದಾದರೆ ನಾನು ಇವತ್ತು ಅದನ್ನು ಮಂಡನೆ ಮಾಡುತ್ತಿದೆ. ಸರ್ಕಾರದ ವಿಚಾರವನ್ನು ಇವತ್ತು ಬಹಿರಂಗಗ ೊಳಿಸುತ್ತಿದ್ದೆ ಎಂದರೆ ನೀವು ಹೇಳುವ ವಾದವನ್ನು ಸ್ವಲ್ಪ ಕೇಳುವುದಕ್ಕಾದರೂ ಸರಿಯೇನೋ ಎಂದು ಅನಿಸುತ್ತಿತ್ತು. ಆದರೆ ಈಗಾಗಲೇ ಈ ಒಂದು ಮಸೂದೆಯ ತಿದ್ದುಪಡಿಯನ್ನು ಮಂಡನೆ ಮಾಡಿದ್ದೇವೆ. ಮಂಡನೆ ಮಾಡಿ it has become the property of the House ನಂತರ ಇದನ್ನು ಪರ್ಯಾಲೋಚನೆ ಮಾಡುವುದಕ್ಕೆ ಈಗಾಗಲೇ move ಮಾಡಿದ್ದೇನೆ. ಆ ಸಮಯದಲ್ಲಿ ತಾವೆಲ್ಲರೂ ಈ ಬಗ್ಗೆ ವಿಶೇಷವಾಗಿ ಕಳಕಳಿ ವ್ಯಕ್ತಪಡಿಸಿ, ಪ್ರೋತ್ಸಾಹಕರವಾದ ಮಾತುಗಳನ್ನು ಹೇಳಿದ್ದೀರಿ. ಈಗ ಚರ್ಚೆ ಮಾಡುವ ಕಾಲದಲ್ಲಿ ಹೀಗೆ ಆಗಬಹುದೇ ಎಂದು ಹೇಳಿ ಯಾವುದೇ ರೀತಿಯ ಆತಂಕಪಡುವುದಕ್ಕೆ ಕಾರಣವಿಲ್ಲ. ಈಗ ಾಗಲೇ ಈ ಮಸೂದೆ ಮಂಡನೆಯಾಗಿದೆ. ಇದು ಚರ್ಚಾ ವಸ್ತುವಾಗಿದೆ ಆದ್ದರಿಂದ, ಚರ್ಚೆ ಮಾಡಿ ಇದಕ್ಕೆ ನಿಮ್ಮ ಬೆಂಬಲ ಕೊಟ್ಟು ಈ ಮಸೂದೆಯನ್ನು ತಿದ್ದುಪಡಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ, point of order ಅನ್ನು ಯಾವ ಹಂತದಲ್ಲಿಯಾದರೂ ಮಾನ್ಯ ಸದಸ್ಯರುಗಳು raise ಮಾಡುವುದಕ್ಕೆ ಅವಕಾಶವಿದೆ. ಇದು ನೇರವಾಗಿ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಂತಹ ತಿದ್ದುಪಡಿ ಮಸೂದೆಯಾಗಿದೆ. ಈ ಮಸೂದೆಯನ್ನು ನಾವು ಈಗ ತರುವುದರಿಂದ ನಮ್ಮ ಮತದಾರರ, ಏಕೆಂದರೆ ಈ voters ಅವರು, ಅವರ ಮೇಲೆ ಪ್ರಭಾವ ಬೀರುತ್ತದೆಯೇ ಹೇಗೆ ಎಂಬುದು ಒಂದೇ ಒಂದು ಸಂಶಯ ಅಷ್ಟೆ..

(ಗೊಂದಲ)

ಶ್ರೀ ಜಿ.ಹೆಚ್.ಶ್ರೀನಿವಾಸ: ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಐದು ದಿನಗಳ ಮುಂಚೆಯೇ ಮಂಡನೆ ಮಾಡಿರುವುದು.

(ಗೊಂದಲ)

ಶ್ರೀ ಆನಂದ @ ವಿಶ್ವನಾಥ್ ಚಂದ್ರಶೇಖರ್ ಮಾಮನಿ: ಮೂರು ತಿಂಗಳಿಂದ ಕಾಮಗಾರಿ ಮಂಜೂರಾಗಿರುತ್ತವೆ, ಕಾರ್ಡ್ ಪ್ರಿಂಟ್ ಮಾಡಿರುತ್ತೇವೆ, ಆಗ ತೆಗೆಯುತ್ತಾರೆ.

ಅಧ್ಯಕ್ಷರು: ಸ್ವಲ್ಪ ಇರಿ ಶ್ರೀನಿವಾಸ್ ನೀವು ಹೇಳಿ.

ಶ್ರೀ ಜಿ.ಹೆಚ್.ಶ್ರೀನಿವಾಸ: ಈ ವಿಧೇಯಕವನ್ನು ಐದು ದಿವಸಗಳ ಮಂಡನೆ ಮಾಡಿದ್ದು, ಈಗಾಗಲೇ ಪರ್ಯಾಲೋಚನೆಗೆ ಬಂದಿದೆ. ಈಗ ಇದರ ಬಗ್ಗೆ ಚರ್ಚೆ ಮಾಡಿ ಅನುಮೋದನೆ ಮಾಡುವುದರಲ್ಲಿ ತಪ್ಪೇನಿಲ್ಲ. ಚುನಾವಣೆ ಬಂದ ನಂತರವೇನಾದರೂ ನಾವು ಮಂಡನೆ ಮಾಡಿದ್ದರೆ ತಪ್ಪಾಗುತ್ತಿತ್ತು. ಈ ವಿಧೇಯಕ ತಿದ್ದುಪಡಿಯಿಂದ ರಾಜ್ಯದ ಎಲ್ಲರಿಗೂ ಒಳ್ಳೆಯದಾಗುತ್ತದೆ ಆದ್ದರಿಂದ ಇದು ಆಗಲೇಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಎಂ.ಟಿ.ಕೃಷ್ಣಪ್ಪ: ಇದು voters ಮೇಲೆ influence ಆಗುತ್ತದೆ.

(ಗೊಂದಲ)

ಶ್ರೀ ಜಿ.ಹೆಚ್.ಶ್ರೀನಿವಾಸ: ಇದನ್ನು ಈಗಾಗಲೇ ಮಂಡನೆ ಮಾಡಿರುವುದರಿಂದ ಇದರ ಮೇಲೆ ಚರ್ಚೆ ಮಾಡಿ ಅನುಮೋದನೆ ಆಗಬೇಕು. ಈಗ Election Commission ಕೇಳಿದರೆ ತಪ್ಪಾಗುತ್ತದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:ನಾವು point of order raise ಮಾಡಿದ್ದೇವೆ. ಈ ಬಗ್ಗೆ ಚರ್ಚೆ ಮಾಡಿ ನಾಳೆ ಬೆಳಿಗ್ಗೆ ನಿರ್ಣಯ ಕೊಟ್ಟರೆ, code of conduct apply ಆಗುವುದಿಲ್ಲವೆಂಬುದು ತಮ್ಮ ಅಭಿಪ್ರಾಯವಾದರೆ ಚರ್ಚೆ ಮಾಡೋಣ.

ಅಧ್ಯಕ್ಷರು: ನಾನು ಇನ್ನೂ fully convince ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಇದರ ಬಗ್ಗೆ ನಾಳೆ ಬೆಳಿಗ್ಗೆ ನಿರ್ಧಾರ ಕೈಗೊಂಡು code of conduct ಗೆ ಬರುವುದಿಲ್ಲ ಚರ್ಚೆ ಮಾಡೋಣವೆಂದರೆ ಚರ್ಚೆ ಮಾಡೋಣ. ಈ ಸಂಬಂಧ ತಾವು ನಿರ್ಣಯ ತೆಗ ೆದುಕೊಳ್ಳಿ.

ಅಧ್ಯಕ್ಷರು: ... ಈ privilege ಏನಾಗುತ್ತದೆಂಬುದನ್ನು ಸ್ವಲ್ಪ consult ಮಾಡಿ ಮಾಡಬೇಕೆಂಬುದು ನನ್ನ ಅಭಿಪ್ರಾಯ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನನ್ನ ಮಾತನ್ನು ಗಮನಿಸಬೇಕು, this is not going to complete the process. ಇಲ್ಲಿ ಚರ್ಚೆಯಾಗುತ್ತದೆ ನೀವು ಪಾಸ್ ಮಾಡಿಕೊಡುತ್ತೀರಿ. ಅದಾದ ನಂತರ ಕೂಡ ಇದು ಮೇಲ್ಮನೆಗೆ ಹೋಗುತ್ತದೆ. ಮೇಲ್ಮನೆಯಲ್ಲಿ ಚರ್ಚೆ ಆಗುತ್ತದೆ. ಮೇಲ್ಮನೆಯಲ್ಲಿ ಪಾಸ್ ಆಗುತ್ತದೆ. ಅದಾದ ನಂತರ incomplete ಇರುತ್ತದೆ. ಮಾನ್ಯ ರಾಜ್ಯಪಾಲರ ಬಳಿ ಹೋಗಿ ಅವರಿಂದ ಅಂಕಿತವಾಗುವ ಸಂದರ್ಭದಲ್ಲಿ ಆಗುತ್ತದೆ. ಆದ್ದರಿಂದ ಇಲ್ಲಿ ಚರ್ಚೆ ಮಾಡುವುದಾಗಲಿ, ಪಾಸ್ ಮಾಡುವುದಾಗಲಿ , ಯಾವುದೇ ಕಾರಣಕ್ಕೂ ನಮ್ಮ code of conduct ಅನ್ನು ನಾವು ಉಲ್ಲಂಘಿಸಿದ ಹಾಗೆ ಆಗುವುದಿಲ್ಲ. ಆದಕಾರಣ, ದಯಮಾಡಿ ಈ ಚರ್ಚೆಗೆ ಈಗಾಗಲೇ ಒಪ್ಪಿಕೊಂಡಿದ್ದೀರಿ ......

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ಹೆಚ್.ಕೆ. ಪಾಟೀಲ್ ರವರೆ ಇದು voters ಮೇಲೆ influence ಆಗುತ್ತದೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ: ಇದನ್ನು Election Commission ಹೇಳಬೇಕು, ಸಚಿವರು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಗುದ್ದಲಿ ಪೂಜೆಯನ್ನು ಕೂಡ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿ ಕೆಲಸ ಪ್ರಾರಂಭ ಮಾಡುವುದಿಲ್ಲ, ಗುದ್ದಲಿ ಪೂಜೆಯಿರುತ್ತದೆ.

ಅಧ್ಯಕ್ಷರು: ಮಂತ್ರಿಗಳೇ, ಮತದಾರರಿಗೆ ದುಡ್ಡನ್ನು ಕೊಟ್ಟರೂ ಅಪರಾಧವಾಗುತ್ತದೆ, ಕೊಡುವುದಕ್ಕೆ ಹೋದರು ಅಪರಾಧವಾಗುತ್ತದೆ.

ಶ್ರೀ ಸಿ.ಟಿ.ರವಿ: ಕೊಡುತ್ತೇನೆಂದು ಆಮಿಷ ಒಡ್ಡಿದರು ಅಪರಾಧವಾಗುತ್ತದೆ.

ಅಧ್ಯಕ್ಷರು: ಗೊತ್ತಾಯಿತೆ? It is clear case ಅದರೊಳಗೆ ಏನು ಭಿನ್ನಾಭಿಪ್ರಾಯ ಇಲ್ಲ. ಏನಾದರೂ ಇದರ ಚರ್ಚೆಯನ್ನು ಈಗ ನಾವು ಮಾಡುವುದರಿಂದ ಏಕೆಂದರೆ ಅವರೆಲ್ಲಾ ಇದಕ್ಕೆ connected voters, ಅವರ ಮೇಲೆ ಏನಾದರೂ ಪರಿಣಾಮ ಬೀರುತ್ತದೆಯೇ ಎಂಬ ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸ್ವಲ್ಪ legal ಆಗಿ ಮಾಡಿಕೊಳ್ಳುವುದು ಒಳ್ಳೆಯದೆಂಬುದು ನನ್ನ ಅನಿಸಿಕೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಸಮಯ ಆರು ಗಂಟೆಯಾಗಿದೆ. ನಾಳೆ ಬೆಳಿಗ್ಗೆ ಹೇಳಿ ಎಂದು ನಾವು ಹೇಳುತ್ತಿದ್ದೇವೆ. ಇದನ್ನು ಈಗ ಆರು ಗಂಟೆಗೆ ತೆಗೆದುಕೊಂಡು ಇನ್ನೇನು ಆಗುವುದಿದೆ. ಬೆಳಿಗ್ಗೆ AG or Chief Secretary ಯಾರನ್ನು consult ಮಾಡಬೇಕೋ ಮಾಡಿಕೊಂಡು ಮಾಡಿ, ಇದು ನಿಮ್ಮ ವಿವೇಚನೆಗೆ ಬಿಟ್ಟ ವಿಷಯ.

ಅಧ್ಯಕ್ಷರು: ಇದನ್ನು ಮಧ್ಯದಲ್ಲಿ ನಿಲ್ಲಿಸುತ್ತೇನೆ. ಈ ವಿಷಯವನ್ನು ನಾಳೆ ಮೊದಲೇ ಹಾಕಿಕೊಳ್ಳೋಣ. ಈಗ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ತೆಗೆದುಕೊಳ್ಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: Election Commission ಅಭಿಪ್ರಾಯ ತೆಗೆದುಕೊಂಡು ಮಾಡಿ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯನ್ನು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಮೊದಲು ವಿಧೇಯಕವನ್ನು ಮುಗಿಸುತ್ತೇನೆ.

ಶ್ರೀ ವಿ.ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಕಸ್ತೂರಿ ರಂಗನ್ ವಿಷಯವನ್ನು ತೆಗ ೆದುಕೊಳ್ಳಬೇಕಿತ್ತು.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

(ಗೊಂದಲ)

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ, ನೀವು ನೋಟಿಸ್ ಏನಾದರೂ ಕೊಡಬೇಕಲ್ಲವೇ?

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್: ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು: ನೋಟಿಸ್ ಇದೆಯೇ? ಹಾಗಾದರೆ ನಾಳೆ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಿಯಮ 69ರ ಅಡಿಯಲ್ಲಿ ಮಹದಾಯಿ ವಿಚಾರವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಮಂತ್ರಿಗಳೇ ನೀವು ಹೇಳಿ, ನೀವು ಮೂವ್ ಮಾಡಿ. ಶಾಸನವಿದೆ ಮೊದಲು ಇದನ್ನು ಪೂರೈಸುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.


ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಪರ್ಯಾಲೋಚನಾ ಪ್ರಸ್ತಾವ**

**ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ 2015**

**ಶ್ರೀ ಬಿ.ರಮಾನಾಥ ರೈ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):** ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಬಿ.ರಮಾನಾಥ ರೈ: ಕರ್ನಾಟಕ ಅರಣ್ಯ ಅಧಿನಿಯಮ, 1963 ರ ಪ್ರಕರಣದ 98ರಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆಯೆಂದು ಇದ್ದು, ಅದರಲ್ಲಿ 8% ಮತ್ತು 18% ಎಂದಿದೆ. ಕೈಗಾರಿಕೆಯಲ್ಲಿ 18% ಇತರೆ 8% ತೆರಿಗೆಯನ್ನು ನಮ್ಮ ಅರಣ್ಯ ಪ್ರದೇಶದಲ್ಲಿ ಅಭಿವೃದ್ಧಿ ಮಾಡುವಾಗ ತೆಗೆದುಕೊಳ್ಳುವುದು, ಇದು ಎರಡು ಇತ್ತು ಇದನ್ನು ಒಂದು ಮಾಡಬೇಕೆಂದು actually 18% ಕ್ಕೆ ತಿದ್ದುಪಡಿ ತರುತ್ತಿದ್ದೇವೆ. ಉದ್ದೇಶವೇನೆಂದರೆ, afforestation ಗೆ ಸೀಮಿತ ಅರಣ್ಯಕ್ಕೆ ನೆಡುತೋಪು ನೆಡುವುದಕ್ಕೆ ಮಾತ್ರ ಅದನ್ನು ಉಪಯೋಗ ಮಾಡುತ್ತಿದ್ದು, ಇದನ್ನು ಎಲ್ಲದಕ್ಕೂ ಅನ್ವಯ ಮಾಡಬೇಕೆಂದು ಇದೆ. ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸುವುದು ಮಾತ್ರವಿತ್ತು. ಅಧಿಸೂಚಿತ ಅರಣ್ಯ ಪ್ರದೇಶಗಳ ಗಡಿಗಳನ್ನು ಗುರುತಿಸುವುದು. ಅರಣ್ಯ ಒಟ್ಟುಗೂಡಿಸುವುದು, ಖಾಸಗಿ ಭೂಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವುದು, ಸಿಬ್ಬಂದಿಗಳಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅರಣ್ಯ ನಿವಾಸಗಳ ರಚನೆ ಮತ್ತು ನಿರ್ವಹಣೆ, ತರಬೇತಿ, ಸಾಮರ್ಥ್ಯ ವೃದ್ಧಿ, ಸಂಶೋಧನೆ ಮತ್ತು ತಂತ್ರಜ್ಞಾನ ಬಳಸಿಕೊಳ್ಳುವುದು.

(ಮುಂದು......)

ದಿನಾಂಕ: 25-11-2015-06.00(38) AJ/VR

ಶ್ರೀ ಬಿ. ರಮಾನಾಥ್ ರೈ ( ಮಾನ್ಯ ಅರಣ್ಯ ಸಚಿವರು) (ಮುಂದು . . . )

ಜಂಟಿ ಅರಣ್ಯ ಯೋಜನೆಯನ್ನು ಅರಣ್ಯ ಅಭಿವೃದ್ಧಿ ಮತ್ತು ಪರಿಸರ ಸಮಿತಿಯು ನಿರ್ವಹಿಸುವುದು, ಅರಣ್ಯ ಪ್ರದೇಶ ಜನರ ಪುನರ್ವಸತಿಗೂ ಸಹ ಈ ಹಣವನ್ನು ಉಪಯೋಗ ಮಾಡುವಂತಹದ್ದು. ಅರಣ್ಯ ಅಭಿವೃದ್ಧಿ ನಿರ್ವಹಣೆ, ವನ್ಯ ಜೀವಿ ರಕ್ಷಣೆ ಹಾಗೂ ರಾಜ್ಯ ಸರ್ಕಾರ ಕಾಲಕಾಲಕ್ಕೆ ಸೂಚಿಸುವಂತಹ ಕಾರ್ಯಗಳಿಗೆ ಈ ಹಣವನ್ನು ಬಳಸಿಕೊಳ್ಳುವ ಬಗ್ಗೆ ತಿದ್ದುಪಡಿಯನ್ನು ತರಲಾಗಿದೆ. ಅರಣ್ಯ ತೆರಿಗೆಯನ್ನು ಹೆಚ್ಚಿಸಿ, ಇದರ ಉಪಯೋಗವನ್ನು ಎಲ್ಲಾ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು. ಕೇವಲ ನೆಡು ತೋಪಿಗೆ ಮಾತ್ರ ಇದ್ದ ಕಾರಣದಿಂದ ಹಣವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ತೆರಿಗೆ ಸಂಗ್ರಹವಾಗಿ ರುವಂತಹ ಸಾಕಷ್ಟು ಹಣ ನಮ್ಮ ಕಡೆಯಿತ್ತು. ಆ ಹಣವನ್ನು ಎಲ್ಲಾ ಕಡೆಗೆ ಖರ್ಚು ಮಾಡುವುದಕ್ಕೆ ಆಗ ುತ್ತಿರಲಿಲ್ಲ. ಆ ಹಣವನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುವಂತೆ ಈ ಒಂದು ತಿದ್ದುಪಡಿಯನ್ನು ತರಲಾಗುತ್ತಿದೆ. ಅರಣ್ಯ ಮತ್ತು ವನ್ಯಜೀವಿ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಿಗೆ ಅರಣ್ಯ ನಿಧಿಯನ್ನು ಬಳಸುವುದಕ್ಕೆ ಈ ತಿದ್ದುಪಡಿ ಅವಶ್ಯಕವೆಂದು ಪರಿಗಣಿಸಲಾಗುವುದು. ಸಾಮಾನ್ಯವಾಗಿ ಈ ಹಣವನ್ನು ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ತೊಡಗಿಸಬೇಕೆನ್ನುವುದು ನಮ್ಮ ಉದ್ದೇಶ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ...expended only for one or more of the following purposes, namely:-

(a) raising of plantations in notified forest areas and such other purposes as are ancillary thereto namely soil and moisture conservation works in the notified forest areas;

(b) consolidation of the boundaries of notifies forest areas;

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಈ ನೋಟಿಫೈಡ್ forest areas ಎಂದರೆ ಏನು? ನಾಳೆ ದಿನ ನೀವು deemed forest ಅನ್ನು ಸೇರಿಸಿಕೊಂಡು, ಈಗಾಗಲೇ ಒಂದು ಕಡೆಯಿಂದ ನಮ್ಮ ಬೇಡಿಕೆಯಿದೆ. ಈ deemed forest ಅನ್ನು ಹೊರಗೆ ತರಬೇಕು ಮತ್ತು ಯಾವುದೆಂದು ಅದನ್ನು classify ಮಾಡಬೇಕು. ಈಗಾಗಲೇ ಅಲ್ಲಿ ಎಲ್ಲರೂ ಕುಳಿತುಕೊಂಡಿದ್ದಾರೆ. ಇವರು ಈ ರೀತಿ notified forest ಎಂದು ನಮೂದಿಸಿದರೆ ಹೇಗೆ? ಅದು ಯಾವುದು? ನೋಟಿಫೈಡ್ ನಲ್ಲಿ ಯಾವುದು ಬರುತ್ತದೆ?

ಶ್ರೀ ಬಿ. ರಮಾನಾಥ್ ರೈ : ಅಂತಹುದೆಲ್ಲಾ ಬರುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಹಾಗಾದರೆ ನೋಟಿಫೈಡ್ ಎಂದರೆ ಏನು?

ಅಧ್ಯಕ್ಷರು : Notified ಅಂದರೆ notified, Act ನಲ್ಲಿ ಇಲ್ಲವೇ? ನೀವು ವಕೀಲರು, ನೋಟಿಫೈಡ್ ಎಂದರೆ ಗೊತ್ತಿಲ್ಲವೇ?

ಶ್ರೀ ಕೆ.ಜಿ. ಬೋಪಯ್ಯ : ಈಗ ನಮ್ಮ ಬೇಡಿಕೆ ಇದೆ. ಆ ಬೇಡಿಕೆಯಲ್ಲಿ ಎಲ್ಲರೂ ಮರ ನೆಟ್ಟರೆ ಮತ್ತೆ ಕೊಡುತ್ತಾರೆಯೇ?

ಶ್ರೀ ಬಿ. ರಮಾನಾಥ್ ರೈ : ಮರ ನೆಡುವುದಕ್ಕೆ ಇದನ್ನು ಉಪಯೋಗ ಮಾಡುತ್ತಿದ್ದರು. ಈಗ ಅದನ್ನು ಹೊರತು ಪಡಿಸಿ . . .

ಶ್ರೀ ಕೆ.ಜಿ. ಬೋಪಯ್ಯ : ನಿಮ್ಮ ಬಿಲ್ಲಿನಲ್ಲಿರುವ (a) and (b) pointಗಳನ್ನು ಒಂದು ಸಾರಿ ಓದಿ.

ಶ್ರೀ ಬಿ. ರಮಾನಾಥ್ ರೈ : Notifiedನಲ್ಲಿ deemed forest ಬರುವುದಿಲ್ಲ. ಏಕೆಂದರೆ deemed forest ಸರ್ವೆ ಆಗುತ್ತಿದ್ದು ಅಂತಿಮ ಹಂತಕ್ಕೆ ಬಂದಿದ್ದೇವೆ. ಎಷ್ಟೋ ವರ್ಷಗಳಿಂದ ಇದು ಬಾಕಿ ಇರುವಂತಹದ್ದು.

ಶ್ರೀ ಕೆ.ಜಿ. ಬೋಪಯ್ಯ : Notified ಎಂದರೆ ಏನು ಎಂದು explain ಮಾಡಿ.

ಶ್ರೀ ಬಿ. ರಮಾನಾಥ್ ರೈ : Notified forest ಎಂದರೆ ಈಗಿರುವ deemed forest ಅಲ್ಲ.

ಅಧ್ಯಕ್ಷರು : Notified ಎಂದರೆ Section (4) of the Forest Act ನಲ್ಲಿ ನೋಟಿಫೈಡ್ ಅಲ್ಲವೇ?

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ. ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಈಗ ನನಗೆ ಅದರಲ್ಲೇ confusion ಆಗುತ್ತಿರುವುದು. Section (4) ನಲ್ಲಿ ಒಂದು ಸಾರಿ ನೋಟಿಫೈ ಆದರೆ, Section 17,18, 19 ನಲ್ಲಿ comply ಆದರೆ that is forest. ಆದರೆ ನಾಳೆ ದಿವಸ ಎಲ್ಲವನ್ನೂ ನೋಟಿಫೈಡ್ ಎಂದು ಮಾಡಿ ನಮ್ಮನ್ನು ಕೊಲ್ಲುತ್ತಾರೆ.

ಅಧ್ಯಕ್ಷರು : ಅದು ಆ ರೀತಿ ಅಲ್ಲ. ನೋಟಿಫೈಡ್ ಎಂದರೆ ಸೆಕ್ಷನ್ (4) attract ಆಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ : Section (4) ನಲ್ಲಿ ಮಾಡಿದ ಮೇಲೆ finally it becomes forest after compliance of section 16 to 19. ಆದಾದರೆ ಮಾತ್ರ ನಾನು ಒಪ್ಪುತ್ತೇನೆ. ಅದರಲ್ಲಿ ಬೇಕಾದರೆ ಮಾಡಲಿ. ಆದರೆ ಇದು ಯಾವುದು? ಯಾವುದರಲ್ಲಿ ಮರ ಗಿಡವನ್ನು ಬೆಳೆಸುತ್ತೀರಿ?

ಅಧ್ಯಕ್ಷರು : ಅವರು ಕಲೆಕ್ಟ್ ಮಾಡಿರುವ ಸೆಸ್‌ನ ಮೊತ್ತವಿದ್ದು, ಅದನ್ನು ಬಳಸಿಕೊಳ್ಳುವುದು ಹೇಗೆ ಎಂದು ಹೇಳುತ್ತಿರುವುದು.

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ನೆಡು ತೋಪು ಮಾತ್ರ ಉಪಯೋಗವಾಗುತ್ತದೆ. ಇವರು ಹೇಳುವುದಕ್ಕೆ ಅರ್ಥವಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಮರ ಗಿಡ ಬೆಳೆಸಲಿ. Consolidation of the boundaries of notified forest areas ಎಂದು ಇದೆ. ಇದು dangerous ಇದೆ. Boundary ಹಾಕಿದರೆ, ಅದರೊಳಗಿದ್ದವರನ್ನು ಖಾಲಿ ಮಾಡಿ ಎಂದು ಹೇಳುತ್ತೀರಿ.

ಶ್ರೀ ಬಿ. ರಮಾನಾಥ್ ರೈ : ಆ ರೀತಿಯ ಉದ್ದೇಶವಿಲ್ಲ.

ಶ್ರೀ ಕೆ.ಜಿ. ಬೋಪಯ್ಯ : ಹಾಗಾದರೆ ಆ ಒಂದು ಅಂಶವನ್ನು delete ಮಾಡಲಿ.

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಸಂಗ್ರಹ ಮಾಡಿದಂತಹ ಮೊತ್ತವನ್ನು ಸೀಮಿತ ಅರಣ್ಯಕ್ಕೆ ಮತ್ತು ನೆಡು ತೋಪು ನೆಡುವುದಕ್ಕೆ ಮಾತ್ರ ನಾವು ಬಳಸಿಕೊಳ್ಳಬಹುದಾಗಿತ್ತು. ಇದಲ್ಲದೆ, ಸಾಕಷ್ಟು ಹಣವನ್ನು ಖರ್ಚು ಮಾಡುವುದಕ್ಕಾಗುತ್ತಿರಲಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ. ಬೋಪಯ್ಯ : ಹಾಗಾದರೆ ಆ ಒಂದು ಅಂಶವನ್ನು delete ಮಾಡಲಿ.

ಶ್ರೀ ಬಿ. ರಮಾನಾಥ್ ರೈ : ಹಾಗಾಗಿ ಎಲ್ಲದಕ್ಕೂ ಅನ್ವಯವಾಗುವಂತಹ ರೀತಿಯಲ್ಲಿ ಮಾಡುತ್ತಿದ್ದೇವೆ. ಸೆಕ್ಷನ್ (4) ರಿಂದ (17) ರವರೆಗೆ ಪ್ರಕ್ರಿಯೆಗೊಂಡ ಅರಣ್ಯ ಪ್ರದೇಶವನ್ನು ಅಧಿಸೂಚಿತ ಅರಣ್ಯವೆಂದು ಪರಿಗಣಿಸಲಾಗುವುದು. ಈಗ ನಮಗೆ ಇರುವಂತಹ ವಿಷಯ ಜಟಿಲವಾದಂತಹ ವಿಷಯವೇನಲ್ಲ. ಸಂಗ್ರಹವಾಗಿರವಂತಹ ತೆರಿಗೆಯನ್ನು ನಾವು ಮೊದಲು ಸೀಮಿತವಾದ ಕೆಲಸಕ್ಕೆ ಮಾತ್ರ ಬಳಸಿಕೊಳ್ಳಬಹುದಾಗಿತ್ತು. ಈಗ ಹಾಗಲ್ಲ. ಉದಾಹರಣೆಗೆ ವನ್ಯಜೀವಿಧಾಮದ ಉಪಯೋಗಕ್ಕೆ ಇನ್ನಿತರ ಉಪಯೋಗದ ಕಾರ್ಯಗಳಿಗೆ ಹಣವನ್ನು ಖರ್ಚು ಮಾಡಬಹುದು ಎಂದು ಹೇಳುತ್ತಿರುವುದು. ಹಾಗಾಗಿ ಇದಕ್ಕೆ ಒಂದು ಸಣ್ಣ ತಿದ್ದುಪಡಿಯನ್ನು ತರುತ್ತಿದ್ದು, ಅದಕ್ಕೆ ಸಹಕರಿಸಬೇಕೆಂದು ಕೇಳಿ ಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅರಣ್ಯ ತಿದ್ದುಪಡಿ ವಿಧೇಯಕವನ್ನು ತಂದಿದ್ದು, ಇದರಲ್ಲಿ ಎರಡು ಮುಖ್ಯ ಉದ್ದೇಶಗಳಿದ್ದು, ಅದೇನೆಂದರೆ ತೆರಿಗೆ ಹೆಚ್ಚಿಸುವುದು ಮತ್ತು ಅದರ ಬಳಕೆಯನ್ನು ಬೇರೆ ಬೇರೆ ರೀತಿಯಲ್ಲಿ ಮಾಡುವುದು. ಈ ತೆರಿಗೆಯನ್ನು ಈಗ 8 ರ ಬದಲು 12ಕ್ಕೆ ಏರಿಸುತ್ತಿದ್ದಾರೆ. ಮಾನ್ಯ ಅರಣ್ಯ ಸಚಿವರೆ, 8 ರ ಪ್ರಕಾರ ತೆರಿಗೆ ವಸೂಲಾಗಿರುವುದು ಎಷ್ಟಿದೆ ಎನ್ನುವ ಬಗ್ಗೆ ಹಾಗೂ ಕಳೆದ 2 ಅಥವಾ 3 ವರ್ಷಗಳಿಂದ ಈ ತೆರಿಗೆ ಹಣವನ್ನು ಯಾವ್ಯಾವುದಕ್ಕೆ ಎಷ್ಟೆಷ್ಟನ್ನು ಬಳಸಿದ್ದೀರಿ ಎಂಬ ಮಾಹಿತಿಯನ್ನು ಸದನಕ್ಕೆ ಕೊಡಿ. ನಿಮ್ಮ ಹತ್ತಿರ ಅಷ್ಟೊಂದು ಹಣ ಉಳಿಯುವುದಕ್ಕೆ ನಿಮ್ಮ ಅಧಿಕಾರಿಗಳ ಅಸಮರ್ಥತತೆ ಕಾರಣವೇ ಅಥವಾ ಸರ್ಕಾರದ ಯೋಜನೆಗಳಲ್ಲಿ ಮಂಜೂರು ಮಾಡಿರುವುದು ಕಾರಣವೇ ಎನ್ನುವುದನ್ನು ಹೇಳಬೇಕು. ನೆಡು ತೋಪು ಮಾಡುವುದಕ್ಕೆ ಮಾತ್ರ ಹಣ ಬಳಕೆಯಾಗುತ್ತಿತ್ತು, ನಮ್ಮ ಹತ್ತಿರ ಅಷ್ಟು ಪ್ರಮಾಣದಲ್ಲಿ ನೆಡು ತೋಪು ಮಾಡುವುದಕ್ಕೆ ಆಗುತ್ತಿರಲಿಲ್ಲವಾದ್ದರಿಂದ ಬೇರೆ ಉದ್ದೇಶಕ್ಕೆ ಮಾಡುತ್ತಿದ್ದೇವೆಂದು ಹೇಳುತ್ತಿರುವುದು. ನೆಡು ತೋಪನ್ನು ಮಾಡುವುದಕ್ಕೆ ಅಸಮರ್ಥರೇಕಾದರು? ನಿಮ್ಮ ಹತ್ತಿರ ಇರುವ 8% ಹಣಕ್ಕೆ ಅಸಮರ್ಥತೆ ತೋರಿಸುತ್ತೀರಿ.

ಅಧ್ಯಕ್ಷರು : ಈಗ ಇದನ್ನು ಮಾಡಬೇಕೆ ಎನ್ನುವುದನ್ನು ಮಾತ್ರ ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈಗ ನೀವು 12% ಮಾಡುತ್ತಿದ್ದೀರಿ. ಇದರಿಂದ ಮೊದಲನೆಯದಾಗಿ ಅದರಿಂದ ಎಷ್ಟು ಹಣ ಬರಬಹುದೆಂಬ ನಿರೀಕ್ಷೆಯಿದೆ? ಎರಡನೆಯದಾಗಿ ಬಹಳ ಮುಖ್ಯವಾಗಿ ನೀವು ಬೇರೆ ಬೇರೆ ಉದ್ದೇಶಕ್ಕೆ ತೆಗೆದುಕೊಳ್ಳುತ್ತೀರಿ. ತರಬೇತಿ, ಸಾಮರ್ಥ್ಯವೃದ್ಧಿ, ಸಂಶೋಧನೆ ಮತ್ತು ತಂತ್ರಜ್ಞಾನ ಎಂದು ಹೇಳಿದ್ದೀರಿ. ನಾವು ಉತ್ತರ ಕನ್ನಡ ಜಿಲ್ಲೆಯಲ್ಲಿ ಬೇರೆ ಬೇರೆ ಯೋಜನೆಗಳ ಹಣವನ್ನು ಸಾಕಷ್ಟು ತೆಗೆದುಕೊಂಡು ಅರಣ್ಯವನ್ನು ಬೆಳೆಸುವುದಕ್ಕೆ ಬಹಳ ಒಳ್ಳೆಯ ಪ್ರಯತ್ನಗಳನ್ನು ಮಾಡಿದಂತಹವರು. ಆದರೂ ನಮ್ಮ ಜಿಲ್ಲೆಯಲ್ಲಿರುವ ಅಭಿಪ್ರಾಯವೇನೆಂದರೆ, ನಿಮ್ಮ ಆಡಳಿತಾತ್ಮಕ ಖರ್ಚೇ ಸುಮಾರು 60% ಗಿಂತಲೂ ಹೆಚ್ಚಿಗೆ ಹೋಗುತ್ತದೆ. ನಿಮ್ಮ ವಾಹನಗಳು, ತರಬೇತಿ ಮತ್ತು ಅಲ್ಲಿ infrastructure develop ಮಾಡುವುದು, ಉಳಿದ ಎಲ್ಲಾ ಸೌಲಭ್ಯಗಳಿಗೆ ಶೇ. 50-60% ನಷ್ಟು ಖರ್ಚಾಗುತ್ತದೆ. ನಮಗೆ ಬಂದಿರುವ ಹಣದಲ್ಲಿ ನಿಜವಾಗಿಯೂ ಅರಣ್ಯ ಪ್ರದೇಶವನ್ನು ಬೆಳವಣಿಗೆ ಮಾಡುವುದಕ್ಕೆ ಆಗುತ್ತಿಲ್ಲವೆನ್ನುವ ಕೂಗಿದೆ. ಅಂದರೆ ನಿಮ್ಮವರು ಮಾಡುವುದೇನೆಂದರೆ, ಯಾವ್ಯಾವುದಕ್ಕೆ ಎಷ್ಟೆಷ್ಟೆ ಪರ್ಸೆಂಟ್ ಎನ್ನುವುದಿಲ್ಲ. ನೀವು 12% ಅನ್ನು ಟೋಟಲ್ ಆಗಿ ಕಲೆಕ್ಟ್ ಮಾಡುತ್ತೀರಿ. ಅದರ ಮೊತ್ತ 100 ಅಥವಾ 1,000 ಕೋಟಿ ರೂ.ಗಳಾಗಬಹುದು ಎಂದು ಇಟ್ಟುಕೊಳ್ಳಿ. ಆ ಮೊತ್ತವನ್ನು ಯಾವ ರೀತಿ ವಿಭಜನೆ ಮಾಡುತ್ತೀರಿ? ನೆಡು ತೋಪಿಗೆ ಎಷ್ಟು ಮೊತ್ತವನ್ನು ಇಡುತ್ತೀರಿ. ಅದಕ್ಕೆ ಕನಿಷ್ಟ ಇಷ್ಟು ಮೊತ್ತವೆಂದು ಇಡಲೇ ಬೇಕು. ನಮ್ಮ ಮೂಲ ಉದ್ದೇಶವೇನೆಂದರೆ ಅರಣ್ಯ ರಕ್ಷಣೆ ಆಗಬೇಕು ಮತ್ತು ಬೆಳವಣಿಗೆಯಾಗಬೇಕು. ನೀವು ಈ ರೀತಿ ಮಾಡಿದರೆ ನೆಡು ತೋಪು ನಿರ್ಲಕ್ಷ್ಯವಾಗುತ್ತದೆ. ನೆಡು ತೋಪು ನಿರ್ಲಕ್ಷ್ಯವಾಗಿ, ಇವರು ಏನು ಮಾಡುತ್ತಾರೆನ್ನುವುದನ್ನು ಹೇಳುತ್ತೇನೆ. ಸೂಚಿತ ಅರಣ್ಯ ಪ್ರದೇಶಗಳ ಗಡಿಗಳನ್ನು ಒಟ್ಟುಗೂಡಿಸುವುದೆಂದು ಇದೆ. ಇವರು ಗಡಿಗಳನ್ನು ಒಟ್ಟುಗೂಡಿಸುವುದಕ್ಕೆ ಮಾತ್ರ ಖರ್ಚಾಗುತ್ತದೆ.

ಅಧ್ಯಕ್ಷರು : ಅದೆಲ್ಲಾ ಏಕೆ ಬೇಕು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ ಜೆ.ಸಿ.ಬಿ. ಯಂತ್ರವನ್ನು ತೆಗೆದುಕೊಂಡು ಹೋಗಿ ಗಡಿಗಳನ್ನು ಒಡೆಯುತ್ತಾರೆ. ಒಬ್ಬರು three foot ಸಾಕೆಂದರೆ, ಇನ್ನೊಬ್ಬರು six foot ಬೇಕೆಂದು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಹೇಳುತ್ತಾರೆ. ಮತ್ತೊಬ್ಬರು six foot ಅಗಲ ಬೇಕೆಂದು ಹೇಳುತ್ತಾರೆ. ನಿಮ್ಮ ಹಣವೆಲ್ಲವೂ ಇಂತಹ ಕಾರ್ಯಗಳಿಗೆ ಖರ್ಚಾಗುತ್ತದೆಯೇ ಹೊರತು ನೆಡು ತೋಪು ಆಗುವುದಿಲ್ಲ, ಅರಣ್ಯ ಬೆಳವಣಿಗೆಯಾಗಲಿ, ರಕ್ಷಣೆಯಾಗಲಿ ಆಗುವುದಿಲ್ಲ. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅರಣ್ಯದ ರಕ್ಷಣೆ ಮತ್ತು ಅಭಿವೃದ್ಧಿಗೆ ನಾವು ನೆಡು ತೋಪನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಲ್ಲವೆಂದರೆ, ಅರಣ್ಯೀಕರಣದ ಉದ್ದೇಶವನ್ನಿಟ್ಟುಕೊಂಡು ಮುಂದೆ ಕೆಲವು ಸಲಹೆಗಳನ್ನು ಕೊಡಿ. ನೀವು ಇದರೊಳಗೆ ಬೇರೆ ಬೇರೆ ರೀತಿಯ 10 ಅಂಶಗಳನ್ನು ಸೇರಿಸಿದರೆ ಆ ಹಣವೆಲ್ಲವೂ ಅದಕ್ಕೆ divert ಆಗುತ್ತದೆ. ಯಾವ್ಯಾವುದಕ್ಕೆ ಎಷ್ಟು percent ಎನ್ನುವುದನ್ನಾದರೂ ನಮಗೆ ಹೇಳಿ. ನೀವು ಬಿಲ್ಲಿನಲ್ಲಿ ತೋರಿಸಿರುವುದಕ್ಕೆ ಎಷ್ಟೆಷ್ಟು ಮಾಡುತ್ತೇವೆನ್ನುವುದನ್ನು ಹೇಳಿ.

ಅಧ್ಯಕ್ಷರು : ಅರಣ್ಯ ಅಭಿವೃದ್ದಿಗೆಂದು ಬಳಸಬೇಕು. ತರಬೇತಿ-ಗಿರಬೇತಿ ಇದೆಲ್ಲಾ ಏತಕ್ಕೆ ಬೇಕು?

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಅರಣ್ಯ ಅಭಿವೃದ್ಧಿ ನಿಧಿ ಎಂದು ಇದೆ. ನಮಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡುವ ಸಮಯದಲ್ಲಿ ನಿರ್ದಿಷ್ಟವಾದ ಮೊತ್ತವನ್ನು ಮಾತ್ರ ಬಿಡುಗಡೆ ಮಾಡುತ್ತದೆ. ನೆಡು ತೋಪಿಗೆ ಇಷ್ಟೆಂದು ಹೇಳಿರುತ್ತಾರೆ. ಕ್ಷೀಣಿತ ಅರಣ್ಯಕ್ಕೆ ಸಂಬಂಧಿಸಿದಂತೆ ನೆಡು ತೋಪನ್ನು ಮಾಡುವಂತಹದ್ದು. ಬಹುಶಃ ನಮಗೆ ಪುನರ್ವಸತಿಗೆ ಹಣ ಬೇಕೆಂದರೆ ಆ ಸಮಯದಲ್ಲಿ ಹಣವಿರುವುದಿಲ್ಲ. ಹಾಗಾಗಿ ಅದಕ್ಕೂ ಉಪಯೋಗ ಮಾಡಬಹುದು. ಹಾಗೆಯೇ ಗಡಿ ಗುರುತಿಸವುದಕ್ಕೆ . . . .

ಅಧ್ಯಕ್ಷರು : Rehabilitation ಗೆ ಸರ್ಕಾರದ ಹಣವನ್ನೇ ಖರ್ಚು ಮಾಡಬೇಕು. ಜನರ ದುಡ್ಡನ್ನು ತೆಗೆದುಕೊಂಡು ಜನರಿಗೆ ಖರ್ಚು ಮಾಡುವುದಲ್ಲ. ವಾಸ್ತವಿಕವಾಗಿ rehabilitation ಗೆ ಸರ್ಕಾರದ ಹಣವನ್ನೇ ಖರ್ಚು ಮಾಡಬೇಕು. ಮುಳುಗಡೆ ಪ್ರದೇಶಗಳಿಗೆ ಸರ್ಕಾರದ ಹಣವನ್ನು ಖರ್ಚು ಮಾಡಿಲ್ಲವೇ? ಜನರಿಗೆ ತೆರಿಗೆ ಹಾಕಿ . . . .

ಶ್ರೀ ಬಿ. ರಮಾನಾಥ್ ರೈ : ಶರಾವತಿಯದು ನಾವು ಎಷ್ಟು ವರ್ಷದ ನಂತರ ಮಾಡುತ್ತಿದ್ದೇವೆ? ಅಧ್ಯಕ್ಷರು : ಆಯಿತು. ನೀ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ. ರಮಾನಾಥ್ ರೈ : Deemed forest ಅನ್ನು 10-20 ವರ್ಷದ ನಂತರ ಸರ್ವೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾಡಲೇಬೇಕು. ಅವರು ಹೇಳುವುದರೊಳಗೆ ಒಂದು ಅರ್ಥವಿದೆ. ಜನರಿಂದ ಹಣವನ್ನು ವಸೂಲಿ ಮಾಡುತ್ತೀರಿ. ಅದನ್ನು ಅರಣ್ಯ ಅಭಿವೃದ್ಧಿಗೆ ಬಳಸಿಕೊಳ್ಳಿ.

ಶ್ರೀ ಬಿ. ರಮಾನಾಥ್ ರೈ : ಎಲ್ಲಾ ಹಣವನ್ನು ಅಭಿವೃದ್ಧಿಗೆ ಬಳಸುತ್ತೇವೆ.

ಅಧ್ಯಕ್ಷರು : ಆ ರೀತಿ ಹೇಳಿ. ನೀವು training ಮತ್ತೊಂದು ಎಂದು ಹೇಳುತ್ತೀರಿ. ಅದಕ್ಕೆ ಹೇಳುತ್ತಿರುವುದು.

ಶ್ರೀ ಬಿ. ರಮಾನಾಥ್ ರೈ : ಈಗ ರೈಲ್ವೆ ಪಟ್ಟಿ ಮಾಡಿ ಬಂಧ್ ಮಾಡಬೇಕಾದರೆ ಹಣಕಾಸಿನ ತೊಂದರೆ ಇದೆ. ಅದನ್ನು ಮಾಡಲಿಕ್ಕೆ ಈ ಹಣವನ್ನು ಉಪಯೋಗ ಮಾಡಿಕೊಳ್ಳಬಹುದು. ಇಂತಹ ಕೆಲಸಗಳಿಗೆ ಮತ್ತು ನಮ್ಮ ಇಲಾಖೆಯ ಅಭಿವೃದ್ಧಿಗಾಗಿ ಸಾಕಷ್ಟು ಹಣವನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಇಲಾಖೆ ಎಂದು ಹೇಳಬೇಡಿ. ಅರಣ್ಯ ಅಭಿವೃದ್ಧಿಗೆ ಬಳಸಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಪ್ರತಿ ವರ್ಷ 100 ಕೋಟಿ ರೂ.ಗಳಷ್ಟು ಅರಣ್ಯದ ಬೇರೆ ಬೇರೆ ರೀತಿಯ ಉತ್ಪನ್ನಗಳು ರಾಜ್ಯದ ಆದಾಯವನ್ನು ತುಂಬುತ್ತಿದೆ. ಪ್ರತಿ ವರ್ಷ ಕನಿಷ್ಟ 100 ಕೋಟಿ ರೂ.ಗಳು. ಆದರೆ ನಮ್ಮ ಜಿಲ್ಲೆಯ ಯಾವ ಅರಣ್ಯದ ಸೌಲಭ್ಯವೂ ಈ 100 ಕೋಟಿ ರೂ.ಗಳಲ್ಲಿ ಬಂದಿರುವುದಿಲ್ಲ ಮತ್ತು ಅನುಕೂಲವೂ ಆಗಿರುವುದಿಲ್ಲ.

(ಮುಂದು . . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ದಿನಾಂಕ:25.11.2015-06.10(39)-GM-PS

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಮುಂದು. . . . .):

ಹಾಗಾದರೆ ನೀವು ಹೇಳಿ, ಯಾವ ಯಾವ ಜಿಲ್ಲೆಯಿಂದ ಎಷ್ಟೆಷ್ಟು cess ಬರುತ್ತದೆಯೋ ಆ ಪ್ರಮಾಣದಲ್ಲಿಯಾದರೂ ಇಷ್ಟಿಷ್ಟು ಖರ್ಚು ಮಾಡುತ್ತೇವೆಂದು ಹೇಳಿ. ಇಲ್ಲವೆಂದರೆ ಇದರಲ್ಲಿ ಕೊಟ್ಟಿರುವ. . . . .

ಶ್ರೀ ಬಿ.ರಮಾನಾಥ ರೈ (ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಅದಿರು ಮಾರಾಟದ ತೆರಿಗೆಯಿಂದ ಹಣ ಸಂಗ್ರಹವಾಗುತ್ತದೆ. ಇದರಿಂದ 1,000 ಕೋಟಿ ರೂಪಾಯಿಗಳವರೆಗೆ ತೆರಿಗೆಯ ಹಣ ಸಂಗ್ರಹವಾಗುತ್ತದೆ. ಇದನ್ನು ಅರಣ್ಯದ ಅಭಿವೃದ್ಧಿಯ ಹಿತದೃಷ್ಟಿಯಿಂದ ಬಳಕೆ ಮಾಡುವುದಕ್ಕೆ ಸಣ್ಣ ತಿದ್ದುಪಡಿಗೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಅವರು ಏನು ವಿಚಾರ ಹೇಳುತ್ತಿದ್ದಾರೆಂದರೆ, ಈ ಹಣ ಜನರಿಂದ ಬರುತ್ತದೆ. ಜನರಿಂದ ಬರುವ ಹಣವನ್ನು ಅರಣ್ಯ ಅಭಿವೃದ್ಧಿಗೆ ಬಳಸಿಕೊಳ್ಳಿ ಎಂದು,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಯಾವುದಕ್ಕೆ ಎಷ್ಟೆಷ್ಟು percent ಎನ್ನುವುದನ್ನಾದರೂ ಹೇಳಿ. ಈ ಬಿಲ್‌ನಲ್ಲಿ ಕೆಳಗಡೆ ಕೊಟ್ಟಿದ್ದೀರಲ್ಲ. ಈ ಬಿಲ್‌ನಲ್ಲಿ Hವರೆಗೆ ಏನು ಅಂಶಗಳನ್ನು ಕೊಟ್ಟಿದ್ದೀರಿ, ABCDEFGHವರೆಗೆ ಕೊಟ್ಟಿರುವುದರೊಳಗೆ ಯಾವ್ಯಾವುದಕ್ಕೆ ಎಷ್ಟೆಷ್ಟು percent ಬಳಸಿಕೊಳ್ಳುತ್ತೀರಿ ಎನ್ನುವುದನ್ನಾದರೂ ಹೇಳಿಬಿಡಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಆಯಿತು, ಮಾಡೋಣ. ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾಡೋಣ ಎಂದರೆ ಆಮೇಲೆ ಇವರು ಅದು ನಿಜವಾಗಿ ನೆಡತೋಪು ಆಗುವುದಿಲ್ಲ. ಅರಣ್ಯವೂ ಅಭಿವೃದ್ಧಿಯಾಗುವುದಿಲ್ಲ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಾ ಸನ್ನಿವೇಶಕ್ಕೆ ಅನುಗುಣವಾಗಿ ಅಭಿವೃದ್ಧಿಗೋಸ್ಕರ ಬಳಸಿಕೊಳ್ಳುತ್ತೇವೆಂದು ಹೇಳಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಸನ್ನಿವೇಶಕ್ಕೆ ಅನುಗುಣವಾಗಿ ಎಲ್ಲವನ್ನು ಅಭಿವೃದ್ಧಿ ಪಡಿಸುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಗಡಿಗಳನ್ನು ಒಟ್ಟುಗೂಡಿಸುವುದು ಎಂದು ಇದೆ. ಇದನ್ನು delete ಮಾಡಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಎರಡು ಪಾಯಿಂಟ್‌ಗಳಿದೆ. ಅಧಿಸೂಚಿತ ಅರಣ್ಯ ಪ್ರದೇಶದ ಗಡಿಗಳನ್ನು ಒಟ್ಟುಗೂಡಿಸುವುದು ಎಂದು ಇದೆ.

ಅಧ್ಯಕ್ಷರು: ಇದ್ಯಾಕೆ ಬೇಕು ಇಲ್ಲಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಏನು ಅದು?

ಅಧ್ಯಕ್ಷರು: ಅಭಿವೃದ್ಧಿಗೆ ಎನ್ನುವುದನ್ನು ಸೇರಿಸಿಕೊಂಡು ಯಾವುದಕ್ಕಾದರೂ ಮಾಡಿಕೊಳ್ಳಿ ನೀವು.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಎಲ್ಲವೂ ಅಭಿವೃದ್ಧಿಗಾಗಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಎರಡನೇದು ಮತ್ತೊಂದು ಇದೆ. ಅರಣ್ಯ ಪ್ರದೇಶದಲ್ಲಿ, C ನ್ನು ನೋಡಿ ಅಧ್ಯಕ್ಷರೆ, ನಿಮಗೆ ಒಪ್ಪಿಗೆಯಾದರೆ ಹೇಳಿ. ಖಾಸಗಿ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು.

ಅಧ್ಯಕ್ಷರು: ಈಗ ನಾನು ಹೇಳುವುದನ್ನು ಕೇಳಿ. Simple ಆಗಿದೆ. ಅರಣ್ಯ ಅಭಿವೃದ್ಧಿಗೆ ಬಳಸಿಕೊಳ್ಳುವಂಥದ್ದು comprehensive ಆಗಿ ಇದ್ದುಬಿಡಲಿ. ಆಗ ನಿಮ್ಮ ವಿವೇಚನೆಗಿರುತ್ತದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಆಯಿತು, ರೂಲ್ಸ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಬಹುದು.

ಶ್ರೀ ಕೆ.ಷಡಕ್ಷರಿ: ಒಬ್ಬರು ಮಾತನಾಡಿ. ಇಬ್ಬಿಬ್ಬರು ಏಕೆ ಎದ್ದು ನಿಂತು ಮಾತನಾಡುತ್ತೀರಿ?

ಅಧ್ಯಕ್ಷರು: ಹಾಗೇ ಮಾಡಿ. ಮಂತ್ರಿಗಳೆ, ಸ್ವಲ್ಪ ಸರಿಮಾಡಿಕೊಳ್ಳಿ. Comprehensive ಆಗಿ ಅರಣ್ಯ ಅಭಿವೃದ್ಧಿಗೆ ಎಂದು ಮಾಡಿಕೊಳ್ಳಿ.

ಶ್ರೀ ಬಿ.ರಮಾನಾಥ ರೈ : ಆಯಿತು ಸಾರ್. ಅರಣ್ಯ ಅಭಿವೃದ್ಧಿಗೆ ತಾವೇನು ಸಲಹೆ ಕೊಟ್ಟಿದ್ದೀರಿ, ಅದನ್ನು ರೂಲ್ಸ್‌ನಲ್ಲಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು: ಒಂದು ಬಾರಿ Actನಲ್ಲಿ ಆದರೆ, ನಂತರ ರೂಲ್ಸ್‌ನಲ್ಲಿ ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲರಿ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಮಾಡುವುದಕ್ಕೆ ಬರುವುದಿಲ್ಲ. Act will prevail.

ಅಧ್ಯಕ್ಷರು: ಒಂದೇ ಶಬ್ಧದಲ್ಲಿ ಮಾಡಿಕೊಳ್ಳಿ. Details ಏಕೆ ಬೇಕು? You will get authority.

ಶ್ರೀ ಬಿ.ರಮಾನಾಥ ರೈ : ಗಡಿ ಗುರುತಿಸುವುದಕ್ಕೆ, ಸಂಶೋಧನೆಗಾಗಿ. . . . . .

ಅಧ್ಯಕ್ಷರು: ಅದೆಲ್ಲಾ details ಏಕೆ ಬೇಕು? ಅಭಿವೃದ್ಧಿಗೋಸ್ಕರ ಆ ಸನ್ನಿವೇಶದಲ್ಲಿ ಗಡಿ ಗುರುತು ಮಾಡುವುದು ಎಲ್ಲವೂ ಸೇರುತ್ತದೆ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಅರಣ್ಯ ಅಭಿವೃದ್ಧಿಯಲ್ಲಿ ಸಂಶೋಧನೆಯೂ ಸೇರುತ್ತದೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಎಲ್ಲವೂ ಸೇರುತ್ತದೆ. ಅದನ್ನೇ ನಾವು ಹೇಳಿರುವುದು.

ಶ್ರೀ ಕೆ.ಜಿ.ಬೋಪಯ್ಯ: Simple ಆಗಿ ಮಾಡಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಅಧಿಸೂಚಿತ ಗಡಿಗಳನ್ನು ಗುರುತಿಸುವುದು. ಖಾಸಗಿ ಯವರಿಂದ. . . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, B & C ಎರಡಕ್ಕೆ ನಮ್ಮ ತಕರಾರಿದೆ. ಆಮೇಲೆ ಜನರಿಗೆ ಕಾಟ ಕೊಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, E ನಲ್ಲಿ ಸಹ, B, C & E

ಅಧ್ಯಕ್ಷರು: ಅರಣ್ಯ ಅಭಿವೃದ್ಧಿಗೆ ಎನ್ನುವ ಒಂದು ಮಾತನ್ನು ಹೇಳಿಬಿಟ್ಟರೆ, ಅರಣ್ಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ನೀವು ಯಾವುದಕ್ಕಾದರೂ ಬಳಸಿಕೊಳ್ಳುವುದಕ್ಕೆ ನಿಮಗೆ ಹಕ್ಕು ಇರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : B, C, D & E.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಅವರೇನು ಹೇಳುತ್ತಿದ್ದಾರೆ ಅದನ್ನು ರೂಲ್ಸ್‌ನಲ್ಲಿ ತರುತ್ತೇವೆ.

ಅಧ್ಯಕ್ಷರು: ಅಲ್ಲ, Actನಲ್ಲಿ ಇದನ್ನು specify ಮಾಡಿ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, Actನಲ್ಲಿ ಮಾಡದೇ ಇದ್ದರೆ Act will prevail over the rules.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅರಣ್ಯ ಪ್ರದೇಶ ನಿವಾಸಿಗಳಿಗೆ ಮನೆ ರಚನೆ ಮಾಡುವುದಕ್ಕಾಗಿ ಎಂದು ಇದೆ. ಇವರಿಗೆ quarters ಕಟ್ಟಿಕೊಳ್ಳುವುದಕ್ಕೆ ಬೇರೆ ದುಡ್ಡಿಲ್ಲವೇ? ಈಗ ನೋಡಿ, ಅರಣ್ಯ ನಿವಾಸಗಳ ರಚನೆ ಮತ್ತು ನಿರ್ವಹಣೆ.

ಅಧ್ಯಕ್ಷರು: ಮಂತ್ರಿಗಳೆ, ಅರಣ್ಯ ಅಭಿವೃದ್ಧಿಗೆ ಎನ್ನುವ ಒಂದು ಪದವನ್ನು ಸೇರಿಸಿಕೊಳ್ಳಿ. ಅದರ ಪ್ರಕಾರ ರೂಲ್ಸ್‌ನಲ್ಲಿ ಮಾಡಿಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮನೆ ಕಟ್ಟಿಕೊಳ್ಳುವುದಕ್ಕೆ quarters ಕಟ್ಟುವುದಕ್ಕೆ. . . . .

ಅಧ್ಯಕ್ಷರು: ಅದೆಲ್ಲ ಏಕೆ ರಿ. ಈ ನಮ್ಮ ಆಫೀಸರ್‌ಗಳು ಮಾರಾಯ್ರೆ, ನೀವು ಮಾಡುವ ಕೆಲಸಕ್ಕೆ ಜನರಿಗೆ ತೊಂದರೆಯಾಗುತ್ತದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಸ್ವ ಇಚ್ಛೆಯಿಂದ ಜಮೀನನ್ನು ನಮಗೆ ಕೊಡುತ್ತಾರೆ. ಎಷ್ಟೋ ಕಡೆ ಅದನ್ನು ಖರೀದಿಸುವುದಕ್ಕೂ ಇದನ್ನು ಬಳಕೆ ಮಾಡಬಹುದು. ಒಟ್ಟಾರೆಯಾಗಿ ಅರಣ್ಯದ ಅಭಿವೃದ್ಧಿಗಾಗಿ. . . . .

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅರಣ್ಯ ನಿವಾಸಗಳ ರಚನೆ ಎಂದು ಇದೆಯಲ್ಲ. D ನೋಡಿ.

ಅಧ್ಯಕ್ಷರು: ಇದನ್ನು ಅರಣ್ಯ ಅಭಿವೃದ್ಧಿಗೆ ಬಳಸಿಕೊಳ್ಳುವುದನ್ನು ಬಳಸಿಕೊಳ್ಳಿ. ಆಮೇಲೆ ರೂಲ್ ಮಾಡುವಾಗ ಈ concept ನ್ನಿಟ್ಟುಕೊಂಡು ರೂಲ್ ಮಾಡಿಕೊಳ್ಳಿ. ಏನು ಬೇಕಾದರೂ ನಿಮಗೆ ಅಧಿಕಾರವಿರುತ್ತದೆ. ಇದಕ್ಕೆ ಅಷ್ಟು ದೊಡ್ಡದ್ದೇಕೆ ಬೇಕು?

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, B, C, D & Eನ್ನು ತೆಗೆದು ಹಾಕಿದ್ದೇವೆ ಎಂದು ಹೇಳಲಿ.

ಶ್ರೀ ಬಿ.ರಮಾನಾಥ ರೈ: ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2015ನ್ನು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ತಿದ್ದುಪಡಿಯೊಂದಿಗೆ ಎಂದು ಹೇಳಿ.

ಅಧ್ಯಕ್ಷರು: ತಿದ್ದುಪಡಿಯೊಂದಿಗೆ ಎಂದು ಹೇಳ್ರಿ.

ಶ್ರೀ ಬಿ.ರಮಾನಾಥ ರೈ : ಏನು ಸಾರ್, simple ಇದೆಯಲ್ಲ ಸಾರ್.

ಶ್ರೀ ಕೆ.ಜಿ.ಬೋಪಯ್ಯ: ನೀವು ಅಲ್ಲಿ ನೋಡಬೇಡಿ. ಜನರ ಕಡೆ ನೋಡಿ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**2015ನೇ ಸಾಲಿನ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.**

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂಬು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

**ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ**

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ :

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂಬು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾದವು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ**

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂಬು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು.

ಅಧ್ಯಕ್ಷರು: ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

<u>**ಪ್ರಸ್ತಾವದ ಅಂಗೀಕಾರ**</u>

ಶ್ರೀ ಬಿ.ರಮಾನಾಥ ರೈ: ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2015ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

**2015ನೇ ಸಾಲಿನ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗಿ ೀಕರಿಸಬೇಕು.**

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂಬು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: 3ನೇ ವಿಧೇಯಕ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2015ರ ಬಗ್ಗೆ ಸಚಿವರು ಇಂದು ಬೇಡ ಎಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಮುಂದೂಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದನ್ನು ನಾವು ವಿರೋಧ ಮಾಡುವವರಿದ್ದೆವು.

**ಮಾನ್ಯ ಸಚಿವರಿಂದ ಹೇಳಿಕೆ**

ವಿಷಯ : ರೇಪ್ ಕೇಸ್‌ನಲ್ಲಿ ಕ್ರಮ ತೆಗೆದುಕೊಂಡಿರುವ ಬಗ್ಗೆ.

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು) (ಮಾನ್ಯ ಗೃಹ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ರೇಪ್ ಕೇಸ್ ವಿಚಾರದಲ್ಲಿ ಏನು action ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದರು. ಅದರ ವಿಚಾರವಾಗಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಆಲೂರು ಗ್ರಾಮದಲ್ಲಿ 2014ನೇ ಆಗಸ್ಟ್ 15ನೇ ತಾರೀಖಿನಂದು ರೇಪ್ ಕೇಸ್ ಆಗಿದ್ದು, ಅದರ ಬಗ್ಗೆ ರಿಪೋರ್ಟ್ ಆಗುತ್ತದೆ. ಆಗಸ್ಟ್ 16ನೇ ತಾರೀಖಿನಂದು ಎಂದರೆ ಒಂದೇ ದಿವಸದಲ್ಲಿ Accused arrest ಆಗುತ್ತದೆ. ಅದಾದ ನಂತರ, ಸತೀಶ್ ಎನ್ನುವ ಒಬ್ಬ ಇನ್ಸ್‌ಪೆಕ್ಟರ್ ಇದ್ದು, ಅವರು ಸರಿಯಾಗಿ ತನಿಖೆ ಮಾಡಲಿಲ್ಲ, ಬೇರೆ ವಿಚಾರಗಳ ಬಗ್ಗೆ ತನಿಖೆ ಮಾಡಲಿಲ್ಲವೆಂದು 21ನೇ ಆಗಸ್ಟ್‌ರಂದು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಅವರನ್ನು suspend ಮಾಡಿದ್ದಾರೆ. ನಂತರ ಶಿವಕುಮಾರ್ ಎನ್ನುವ ಪೊಲೀಸ್ ಇನ್ಸ್‌ಪೆಕ್ಟರ್‌ನ್ನು incharge ಮಾಡಿ investigation ಮಾಡುವುದಕ್ಕೆ ನೇಮಕ ಮಾಡುತ್ತಾರೆ. ಅದಾದ ನಂತರ accused was in judicial custody up to December 14$^{th}$. 4 ತಿಂಗಳುಗಳ ಕಾಲ ಕಸ್ಟಡಿಯಲ್ಲಿದ್ದು, ಕೋರ್ಟ್‌ನ ಜಾಮೀನಿನ ಮೇಲೆ ಬಿಡುತ್ತಾರೆ. ಇದಾದ ಮೇಲೆ, D.G. ಅವರಿಗೆ Victim ತಂದೆಯವರು representationನ್ನು ಕೊಡುತ್ತಾರೆ. Immediate ಆಗಿ ಅದನ್ನು ಅಳವಡಿಸಿ IGರವರೆಗೆ ಒಂದು ರಿಪೋರ್ಟ್ ಕಳುಹಿಸಿ ಕೊಡಿ ಎಂದು ಹೇಳುತ್ತಾರೆ. IGಯವರು 23-09-2015ರಲ್ಲಿ ರಿಪೋರ್ಟ್‌ನ್ನು ಕಳುಹಿಸಿ ಕೊಡುತ್ತಾರೆ. I.G.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ರಿಪೋರ್ಟ್ ಮೇಲೆ Departmental enquiry ಮಾಡುತ್ತಿದ್ದಾರೆ. Enquiry report ಬಂದ ಕೂಡಲೆ ಆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಆದಷ್ಟು ಬೇಗನೆ ಕ್ರಮ ತೆಗಿ ೆದುಕೊಳ್ಳುತ್ತಿದ್ದಾರೆ. ಆ ವಿಚಾರದಲ್ಲಿ ಎಲ್ಲಾ investigation ಆಗುತ್ತಿದೆ.

ಅಧ್ಯಕ್ಷರು: ಮಂತ್ರಿಗಳೆ, ನೀವು ಕೂರ್ಗ್‌ನಿಂದ ಬಂದವರು. ನಿಮಗೆಲ್ಲಾ ಗೊತ್ತಿದೆ. ಪಾಪ, ಕೂರ್ಗ್‌ನವರಿಗೆ ಒಂದು privilege ಇದೆ. ಬಂದೂಕು, ಅರಣ್ಯ ಮತ್ತು self protectionಗಾಗಿ ಬಂದೂಕು ಇದೆ. ಈಗ ಬೆಂಗಳೂರಿನಲ್ಲಿರುವವರ ಮನೆಗಳಿಗೆ ಬಂದು ಬಂದೂಕನ್ನು seize ಮಾಡುವುದೆಲ್ಲಾ ಬೇಡ, ಅನಾವಶ್ಯಕ. ಗೊಂದಲ ಮಾಡಿಕೊಳ್ಳುವುದು ಬೇಡ. ಅವರಿಗೊಂದು privilege, ಅದು ಮೊದಲಿನಿಂದ ಬಂದಿರುವುದು.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ಅವರಿಗೆ ಆ privilege ಇದೆ, ಇದ್ದೇ ಇರುತ್ತದೆ. ಅದಕ್ಕೆ ಯಾರು ಏನೂ ತೊಂದರೆ ಮಾಡುವುದಿಲ್ಲ. Investigationನಲ್ಲಿ ಪೊಲೀಸ್‌ನವರು 2(2)ನೇ ಅಥವಾ 3(2)ನೇ ಎಂದು investigation ಮಾಡುತ್ತಿದ್ದಾರೆ. ಎಲ್ಲರಿಗೇನು ತೊಂದರೆ ಕೊಡುತ್ತಿಲ್ಲ. ಆ investigation

ಅಧ್ಯಕ್ಷರು: ಬೆಂಗಳೂರಿಗೆಲ್ಲಾ ಬಂದು ಚೆಕ್ ಮಾಡುವುದು ಬೇಡ. ಇದ್ದಿದ್ದರಲ್ಲಿ ಕೂರ್ಗೀಸ್ decent and honest people.

ಶ್ರೀ ಕೆ.ಜೆ.ಜಾರ್ಜ್: ಆದರೆ, ಅಲ್ಲಿ ಒಂದು murder ಆಗಿದೆ.

ಅಧ್ಯಕ್ಷರು: ಅದಕ್ಕೆ ಸಂಬಂಧಪಟ್ಟಂತೆ ಮಾಡಿಕೊಳ್ಳಿ. ಬೋಪಯ್ಯನವರು ಹೇಳುತ್ತಿದ್ದರು. . .

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, 88 ಜನಕ್ಕೆ ತೊಂದರೆ ಮಾಡಿದ್ದಾರೆ.

ಅಧ್ಯಕ್ಷರು: ಇಲ್ಲಿ ಬಹಳ ಜನ planters ಮತ್ತು militaryನಲ್ಲಿದ್ದವರೆಲ್ಲಾ ಇದ್ದಾರೆ. ಇಲ್ಲಿ ಬಂದು ತೊಂದರೆ ಕೊಡುವುದು ಬೇಡ.

(ಮುಂದು. . . . .)

25.11.2015 / 06.20(40) MPL-PS



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜಿ.ಬೋಪಯ್ಯ : ಅವರದು address ಕೊಡಗಿನದು ಇದೆ. ಆದರೆ ವಾಸ ಇಲ್ಲಿದ್ದಾರೆ. ಅವರಿಗೆಲ್ಲಾ ಕಾಟ ಕೊಡುವುದು ಎಂದರೆ ಏನು?

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ನಾನು ಆದೇಶ ಕೊಡುತ್ತೇನೆ.

ಅಧ್ಯಕ್ಷರು : ಮಾಡಿ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಹಲವಾರು ವಿಚಾರಗಳ ಕುರಿತು ಸ್ಪಷ್ಟೀಕರಣ ಕೊಟ್ಟರು. ಅರ್ಥವೇ ಇಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಏನಾದರೂ ತಕ್ಷಣವೇ action ತೆಗೆದುಕೊಳ್ಳಿ, suspend ಮಾಡಿ ಎಂದರೆ ಇನ್ನೂ departmental enquiry ಎನ್ನುತ್ತಾರೆ.

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ,

ಶ್ರೀ ಜಗದೀಶ ಶೆಟ್ಟರ್ : ನೋಡಿ ಜಾರ್ಜ್ ಅವರೆ, ಕರ್ತವ್ಯ ಲೋಪವೆಸಗಿರುವ ಪೊಲೀಸ್ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಐ.ಜಿ.ಪಿ., ದಕ್ಷಿಣ ವಲಯ ರವರು ಉಲ್ಲೇಖದ ವರದಿಯಲ್ಲಿ. ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ವರದಿ ಕೊಟ್ಟಿದ್ದಾರೆ ಈಗಾಗಲೆ. ಆ ವರದಿಯ ಮೇಲೆ ವರದಿ ಮತ್ತು ಪ್ರಕರಣಕ್ಕೆ ಸಂಬಂಧಿಸಿರುವ ಕಡತವನ್ನು ಈ ಟಿಪ್ಪಣಿಗೆ ಲಗತ್ತಿಸಿ ಈ ವಿಷಯದಲ್ಲಿ ಮುಂದಿನ ಕ್ರಮ. . ಅದನ್ನು ಮಾಡಿಕೊಳ್ಳಬೇಕಲ್ಲ? ನೀವು ಹಾಗೆ. . .ಇನ್ನೂ ಮತ್ತೆ ಅದರ ಮೇಲೆ. . . 9ನೇ ತಿಂಗ ಳಿನಲ್ಲಿ ಕಳುಹಿಸಿದ್ದೀರಿ.

ಶ್ರೀ ಕೆ.ಜೆ.ಜಾರ್ಜ್ : ಶೆಟ್ಟರ್ ರವರೆ, ಒಬ್ಬರು Inspector ಅನ್ನು immediate ಆಗಿ suspend ಮಾಡಿದ್ದಾರೆ.

ಶ್ರೀ ಜಗದೀಶ ಶೆಟ್ಟರ್ : ಇನ್ನೂ 3-4 ಜನರಿದ್ದಾರಲ್ಲ?

ಶ್ರೀ ಕೆ.ಜೆ.ಜಾರ್ಜ್ : ಇಲ್ಲ, 3-4 ಜನರಿಲ್ಲ. ಬಾಕಿ ಇರುವವರ ಮೇಲೆ ಈಗ ಆಗಸ್ಟ್-ಸೆಪ್ಟೆಂಬರ್ ತಿಂಗಳಿನಲ್ಲಿ . . departmental enquiry ಮಾಡದೆ ಮಾಡಿದರೆ ಏನಾಗುತ್ತದೆಂದರೆ, ಅವರು KAT ಗೆ ಹೋಗಿ stay ತರುತ್ತಾರೆ. ಅದಕ್ಕಾಗಿ. . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಜಗದೀಶ ಶೆಟ್ಟರ್ : ನೋಡಿ ಅದಕ್ಕೆ ರಮೇಶ್ ಕುಮಾರ್ ರವರು ಬಹಳ emotional ಆಗಿ ಮಾತನಾಡಿದರು.

ಶ್ರೀ ಕೆ.ಜೆ.ಜಾರ್ಜ್ : ಇಲ್ಲ. ರಮೇಶ್ ಕುಮಾರ್ . . .

ಶ್ರೀ ಜಗದೀಶ್ ಶೆಟ್ಟರ್ : ನೀವು ಬೇರೆ ಬೇರೆ ಕೇಸುಗಳನ್ನು ಬಿಟ್ಟು ಬಿಡಿ. ಇಂತಹ ಪ್ರಕರಣದಲ್ಲಿ immediate action ತೆಗೆದುಕೊಂಡರೆ ಅವರಿಗೆ ಧೈರ್ಯ ಬರುತ್ತದೆ. ಇಲ್ಲದಿದ್ದರೆ ಈ ಸಮಸ್ಯೆ ಹೀಗೆ . .

ಶ್ರೀ ಕೆ.ಜೆ.ಜಾರ್ಜ್ : Immediate ಮಾಡಿದ್ದೇವೆ. 5 ದಿವಸದಲ್ಲಿ. . .

ಶ್ರೀ ಜಗದೀಶ್ ಶೆಟ್ಟರ್ : ನೋಡಿ ಈ ರೀತಿ ಅತ್ಯಾಚಾರ ಮಾಡುವಂತಹವರಿಗೆ ಹೆದರಿಕೆ ಇಲ್ಲದಂತಾಗುತ್ತದೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೆ.ಜೆ.ಜಾರ್ಜ್ : 5 ದಿನದಲ್ಲಿ inspector ಅವರನ್ನು suspend ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲ, ಉಳಿದವರು involve ಆಗಿದ್ದಾರಲ್ಲ?

ಶ್ರೀ ಕೆ.ಜೆ.ಜಾರ್ಜ್: ಈಗ ಒಬ್ಬರು Inspector ಅನ್ನು suspend ಮಾಡಿದ್ದಾರೆ. ಇನ್ನೊಬ್ಬರ ಮೇಲೆ minor complaint ಹೇಳಿರುವುದರಿಂದ departmental enquiry ಮಾಡುತ್ತಾರೆ. Enquiry report ಬಂದ ಕೂಡಲೇ immediately ಮಾಡುತ್ತೇವೆ.

ಅಧ್ಯಕ್ಷರು : ಬೇಗ ಮಾಡಿ.

ಶ್ರೀ ಜಗದೀಶ ಶೆಟ್ಟರ್ : ಇನ್ನು 2-3 ದಿನಗಳಲ್ಲಿ ಇದರ ಬಗ್ಗೆ action ತೆಗೆದುಕೊಳ್ಳಿ. ನೀವು 7ನೇ ತಿಂಗಳಿನಲ್ಲಿ ಆಗಿದ್ದು, 09 ನೇ ತಿಂಗಳಿಗಾಗಿದ್ದು ಹಾಗೆ. . . .

ಶ್ರೀ ಕೆ.ಜೆ.ಜಾರ್ಜ್ : ಆಯಿತು. ಆದಷ್ಟು ಬೇಗನೆ enquiry report ತರಿಸುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಪಾಪ ಅವರ ತಂದೆ, ಎಲ್ಲಾ ಕಡೆ ಅಡ್ಡಾಡಿ ಬಂದಿದ್ದೇವೆ ನಾವು. ಇದರಲ್ಲಿ ನೋಡಿ ನಾನು ಅವರ ತಂದೆಗೆ ವಿಚಾರ ಮಾಡಿದೆ. ಆತ ಹೇಳಿದ ಆರೋಪಿಗಳಿಗೆ help ಮಾಡುವ ಸಲುವಾಗಿ ಇದೆಲ್ಲವೂ ನಡೆಯುತ್ತಿದೆ.

ಅಧ್ಯಕ್ಷರು : ಆ ತರಹ ಎಲ್ಲ ಮಾಡಲು ಹೋಗಬೇಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಜೆ.ಜಾರ್ಜ್ : ನಾವು ಆ ತರಹ ಮಾಡುವುದಿಲ್ಲ. ನಮ್ಮ ಸರ್ಕಾರ ಯಾವುದೇ ಆರೋಪಿಗಳನ್ನು. . .

ಶ್ರೀ ಜಗದೀಶ ಶೆಟ್ಟರ್ : help ಮಾಡುವ ಸಲುವಾಗಿಯೇ, ಸುಮ್ಮನೆ negligence ಅಲ್ಲ. ಅಧಿಕಾರಿಗಳ negligence ಎಂದು ಆಗುತ್ತದೆ. ಅವರಿಗೆ help ಮಾಡುವ ಸಲುವಾಗಿಯೇ ಆಗುತ್ತಿದೆ ಇದು.

ಶ್ರೀ ಕೆ.ಜೆ.ಜಾರ್ಜ್ : ನೋಡಿ ನಮ್ಮ ಸರ್ಕಾರದವರು ತಪ್ಪಿತಸ್ಥರನ್ನು arrest ಮಾಡಿ 10 ತಿಂಗಳು ಅವರು ಜೈಲಿನಲ್ಲಿದ್ದರು. ನ್ಯಾಯಾಲಯದಲ್ಲಿ ಅವರಿಗೆ ಜಾಮೀನು ಕೊಟ್ಟಿದ್ದಾರೆ. ಅವರು ಹೇಳಿದಂತೆ ಇನ್ನಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಮಾಡಿಯೇ ಮಾಡುತ್ತೇವೆ. ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ನಾನು ಹೇಳುತ್ತೇನೆ.

ಅಧ್ಯಕ್ಷರು : ಓ.ಕೆ. ಸಾಕು. ಆಮೇಲೆ ಇನ್ನೊಂದು. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ನೀವು ಮಾತನಾಡಿ. ತನಿಖೆ ಮಾಡುವ ವಿಚಾರದಲ್ಲಿ ನ್ಯಾಯಾಂಗ ತನಿಖೆ ಮಾಡುತ್ತೀರೋ, ಏನು ಮಾಡುತ್ತೀರೋ ಸ್ವಲ್ಪ honest and dedicated officer ನೇಮಿಸಿ, ಯಾವ ರೀತಿ ಮಾಡಬೇಕೋ ಸ್ವಲ್ಪ ಬೇಗ ಮಾಡಿ ಕೊಟ್ಟರೆ ಮಡಿಕೇರಿಯಲ್ಲಿ ಶಾಂತವಾದ ವಾತಾವರಣ ನಿರ್ಮಾಣವಾಗುತ್ತದೆ. ಏಕೆಂದರೆ ಎಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳೇ, ವಿದೇಶದಿಂದ ಮತ್ತು ಬೇರೆ ಬೇರೆ ರಾಜ್ಯಗಳಿಂದ home stay ಗೆ ಬಹಳ ಬರುತ್ತಾರೆ. ಈಗ ನಮ್ಮ ಕಡೆಯೂ ಪ್ರಾರಂಭವಾಗಿದೆ. ಅದಕ್ಕೆ ತೊಂದರೆಯಾಗಬಾರದು. ಬಹಳ ಜನರಿಗೆ ಹಳೆಯ ಮನೆಗಳಿವೆ. ಹೊರಗಡೆಯಿಂದ ಬಂದವರು ಆ ಮನೆಗಳಲ್ಲಿ ಉಳಿದುಕೊಂಡು ಅವರು ಮಾಡಿಕೊಡುವ ಊಟ, ವಗೈರೆ.

ಶ್ರೀ ಜಗದೀಶ್ ಶೆಟ್ಟರ್ : ಈಗ National level ಮತ್ತು International level ನಲ್ಲಿ Tourism center ಆಗಿದೆ ಅದು. ಬೇರೆ ಬೇರೆ ಕಡೆಯಿಂದ ಬರುತ್ತಿದ್ದಾರೆ.

ಅಧ್ಯಕ್ಷರು : ನಮ್ಮಲ್ಲಿ ಬರುತ್ತಿದ್ದಾರೆ ಈಗ. Website ನಲ್ಲಿ ಹಾಕಿದ್ದಾರೆ. ಈ ಜೋಗಕ್ಕೆ ಬರುವವರು ಪಕ್ಕ ಹಳ್ಳಿಯಲ್ಲಿ ಇರುವವರಿಗೆ ಹೋಗಿ ಮಾಡುತ್ತಾರೆ. ಅವರಿಗೇನೆಂದರೆ, ಅವರು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಲಗುವುದು, ಊಟ ಮಾಡುವುದು, ಅಡಿಗೆ ಮಾಡುವುದು ಇದೇ ಅವರಿಗೆ ಖುಷಿ. ಬಹಳ ಜನ ಬರುತ್ತಾರೆ. ಈಗ ಚಿಕ್ಕಮಗಳೂರಿನಲ್ಲಿಯೂ ಪ್ರಾರಂಭವಾಗಿದೆ. ಅದಕ್ಕೆ ಅದೊಂದು ದೊಡ್ಡ ಪ್ರವಾಸೋದ್ಯಮ ಕೇಂದ್ರವಾಗಿ ತುಂಬಾ ಚೆನ್ನಾಗಿ ಬೆಳೆಯುತ್ತಿದೆ. ಅದಕ್ಕೆ ಆತಂಕ ಆಗದ ರೀತಿಯಲ್ಲಿ ಸ್ವಲ್ಪ ಜವಾಬ್ದಾರಿ ವಹಿಸಿಕೊಳ್ಳಿ.

ಶ್ರೀ ಕೆ.ಜಿ.ಬೋಪಯ್ಯ : ಅಲ್ಲಿಗೆ entry ಆಗುವುದು ಮೂರು ರಸ್ತೆಗಳಿಂದ. ಸ್ವಲ್ಪ ಚೆಕಿಂಗ್ ಬಿಗಿ ಆದರೆ ಎಲ್ಲಾ ನಿಂತು ಹೋಗುತ್ತದೆ.

ಶ್ರೀ ದಿನೇಶ್ ಗುಂಡುರಾವ್ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ ತನಿಖೆಯನ್ನು ಕೂಡಾ ನಿಷ್ಪಕ್ಷಪಾತವಾಗಿ ಮಾಡುತ್ತೇವೆ. ವಾತಾವರಣ ತಿಳಿಯಾಗಬೇಕಾದರೆ ಕಣ ಕ್ರಮ ತೆಗೆದುಕೊಳ್ಳದೆ ಹೋದರೆ ಯಾರೂ ಕೂಡಾ ಅದನ್ನು ಸರಿಪಡಿಸಲಾಗುವುದಿಲ್ಲ. ಯಾರಿಗೂ ಕೂಡಾ ತೊಂದರೆ ಕೊಟ್ಟು ಮಾಡುವ ಪರಿಸ್ಥಿತಿಗೆ ಹೋಗುವುದಿಲ್ಲ.

ಅಧ್ಯಕ್ಷರು : ಈಗ ನಿಮ್ಮ ಮನೆಯಲ್ಲಿಯೂ ಯಾರೂ ವಾಸ ಇಲ್ಲದಿದ್ದರೆ home stay ಮಾಡಿಬಿಡಿ. ಆರಾಮವಾಗಿ ಸಿಗುತ್ತದೆ. ಇದನ್ನು ಗಮನಿಸಿ.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಆಯಿತು ಖಂಡಿತವಾಗಿಯೂ ನೋಡುತ್ತೇವೆ.

ಅಧ್ಯಕ್ಷರು :Thank you. ಈಗ ಒಂದು ವಿಧೇಯಕವನ್ನು ಮಂಡಿಸಿಬಿಡುತ್ತೇನೆ. ಚರ್ಚೆ ಇಲ್ಲ, ಕೇವಲ ಮಂಡಿಸುವುದು.

**ಶಾಸನ ರಚನೆ**

**ವಿಧೇಯಕವನ್ನು ಮಂಡಿಸುವುದು**

**ಕರ್ನಾಟಕ ಕೈಗಾರಿಕಾ ಸೌಲಭ್ಯಗಳ (ತಿದ್ದುಪಡಿ) ವಿಧೇಯಕ, 2015**

**ಮಂಡನೆಗೆ ಅನುಮತಿ ಕೋರಿಕೆ**

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, "2015ನೇ ಸಾಲಿನ ಕರ್ನಾಟಕ ಕೈಗಾರಿಕಾ ಸೌಲಭ್ಯಗಳ (ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು : ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ

"2015ನೇ ಸಾಲಿನ ಕರ್ನಾಟಕ ಕೈಗಾರಿಕಾ ಸೌಲಭ್ಯಗಳ (ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕೃತವಾಗಿದೆ. ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಪ್ರವಾಸೋದ್ಯಮ ಸಚಿವರು) : ಮಾನ್ಯ ಅಧ್ಯಕ್ಷರೆ, "2015ನೇ ಸಾಲಿನ ಕರ್ನಾಟಕ ಕೈಗಾರಿಕಾ ಸೌಲಭ್ಯಗಳ (ತಿದ್ದುಪಡಿ) ವಿಧೇಯಕ"ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಈಗ ವರದಿಯನ್ನೊಪ್ಪಿಸುವುದು.

**ವರದಿಯನ್ನೊಪ್ಪಿಸುವುದು**

**1.** ಶ್ರೀ ಎನ್.ವೈ.ಗೋಪಾಲಕೃಷ್ಣ (ಅಧ್ಯಕ್ಷರು, ಅಂದಾಜುಗಳ ಸಮಿತಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಅಂದಾಜುಗಳ ಸಮಿತಿಯ ಅಧ್ಯಕ್ಷನಾದ ನಾನು 2014-15 ನೇ ಸಾಲಿನ ಅಂದಾಜುಗಳ ಸಮಿತಿಯಿಂದ ಅಂಗೀಕರಿಸಲ್ಪಟ್ಟ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ 4ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

**2.** ಡಾ: ಎ.ಬಿ.ಮಾಲಕರೆಡ್ಡಿ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷನಾದ ನಾನು 2014-15 ನೇ ಸಾಲಿನ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧೀನ ಶಾಸನ ರಚನಾ ಸಮಿತಿಯಿಂದ ಅಂಗೀಕರಿಸಲ್ಪಟ್ಟ 43ನೇ ಅನುಸರಣಾ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು. ಈಗ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

**ಪ್ರಶ್ನೋತ್ತರ**

**ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು**

ಅಧ್ಯಕ್ಷರು : ಈಗ ಜಿ.ಟಿ.ದೇವೇಗೌಡ ರವರು ಸದನದಲ್ಲಿಲ್ಲ. ರಾಜ ವೆಂಕಟಪ್ಪ ನಾಯಕ ರವರು ಸದನದಲ್ಲಿಲ್ಲ. ಗುರುಪಾಟೀಲ ಶಿರವಾಳ ರವರ ಪ್ರಶ್ನೆ ಕೇಳಿ.

ಶ್ರೀ ಗುರುಪಾಟೀಲ ಶಿರವಾಳ : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 5795 ನ್ನು ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಅಧ್ಯಕ್ಷರು : ಮಂತ್ರಿಗಳು ಇದ್ದರಲ್ಲ, ಎಲ್ಲಿ ಹೋದರು ಕರೆಯಿರಿ. ಸಣ್ಣ ಪ್ರಶ್ನೆ ಇದೆ, ಇದ್ದರೆ ಕರೆಯಿರಿ. ಸ್ವಲ್ಪ ಮಂತ್ರಿಗಳು ಬರುವವರೆ ಇರಿ. ಆಮೇಲೆ ವಸಂತ ಬಂಗೇರ ಕೆ. ಸದನದಲ್ಲಿಲ್ಲ. ಈಗ ಮಧು ಬಂಗಾರಪ್ಪ ಎಸ್. ರವರ ಪ್ರಶ್ನೆ ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 410(5269)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಏನೆಂದರೆ 155 ಜನ ಅತಿಥಿ ಶಿಕ್ಷಕರನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಇನ್ನೂ 62 ಜನರ ಕೊರತೆ ಇದೆ. ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳಬೇಕಾದರೆ ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ತೆಗೆದುಕೊಂಡರೆ ಕಷ್ಟವಾಗುತ್ತದೆ. ಶಾಲೆ ಪ್ರಾರಂಭವಾಗುವಾಗಲೇ ತೆಗೆದುಕೊಂಡರೆ ಮಕ್ಕಳಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಹೋದ ಬಾರಿ ಯಾರನ್ನು ತೆಗೆದುಕೊಂಡಿರುತ್ತಾರೋ ಅವರನ್ನೇ continue ಮಾಡಲಿ. ಆಗ ಅದು ಉಪಯೋಗವಾಗುತ್ತದೆ.

ಅಧ್ಯಕ್ಷರು : ವರ್ಷದ ಪ್ರಾರಂಭದಲ್ಲಿಯೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ regular recruitment ಗೆ orders ಬಂದಿದೆ. ಇನ್ನು 15 ದಿನಗಳಲ್ಲಿ.

ಅಧ್ಯಕ್ಷರು : ಅದು ಆಮೇಲೆ. ಈಗ ಈ ಪ್ರಶ್ನೆಗೆ ಉತ್ತರ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್ : ಅತಿಥಿ ಶಿಕ್ಷಕರನ್ನು ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು : ವರ್ಷದ ಪ್ರಾರಂಭದಲ್ಲಿಯೇ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಮಧು ಬಂಗಾರಪ್ಪ ಎಸ್. : ವರ್ಷದ ಪ್ರಾರಂಭದಲ್ಲಿಯೇ ಕೊಡಿ, ಮತ್ತು ಸಂಪೂರ್ಣವಾಗಿ ಕೊಡಿ. ಇಲ್ಲದಿದ್ದರೆ ಶಾಲೆಯ ಮಕ್ಕಳಿಗೆ ಅನ್ಯಾಯವಾಗುತ್ತದೆ.

ಶ್ರೀ ಕಿಮ್ಮನೆ ರತ್ನಾಕರ್ : ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಅರವಿಂದ್ ಚಂದ್ರಕಾಂತ್ ಪಾಟೀಲ್ ರವರು ಸದನದಲ್ಲಿಲ್ಲ. ಈಗ ಕೋನರೆಡ್ಡಿ ಎನ್.ಎಚ್ ರವರ ಪ್ರಶ್ನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 412(5254)

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ.)

ಶ್ರೀ ಎನ್.ಹೆಚ್.ಕೋನರೆಡ್ಡಿ (ನವಲಗುಂದ) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನವಲಗುಂದ ತಾಲ್ಲೂಕನ್ನು ಕೈಗಾರಿಕಾ ಪ್ರದೇಶ ಎಂದು ಘೋಷಣೆ ಮಾಡಿದ್ದಾರೆ. ಇಲ್ಲಿ record ನಲ್ಲಿ ಘೋಷಣೆ ಮಾಡಿಲ್ಲ ಎಂದು ಹೇಳುತ್ತಾರೆ. ಆಗಲೇ ಅಧಿಕಾರಿಗಳು ಬಂದು ನನ್ನ ಜೊತೆಯಲ್ಲಿ ಸಭೆ ಮಾಡಿದ್ದಾರೆ. ಅದಕ್ಕಾಗಿ ಸದನಕ್ಕೆ ಸರಿಯಾದ ಮಾಹಿತಿ ಕೊಡಲಿ ಎಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಘೋಷಿಸಬೇಕೆಂದು ಹೇಳುವುದೇನು?

ಶ್ರೀ ಎನ್.ಹೆಚ್.ಕೋನರೆಡ್ಡಿ : ಹೌದು ಸರ್.

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಅವರು ನಂಜುಂಡಪ್ಪ ವರದಿಯಲ್ಲಿ ಕೈಗಾರಿಕಾ ವಲಯ ಎಂದು ಸರ್ಕಾರ ಘೋಷಿಸಿರುವುದು ನಿಜವೆ ಎಂದು ಕೇಳಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

Actually declare ಆಗಿಲ್ಲ. Declare ಆದರೆ ಏನೇನು ಮಾಡಬೇಕೆಂಬ ಮುಂದಿನ ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. ಈಗ ಆಗಿಲ್ಲ ಅದು.

ಅಧ್ಯಕ್ಷರು : ಅದಾಯಿತು ಬಿಡಿ. ಈಗ ಮಾಡುತ್ತೀರಾ ಏನಾದರೂ?

ಶ್ರೀ ಕಿಮ್ಮನೆ ರತ್ನಾಕರ್ : ಪ್ರಸ್ತಾವನೆ ಸರ್ಕಾರದೆ ಮುಂದೆ ಇಲ್ಲ. ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಆಯಿತು. ಈಗ ಶಿವಾನಂದ ಎಸ್.ಪಾಟೀಲ್ ರವರ ಪ್ರಶ್ನೆ.

(ಮುಂದು. . . )

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 (41) 6.30 NM VG

**ಪ್ರಶ್ನೆ ಸಂಖ್ಯೆ: 413(5635)**

**ಉತ್ತರಗಳನ್ನು ಲಗತ್ತಿಸಲಾಗಿದೆ**

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ, ಹಿಂದಿನ ಸಚಿವರೆ ಈ ಹೋಬಳಿಗಳನ್ನು ಹೊಡೆದು ಬೇರೆ ಶಿಕ್ಷಣ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭ ಮಾಡುತ್ತೇವೆಂದು ಇದೇ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ಇದನ್ನು ತಾಲ್ಲೂಕು ಆದ ಮೇಲೆ ನಾವು ಪರಿಗಣನೆ ಮಾಡುತ್ತೇವೆಂದು ಇವರು ಉತ್ತರ ಬರೆಯುತ್ತಾರೆ. ಯಾವುದು ಸತ್ಯ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ಪ್ರಸ್ತಾವನೆ ಸರ್ಕಾರದ ಮುಂದಿದೆ. ಒಟ್ಟು 45 ಈ ರೀತಿಯ ಪ್ರಸ್ತಾವನೆಗಳು ಬಂದಿವೆ. ಇದೂ ಕೂಡ ಪರಿಶೀಲನೆ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್: 2012ರಲ್ಲೇ ಆಗಿ ಬಿಟ್ಟಿದೆ. ಹೊಡೆದು ಬೇರೆ ಕಛೇರಿಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. 2012ರಲ್ಲಿ ಆಗಿದ್ದರೂ ಇದುವರೆಗೂ ಕಾರ್ಯರೂಪಕ್ಕೆ ಬರುತ್ತಿಲ್ಲ.

ಅಧ್ಯಕ್ಷರು: ನಿರ್ದಿಷ್ಟವಾಗಿ ಏನಾದರೂ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್: ತಾಲ್ಲೂಕು ಕೇಂದ್ರ ಮಾಡುವ ಬಗ್ಗೆ ಅಧಿಕೃತವಾದ ಒಂದು ಪ್ರಸ್ತಾವನೆ. ಅದು ಆಗಿಲ್ಲವೆಂದು ಆಗ ಮಾಡಿದ್ದು. 176 ತಾಲ್ಲೂಕುಗಳಿಗೆ 176 ಬ್ಲಾಕ್‌ಗಳು ಇವೆ. ಆ ನಂತರ ಇನ್ನು ಈ ರೀತಿಯ ಕಾರ್ಯ ಒತ್ತಡ, ಎಲ್ಲಿ ಮಕ್ಕಳ ಸಂಖ್ಯೆ, ಶಾಲೆ ಸಂಖ್ಯೆ ಹಾಗೂ ಶಿಕ್ಷಕರ ಸಂಖ್ಯೆ ಜಾಸ್ತಿ ಇದೆ ಅಲ್ಲಿ ಮಾತ್ರ ಎರಡೆರಡು ನಾವು ಮಾಡಿದ್ದೇವೆ. ಅದೇ ಆಧಾರದ ಮೇಲೆ ಇದಕ್ಕೂ ಕೂಡ ನಾವು ಪರಿಗಣನೆ ಮಾಡಿದ್ದೇವೆ. ತಾಲ್ಲೂಕು ಆಗಬಹುದು ಆ ಸಂದರ್ಭದಲ್ಲಿ ಮಾಡಬಹುದು ಎಂದು ಪ್ರಸ್ತಾವನೆ ಇತ್ತು. ಅತಿ ಶೀಘ್ರದಲ್ಲಿ ಮಾಡತಕ್ಕಂತಹ ಪ್ರಯತ್ನವನ್ನು ಮಾಡುತ್ತೇವೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ ನನ್ನ ಪ್ರಶ್ನೆ ಸಿಂಪಲ್ ಇಷ್ಟೆ. ಈಗಾಗಲೆ ಅವರು ಎಲ್ಲಿ ಕ್ಷೇತ್ರ ಜಾಸ್ತಿ ಇದೆ, ಒತ್ತಡ ಜಾಸ್ತಿ ಇದೆ ಅಂತಹ ಕೆಲವು ಕಡೆ ಮಾಡಿದ್ದಾರೆ. ಇದೂ ಕೂಡ ಅದೇ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು.

ಅಧ್ಯಕ್ಷರು: ಶೀಘ್ರದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕಿಮ್ಮನೆ ರತ್ನಾಕರ್: ಶೀಘ್ರದಲ್ಲಿಯೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 414(5985)**
**ಉತ್ತರಗಳನ್ನು ಲಗತ್ತಿಸಲಾಗಿದೆ**

ಅಧ್ಯಕ್ಷರು: ಮಾನ್ಯ ಸಚಿವರು ಇಲ್ಲ.

**ಪ್ರಶ್ನೆ ಸಂಖ್ಯೆ: 415(5826)**
**ಉತ್ತರಗಳನ್ನು ಲಗತ್ತಿಸಲಾಗಿದೆ**

ಅಧ್ಯಕ್ಷರು: ಮಾನ್ಯ ಸಚಿವರು ಇಲ್ಲ.

ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ, ನಾನು ಅವರಿಗೆ ಪ್ರಶ್ನೆ ಕೇಳಿದಾಗ ಪ್ರಶ್ನೆಗೆ ತಕ್ಕದಾಗಿ ಸಮಸ್ಯೆಯನ್ನು ಕೇಳಿದ್ದೆ, ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಶಿಥಿಲಗೊಂಡಿರುವ ಮನೆಗಳ ಸಮಸ್ಯೆ ಬಗ್ಗೆ ಕೇಳಿದ್ದೆ. ಅದು ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಕೊಟ್ಟಿದ್ದೆ ಅವರು ಚರ್ಚಿಸಿ ಎಂದು ಆದೇಶ ಕೂಡ ಕೊಟ್ಟಿದ್ದರು. ಅದರ ಅಂಗವಾಗಿ ಸಂಬಂಧಪಟ್ಟ ಇಲಾಖಾಧಿಕಾರಿಗಳು ಬಂದು ರಾಜೀವ್‌ಗಾಂಧಿ Housing Corporation MD ಯವರು ಬಂದು ತನಿಖೆ ಮಾಡಿ ವರದಿ ಕೊಟ್ಟಿದ್ದಾರೆ. ಆ ಪ್ರಕಾರವಾಗಿ ವಿಶೇಷ ಪ್ಯಾಕೇಜ್ ಕೊಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ಏನೂ ಉತ್ತರ ಕೊಟ್ಟಿಲ್ಲ. ಅದನ್ನು ದಯವಿಟ್ಟು ಮಾಡಿ ಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಡಾ.ಎಂ.ಹೆಚ್. ಅಂಬರೀಶ್: ಮಾನ್ಯ ಅಧ್ಯಕ್ಷರೆ, ಅವರು ಇವತ್ತು ನನಗೆ ಅದನ್ನು ತಂದು ಕೊಟ್ಟರು. ಅದನ್ನು ನಾನು ನೋಡಿದೆ. ನಮ್ಮ Rajeev Gandhi Housing Corporation M.D.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಯವರು ಅಲ್ಲಿ ಹೋಗಿ ಪರಿಶೀಲನೆ ಮಾಡಿ ಬಂದು ಅವರು ಹೇಳಿದ್ದನ್ನೆಲ್ಲ ಹೇಳಿದ್ದಾರೆ. ಚರ್ಚೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ಅದಕ್ಕೆ ಅವರಿಗೆ ದಿನಾಂಕದ ಏರ್ಪಾಡು ಮಾಡಿ ಕೊಡುತ್ತೇನೆ. ಇವತ್ತು ಕೊಟ್ಟಿದ್ದಾರೆ ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿಸುತ್ತೇನೆ.

ಅಧ್ಯಕ್ಷರು: ಮಾನ್ಯ ತಿಮ್ಮರಾಯಪ್ಪರವರೆ ನೀವು ಅದನ್ನು ಸ್ವಲ್ಪ follow up ಮಾಡಿ. ಏಕೆಂದರೆ ಅದು ಸ್ವಲ್ಪ most backward ತಾಲ್ಲೂಕು ಅಲ್ಲಿ SC/ ST ಜನಾಂಗದವರು ಹೆಚ್ಚಿಗೆ ಇದ್ದಾರೆ. ರಾಘವೇಂದ್ರ ಬಸವರಾಜ್ ಹಿತ್ನಾಳ್ ಇಲ್ಲ. ಶ್ರೀಮತಿ ಶಶಿಕಲಾ ಜೊಲ್ಲೆಯವರು ಪ್ರಶ್ನೆ ಕೇಳಿ. ರಾಘವೇಂದ್ರ ಬಸವರಾಜ್ ಹಿಟ್ನಾಳ್ ಕೆ. ಇಲ್ಲ.

**ಪ್ರಶ್ನೆ ಸಂಖ್ಯೆ:417(5638)**
**ಉತ್ತರಗಳನ್ನು ಲಗತ್ತಿಸಲಾಗಿದೆ**

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ನಮ್ಮ ಕ್ಷೇತ್ರದಲ್ಲಿರತಕ್ಕಂತಹ 2013-14ನೇ ಸಾಲಿನ ಬಸವ ವಸತಿ ಯೋಜನೆ ಮನೆಗಳನ್ನು ಬೇರೆ ಕ್ಷೇತ್ರಕ್ಕೆ ವರ್ಗಾಯಿಸಿರುವುದು ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅವರು 20 ಮನೆಗಳನ್ನು ಚಿಕ್ಕೋಡಿ ತಾಲ್ಲೂಕಿನ ಜಾಗನೂರು, ಖಡಕಲಾಟ ಹಾಗೂ ಪಟ್ಟಣಕುಡಿ ಪಂಚಾಯತಿಗಳಿಗೆ ಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಕಳೆದ ಡಿಸೆಂಬರ್ ತಿಂಗಳಿನಲ್ಲಿ ಇದೇ ಪ್ರಶ್ನೆಗೆ 12 ಮನೆಗಳನ್ನು ವರ್ಗಾಯಿಸಿದ್ದೇವೆಂದು ಹೇಳಿದ್ದರು. ಈಗ 20 ಮನೆಗಳನ್ನು ವರ್ಗಾಯಿಸಿದ್ದೇವೆಂದು ಹೇಳುತ್ತಿದ್ದಾರೆ. ನಾನು ತಾಲ್ಲೂಕು ಪಂಚಾಯತಿಯಲ್ಲಿ ವರದಿ ತೆಗೆದುಕೊಂಡಾಗ ಅದರಲ್ಲಿ 35 ಮನೆಗಳು ಎಂದು ಹೇಳಿದ್ದಾರೆ. ಇದರಲ್ಲಿ ಸತ್ಯ ಸಂಖ್ಯೆ ಯಾವುದು, ಮತ್ತು ಇನ್ನೊಂದು ಪ್ರಶ್ನೆ ಈ ರೀತಿ ಬದಲಾಯಿಸುವುದಕ್ಕೆ ಅವಕಾಶ ಇದೆಯೇ ಎಂದು ನಾನು ಪ್ರಶ್ನೆ ಕೇಳಿದಾಗ ಅಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಫಲಾನುಭವಿಗಳು ಇಲ್ಲದಿದ್ದರೆ ಅದನ್ನು ತಾಲ್ಲೂಕಿಗೆ ವರ್ಗಾವಣೆ ಮಾಡಬಹುದು ಎಂದು ಉತ್ತರ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕೊಟ್ಟಿದ್ದಾರೆ. ಆದರೆ ನಾನು ಕೂಡ ಪತ್ರ ಕೊಟ್ಟಿದ್ದೆ, ಆಗ ರಾಜೀವ್‌ಗಾಂಧಿ ಹೌಂಸಿಂಗ್ ಕಾರ್ಪೊರೇಷನ್‌ನ ಎಂ.ಡಿ. ಯವರು ತಾಲ್ಲೂಕಿಗೆ ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲ, ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಬೇರೆ ಪಂಚಾಯತಿಗೆ ವರ್ಗಾವಣೆ ಮಾಡಿಕೊಳ್ಳಿ ಎಂದು ಹೇಳಿದ್ದರು. ನಾನು ಪತ್ರ ಕೊಟ್ಟಾಗ ಕೂಡ ಅದು ನನ್ನ ಗಮನಕ್ಕೆ ಬರದೆ ವರ್ಗಾವಣೆಯಾಗಿದೆ.

ಅಧ್ಯಕ್ಷರು: ನಿಮ್ಮ ಕ್ಷೇತ್ರಕ್ಕೆ ಮಾಡಬೇಕೆಂದಾ, ಆಯಿತು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ: ನಮ್ಮ ಕ್ಷೇತ್ರ ಮನೆಗಳನ್ನು ವರ್ಗಾವಣೆ ಮಾಡಿರುವುದರಿಂದ ನನ್ನ ಕ್ಷೇತ್ರದ ಜನತೆಗೆ ವಂಚನೆಯಾಗಿರುವುದರಿಂದ ಈ ಬಾರಿ ಅವರಿಗೆ ಜಾಸ್ತಿ ಮನೆಗಳನ್ನು ಕೊಟ್ಟು ಅವರಿಗೆ ಸಹಾಯ ಮಾಡಬೇಕು.

ಅಧ್ಯಕ್ಷರು: ಬಂದ ಮನೆಗಳನ್ನು ಬೇರೆ ಕಡೆ ವರ್ಗಾವಣೆ ಮಾಡದೆ ನಿಮ್ಮ ಕ್ಷೇತ್ರಕ್ಕೆ ಕೊಡಬೇಕು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ: ಈಗಾಗಲೇ ಮನೆಗಳು ಹೋಗಿವೆ ಅಧ್ಯಕ್ಷರೆ.

ಡಾ.ಎಂ.ಹೆಚ್. ಅಂಬರೀಶ್: 20 ಮನೆಗಳು ಹೋಗಿವೆ ಅಧ್ಯಕ್ಷರೆ, ಅವರು ಕೇಳುವುದರಲ್ಲಿ ಅರ್ಥ ಇದೆ. ಹೆಣ್ಣು ಮಗಳು ಸಮಾಜದಲ್ಲಿ ಅಂಗವಿಕಲರ ಶಾಲೆ ನಡೆಸುತ್ತಿದ್ದಾರೆಂದು ಕೇಳಿ ನಾನು ತಾರತಮ್ಯ ಮಾಡಿ ಅವರಿಗೆ ಐದು ಮನೆ extra ಕೊಟ್ಟಿದ್ದೇನೆ. ಅವರು ಯಾವುದೇ ಪಕ್ಷ ಇರಬಹುದು ಒಬ್ಬ ಹೆಣ್ಣು ಮಗಳು ಇಲ್ಲಿ ಬಂದು ಕೂತು participation ಮಾಡುತ್ತಾರೆಂದು ಅವರಿಗೆ ಕೊಟ್ಟಿದ್ದೇನೆ. ಮತ್ತೆ ನೀವು 20 ಮನೆಗಳಿಗೆ ಏಕೆ ಯೋಚನೆ ಮಾಡುತ್ತೀರಿ? ಪಕ್ಕದಲ್ಲಿರುವವರು ನಿಮ್ಮ ಅಣ್ಣ ತಮ್ಮಂದಿರೇ ಅವರೂ ಚಿಕ್ಕೋಡಿಗೂ ಅದಕ್ಕೂ ಒಂದು ಐದು ಕಿ.ಮಿ. ಇರಬಹುದು. ನಿಮಗೆ ಇನ್ನೂ ಜಾಸ್ತಿ ಮನೆ ಕೊಡುತ್ತೇವೆ ಯೋಚನೆ ಮಾಡಬೇಡಿ. ನಾವು ಯಾರಿಗೂ ಆ ತಾರತಮ್ಯ ಮಾಡುವವರಲ್ಲ.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ: ಆದರೆ ಈ ತರಹ ಮೂರು ಮೂರು ಸಂಖ್ಯೆಗಳನ್ನು ಕೊಟ್ಟರೆ ಯಾವುದು ನಿಜ ಎಂದು ತಿಳಿದುಕೊಳ್ಳಬೇಕು ಅಧ್ಯಕ್ಷರೆ,ಒಂದು ಸಾರಿ 12, 15, 35 ಎಂದು ಹೇಳಿದರೆ.

ಅಧ್ಯಕ್ಷರು: ಆಯಿತು ಆಯಾ ಕ್ಷೇತ್ರಕ್ಕೆ ಕೊಟ್ಟು ಬಿಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಡಾ.ಎಂ. ಹೆಚ್. ಅಂಬರೀಶ್: ಅಕಸ್ಮಾತ್ ಫಲಾನುಭವಿಗಳು ಸಿಗದೆ ಇದ್ದರೆ ಪಕ್ಕದ ತಾಲ್ಲೂಕಿಗೆ ಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 418(5658)**
**ಉತ್ತರಗಳನ್ನು ಲಗತ್ತಿಸಲಾಗಿದೆ**

ಶ್ರೀ ಮಂಜುನಾಥಗೌಡ ಕೆ.ಎಸ್.: ಮಾನ್ಯ ಅಧ್ಯಕ್ಷರೆ ಉತ್ತರ ಒದಗಿಸಿದ್ದಾರೆ. ಅದು ಕೊಳಗೇರಿ. 2013-14ರಲ್ಲಿ ಬೋರ್ ಹಾಕಿಸಿದ್ದೀರಿ, ಇನ್ನೂ electrification ಆಗಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಅಲ್ಲಿಯವರೆಗೆ ಅವರು ಏನು ಕುಡಿಯಬೇಕು? ಶೌಚಾಲಯಗಳನ್ನು ನಾವು ನಿರ್ಮಿಸಿಯೇ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಕೊಳಗೇರಿಯವರು ಶೌಚಾಲಯಕ್ಕೆ ಎಲ್ಲಿಗೆ ಹೋಗಬೇಕು?

ಡಾ.ಎಂ.ಹೆಚ್. ಅಂಬರೀಶ್: ಮಾನ್ಯ ಅಧ್ಯಕ್ಷರೆ, ಯಾವ್ಯಾವ ಸ್ಲಂಗೆ ಎಷ್ಟೆಷ್ಟು ಬೇಕು ಹಂತ ಹಂತವಾಗಿ ಮಾಡುತ್ತಿದ್ದಾರೆ. ನೀವು ಹೇಳಿದ ಹಾಗೆ ಎರಡು ಬೋರ್‌ವೆಲ್ ಕೊರೆದಿದ್ದಾರೆ, ಅದಕ್ಕೆ ಆದಷ್ಟು ಬೇಗ electrification ಮಾಡಿ ಆದಷ್ಟು ಬೇಗ ಮಾಡಿ ಕೊಡುತ್ತೇವೆ. ಶೌಚಾಲಯದ ವಿಷಯ ಈಗ ನನ್ನ ಗಮನಕ್ಕೆ ಬಂದಿದೆ, ನಾನು ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಶ್ರೀ ಕೆ.ಎಸ್. ಮಂಜುನಾಥಗೌಡ: ನೀವು ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದೀರಿ. ಎರಡು ವರ್ಷದಿಂದ ಇನ್ನು electrification ಆಗಿಲ್ಲ, ಶೌಚಾಲಯಗಳು ಇಲ್ಲವೇ ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ, ಇನ್ನು ಕಳೆದ ಮೂರುವರ್ಷಗಳಿಂದ ಒಂದು ಮನೆಯೂ ಕೊಟ್ಟಿಲ್ಲವೆಂದು ನೀವೇ ಹೇಳಿದ್ದೀರಿ.

ಡಾ.ಎಂ. ಹೆಚ್. ಅಂಬರೀಶ್: ಅದು ಮನೆ ಅಲ್ಲ. ನೀವು ಕೊಳಚೆ ಪ್ರದೇಶಕ್ಕೆ ಕೇಳುತ್ತಿದ್ದೀರಿ. ಅಲ್ಲಿ ಇರುವುದು ಒಂದೆ ಕೊಳಚೆ ಪ್ರದೇಶ.

ಶ್ರೀ ಕೆ.ಎಸ್. ಮಂಜುನಾಥಗೌಡ: ಹೌದು. ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಇದೆ.

ಡಾ: ಎಂ.ಹೆಚ್. ಅಂಬರೀಶ್: ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಇದ್ದರು ಅದು ಕೊಳಚೆ ಪ್ರದೇಶ ಆಗಿರುವುದು ಒಂದು ನೀವು 2014-15ರಲ್ಲಿ ಮನೆಯೇ ಕೇಳಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಎಸ್. ಮಂಜುನಾಥಗೌಡ: ನೀವೇ ಉತ್ತರದಲ್ಲಿ ಕಳೆದ ಮೂರು ವರ್ಷಗಳಿಂದ ಒಂದು ಮನೆಯೂ ಕೊಟ್ಟಿಲ್ಲವೆಂದು.

ಡಾ.ಎಂ. ಹೆಚ್. ಅಂಬರೀಶ್: ಇಲ್ಲ ಇಲ್ಲ ಕೊಟ್ಟಿದ್ದೇವೆ ಇರಿ. 2379 ಮನೆ ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಮಂಜುನಾಥಗೌಡ: ಕೊಳಚೆ ಪ್ರದೇಶಕ್ಕೆ ಮನೆಕೊಟ್ಟಿಲ್ಲವೆಂದು ನೀವೇ ಉತ್ತರದಲ್ಲಿ ಕೊಟ್ಟಿದ್ದೀರಿ.

ಡಾ.ಎಂ. ಹೆಚ್. ಅಂಬರೀಶ್: ಕೊಳಚೆ ಪ್ರದೇಶಕ್ಕೆ ಈಗ ತಾನೆ ಸ್ಲಂ ಎಂದು declare ಆಗಿ ಎರಡು ವರ್ಷವಾಗಿದೆ. ಹಣಕಾಸಿನ ವ್ಯವಹಾರ ನೋಡಿಕೊಂಡು ಒಂದೊಂದಾಗಿ ಮಾಡುತ್ತಿದ್ದೇವೆ. ನಿಮಗೆ first basic needs infrastructure ಮಾಡುವುದಕ್ಕೋಸ್ಕರ ಅವು ಮಾಡಿದ ಆದ ಮೇಲೆ ಇದನ್ನು ಮುಂದಿನ action plan ನಲ್ಲಿ ಮಾಲೂರು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಮಂಜುನಾಥ ಗೌಡ: Basic needs ಇಲ್ಲ. ಶೌಚಾಲಯ ಕೂಡ ಇಲ್ಲ ಅಲ್ಲಿ.

ಡಾ.ಎಂ.ಹೆಚ್. ಅಂಬರೀಶ್: ಕಟ್ಟಿಸಿಕೊಡುತ್ತೇವೆಂದು ಹೇಳಿದ್ದೇವಲ್ಲ.

ಶ್ರೀ ಕೆ.ಎಸ್. ಮಂಜುನಾಥಗೌಡ: ದಯವಿಟ್ಟು ಕಟ್ಟಿಸಿಕೊಡಬೇಕು. ನೀವು ಏನು ಆಜ್ಞೆ ಮಾಡಿದ್ದೀರಿ ನಾಳೆ ನಿಮ್ಮ ಮನೆ ಹತ್ತಿರ ಬಂದು ನಾವು ತೆಗೆದುಕೊಂಡು ಬರುತ್ತೇವೆ.

ಡಾ.ಎಂ.ಹೆಚ್. ಅಂಬರೀಶ: ಮನೆ ಏಕೆ ನಮ್ಮ ಆಫೀಸ್‌ಗೆ ಬನ್ನಿ ಬೇಡವೆಂದು ಹೇಳುವುದಿಲ್ಲ. ಸಂತೋಷ.

ಅಧ್ಯಕ್ಷರು: ಬಿ.ಆರ್. ಪಾಟೀಲ್‌ರವರು

**ಪ್ರಶ್ನೆ ಸಂಖ್ಯೆ: 419(5302)**
**ಉತ್ತರಗಳನ್ನು ಲಗತ್ತಿಸಲಾಗಿದೆ**

ಶ್ರೀ ರಮೇಶ್ ಭೂಸನೂರು ಬಾಳಪ್ಪ( ಶ್ರೀ ಬಿ.ಆರ್. ಪಾಟೀಲರ ಪರವಾಗಿ):

ಅಧ್ಯಕ್ಷರು: ಮಾನ್ಯ ಸಚಿವರು ಇಲ್ಲ ನಾಳೆಗೆ ಹಾಕಿಕೊಳ್ಳೋಣ. ಆರ್. ನರೇಂದ್ರ ಇಲ್ಲ. ಚಿಕ್ಕಮಾದು ಇಲ್ಲ. ಪ್ರಶ್ನೋತ್ತರ ಮುಕ್ತಾಯವಾಯಿತು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25.11.2015ರ ಇಪ್ಪತ್ತೆಂಟನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 160 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ: 24.11.2015ರ ಇಪ್ಪತ್ತೇಳನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 197 ಪ್ರಶ್ನೆಗಳ ಪೈಕಿ 150 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಮುಂದು. . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015/6-40/42/HRV/VG

**ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

ವಿಷಯ : ಮಹದಾಯಿ ಉಪ ಯೋಜನೆಯಿಂದ ಕಳಸಾ-ಬಂಡೂರಿ ಯೋಜನೆಯನ್ನು ಕೂಡಲೇ ಜಾರಿಗೊಳಿಸುವ ಬಗ್ಗೆ.

- ---

ಅಧ್ಯಕ್ಷರು:-ಈಗ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ. ಮೊದಲನೆಯದಾಗಿ ಮಾನ್ಯ ಸದಸ್ಯರಾದ ಎನ್.ಹೆಚ್. ಕೋನರೆಡ್ಡಿಯವರು ಪ್ರಸ್ತಾಪ ಮಾಡಬೇಕು.

ಶ್ರೀ ಎನ್.ಹೆಚ್. ಕೋನರೆಡ್ಡಿ(ನವಲಗುಂದ):-ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಉತ್ತರ ಕರ್ನಾಟಕದ ಬಹು ದಿನಗಳ ಬೇಡಿಕೆಯಾದಂಥ ಮಲಪ್ರಭಾ ನದಿಗೆ ಮಹದಾಯಿ ಮತ್ತು ಕಳಸಾ ಬಂಡೂರಿ ಯೋಜನೆಯನ್ನು ಜೋಡಣೆ ಮಾಡಬೇಕೆಂದು ಹೋರಾಟ ಪ್ರಾರಂಭವಾಗಿದೆ. ಮಹದಾಯಿ ಜಲ ವಿವಾದ ಯೋಜನೆ ಪ್ರಾರಂಭವಾಗಿ 35 ವರ್ಷವಾಗಿದೆ. ಈ ಯೋಜನೆಯನ್ನು ಜಾರಿ ಮಾಡಲು ದಿನಾಂಕ 03-09-1982 ರಲ್ಲಿ ಸನ್ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಹದಾಯಿ ನದಿಯ ಒಂದು ಭಾಗದ ನೀರನ್ನು ಮಲಪ್ರಭಾ ವಲಯದ ನೀರಾವರಿ ಸೌಲಭ್ಯಕ್ಕೆ ಹಾಗೂ ಇನ್ನೊಂದು ಭಾಗದ ನೀರನ್ನು ಮಹದಾಯಿ ವಲಯದ ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗಿಸಿಕೊಳ್ಳುವ ಬಗ್ಗೆ ಯೋಜನೆ ಜಾರಿ ಮಾಡಲು ನಿರ್ಧರಿಸಲಾಯಿತು. ಅಲ್ಲಿಂದ ಇಲ್ಲಿಯವರೆಗೂ ಕೂಡ 1988-89 ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀ ಎಸ್.ಆರ್. ಬೊಮ್ಮಾಯಿಯವರು ಹಾಗೂ ಗೋವಾ ಮುಖ್ಯಮಂತ್ರಿ ಪ್ರತಾಪ್ ರಾಣೆಯವರು ಎರಡೂ ರಾಜ್ಯದ ಉಭಯ ಮಾತುಕತೆಯಿಂದ ಮಹದಾಯಿ ನೀರಿನ ಹಂಚಿಕೆ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಿ ವಿದ್ಯುತ್ ಉತ್ಪಾದನೆ ಹಾಗು ನೀರಾವರಿಗಾಗಿ ಮಾತುಕತೆ ಮೂಲಕ ಬಗೆಹರಿಸುವ ಬಗ್ಗೆ ಚರ್ಚೆ ನಡೆಯಿತು. ಚರ್ಚೆ ನಡೆದ ನಂತರ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಹದಾಯಿ ನದಿಯು ಪಶ್ಚಿಮಾಭಿಮುಖವಾಗಿ ಹರಿಯುವ ನದಿಯಾಗಿದ್ದು ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ ವಿವಿಧ ಭಾಗದಲ್ಲಿ ಹರಿಯುತ್ತದೆ. ಈ ನದಿಯ ಒಟ್ಟು ಪ್ರದೇಶದ . . . .

ಅಧ್ಯಕ್ಷರು:-ನೋಡಿ ಈಗ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ಹೇಳುತ್ತೇನೆ ಸಾರ್. ಅದಕ್ಕೆ ಮುಂಚೆ ಇದರ ಬಗ್ಗೆ ಸ್ವಲ್ಪ brief ಮಾಡುತ್ತೇನೆ.

ಅಧ್ಯಕ್ಷರು:-ನೋಡಿ ಅದೆಲ್ಲವು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಆದುದರಿಂದ ಇದರ ಬಗ್ಗೆ ಈಗ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ದಿನಾಂಕ 23-11-2015 ರಲ್ಲಿ ನ್ಯಾಯಾಧೀಕರಣದ ಮುಂದೆ ಇದರ ಬಗ್ಗೆ hearing ಇತ್ತು. ಮಾನ್ಯ ನ್ಯಾಯಮೂರ್ತಿಗಳಿಗೆ ಆರೋಗ್ಯ ಸರಿಯಿಲ್ಲವೆಂದು ಹೇಳಿ ಮತ್ತೆ ಇದನ್ನು ದಿನಾಂಕ 23-02-2016 ಕ್ಕೆ ಹಾಕಿದ್ದಾರೆ. ಮೂರು ತಿಂಗಳಿಗೊಮ್ಮೆ ಒಂದು sitting ಆದರೆ ನಮಗೆ ನ್ಯಾಯ ಯಾವಾಗ ದೊರೆಯಬೇಕು.

ಅಧ್ಯಕ್ಷರು:-ನ್ಯಾಯಾಧೀಕರಣ constitute ಆಗಿ ಎಷ್ಟು ದಿವಸವಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:-2010 ರಲ್ಲಿ ಆಗಿದೆ ಸಾರ್.

ಅಧ್ಯಕ್ಷರು:-ಅಂದರೆ ಈಗಾಗಲೇ 5 ವರ್ಷವಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ದಿನಾಂಕ 20-08-2016 ಕ್ಕೆ ಈ ನ್ಯಾಯಾಧೀಕರಣ ಅವಧಿಯೇ ಮುಗಿಯುತ್ತದೆ. ಅವದಿ ಮುಗಿಯುವುದರಿಂದ ಅಷ್ಟರೊಳಗೇ ನಮ್ಮದು hearing ಆಗಲಿ ಎಂದು ನಮ್ಮೆಲ್ಲರ ಭಾವನೆಯಿತ್ತು.

ಅಧ್ಯಕ್ಷರು:-ಈಗ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈಗಾಗಲೇ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಬಂದಿದ್ದೇವೆ. ಸರ್ವ ಪಕ್ಷಗಳ ನಿಯೋಗವನ್ನು ಅವರು ಕರೆದುಕೊಂಡು ಹೋಗಿದ್ದರು. ಈಗ ನಮಗೆ ಇರತಕ್ಕಂಥ ಒಂದೇ ಭಾವನೆಯೇನೆಂದರೆ, ನ್ಯಾಯಾಧೀಕರಣದ ಮೇಲೆ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

interim ಅರ್ಜಿ ಹಾಕಲಿ ಅಥವಾ ಏನಾದರೂ ಮಾಡಲಿ, ಅದು ನ್ಯಾಯಾಧೀಕರಣದ ಭಾಗ, ಅದರ ಬಗ್ಗೆ ಸರ್ಕಾರ ಏನು ಮಾಡುತ್ತದೋ ಅದನ್ನು ಮಾಡಲಿ. ಆದರೆ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶ ಮಾಡುವುದಕ್ಕೆ ಈ ಭಾಗದ ಎಲ್ಲಾ ಗೌರವಾನ್ವಿತ ಹಿರಿಯರು ಮತ್ತು ಆ ಭಾಗದಲ್ಲಿರತಕ್ಕಂಥ ಹಿರಿಯರು ಎಲ್ಲರೂ ಸೇರಿಕೊಂಡು ಇದನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿ ಉತ್ತರ ಕರ್ನಾಟಕದ ನವಲಗುಂದದಲ್ಲಿ ಏನು ಹೋರಾಟ ನಡೆಯುತ್ತಿದೆಯೋ ಆ ಹೋರಾಟಕ್ಕೆ ಸ್ಪಂದನೆ ಮಾಡಿ ನಮಗೇನಾದರೂ ನೀರು ಸಿಗುತ್ತದೇನೋ ಎನ್ನುವ ಆಶಾ ಭಾವನೆ ನಮ್ಮಲ್ಲಿದೆ.

ಅಧ್ಯಕ್ಷರು:-ಕೋನರೆಡ್ಡಿಯವರೆ, ಈಗ ಸ್ಪಂದನೆ ಯಾವ ರೀತಿ, ಏನು ಕುರಿ ಕಡಿಯಬೇಕೋ, ಕೋಳಿ ಕಡಿಯಬೇಕೋ ಅಥವಾ ರೊಟ್ಟಿ ಮಾಡಬೇಕೋ ಎನ್ನುವುದು ಒಂದು ಭಾಗ. ಈಗ ಕಾನೂನು ಭಾಗದಲ್ಲಿ, ನೀವು ಒಂದು ಮಾತನ್ನು ಹೇಳಿ, ಎಲ್ಲರನ್ನು ಕರೆದುಕೊಂಡು ಹೋಗಿ ಮತ್ತೊಂದು ಬಾರಿ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಬರುವುದು ಎಂದು ಇದೆಯಲ್ಲಾ, ಆ ರೀತಿ ಹೋಗಿಬರುವುದಕ್ಕೆ ಅವರು ಹೇಳುತ್ತಾರೆ. ಯಾವಾಗ ಹೋಗಿಬರಬೇಕು ಎಂಬ ಬಗ್ಗೆ ತೀರ್ಮಾನ ಮಾಡಲಿ. ಮಾನ್ಯ ಮುಖ್ಯಮಂತ್ರಿಗಳೆ, ಟ್ರಿಬ್ಯುನಲ್ ಇದೆಯಲ್ಲಾ ದಯವಿಟ್ಟು ಅವರನ್ನೆಲ್ಲಾ ಸಾಡೇ ಸಾಥ್‌ಗಳನ್ನೆಲ್ಲ ತೆಗೆದು ಬಿಸಾಕಿ ಯಾರಾದರೂ active ಆಗಿ ಕೆಲಸ ಮಾಡುವಂಥವರನ್ನು ನೇಮಕ ಮಾಡುವುದಕ್ಕೆ ಪ್ರಧಾನ ಮಂತ್ರಿಗಳಿಗೆ ತಾವು ಒತ್ತಾಯ ಮಾಡಿ. ಬೇರೆಯವರನ್ನು ಹಾಕಿಕೊಡಿ, ಈಗಿರುವವರು ಆರು ವರ್ಷವಾದರೂ ಕೂಡ ಒಂದು ತೀರ್ಮಾನ ಮಾಡಲಿಲ್ಲ. ಈ ಒತ್ತಾಯವನ್ನು ಮಾಡಲು ಯಾವಾಗ ಕರೆದುಕೊಂಡು ಹೋಗುತ್ತೀರಿ ಎಂಬ ಬಗ್ಗೆ ಒಂದು ಭರವಸೆಯನ್ನು ಕೊಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಒತ್ತಾಯದ ಮೇರೆಗೆ ಅವರು ರಾಜ್ಯ ಸರ್ಕಾರದ ಪರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಈಗಿರತಕ್ಕಂಥದ್ದು ಕೇಂದ್ರ ಸರ್ಕಾರ ಒಪ್ಪಿಯಾಗಿದೆ. ನಿನ್ನೆ ಸನ್ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರು ಕೂಡ ಎಲ್ಲ ಶಾಸಕರು ಮತ್ತು ಮಾನ್ಯ ಬಸವರಾಜ ಬೊಮ್ಮಾಯಿ, ನಾವೆಲ್ಲರೂ ಕೂಡಿ....

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು:-ನೋಡಿ ಸ್ವಲ್ಪ ನಾನು ಹೇಳುವುದನ್ನು ಕೇಳಿ. ಅವರು ಶಾಸಕರಾಗಿ ಏನು ಹೇಳುತ್ತಾರೆ ಎನ್ನುವುದು ಬೇರೆ. ನೀವು ಈಗ ಸರ್ಕಾರವನ್ನು ಪ್ರಶ್ನೆ ಕೇಳುವುದು. ಆದುದರಿಂದ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ನಾವೆಲ್ಲರೂ ಕೂಡಿ ಚರ್ಚೆ ಮಾಡಿದ್ದನ್ನು ತಮ್ಮ ಮುಂದೆ ಹೇಳಿದೆ.

ಅಧ್ಯಕ್ಷರು:-ಈಗ ಅದೆಲ್ಲಾ ಬೇಡ. ಈಗ ಸರ್ಕಾರ ಏನು ಮಾಡಬೇಕು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:-ಈಗ ಸರ್ಕಾರ ಮಾಡಬೇಕಾಗಿರುವುದು ಇಷ್ಟೆ. ಮಾನ್ಯ ಗೋವಾ ಮುಖ್ಯಮಂತ್ರಿಗಳನ್ನು ಭೇಟಿ ಮಾಡತಕ್ಕಂಥದ್ದರ ಬಗ್ಗೆ ಮೊನ್ನೆ ಚರ್ಚೆ ಮಾಡಿದೆವು. ಗೋವಾಕ್ಕೆ ಎಂದು ಹೋಗುತ್ತೇವೆ, ಮಹಾರಾಷ್ಟ್ರಕ್ಕೆ ಎಂದು ಹೋಗುತ್ತೇವೆ, ಪ್ರಧಾನ ಮಂತ್ರಿಗಳ ಬಳಿಗೆ ಹೋಗಿ ಎಲ್ಲಾ ಸಂಸದರು ಕೂಡಿ ಅವರನ್ನು ಒಪ್ಪಿಸುವಂಥ ಕೆಲಸವನ್ನು ಯಾವಾಗ ಮಾಡುತ್ತೇವೆ, ರೈತರಿಗೆ ಏನು ಮೆಸೇಜ್ ಕೊಡುತ್ತೇವೆ ಎನ್ನುವುದು ಈಗ ಮುಖ್ಯ. ರೈತರಿಗೆ ಈಗ ಏನಾಗಿದೆಯೆಂದರೆ. . . . .

ಅಧ್ಯಕ್ಷರು:-ಆಯಿತು ಬಿಡಿ, ಸಾಕು.

ಶ್ರೀ ಎನ್.ಹೆಚ್. ಕೋನರೆಡ್ಡಿ:-ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ, ನಮ್ಮ ಕಡೆ ಇದರ ಬಗ್ಗೆ ಗಂಭೀರವಾದಂಥ ರೀತಿಯಲ್ಲಿ ಹೋರಾಟ ನಡೆದಿರುವುದರಿಂದ ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲ ಬೇಕಾಗಿದೆ. ನಮ್ಮಂಥ ಎಂ.ಎಲ್.ಎ.ಗಳೇ ಅಲ್ಲಿಗೆ ಹೋಗಿಬರುವುದಕ್ಕೆ ಆಗದಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನವಲಗುಂದ ಮತ್ತು ನರಗುಂದದಲ್ಲಿ ಹೋರಾಟ ನಡೆದಾಗ ಏನು ಪರಿಸ್ಥಿತಿ ಇತ್ತು ಎಂಬುದು ತಮಗೆ ಗೊತ್ತಿರತಕ್ಕಂಥದ್ದು. ಅದಕ್ಕಾಗಿ ನಾನು ಗೌರವಾನ್ವಿತ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡತಕ್ಕಂಥದ್ದೇನೆಂದರೆ, ತಾವು ಎಲ್ಲ ಸಂಸದರ ಸಭೆಯನ್ನು ಕರೆಯಿರಿ, 28 ಜನ ಸಂಸದರು ನಮ್ಮ ರಾಜ್ಯದವರು, ಗೋವಾದಲ್ಲಿ ಇರತಕ್ಕಂಥವರು ಕೇವಲ ಇಬ್ಬರು, ಒಂದು ಸಲ inprinciple clearance ಅನ್ನು ಸನ್ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಿದ್ದಾಗ ಕೊಟ್ಟಿದ್ದರು. ಅದೇ ರೀತಿಯಾಗಿ ನಾಲ್ಕು ಜನ ಪ್ರಧಾನ ಮಂತ್ರಿಗಳು ಹಿಂದೆ ಕೊಟ್ಟಂಥ ಉದಾಹರಣೆಗಳು ನಮ್ಮಲ್ಲಿವೆ. ಸಾರ್ ನಮ್ಮಲ್ಲಿ ಇರತಕ್ಕಂಥ ಆಶಯವೊಂದೇ. ಪ್ರಧಾನ ಮಂತ್ರಿಗಳ intervention ನಿಂದ ಮಾತ್ರ ಈ ನೀರು ದೊರೆಯುವುದಕ್ಕೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಾಧ್ಯವೆನ್ನುವಂಥ ಮಾತಿದೆ. ದಯವಿಟ್ಟು ಹುಬ್ಬಳ್ಳಿ ಧಾರವಾಡ ಮತ್ತು ನಾಲ್ಕು ಜಿಲ್ಲೆ, ಒಂಭತ್ತು ತಾಲ್ಲೂಕು, ನೂರು enroute village ಗಳಿಗೆ ತಾವು ತಕ್ಷಣ ನೀರು ಕೊಡಿಸುವಂಥ ವ್ಯವಸ್ಥೆಯನ್ನು ಪ್ರಧಾನ ಮಂತ್ರಿಗಳ ಮಧ್ಯ ಪ್ರವೇಶದಿಂದ ರಾಜಿ ಸಂಧಾನದ ಮೂಲಕ ಪ್ರಯತ್ನ ಮಾಡಬೇಕು. ರಾಜ್ಯ ಸರ್ಕಾರ ಇವತ್ತು ವಿಧಾನ ಸಭೆಯಲ್ಲಿ ನಾವೆಲ್ಲರೂ ಏನು ಕುಳಿತುಕೊಂಡಿದ್ದೇವೆ, ಇಡೀ ಸದನ ಒಂದು ಒಗ್ಗಟ್ಟಾಗಿ ಒಂದು ನಿರ್ಣಯ ಮಾಡಿ ಈ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಕ್ರಮ ತೆಗೆದುಕೊಂಡು ಸಂಸದರ ಸಭೆಯ ಮೂಲಕ ಒತ್ತಾಯ ಮಾಡತಕ್ಕಂಥದ್ದು ಬಹಳ ಜವಾಬ್ದಾರಿಯಿದೆ. ನಾವು ಯಾವಾಗ ನಿಮ್ಮ ಮೇಲೆ ಒತ್ತಾಯ ಮಾಡಿದ್ದೇವೋ ಆಗ ನೀವು ನಮ್ಮ ಪರವಾಗಿ ಸ್ಪಂದನೆ ಮಾಡಿದ್ದೀರಿ. ಅದಕ್ಕೆ ನಾವು ವಿರೋಧ ಮಾಡುವಂತಿಲ್ಲ. ಅದೇ ರೀತಿಯಾಗಿ ನಮ್ಮ ಸಂಸದರಲ್ಲಿಯೂ ಕೂಡ ನಾವು ಒತ್ತಾಯ ಮಾಡಿದ್ದೇವೆ. ಅವರು ಕೂಡ ಒಪ್ಪಿಕೊಂಡಿದ್ದಾರೆ. ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಬೇಕೆಂದು ಇಡೀ ಸದನಕ್ಕೆ ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಮಾನ್ಯ ಕೋನರೆಡ್ಡಿಯವರು ಕಳಸಾ ಬಂಡೂರಿ ಮತ್ತು ಮಹದಾಯಿ ವಿಚಾರವಾಗಿ ಕೆಲವೊಂದು ವಿಚಾರಗಳನ್ನೇನು ಹೇಳಿದರೋ ಅದು ಸರಿಯಿದೆ. ಏಕೆಂದರೆ ಆ ಭಾಗದ ಜನರಲ್ಲಿ, ರೈತರಲ್ಲಿ, ಈಗಾಗಲೇ ಬಹಳ ವರ್ಷದಿಂದ ಇದು ಟ್ರಿಬ್ಯುನಲ್‌ನಲ್ಲಿ ನಡೆಯುತ್ತಿದೆ, ಅಲ್ಲಿ ಬೇಗನೆ decision ಆಗುತ್ತದೋ ಇಲ್ಲವೋ, ಅದಕ್ಕಾಗಿ ಏನಾದರೂ ಒಂದು ರಾಜಿ ಸಂಧಾನ ಎನ್ನುವಂಥದ್ದನ್ನು ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ, ಅದಕ್ಕೆ ಒತ್ತಾಯವನ್ನು ಕೂಡ ಅವರು ಮಾಡುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು All Party Meeting ಮಾಡಿದಾಗ ಅದಕ್ಕೆ ನಾವೆಲ್ಲರೂ participate ಮಾಡಿ ಹೋಗಿ ಬಂದೆವು. ಈಗ ಇನ್ನೊಂದು ಒಂದು ವಾತಾವರಣ ನಿರ್ಮಾಣ ಮಾಡುವಂಥದ್ದು, ನಾನು ಮೊನ್ನೆಯೂ ಪ್ರಸ್ತಾಪ ಮಾಡಿದ್ದೇನೆ. ಆಗ ಎಂ.ಬಿ. ಪಾಟೀಲರು ಇದ್ದರು. ಅವರಲ್ಲಿಯೂ ಪ್ರಸ್ತಾಪ ಮಾಡಿದ್ದೇನೆ. ಗೋವಾ ಮುಖ್ಯಮಂತ್ರಿ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ನಮ್ಮ ರಾಜ್ಯದಿಂದ ಸಮಾಲೋಚನೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡಬೇಕು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ನೇತೃತ್ವ ವಹಿಸಿದರೆ ಬಹಳ ಒಳ್ಳೆಯದು. ಕೊನೆ ಪಕ್ಷ ನೀರಾವರಿ ಸಚಿವರಾದ ಎಂ.ಬಿ. ಪಾಟೀಲರಾದರೂ ಒಂದು delegation ತೆಗೆದುಕೊಂಡು ಹೋದರೆ ಅಲ್ಲಿ ಮುಖ್ಯಮಂತ್ರಿಗಳು ಮತ್ತು ಪ್ರತಿ ಪಕ್ಷದ ನಾಯಕರನ್ನು ಭೇಟಿಯಾಗಿ. ನಾನೂ ಕೂಡ ನಿಮ್ಮ ಜೊತೆ ಬರುತ್ತೇನೆ. ಅಲ್ಲಿ ಅವರುಗಳನ್ನು ಭೇಟಿಯಾಗಿ ಇದರ ಬಗ್ಗೆ ಸಮಾಲೋಚನೆ ಮಾಡಿ ಏನಾದರೂ ಒಂದು via media ರಾಜಿ ಸಂಧಾನ ಮಾಡುವಂಥದ್ದು ಒಂದು ಪ್ರಯತ್ನ ಮಾಡೋಣ. ಇದಕ್ಕೆ ಎಲ್ಲರೂ ಕೂಡಿ ಅಲ್ಲಿಗೆ ಹೋಗೋಣ. ಅಲ್ಲಿ ಈ ರೀತಿಯ ಒಂದು ವಾತಾವರಣ ನಿರ್ಮಾಣವಾದರೆ, ದೆಹಲಿಗೆ ಹೋಗಿ ೋಣ. ದೆಹಲಿಗೆ ಹೋಗಿ Prime Minister ರವರನ್ನು ಕೂಡ ಭೇಟಿಯಾಗೋಣ. ಆ ರೀತಿಯಾದಂಥ ಒಂದು ಪ್ರಯತ್ನವನ್ನು ನಾವು ಮಾಡೋಣ. ಹಿಂದೆ ನಾವೆಲ್ಲರೂ ಕೂಡ ಹೋಗಿ ನಾರಿಮನ್‌ರವರನ್ನು ಭೇಟಿಯಾಗಿದ್ದೆವು. ಒಂದು ಮಧ್ಯಂತರ ಅರ್ಜಿಯನ್ನು ಟ್ರಿಬ್ಯುನಲ್ ಮುಂದೆ interim order ಸಲುವಾಗಿ ಒಂದು ಮಧ್ಯಂತರ ಅರ್ಜಿಯನ್ನು 7.5 ಟಿ.ಎಂ.ಸಿ. ನೀರಿಗಾಗಿ immediately ನೀರಿನ ಒಂದು ಯೋಜನೆಗೆ ಒಪ್ಪಿಗೆ ಕೊಡುವ ಸಲುವಾಗಿ ಒಂದು direction ತೆಗೆದುಕೊಳ್ಳುವುದಕ್ಕೆ ಅಲ್ಲಿ ಒಂದು ಅರ್ಜಿ ಹಾಕುವಂಥದ್ದರ ಬಗ್ಗೆಯೂ ಸಮಾಲೋಚನೆ ಮಾಡಿದ್ದೇವೆ. ನಾರಿಮನ್‌ರವರು ಕೂಡ ಒಪ್ಪಿಕೊಂಡಿದ್ದಾರೆ. ಆ ದೃಷ್ಟಿಯಿಂದ ಆ ಒಂದು ಪ್ರಯತ್ನ ರಾಜ್ಯ ಸರ್ಕಾರದ ವತಿಯಿಂದ ಆಗಲಿ. ಒಂದು ಮಧ್ಯಂತರ ಅರ್ಜಿಯನ್ನು ಹಾಕುವುದು ಮತ್ತು ಆ ಮುಖ್ಯಮಂತ್ರಿಗಳನ್ನು ಭೇಟಿಯಾಗುವಂಥ ಕೆಲಸವಾಗಲಿ. ಈ ಪ್ರಯತ್ನದಿಂದ ಒಂದು ವಾತಾವರಣ ನಿರ್ಮಾಣವಾದರೆ ಮುಂದಿನ ಕೆಲಸವನ್ನು ನಾವು ಮಾಡುವುದಕ್ಕೆ ಅನುಕೂಲವಾಗುತ್ತದೆ, out of the tribunal settlement ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:-ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):-ಮಾನ್ಯ ಅಧ್ಯಕ್ಷರೆ, ಮಾನ್ಯ . . . . . .

ಶ್ರೀ ಬಿ.ಆರ್. ಯಾವಗಲ್:-ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಅಪರೂಪಕ್ಕೆ ಮಾತನಾಡುವುದಕ್ಕಾಗಿ ನೋಟಿಸ್ ಕೊಟ್ಟಿರುತ್ತೇವೆ. ನಾನು ಸೇರಿದಂತೆ ಕೆಲವರು ಇದರ ಬಗ್ಗೆ ಮಾತನಾಡಲು ಸಹಿ ಮಾಡಿದ್ದೇವೆ. ದಯವಿಟ್ಟು ನಮಗೆ ಮಾತನಾಡಲು ಅವಕಾಶ ಕೊಡಬೇಕು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು:-ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ಇದರಲ್ಲಿ ಬಹಳ limited issues ಇದೆ. ಇದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಮಧ್ಯೆ ಹೊಂದಾಣಿಕೆ ಮಾಡುವಂಥ ಕೆಲಸವಾಗಬೇಕಾಗಿದೆ. ಅದಕ್ಕೆ ಸೀಮಿತವಾಗಿರುವಾಗ ನೀವೆಲ್ಲರೂ ರಾಜಕೀಯ ಭಾಷಣ ಮಾಡುತ್ತಾ ಕುಳಿತುಕೊಳ್ಳುತ್ತೇವೆಂದರೆ ನನಗೇನೂ ಇಲ್ಲ. ಆಯಿತು ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್:-ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದೊಂದು ನಿಮಿಷದಂತೆ ನಮಗೆಲ್ಲರಿಗೂ ಐದು ನಿಮಿಷ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:-ಆಯಿತು ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್:-ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕೋನರೆಡ್ಡಿಯವರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಏನು ಹೇಳಿದರೋ ಅದು ನಮ್ಮೆಲ್ಲರ ಅಭಿಪ್ರಾಯವೂ ಕೂಡ ಆಗಿದೆ. ಜನರ ಅಭಿಪ್ರಾಯ ಆ ರೀತಿಯಿದೆ. ಇವತ್ತು ಈಗಾಗಲೇ ಇವೆಲ್ಲಾ ಪ್ರಯೋಗಗಳು ಆಗಿದೆ. ಅಲ್ಲಿ ಜನರ ಮನಸ್ಸಿನಲ್ಲಿ, ಅವರು ಏನು agitation ಮಾಡುತ್ತಾರೆ ಎನ್ನುವುದಕ್ಕಿಂತ ಒಂದು ತರಹ ಜನಾಂದೋಲನವಾಗಿ ಇದು ಪರಿವರ್ತನೆಯಾಗಿ ಜನರ ಮನಸ್ಸಿನಲ್ಲಿ ಸರ್ಕಾರಗಳು ಏನೂ ಮಾಡುತ್ತಿಲ್ಲವೆನ್ನುವ ಭಾವನೆ ಬಂದುಬಿಟ್ಟಿದೆ. ಆದುದರಿಂದ ನಮಗೂ, ಈ ಪಕ್ಷದವರಿರಬಹುದು, ಆ ಪಕ್ಷದವರಿರಬಹುದು, ಅವರೆಲ್ಲರಿಗೂ ನಾವು ನಮ್ಮ ಕ್ರಿಯಾಶೀಲತೆಯನ್ನು, ಜವಾಬ್ದಾರಿಯನ್ನು ನಿಭಾಯಿಸುವಂಥ ಸನ್ನಿವೇಶದಲ್ಲಿ ನಾವಿದ್ದೇವೆ, ಅದಕ್ಕೆ ಈಗಾಗಲೇ ಒಂದು ಪ್ರಯೋಗ ಮಾಡಿದ್ದೇವೆ, ಆ ಪ್ರಯತ್ನ ಕೂಡ ಆಗಿದೆ. ಮಾನ್ಯ ಮುಖ್ಯಮಂತ್ರಿಗಳೇ ಭೇಟಿಯಾಗಿದ್ದರು, ನಾವುಗಳು ಇದ್ದೆವು, ವಿರೋಧ ಪಕ್ಷದವರು ಇದ್ದರು.

ಅಧ್ಯಕ್ಷರು:-ಆಯಿತು ಬಿಡಿ. ಈಗ ಆಗಿದ್ದೆಲ್ಲಾ ಬೇಡ.

ಶ್ರೀ ಬಿ.ಆರ್. ಯಾವಗಲ್:-ಸಾರ್ ಒಂದೆರಡು ನಿಮಿಷ. ನಾವು ಅಲ್ಲಿ ಜನರಿಗೆ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಪ್ರಸ್ತಾಪ ಮಾಡಲಿಲ್ಲವೆಂದರೆ ನಮ್ಮ ಮೇಲೂ ಜನರು ತಪ್ಪು ತಿಳಿದುಕೊಳ್ಳುತ್ತಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು:-ಆಯಿತು ಈಗ ಪ್ರಸ್ತಾಪ ಮಾಡುತ್ತಿದ್ದೀರಲ್ಲ, ಈಗ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿ.

ಶ್ರೀ ಬಿ.ಆರ್. ಯಾವಗಲ್:-ಈಗ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇದನ್ನು ಯಾವುದೇ ಪ್ರತಿಷ್ಠೆ ಎನಿಸಿಕೊಳ್ಳದೇ ಇದಕ್ಕೆ ತಮ್ಮ ಮನ:ಪೂರ್ವಕ ಪ್ರಯತ್ನಗಳನ್ನು ಮಾಡುವುದಕ್ಕೆ ಗೋವಾಕ್ಕೆ ತಾವು ಹೋಗುತ್ತೀರೇನೋ, ತಾವು ಮುಖಂಡತ್ವವನ್ನು ವಹಿಸಿದರೆ ಬಹಳ ಒಳ್ಳೆಯದು. ಬಹಳ ಒಳ್ಳೆಯದು. ಇದು ಉತ್ತರ ಕರ್ನಾಟಕ ಭಾಗದ ಜನರ ಸಮಸ್ಯೆಯಾಗಿದೆ. ಸುಮಾರು ನಾಲ್ಕು ಜಿಲ್ಲೆಗಳಿಗೆ ಸಂಬಂಧಪಟ್ಟಂಥ ಜನರ ಸಮಸ್ಯೆಯಾಗಿದೆ. ದಯವಿಟ್ಟು ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಮಾಡಿ. ಮುಖ್ಯಮಂತ್ರಿಗಳಾದ ತಮಗೆ ಸಮಸ್ಯೆ ಬಗೆಹರಿಸಬೇಕೆಂಬ ಮನಸ್ಸಿದೆ. ಇದರ ಜೊತೆ ಪ್ರಧಾನ ಮಂತ್ರಿಗಳಿಗೂ ಭೇಟಿ ಮಾಡುವಂಥ ಕೇಂದ್ರ ಸಚಿವರನ್ನು ಭೇಟಿ ಮಾಡುವಂಥ ಪ್ರಯತ್ನವನ್ನು ಆದಷ್ಟು ಬೇಗ ಮಾಡಿ. ಆದಷ್ಟು ಬೇಗ ಇದಕ್ಕೆ ಏನಾದರೂ ಒಂದು ತುರ್ತು ಪರಿಹಾರವನ್ನು ಮಾಡುವುದಕ್ಕೆ ದಯವಿಟ್ಟು ಮನಸ್ಸು ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

D 25.11.2015/6.50/43/HBU-CP

ಶ್ರೀ ಜಿ.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಮಹದಾಯಿ ಮತ್ತು ಕಳಸಾ-ಭಂಡೂರಿ ವಿಚಾರದಲ್ಲಿ ಹೇಳುವುದಾದರೆ. ..

ಅಧ್ಯಕ್ಷರು : ಚರ್ಚೆ ಬೇಡ, ಸರ್ಕಾರ ಏನು ಮಾಡಬೇಕೆಂದು ಹೇಳಿ

ಶ್ರೀ ಜಿ.ಎಸ್. ಪಾಟೀಲ್ : ಕಳೆದ 130 ದಿನಗಳಿಂದ ಹೋರಾಟ ನಡೆದಿದೆ. ಸರ್ಕಾರದಿಂದ ಈಗ ಾಗಲೇ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಪಾರ್ಟಿಯ ಸದಸ್ಯರುಗಳು ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಈಗ interim application ಹಾಕುವುದಕ್ಕೆ ಕೂಡ ಸರ್ಕಾರ ಮುಂದೆ ಬಂದಿದೆ. ನಮ್ಮ ವಿಚಾರ ಏನಿದೆ ಎಂದರೆ ರೈತರು ಅಲ್ಲಿ ಏನು agitation ಮಾಡುತ್ತಿದ್ದಾರೆ, ಅವರೆಲ್ಲರನ್ನು ಕರೆಸಿ, ಸರ್ಕಾರ specific ಆಗಿ ನಾವು ಇಷ್ಟೆಲ್ಲ ಪ್ರಯತ್ನ ಮಾಡಿದ್ದೇವೆಂದು ಹೇಳಿ ಆ agitation ಬಂದ್ ಮಾಡಿಸುವಂತಹ ಕೆಲಸವನ್ನು ಮಾಡಲಿ. ನ್ಯಾಯಾಲಯದಲ್ಲಿ ಈ ಮೊಕದ್ದಮ್ಮೆ ಯಾವಾಗ ಇತ್ಯರ್ಥ ಆಗ ುತ್ತದೆನ್ನುವುದು ನಮಗೆ ಗೊತ್ತಾಗುವುದಿಲ್ಲ. ಸುಮಾರು ಐದು ತಿಂಗಳಿನಿಂದ ನಾವ್ಯಾರು ಕ್ಷೇತ್ರದಲ್ಲಿ ಆಡ್ಡಾಡುವುದಕ್ಕೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಮುತುವರ್ಜಿ ವಹಿಸಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಇನ್ನು ಮುಂದಾದರೂ ಕೂಡ ಗೋವಾ ಮತ್ತು ಮಹಾರಾಷ್ಟ್ರದ ಸರ್ಕಾರದ ಜೊತೆ ಅವರೇ ಖುದ್ದಾಗಿ ಹೋಗಿ ಚರ್ಚೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ಎಲ್ಲರ ಅಪೇಕ್ಷೆ ಕೂಡ ಅದೇ ಇದೆ. ಅವರು ಅಲ್ಲಿ ಹೋಗುವುದು ಬೇಡವೆಂದರೆ ಕನಿಷ್ಟಪಕ್ಷ ಮೂರು ರಾಜ್ಯದ ಮುಖ್ಯಮಂತ್ರಿಗಳು ಎಲ್ಲಿಯಾದರೂ ಒಂದು ಕಡೆ ಸೇರಿ ಸಭೆಯನ್ನು ಮಾಡುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಆಗ ರೈತರಿಗೆ ಒಂದು ರೀತಿಯ ಆಶಾಭಾವನೆ ಮೂಡುತ್ತದೆಂದು ಹೇಳುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ಈಗ ತಾವು ಒಂದೇ ಮಾತಿನಲ್ಲಿ ಹೇಳಿ ಎಂದು ಹೇಳುತ್ತಿದ್ದೀರಿ. ಆದರೆ ಅಧಿವೇಶನದಲ್ಲಿ ಇದರ ಬಗ್ಗೆ ಕನಿಷ್ಠ ಒಂದು ದಿನವಾದರೂ ಚರ್ಚೆಯಾಗ ಬೇಕು.

ಅಧ್ಯಕ್ಷರು : ಇನ್ನೊಂದು ದಿವಸ ಹಾಕಿಕೊಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್( ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ನೀವು ಇಷ್ಟು ಹಗುರವಾಗಿ ನಮಗೆ ಒಂದೊಂದೆ ಮಾತಿನಲ್ಲಿ ಮುಗಿಸಿ ಎಂದರೆ ಹೇಗೆ? ತಾವು ರಾಜಕಾರಣ ಮಾಡಬಾರದು ಎಂದು ಹೇಳುತ್ತಿದ್ದೀರಿ. ಆದರೆ ಇದರಲ್ಲಿ ರಾಜಕಾರಣ ಮಾಡುತ್ತಿಲ್ಲವೇ?

ಅಧ್ಯಕ್ಷರು : ಈಗ ಯಾರು ಮಾಡಿದ್ದಾರೆ?

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) ಮಾನ್ಯ ಅಧ್ಯಕ್ಷರೆ, ಪ್ರತಿನಿತ್ಯ ವಾಸ್ತವಿಕ ಸತ್ಯಗಳನ್ನು ಬಚ್ಚಿಟ್ಟು ಆಡಳಿತದಲ್ಲಿರುವ ಮಂತ್ರಿಗಳ ಹೇಳಿಕೆಗಳನ್ನು ನೋಡಿ. ಏಕೆಂದರೆ ಬೇರೆಯವರು ಮಾತನಾಡುವುದು ಬೇರೆ, ಜನ ಮಾತನಾಡುವುದು ಬೇರೆ. ಆದರೆ ವಾಸ್ತವಿಕವಾಗಿ ಅದರ ಸಮಸ್ಯೆಯ ಮೂಲ ಎಲ್ಲಿದೆ, ಆ ಮೂಲವನ್ನು ಕಂಡುಹಿಡಿದು ಅದಕ್ಕೆ ಪರಿಹಾರ ಕಂಡುಹಿಡಿಯುವ ಕೆಲಸವಾಗಬೇಕೇ ವಿನ: ಆ ವಿಚಾರವಾಗಿ ಅಲ್ಲಿ ರೈತರು ಏನು ಹೋರಾಟ ಮಾಡುತ್ತಿದ್ದಾರೆ, ಅದಕ್ಕೆ ಇನ್ನಷ್ಟು ಹೆಚ್ಚು ಹೋರಾಟವನ್ನು ಮುಂದುವರೆಸುವಂತಹ ಕೆಲಸಕ್ಕೆ ಅವರಿಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ ವಿನ: ಸ್ಪಷ್ಟವಾಗಿ ಈ ಸಮಸ್ಯೆ ಏನಿದೆ, ಇದೇ ಮೂಲ ಸಮಸ್ಯೆ, ಇದನ್ನು ನಾವು ಇದನ್ನು ಬಗೆಹರಿಸುತ್ತೇವೆ ಎಂದು ಸ್ಪಷ್ಟ ನಿರ್ಧಾರವನ್ನು ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ಮಾಡಬೇಕಾಗಿತ್ತು. ಆದರೆ ಅವರು ಆ ರೀತಿ ಮಾಡಲಿಲ್ಲ. ಆದರೆ ಅವರು ಏನು ಮಾಡಿದರು ಎಂದರೆ ಪ್ರಧಾನ ಮಂತ್ರಿಗಳು ಮಾಡುತ್ತಿಲ್ಲವೆಂದು ಪ್ರಧಾನ ಮಂತ್ರಿಗಳ ಮೇಲೆ ಹೇಳುವುದು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು : ಈಗ ಏನು ಮಾಡಬೇಕೆಂದು ಹೇಳಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಮಾನ್ಯ ಅಧ್ಯಕ್ಷರೆ, ವಿಷಯ ಗಂಭೀರತೆ ಎಷ್ಟಿದೆ ಎಂದರೆ ಇವತ್ತು ಅಲ್ಲಿರುವಂತಹ 3,500 ಯಿಂದ 4,000 ರೈತರು ನಿನ್ನೆಯಿಂದ freedom parkನಲ್ಲಿ ಕುಳಿತಿದ್ದಾರೆ. ಅವರಿಗೆ ಯಾರೋ ಸಂಘಸಂಸ್ಥೆಗಳವರು ಊಟ ಹಾಕುತ್ತಿದ್ದಾರೆ. ಅವರು ಬೀದಿಯಲ್ಲಿ ಮಲಗಿಕೊಂಡಿದ್ದಾರೆ. ಆ ರೈತರು ಮಾತನಾಡುವುದಕ್ಕೆ ಬೆಂಗಳೂರಿಗೆ ಬರಬೇಕೇ? ನೀವು ಸರ್ಕಾರವಾಗಿ ಅಲ್ಲಿ ಹೋಗುವುದಕ್ಕೆ ಏಕೆ ತಯಾರಿಲ್ಲ? ಸರ್ಕಾರ ನವಲಗುಂದ ಮತ್ತು ನರಗುಂದಕ್ಕೆ ಹೋಗಿ ಅವರ ಜೊತೆ ಕುಳಿತುಕೊಂಡು ಮಾತನಾಡಬೇಕಾಗಿತ್ತು. ಒಂದು ತಿಂಗಳು, 34 ದಿನ . . .

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವರಿಗೆ ತಳ, ಬುಡ ಏನೂ ಗೊತ್ತಿಲ್ಲ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಒಂದು ಸಲ ಅಲ್ಲ, ಹತ್ತು ಸಾರಿ ಹೋಗಬೇಕು.

ಶ್ರೀ ಎಂ.ಬಿ. ಪಾಟೀಲ್ : ಇವತ್ತು ನವಲಗುಂದಕ್ಕೆ ಮಂತ್ರಿಗಳು ಹೋಗಿದ್ದಾರೆ. ದಯವಿಟ್ಟು ಒಂದು ನಿಮಿಷ yield ಆಗಿ.

ಶ್ರೀ ಎ.ಎಸ್. ಪಾಟೀಲ್(ಣಡಹಳ್ಳಿ) : ಮಾನ್ಯ ನೀರಾವರಿ ಮಂತ್ರಿಗಳೇ, ನೀವು ಹೇಳಿರುವ ಹೇಳಿಕೆಗಳ ದಾಖಲಾತಿಗಳು ನನ್ನ ಹತ್ತಿರ ಇವೆ. ನಾನು ಅವುಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದೇನೆ, ಹಾಗೆ ಮಾತನಾಡುತ್ತಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವರಿಗೆ ತಳ, ಬುಡನೂ ಗೊತ್ತಿಲ್ಲ. ಇವರು ಇಲ್ಲಿ ರಾಜಕೀಯ ಮಾಡುವುದಕ್ಕೆ ಹೋಗುತ್ತಿದ್ದಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ನಿಮಗಿಂತ ಜಾಸ್ತಿ ಗೊತ್ತಿದೆ. ನೀವು ತಳ ಗೊತ್ತಿಲ್ಲ, ಬುಡ ಗೊತ್ತಿಲ್ಲವೆನ್ನುವ ಮಾತನ್ನು ಮಾಡನಾಡಬೇಡಿ.

ಶ್ರೀ ಎಂ.ಬಿ. ಪಾಟೀಲ್ : ನೀವು ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮಾನ್ಯ ಮುಖ್ಯಮಂತ್ರಿಗಳಿಗೆ ಫೋನ್ ಮಾಡಿ freedom park ಗೆ ಕೂಡ ಹೋಗಿ ಅವರನ್ನು ಭೇಟಿಯಾಗಿದ್ದೇನೆ. ಮೊನ್ನೆ ಒಂದು ರೈತ ಸಂಘದವರು ಬಂದಿದ್ದರು. ಅವರನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಭೇಟಿಯಾಗಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ : ನಿಮಗೆ ಹೋಗಿಲ್ಲವೆಂದು ನಾನು ಹೇಳಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ವಿನಯ್ ಕುಲಕರ್ಣಿ ಮತ್ತು ನಾವು ಭೇಟಿಯಾಗಿದ್ದೇವೆ. ಎಲ್ಲಾ ರೀತಿಯ ಪ್ರಯತ್ನ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಬೇಕೆಂದು ಅವರ ಒತ್ತಾಯ ಇತ್ತು. ನವಲಗುಂದ ಮತ್ತು ನರಗುಂದಕ್ಕೆ ನಾನೇ ಖುದ್ದಾಗಿ ಹೋಗಿದ್ದೇನೆ. ಧಾರವಾಡಕ್ಕೆ ಹೋಗಿ ಕೂಡ ನಾನು ಮೀಟಿಂಗ್ ಮಾಡಿದ್ದೇನೆ. ಏನೂ ಗೊತ್ತಿಲ್ಲದೆ ಮಾತನಾಡುವುದಕ್ಕೆ ಹೋಗಬೇಡಿ. ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ತಳ, ಬುಡ ಗೊತ್ತಿಲ್ಲವೆಂದು ನೀವು ನನಗೆ ಹೇಳಿದ್ದು, ನಾನು ನಿಮಗೆ ಹೇಳಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಸುಮ್ಮನೆ ಏನಾದರೂ ಒಂದು ರಾಜಕೀಯವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಇವರು ಹೋಗಲಿಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಕೋನರೆಡ್ಡಿ, ಯಾವಗಲ್, ಜಿ.ಎಸ್. ಪಾಟೀಲ್ ಹಾಗೂ ಬೊಮ್ಮಾಯಿ ಸಾಹೇಬರು ಎಲ್ಲಾ ಇದ್ದಾರೆ, ಇವತ್ತು ಬೆಳಿಗ್ಗೆ 9.00 ಗಂಟೆಗೆ ಕೂಡ ಮಲಪ್ರಭಾ ಬೇಸಿನ್ ಶಾಸಕರೆಲ್ಲ ಸೇರಿ ಒಂದು ಸಭೆ ಮಾಡಿ ಎಲ್ಲರೂ ಕುಳಿತು ಚರ್ಚೆ ಮಾಡಿದ್ದೇವೆ. ಸುಮ್ಮನೆ ನಿಮಗೆ ಗೊತ್ತಿಲ್ಲದೆ ಏನೋ ಒಂದು ಹೇಳಬೇಡಿ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಹಾಗಿದ್ದರೆ 134 ದಿನದಿಂದ ಜನ ಹೋರಾಟ ಏಕೆ ಮಾಡುತ್ತಿದ್ದಾರೆ ಎಂದು ಹೇಳಿ. ಆ ಹೋರಾಟ ನಿಲ್ಲಿಸುವುದಕ್ಕೆ ನೀವು ಏನು ಪ್ರಯತ್ನ ಮಾಡಿದ್ದೀರೆಂದು ಹೇಳಿ.

ಶ್ರೀ ಎನ್.ಹೆಚ್. ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಸಭೆ ಮಾಡಿದೆ.

ಶ್ರೀ ಎಂ.ಬಿ. ಪಾಟೀಲ್ : ಯಾವಗಲ್ ಸಾಹೇಬರೆ, ಇವತ್ತು ಬೆಳಿಗ್ಗೆ ಮೀಟಿಂಗ್ ಆಗಿದ್ದನ್ನು ಹೇಳಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) ಹೋರಾಟ ನಿಲ್ಲಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರೆಂದು ಹೇಳಿ.

(ಗೊಂದಲ)

ಅಧ್ಯಕ್ಷರು : ಈಗ ಸರ್ಕಾರ ಏನು ಮಾಡಬೇಕೆನ್ನುವುದನ್ನು ಹೇಳಿ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಮಲಪ್ರಭಾ ಬೇಸಿನ್‌ನ ಎಲ್ಲಾ ಶಾಸಕರು ಸೇರಿ ಅವರನ್ನು ಮೀಟಿಂಗ್ ಮಾಡಿದ್ದೇವೆ. ಬೊಮ್ಮಾಯಿಯವರು ಇದ್ದರು, ಎಲ್ಲರೂ ಇದ್ದರು.

ಶ್ರೀ ಎನ್.ಹೆಚ್. ಕೋನರೆಡ್ಡಿ : ನನಗೆ ಅವಕಾಶ ಕೊಡಿ, ನಾನು ಹೇಳುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಈ ವಿಷಯದಲ್ಲಿ ರಾಜಕೀಯ ಬೆರೆಸುವುದನ್ನು ಬಿಟ್ಟು ಅಲ್ಲಿ ಹೋರಾಟ ಮಾಡುವಂತಹ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಎಂ.ಬಿ. ಪಾಟೀಲ್ : ಇಲ್ಲಿ ರಾಜಕೀಯ ಮಾಡುತ್ತಿದ್ದಾರೆ.

ಅಧ್ಯಕ್ಷರು : ಹೇ, ನಡಹಳ್ಳಿ, ಇಲ್ಲಿ ರಾಜಕೀಯ ಭಾಷಣ ಬೇಡ, ಸರ್ಕಾರ ಏನು ಹೇಳುತ್ತದೆ ಕೇಳಿ.

ಶ್ರೀ ಬಿ.ಆರ್. ಯಾವಗಲ್ : ನಾವು ರಾಜಕೀಯ ಬೆರೆಸಬೇಡಿ ಎಂದು ಹೇಳುತ್ತೇವೆ, ಇವರು ರಾಜಕೀಯ ಬೆರೆಸಿ, ಅವರು ನಾವು ಎಲ್ಲರೂ ಸೇರಿ ಮಾಡಬೇಕೆಂದು ನಾವು ಇವರಿಗೆ ಹೇಳುತ್ತೇವೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಹೋರಾಟ ನಿಲ್ಲಿಸಿ, ಅಲ್ಲಿರುವವರಿಗೆ ಗೌರವ ಕೊಡುವಂತಹ ಕೆಲಸವಾಗಬೇಕು. ಸಾರ್, ನೀವು ಮಾತನಾಡಬೇಕಾದರೆ ನಾನು ಯೀಲ್ಡ್ ಆಗಿಲ್ಲ.

ಅಧ್ಯಕ್ಷರು : ಹೇ, ನಡಹಳ್ಳಿ, ಸರ್ಕಾರ ಏನು ಮಾಡಬೇಕೆಂದು ಸ್ಪಷ್ಟವಾಗಿ ನಾಲ್ಕು ಮಾತಿನಲ್ಲಿ ಹೇಳಿ.

ಶ್ರೀ ಎಂ.ಬಿ. ಪಾಟೀಲ್ : ಅವರಿಗೆ ಏನೂ ಗೊತ್ತಿಲ್ಲ, ಬಿಟ್ಟಿಲ್ಲ, ಹೇಳುತ್ತಾರೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಅಲ್ಲಿ ಏನಾಗಿದೆ ಎಂದರೆ ಇವರ ಎಲ್ಲಾ ಹೇಳಿಕೆಗಳಿಂದ ರೈತರಿಗೆ ಗೊಂದಲ ಸೃಷ್ಠಿಯಾಗಿದೆ. ಸ್ಪಷ್ಟವಾಗಿ ಇದಕ್ಕೆ ಪರಿಹಾರ ಎಲ್ಲಿದೆ ಎನ್ನುವುದನ್ನು ಹೇಳಬೇಕಾಗಿರುವುದು ಸರ್ಕಾರದ ಜವಾಬ್ದಾರಿ.

ಅಧ್ಯಕ್ಷರು : ಸರ್ಕಾರ ಏನು ಮಾಡಬೇಕೆಂದು ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಆ ಹೋರಾಟ ಮುಂದುವರೆಯುವುದಕ್ಕೆ ಇನ್ನಷ್ಟು ಅದಕ್ಕೆ ಪೂರಕವಾಗಿ ಹೇಳಿಕೆಗಳನ್ನು ಕೊಟ್ಟಿರುವುದರಿಂದ 134 ದಿನಗಳ ಕಾಲ ಹೋರಾಟ ನಡೆಯುತ್ತಿದೆ. ಆ ಹೋರಾಟ ಇನ್ನು ಮುಂದುವರೆಯುತ್ತಿದೆ. ಅದನ್ನು ನಿಲ್ಲಿಸುವುದಕ್ಕೆ ಏನು ಮಾಡುತ್ತಾರೆ?

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಅದು ಸುಳ್ಳು. ನಾನು ಆ ಮತಕ್ಷೇತ್ರದವನು, ಆ ತಾಲ್ಲೂಕಿನವನು, ಇವರು ಹೊರಗಿನವರು, ಅವರಿಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ : ಎಲ್ಲರ ಹೇಳಿಕೆಗಳು ಇಲ್ಲಿವೆ, ಎಲ್ಲಾ ಹೇಳಿಕೆಗಳನ್ನು ಗಮನಿಸಿಯೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು : ಸರ್ಕಾರ ಈಗ ಏನು ಮಾಡಬೇಕೆನ್ನುವುದನ್ನು ಹೇಳಿ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುತ್ತೇನೆ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ಮಾನ್ಯ ಮಂತ್ರಿಗಳೇ, ನೀವು ಉತ್ತರ ಕೊಡಬೇಕಾದರೆ ಕೊಡಿ. ಈಗ ನಾನು ಮಾತನಾಡುವುದಕ್ಕೆ ಬಿಡಿ. ನಾನು ನಿಮ್ಮ ಮೇಲೆ ವೈಯುಕ್ತಿಕವಾಗಿ ಆರೋಪ ಮಾಡಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ಅರೆ, ಮತ್ತೆ ಮಂತ್ರಿಗಳು ಏನೂ ಮಾಡುತ್ತಿಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) ನಾನು ನಿಮ್ಮ ಹೇಳಿಕೆಗಳನ್ನು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಎಂ.ಬಿ. ಪಾಟೀಲ್ : Be responsible.

ಶ್ರೀ ಎ.ಎಸ್. ಪಾಟೀಲ್, ನಡಹಳ್ಳಿ : ಹೆದರಿಸುವುದಕ್ಕೆ ಹೋಗಬೇಡ, ಇಲ್ಲಿ ಧಮಕಿ ನಡೆಯುವುದಿಲ್ಲ. ನಾನೂ ಒಬ್ಬ ಎಂಎಲ್ಎ.

ಶ್ರೀ ಎಂ.ಬಿ. ಪಾಟೀಲ್ : Be responsible ಎಂದು ಹೇಳುತ್ತಿದ್ದೇನೆ. ತಾವು ಜವಾಬ್ದಾರಿಯಿಂದ ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : I am responsible, ಈ ಸದನದಲ್ಲಿ ಹಾಗೆ ಮಾತನಾಡುತ್ತಿದ್ದೇನೆ. ನಾನು ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ.

ಶ್ರೀ ಎಂ.ಬಿ. ಪಾಟೀಲ್ : ವಿಷಯ ಗೊತ್ತಿಲ್ಲದೆ ಮಾತನಾಡುತ್ತೀರಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ನಿಮ್ಮ ಹೇಳಿಕೆಗಳು ಹೋರಾಟಕ್ಕೆ ಪ್ರಚೋದನೆ ಕೊಡುತ್ತಿದ್ದೇವೆಂದು ಹೇಳುತ್ತಿದ್ದೇನೆ. ಇವತ್ತು ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ, 2010 ರಿಂದ ಇಲ್ಲಿಯವರೆಗೆ ಸರ್ಕಾರ ಸೀರಿಯಸ್ ಆಗಿ ಏನು ನ್ಯಾಯಾಧೀಕರಣದ ಮುಂದೆ ವಾದ ಮಂಡನೆ ಮಾಡಬೇಕಾಗಿತ್ತು, ಆ ವಿಚಾರದಲ್ಲಿ ನಾವು ಡಿಲೇ ಮಾಡಿದ್ದಕ್ಕೆ, ಇವತ್ತು ಆ ಭಾಗದಲ್ಲಿ ಬರಗಾಲ ಜಾಸ್ತಿಯಾಗಿರುವುದಕ್ಕೆ ರೈತರು ಹೋರಾಟ ಮಾಡುತ್ತಿದ್ದಾರೆ. ಅದಕ್ಕೆ ನಾವೇನು ಒಂದು ಸರ್ಕಾರವಾಗಿ ಹೇಳಬೇಕೆಂದರೆ, ನಾವು ವಿಫಲವಾಗಿದ್ದೇವೆ, ಇನ್ನು ಮುಂದೆ ಈ ರೀತಿ ಆಗುವುದಕ್ಕೆ ಬಿಡವುದಿಲ್ಲ, 2016ನೇ ಇಸವಿ 8ನೇ ತಿಂಗಳಿನಲ್ಲಿ ನ್ಯಾಯಾಧೀಕರಣ ತೀರ್ಪು ಬರುತ್ತದೆ. ಅಷ್ಟರೊಳಗೆ ನಾವು ಸಮರ್ಥವಾಗಿ ವಾದ ಮಾಡುತ್ತೇವೆ, ನ್ಯಾಯಾಧೀಕರಣದಲ್ಲಿ ಈ ವಿಚಾರ extend ಆಗುವುದಕ್ಕೆ ಬಿಡುವುದಿಲ್ಲ, ಅಷ್ಟರೊಳಗೆ ನಾವು ನಿಮಗೆ ನೀರು ಕೊಡಿಸುವಂತಹ ಕೆಲಸ ಮಾಡುತ್ತೇವೆಂದು ಹೇಳಿ,

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಅಲ್ಲಿರುವಂತಹ ರೈತರ ಮನವೊಲಿಸಿ, ಅವರ ಹೋರಾಟಕ್ಕೆ ಗೌರವ ಕೊಡುವಂತಹ ಕೆಲಸವಾಗಬೇಕೇ ವಿನ: ಅದನ್ನು ರಾಜಕೀಯಕ್ಕೆ ಬಳಸಿಕೊಂಡು ಅವರು ಮಾಡಿಲ್ಲ, ಇವರು ಮಾಡಿಲ್ಲವೆಂದು ಹೇಳಿಕೆ ಕೊಟ್ಟು, ಹೋರಾಟಕ್ಕೆ ಇಳಿಸಿ, ಜನರನ್ನು ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಎನ್.ಹಚ್. ಕೋನರೆಡ್ಡಿ : ಮಾನ್ಯ ಮಂತ್ರಿಗಳೇ, ಅವರು ಮಾತನಾಡಿದ್ದು ಮುಗಿದ ಮೇಲೆ ನಾನು ಎರಡು ನಿಮಿಷ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಕೋನರೆಡ್ಡಿಯವರೆ ಸಾಕು ಬಿಡಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) ತಾವು ಮಂತ್ರಿಗಳಾಗಿ ಸದಸ್ಯರುಗಳು ಮಾತನಾಡುವಾಗ ಅವರು ಕೇಳಬೇಕು. ಅದು ಬಿಟ್ಟು be responsible ಎಂದು ಹೇಳುತ್ತಾರೆ.

ಶ್ರೀ ಎಂ.ಬಿ. ಪಾಟೀಲ್ : ಏನೋ ಬಾಯಿಗೆ ಬಂದಿದ್ದು, ಸುಳ್ಳು ಮಾಹಿತಿ ಕೊಟ್ಟರೆ ಇಲ್ಲಿ ಮಾತನಾಡುವುದಕ್ಕೆ ಬಿಡುವುದಿಲ್ಲ.

ಅಧ್ಯಕ್ಷರು: ಮಂತ್ರಿಗಳೇ, ಈ ಕಡೆ ನೋಡಿ, ಆ ಕಡೆ ನೋಡಿ ಏಕೆ ಮಾತನಾಡುತ್ತೀರಿ?

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ನಾನು ಸದನದಲ್ಲಿ ಸುಳ್ಳು ಮಾಹಿತಿ ಕೊಟ್ಟರೆ, ನಾನು ಏನು ಮಾತನಾಡಿದ್ದೇನೆಂದು ಕಡತ ತೆಗೆಸಿ ನೋಡಿ. ನೀವು ಮನುಷ್ಯರೇ ಎಂದ ತಕ್ಷಣ be responsible ಎಂದು ಬೆಟ್ಟು ತೋರಿಸಿದ ತಕ್ಷಣ ಕೇಳುವುದಕ್ಕೆ ಆಗುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಬಿ. ಪಾಟೀಲ್ : Now also say be responsible. ಈಗಲೂ ನಾನು ಜವಾಬ್ದಾರಿಯಿಂದ . . .

(ಗೊಂದಲ)

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ) : ನಾನು ಸದನದಲ್ಲಿ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಕೂಡ ನಾವು ಮಲಪ್ರಭಾ ಕಣಿವೆಯ ಶಾಸಕರೆಲ್ಲ ಪಕ್ಷಾತೀತವಾಗಿ ಕೂಡಿದ್ದೇವೆ. ಕಳಸಾ-ಭಂಡೂರಿ ಮತ್ತು ಮಹದಾಯಿ issue 1998ರಿಂದ ಪ್ರಾರಂಭವಾಗಿ 2002ರಲ್ಲಿ ಒಂದು ಬಾರಿ ಅದಕ್ಕೆ 7.56 ಟಿಎಂಸಿ ನೀರಿಗೆ ಪರವಾನಗಿ ಕೊಟ್ಟು, ಮುಂದೆ ಗೋವಾ ತಕರಾರು ತೆಗೆದಮೇಲೆ ಅದನ್ನು held in a bench ಮಾಡಿದರು. ಅದಾದಮೇಲೆ 2006ರಲ್ಲಿ ಕಳಸಾದಲ್ಲಿ non forest areaದಲ್ಲಿ ಕೆಲಸ ಪ್ರಾರಂಭವಾಯಿತು. ಆಗ ಕೂಡ ಗೋವಾ ತಕರಾರು ಮಾಡಿದಂತಹ ಸಂದರ್ಭದಲ್ಲಿ ಕೂಡ ಸರ್ಕಾರ undertaking ಕೊಡಬೇಕಾಯಿತು. 2008ರಲ್ಲಿ ಕೆಲಸವನ್ನು ಮಾಡಬಹುದು, ಆದರೆ ನೀರನ್ನು ಡೈವರ್ಟ್ ಮಾಡಿಕೊಳ್ಳಬಾರದು ಎಂದು ಆಗಿದ್ದಂತಹ ಇತಿಹಾಸದ ವಿಚಾರದಲ್ಲಿ ಅನೇಕ ಸಲ ಚರ್ಚೆಯಾಗಿದೆ. ಈಗ ನಮ್ಮ ಮುಂದೆ ಇರುವಂತಹ ಮುಖ್ಯವಾದ ವಿಷಯ ಏನೆಂದರೆ ಅಲ್ಲಿ 133 ದಿವಸದಿಂದ ಹೋರಾಟ ನಡೆಯುತ್ತಿದೆ. ಅಲ್ಲಿಯ ಜನರ ಬೇಡಿಕೆ ಏನಾಗಿತ್ತು? ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ನಿಯೋಗ ಹೋಗಬೇಕೆಂದು ಕೊಂಡು ಹೋಗಿದ್ದೆವು. ತದನಂತರ interim application ಹಾಕುವುದಕ್ಕೆ ಸರ್ವಪಕ್ಷಗಳ ಜೊತೆ, ನಾರಿಮನ್ ಒಳಗೊಂಡಂತೆ ಕಾನೂನು ತಂಡದ ಮುಖ್ಯಸ್ಥರು ಹೋಗಿದ್ದೇವೆ. Interim application ಹಾಕುವುದಕ್ಕೆ ಬೇಕಾಗಿರುವಂತಹ preliminary report, ಎಲ್ಲೆಲ್ಲಿ ನೀರು ಎತ್ತಿ ಏನೇನು ಮಾಡಬೇಕಾಗಿದೆ ಎನ್ನುವುದಕ್ಕೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಂಬಂಧಪಟ್ಟಂತೆ ಮಾಹಿತಿ ಕೂಡ ಇವತ್ತು ರೆಡಿಯಾಗಿದೆ. ಅದರ ಬಗ್ಗೆ ಕೂಡ ಇವತ್ತು ಬೆಳಿಗ್ಗೆ ಚರ್ಚೆ ಮಾಡಿದ್ದೇವೆ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.15 - 7.00 - (44) - RD-CP

ಅಧ್ಯಕ್ಷರು: ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಎರಡು ದಿವಸಗಳಲ್ಲಿ ಮಾಡುತ್ತೇವೆ, ಮೊದಲನೆಯದಾಗಿ, ಇವತ್ತಿನ ದಿವಸ interim application ಕೂಡ ಹಾಕುತ್ತಿದ್ದೇವೆ. ಎರಡನೆಯದಾಗಿ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಇವತ್ತಿನ ದಿವಸ ಗೋವಾ ರಾಜ್ಯಕ್ಕೆ ಹೋಗಬೇಕೆಂದು ನನ್ನ ಜೊತೆಯಲ್ಲಿ ಮತ್ತು ಮಾನ್ಯ ವಿನಯ್ ಕುಲಕರ್ಣಿಯವರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಸ್ವಾಮೀಜಿಯವರು ಹಾಗೂ ಇನ್ನಿತರ ಎಲ್ಲಾ ಶಾಸಕರು, ಸಚಿವರೆಲ್ಲಾ ಭೇಟಿಯಾಗಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಒಪ್ಪಿಕೊಂಡಿದ್ದಾರೆ. ಇವತ್ತಿನ ದಿವಸ ಗೋವಾ ರಾಜ್ಯದ ಮುಖ್ಯಮಂತ್ರಿಯವರೊಂದಿಗೆ, ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಯವರೊಂದಿಗೆ ಕೂಡ ಚರ್ಚೆ ಮಾಡಬೇಕೆಂಬ ನಿಲುವನ್ನು ಸಹ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು: ಅಯಿತು, date fix ಮಾಡಿಕೊಂಡು ಒಂದು ದಿವಸ ಹೋಗಿ.

ಶ್ರೀ ಎಂ.ಬಿ.ಪಾಟೀಲ್: ಇದಲ್ಲದೇ ಇವತ್ತಿನ ದಿವಸ Tribunal ಮುಂದೆ ಆಗಿರುವಂಥದ್ದು ಸತ್ಯ, ಅಧ್ಯಕ್ಷರು, ಅವರಿಗೆ ಹುಷಾರಿಲ್ಲವೆಂದು ತಿಳಿಸಿದ್ದಾರೆ, ಮತ್ತೆ ಇದಕ್ಕೆ time ಕೊಡಬಾರದೆಂದು, ಬೇಗನೆ hearing ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದು ಅಲ್ಲದೇ ಇವತ್ತು ಮೀಟಿಂಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ೆ ಆದಮೇಲೆ ಒಂದು file ಬಂತು, ನಮ್ಮ ಸೆಕ್ರೆಟರಿಯವರು ಕೂಡ ಚರ್ಚೆ ಮಾಡಿದರು. ಮಾನ್ಯ ಜಗ ದೀಶ್ ಶೆಟ್ಟರ್‌ರವರೆ, ಮಾನ್ಯ ಸುರೇಶ್ ಅಂಗಡಿಯವರು ಏಪ್ರಿಲ್ 2015ರಂದು ಪಾರ್ಲಿಮೆಂಟ್‌ನಲ್ಲಿ ಒಂದು ಪ್ರಶ್ನೆಯನ್ನು ಕೂಡ ಕೇಳಿದ್ದರು. ಆಗ ಕೇಂದ್ರದ ಶ್ರೀಮತಿ ಉಮಾಭಾರತಿಯವರು ಕೂಡ .. ..

ಅಧ್ಯಕ್ಷರು: ಅದೆಲ್ಲಾ ಅನಾವಶ್ಯಕ, ಇಲ್ಲಿ ಮೂರೇ ಪ್ರಶ್ನೆಗಳು ಇರುವಂಥದ್ದು, ಮಾನ್ಯ ಮುಖ್ಯಮಂತ್ರಿಯವರು ಮತ್ತು ನೀವು ಗೋವಾಕ್ಕೆ.. ..

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, Tribunal ಮುಂದೆ ನಮ್ಮ friend ಇದ್ದಾರೆ, Tribunal ಮುಂದೆ ಇವರು ನೀರು ಬಳಸಿಕೊಳ್ಳುವುದಿಲ್ಲವೆಂದು ಬರೆದುಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸುಮ್ಮನೆ ಏಕೆ ಬೆಳಸಿಕೊಂಡು ಹೋಗುತ್ತಾ ಇದ್ದಾರೆ...

ಶ್ರೀ ಎಂ.ಬಿ.ಪಾಟೀಲ್: ಒಂದು ನಿಮಿಷ ಬೆಳಿಗ್ಗೆ ಏನು ಆಯಿತೆಂದರೆ.. ...

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇದಕ್ಕೆ ಎರಡೇ ದಾರಿ ಇರುವಂಥದ್ದು. ಒಂದು ಟ್ರಿಬ್ಯುನಲ್‌ನಲ್ಲಿ ಇದು ಇತ್ಯರ್ಥವಾಗಬೇಕು, because Tribunalಗೆ 2010ರಲ್ಲಿ refer ಆಗಿದೆ. ಅಲ್ಲಿ ಇದು ವಿಳಂಬವಾಗುತ್ತಿದೆ ನಿಜ, ಎರಡನೇ ದಾರಿ ಇರುವಂಥದ್ದು ಏನೆಂದರೆ, ಇದು ರಾಜೀ ಸಂಧಾನದ ಮೂಲಕ ಆಗಬೇಕು. ಅದು ಆಗಬೇಕೆಂದು ರೈತರು ಚಳುವಳಿ ಪ್ರಾರಂಭ ಮಾಡಿದಾಗ, ಅವರು ಒಂದು ಮನವಿಯನ್ನು ಇಟ್ಟಿದ್ದರು. All Party Delegation ಅನ್ನು ಮಾನ್ಯ ಪ್ರಧಾನಮಂತ್ರಿಯವರ ಬಳಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿದರು. ನಾನು ಆಗಸ್ಟ್ 23ನೇ ತಾರೀಖಿನಂದು ರೈತರ ಮುಖಂಡರು ಮತ್ತು ಸ್ವಾಮೀಜಿಗಳು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಬಂದಿದ್ದರು ಮತ್ತು all party ಮುಖಂಡರುಗಳು ಸಹ ಇದ್ದರು, ಎರಡು ಸದನಗಳ ವಿರೋಧಪಕ್ಷದ ನಾಯಕರುಗಳು ಇದ್ದರು, ಎಂ.ಪಿ.ಗಳು ಎಲ್ಲಾ ಇದ್ದರು. ಅದು ಆದ ಮೇಲೆ Prime Minister ರವರನ್ನು ಆಗಸ್ಟ್ 24ನೇ ತಾರೀಖಿನಂದು ಭೇಟಿ ಮಾಡಲು ದಿನಾಂಕವನ್ನು ಕೊಟ್ಟಿದ್ದರು. ಆಗ All Party Delegation ಅನ್ನು ಕರೆದುಕೊಂಡು ಹೋಗಿದ್ದೆವು. ಅಲ್ಲಿ ಅವರನ್ನು ಭೇಟಿ ಮಾಡಿ, ಇದಕ್ಕೆ ತಾವು intervene ಆಗಬೇಕೆಂದು ಒತ್ತಾಯ ಮಾಡಿದೆವು. ಹಿಂದೆ ಈ ರೀತಿ ಎಲ್ಲಾ ಆಗಿದೆ, ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿ ಇದ್ದಾಗ ಆಗಿದೆ, ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಆಗಿದೆ ಎಂದು ಹೇಳಿದೆವು. ಅದು ಆದಮೇಲೆ ಮಾನ್ಯ ಪ್ರಧಾನ ಮಂತ್ರಿಯವರು ಏನು ಹೇಳಿದರೆಂದರೆ, ನೀವು ವಿರೋಧಪಕ್ಷದವರ ಜೊತೆಯಲ್ಲಿ ಮಾತನಾಡಿ, ನಾನು ಮುಖ್ಯಮಂತ್ರಿಯವರೊಂದಿಗೆ ಮಾತನಾಡುತ್ತೇನೆಂದು ಹೇಳಿದರು. ಆಗ ರೈತರ ಪ್ರತಿನಿಧಿಗಳು ಇದ್ದರು, ಸ್ವಾಮೀಜಿಗಳು ಇದ್ದರು. ನಾವು ಅವರನ್ನು intervene ಆಗಲೇ ಬೇಕೆಂದು ಒತ್ತಾಯ ಮಾಡಿದೆವು. ಅವತ್ತು ಇಷ್ಟು ಆಗಿರುವಂಥದ್ದು, ಅದು ಆದ ಮೇಲೆ ನಾವು ಅನೇಕ ಸಾರಿ ರೈತರನ್ನು ಭೇಟಿ ಮಾಡಿದ್ದೇವೆ. ನಾವು ರೈತ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದೇವೆ, ಬೇರೆ ಬೇರೆ ಸ್ವಾಮೀಜಿಗಳು ಕೂಡ ಬಂದಿದ್ದಾರೆ. ಇತ್ತೀಚೆಗೆ ಮಾನ್ಯ ಕೋನರೆಡ್ಡಿಯವರು ರೈತ ಪ್ರತಿನಿಧಿಗಳನ್ನೆಲ್ಲಾ ಕರೆದುಕೊಂಡು ಬಂದಿದ್ದರು, ಅವರೊಂದಿಗೂ ಮಾತನಾಡಿದ್ದೇವೆ.

ಶ್ರೀ ಬಿ.ಆರ್.ಯಾವಗಲ್: 15ನೇ ತಾರೀಖಿನಂದು ಬಂದಿದ್ದರು.

ಶ್ರೀ ಸಿದ್ದರಾಮಯ್ಯ: ಅದಕ್ಕಿಂತ ಎರಡು ದಿವಸಗಳ ಹಿಂದೆ ರೈತರ ಪ್ರತಿನಿಧಿಗಳು ಮತ್ತು ಸ್ವಾಮೀಜಿಗಳು ಬಂದಿದ್ದರು. ಮಾನ್ಯ ಯಾವಗಲ್‌ರವರು, ಮಾನ್ಯ ಜಿ.ಎಸ್.ಪಾಟೀಲ್‌ರವರು, ಮಾನ್ಯ ಹೆಚ್.ಕೆ.ಪಾಟೀಲ್‌ರವರು, ಮಾನ್ಯ ಕೋನರೆಡ್ಡಿಯವರು ಆ ಭಾಗದವರೆಲ್ಲಾ ಬಂದಿದ್ದರು. ಆಗ ಒಂದು ಸಲಹೆ ಏನು ಬಂತೆಂದರೆ, all party ಮುಖಂಡರುಗಳೆಲ್ಲಾ, ರೈತ ಪ್ರತಿನಿಧಿಗಳು ಮತ್ತು ಸ್ವಾಮೀಜಿಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಳೆಲ್ಲಾ ಸಲಹೆ ನೀಡಿದರು. ಅದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಸಹ ಬರುವುದಕ್ಕೆ ಒಪ್ಪಿಕೊಂಡಿದ್ದಾರೆ. ನಿಮ್ಮ ಸರ್ಕಾರದಿಂದ ಮಂತ್ರಿಗಳನ್ನು ಕಳುಹಿಸಿಕೊಡಿ, ನಾವು ಅಲ್ಲಿಗೆ ಹೋಗಿ ಅಲ್ಲಿನ ಮುಖ್ಯಮಂತ್ರಿಯವರು ಭೇಟಿ ಮಾಡಿ ಚರ್ಚೆ ಮಾಡುತ್ತೇವೆಂದು ಹೇಳಿದರು. ಅದಕ್ಕೆ ನಾನು ಮಾನ್ಯ ಹೆಚ್.ಕೆ.ಪಾಟೀಲ್‌ರವರನ್ನು ಕಳುಹಿಸಿ ಕೊಡುತ್ತೇನೆ, ಮಾನ್ಯ ಎಂ.ಪಿ.ಪಾಟೀಲ್‌ರವರನ್ನು ಕಳುಹಿಸಿ ಕೊಡುತ್ತೇನೆ, ಮಾನ್ಯ ಎಸ್.ಆರ್.ಪಾಟೀಲ್‌ರವರನ್ನು ಕಳುಹಿಸಿಕೊಡುತ್ತೇನೆ. ಆ ಭಾಗದಲ್ಲಿ ಬರುವಂಥ ಮಾನ್ಯ ವಿನಯ್ ಕುಲಕರ್ಣಿಯವರನ್ನು ಕಳುಹಿಸಿ ಕೊಡುತ್ತೇನೆ, ನೀವು ಹೋಗಿ ಮಾತನಾಡಿ ಎಂದು ಹೇಳಿದೆ, ಅದಕ್ಕೆ ಅವರು ಸಹ ಒಪ್ಪಿಕೊಂಡು ಹೋದರು. ಈಗ ಇರುವ ಎರಡು ಹಂತಗಳಲ್ಲಿ ಒಂದು ಸಂಧಾನ ಮೂಲಕ ಆಗಬೇಕು, ಇನ್ನೊಂದು ಕೋರ್ಟ್‌ನಲ್ಲಿ ಇತ್ಯರ್ಥವಾಗಬೇಕು.

ಅಧ್ಯಕ್ಷರು: ಅಯಿತು.

ಶ್ರೀ ಸಿದ್ದರಾಮಯ್ಯ: ನಿಮಗೆ ಗೊತ್ತಿದೆ, ಕೋರ್ಟ್‌ನಲ್ಲಿ ಅದು ಇವತ್ತೆ ಆಗಬೇಕು, ನಾಳೆಯೇ ತೀರ್ಮಾನವಾಗಬೇಕೆಂದು ಒತ್ತಾಯ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಪ್ರಯತ್ನಗಳನ್ನೆಲ್ಲಾ ಮಾಡಿದ್ದೇವೆ. ಮಾನ್ಯ ಎಂ.ಬಿ.ಪಾಟೀಲ್‌ರವರು ಆ ಜಾಗಕ್ಕೆ ಹೋಗೇ ಇಲ್ಲ ಎನ್ನುವಂಥದ್ದೆಲ್ಲಾ ಸರಿ ಇಲ್ಲ. ಅದು ಸತ್ಯಕ್ಕೆ ದೂರವಾದದ್ದು.

ಅಧ್ಯಕ್ಷರು: ಸಾಕು.

ಶ್ರೀ ಸಿದ್ದರಾಮಯ್ಯ: ಮಂತ್ರಿಗಳು ಹೋಗಿದ್ದಾರೆ, ಹುಬ್ಬಳ್ಳಿಯಲ್ಲಿ ಮೀಟಿಂಗ್ ಮಾಡಿದ್ದಾರೆ. ಮತ್ತೆ ನರಗುಂದಕ್ಕೆ ಭೇಟಿ ಮಾಡಿದ್ದಾರೆ. ಅಲ್ಲಿ ಇಲ್ಲಿಯವರೆಗೂ ಏನೇನು ಆಗಿದೆ, ಏನು ಆಗಬೇಕೆಂಬ ಬಗ್ಗೆ ಎಲ್ಲಾ ಚರ್ಚೆಯಾಗಿದೆ. ಈಗ ಸಲಹೆಗೆ ಒಪ್ಪಿಕೊಂಡು ಹೋಗಿದ್ದಾರೆ, ಆ ಕೆಲಸ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡಲಿ, ಮಾನ್ಯ ಕೋನರೆಡ್ಡಿಯವರೆ, ನೀವು ತಾನೇ ವಿಷಯ raise ಮಾಡಿದವರು? ಅವತ್ತು ನೀವಲ್ಲಾ ಒಪ್ಪಿಕೊಂಡು ಹೋಗಿದ್ದಿರಲ್ಲಾ, ಅದನ್ನು ಮಾಡಿ. ಅದಕ್ಕೆ ಸರ್ಕಾರ ತಯಾರಿದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳೇ, ತಾವು ಬಂದರೆ ಒಳ್ಳೆಯದು, ಏಕೆಂದರೆ ಮಾನ್ಯ ಪ್ರಧಾನಮಂತ್ರಿಯವರು ಅವತ್ತು ಹೇಳಿದರಲ್ಲಾ.. .

ಶ್ರೀ ಜಗದೀಶ್ ಶೆಟ್ಟರ್: ತಾವೇ lead ಮಾಡಿದರೆ ಬಹಳ ಒಳ್ಳೆಯದಾಗುತ್ತದೆ, ಇಲ್ಲವೆಂದರೆ ಮಾನ್ಯ ಎಂ.ಬಿ.ಪಾಟೀಲ್‌ರವರನ್ನು ಕಳುಹಿಸಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಎಂ.ಬಿ.ಪಾಟೀಲ್‌ರವರು, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮತ್ತು ಮಾನ್ಯ ಎಸ್.ಆರ್.ಪಾಟೀಲ್ ಇವರನ್ನೇಲ್ಲಾ ಕಳುಹಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ತಮ್ಮ ಕಡೆಯಿಂದ ಗೋವಾ ರಾಜ್ಯದ ಮುಖ್ಯಮಂತ್ರಿಯವರಿಗೆ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಪತ್ರ ಹೋಗಲಿ.. ..

ಶ್ರೀ ಸಿದ್ದರಾಮಯ್ಯ: ಯಾರಿಂದ?

ಶ್ರೀ ಜಗದೀಶ್ ಶೆಟ್ಟರ್: ರಾಜ್ಯ ಸರ್ಕಾರದಿಂದ ಒಂದು delegation ಹೋಗಬೇಕಲ್ಲಾ, ಅವರೊಂದಿಗಿ ಮಾತುಕತೆ ಮಾಡುವುದಕ್ಕೆ ಒಂದು official correspondence ಆಗಬೇಕಲ್ಲಾ.

ಶ್ರೀ ಸಿದ್ದರಾಮಯ್ಯ: ನನಗೆ ಗೊತ್ತಿಲ್ಲ, ಅವತ್ತು ನೀವು ಮಾತನಾಡಿದ್ದು, date fix ಮಾಡುತ್ತೇವೆಂದು ನೀವು ಹೇಳಿದ್ದು. ನೀವು ಅವರ ಹತ್ತಿರ ದಿನವನ್ನು ನಿಗದಿ ಮಾಡುತ್ತಾರೆಂದು ನಿಮ್ಮ ಹೆಸರನ್ನು ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್: ನಾವು ದಿನಾಂಕ ನಿಗದಿ ಮಾಡುತ್ತೇವೆ, ನಿಮ್ಮ ಕಡೆಯಿಂದ ಒಂದು formal letter ಹೋಗಬೇಕಲ್ಲಾ.. ..

ಅಧ್ಯಕ್ಷರು: ನಾವು ಮೀಟಿಂಗ್ ಮಾಡುವುದಕ್ಕೆ ಬರುತ್ತೇವೆಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್: ನಾವು ಬರುತ್ತೇವೆಂದು ಅವರಿಗೆ ಹೇಳಬೇಕಲ್ಲಾ, ಅದಕ್ಕೆ ಸರ್ಕಾರ communication ಮಾಡಲಿ.

ಶ್ರೀ ಸಿದ್ದರಾಮಯ್ಯ: ನಾನು ಇಂಥವರೆಲ್ಲಾ ಬರುತ್ತಾರೆಂದು ಪತ್ರವನ್ನು ಬರೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಆಗ ನಾವು ಹೇಳುವುದಕ್ಕೆ ಆಗುತ್ತದೆ.

ಅಧ್ಯಕ್ಷರು: ಆಯಿತು, ನಾಳೆಯೇ ಮಾಡಿ.

ಶ್ರೀ ಸಿದ್ದರಾಮಯ್ಯ: ನಾನು ಇಂತಿಂಥವರೆಲ್ಲಾ ಬರುತ್ತಾರೆಂದು ಪತ್ರ ಬರೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದೇ ಒಂದು ಮನವಿ.. .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ಈಗ ಬಹಳಷ್ಟು ಸಮಯ ಆಗಿ ಹೋಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ತಮ್ಮಲ್ಲಿ ಒಂದೇ ಒಂದು ಮನವಿ ಏನೆಂದರೆ, ತಾವೇ ಆ delegation ಅನ್ನು lead ಮಾಡಿದರೆ ಒಳ್ಳೆಯದೆಂಬ ಭಾವನೆ ನಮ್ಮ ಎಲ್ಲಾ ಶಾಸಕರದ್ದು, ಏಕೆಂದರೆ, ಮಾನ್ಯ ಜೆ.ಹೆಚ್.ಪಟೇಲ್‌ರವರು, ಮಾನ್ಯ ಎಸ್.ಎಂ.ಕೃಷ್ಣರವರು ಆ ರೀತಿ ಹೋಗಿದ್ದರು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಹಿಂದೆ ಬಹಳ ಸಾರಿ ಆಗಿದೆ, ಮಾತುಕತೆಗಳೆಲ್ಲಾ ಆಗಿ ವಿಫಲವಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗ ಇದು ಹೊಸ ಪ್ರಯತ್ನವಿದೆ.

ಶ್ರೀ ಸಿದ್ದರಾಮಯ್ಯ: ಈಗ ಅವರು ಕೊಟ್ಟಿರುವ ಸಲಹೆಯನ್ನು ನೀವು ಪುನ: ಬದಲಾಯಿಸುತ್ತೀರಾ.. .

ಶ್ರೀ ಬಸವರಾಜ ಬೊಮ್ಮಾಯಿ: ಬದಲಾಯಿಸುವುದಲ್ಲ, ಈಗ ಮನವಿಯನ್ನು ನಾನು ಬದಲಾಯಿಸುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಅವರೆಲ್ಲಾ ಹೋಗಿ ಮಾತನಾಡಿ ಬರಲಿ, ನನ್ನ ಅಗತ್ಯ ಬಂದರೆ ನಾನು ಹೋಗುತ್ತೇನೆ. ಇವರು ಹೋಗಿ ಅಲ್ಲಿ ಮಾತನಾಡಲಿ.

ಶ್ರೀ ಬಸವರಾಜ ಬೊಮ್ಮಾಯಿ: Chief Minister ಆಗಿ ನೀವೇ ಭೇಟಿಯಾದರೆ ಅದಕ್ಕೊಂದು ತೂಕ ಬರುತ್ತದೆ, ಮಹತ್ವ ಬರುತ್ತದೆ, ಗಾಂಭೀರ್ಯತೆ ಬರುತ್ತದೆಂದು ನಮ್ಮ ಮನವಿ ಇದೆ. ತಾವು ಅದನ್ನು ಸ್ವೀಕಾರ ಮಾಡಬಹುದು, ಇಲ್ಲ reject ಮಾಡಬಹುದು.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮಾನ್ಯ ಬಸವರಾಜ ಬೊಮ್ಮಾಯಿರವರೆ, ಈಗ ಅವರು ಹೋಗಿ ಬಂದ ಮೇಲೆ, ಅವರು ಆಮೇಲೆ ನೋಡಿಕೊಂಡು ಹೋಗಲಿ, ಅಷ್ಟು ಮಾಡಿ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಬಹಳಷ್ಟು ಸಮಯ ಆಗಿ ಹೋಗಿರುವುದರಿಂದ, ದಯವಿಟ್ಟು ಇದನ್ನು speed up ಮಾಡಬೇಕು, ಇದನ್ನು ಬೇಗ ಮುಗಿಸಬೇಕೆಂಬುದಷ್ಟೆ. ತಾವು ದಯವಿಟ್ಟು ಮನಸ್ಸು ಮಾಡಿ lead ಮಾಡಿ, ಇದು ಬೇಗ ಮಾಡುವಂಥ ಪ್ರಯತ್ನ ಮಾಡಿ. ತಾವು ಒಪ್ಪಿದ್ದೀರಿ, ತಾವು ಹೇಗೆ ಮಾಡುತ್ತೀರೆಂಬುದನ್ನು ನೋಡಿ.

ಅಧ್ಯಕ್ಷರು: Ok, ಸಾಕು ಬಿಡಿ.

ಶ್ರೀ ಎನ್.ಹೆಚ್.ಕೋನರಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಇಷ್ಟೆಲ್ಲಾ ಚರ್ಚೆ ಮಾಡಿದ್ದೀರಿ, date fix ಮಾಡುವಂಥದ್ದು ಸರ್ಕಾರದ ಕಡೆಯಿಂದ commit ಮಾಡಿ, ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಎಲ್ಲಾ . ..

ಅಧ್ಯಕ್ಷರು: ಅದು ಬಿಡಿ, ಮಾನ್ಯ ಮಂತ್ರಿಗಳೆ ತಾವು ಹೇಳಿ, ಅದಕ್ಕೆ ಒಂದು date fix ಮಾಡಿ ಕೊಡಿ.

ಶ್ರೀ ಎಂ.ಬಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆಯೇ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದೇವೆ, ಲೆಟರ್ ಬರೆಯುವ ಬಗ್ಗೆ interim application ಹಾಕಿದ ಮರು ದಿವಸ ಪತ್ರ ಬರೆಯಬೇಕೆಂದು ಮಾನ್ಯ ಬಸವರಾಜ ಬೊಮ್ಮಾಯಿಯವರು ಮತ್ತು ನಾವೆಲ್ಲಾ ಕುಳಿತು ಚರ್ಚೆ ಮಾಡಿ, ಆ ಬಗ್ಗೆ ನಿರ್ಣಯ ಮಾಡಿದ್ದೇವೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಅಯಿತು, ಬಿಡಿ. ಇನ್ನು ಮಾನ್ಯ ಶಿವಲಿಂಗೇಗೌಡರು...

(ಮಾನ್ಯ ಕೆ.ಎಂ.ಶಿವಲಿಂಗೇಗೌಡರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು: ಮಾನ್ಯ ಕೆ.ಎಸ್.ಪುಟ್ಟಣ್ಣಯ್ಯನವರೆ, ಹೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ನಿಯಮ 69ರ ಅಡಿಯಲ್ಲಿ ಅಲ್ಪ ಕಾಲಾವಧಿ ಚರ್ಚೆ**

**ವಿಷಯ: ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕ್‌ಗಳು ಟ್ರ್ಯಾಕ್ಟರ್ ತಯಾರಿಕಾ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರೈತರಿಗೆ ಒತ್ತಾಯ ಪೂರ್ವಕವಾಗಿ ಹಾಗೂ ಅನಾವಶ್ಯಕವಾಗಿ ಟ್ರ್ಯಾಕ್ಟರಿನ ಮೂಲ ಬೆಲೆಗಿಂತ ದುಪ್ಪಟ್ಟು ಬೆಲೆಗೆ ಸಾಲ ಕೊಡಿಸಿಕೊಡುವುದರ ಮೂಲಕ ಮಾರಾಟ ಮಾಡಿ ವಂಚನೆ ಮಾಡುತ್ತಿರುವ ಬಗ್ಗೆ.**

******

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಕರ್ನಾಟಕದಲ್ಲಿ ಎಷ್ಟು ಟ್ರ್ಯಾಕ್ಟರ್ ಏಜೆನ್ಸಿಗಳಿವೆ? ಪ್ರತಿಯೊಬ್ಬ ಟ್ರ್ಯಾಕ್ಟರ್ ಏಜೆನ್ಸಿಯವರು ಮೋಟಾರ್ ಬೈಕ್ ಕೊಡುತ್ತಾರೆ, 50,000 ರೂ.ಗಳ ಸಾಲ ಕೊಡುತ್ತೇನೆಂದು ಹೇಳಿರುತ್ತಾರೆ. ಯಾವುದೇ ಬ್ಯಾಂಕ್‌ನಲ್ಲಿ ಟ್ರ್ಯಾಕ್ಟರ್‌ನ original rate ಎಷ್ಟು ಎಂದು ಯಾರಿಗೂ ಗೊತ್ತಿಲ್ಲ. ಪ್ರತಿಯೊಬ್ಬ ರೈತರಿಂದ ಒಂದು ಲಕ್ಷ, ಒಂದು ಕಾಲು ಲಕ್ಷ, ಒಂದೂವರೆ ಲಕ್ಷ ರೂ.ಗಳನ್ನು ಪಡೆದು ಟ್ರ್ಯಾಕ್ಟರ್ ಸಾಲ ಕೊಟ್ಟಿದ್ದಾರೆ. ಸರ್ಕಾರದ ಯಾವುದೇ ಇಲಾಖೆಯಲ್ಲಿ, ಯಾವುದೇ ಬ್ಯಾಂಕ್‌ಗಳಲ್ಲಿ ವಿಚಾರಿಸಿದರೂ, original rate ಗೊತ್ತಿಲ್ಲ. ಇದು ಒಂದು ರೂಪಾಯಿ, ಎರಡು ರೂಪಾಯಿ ಅಲ್ಲ, ಸಾವಿರಾರು ಕೋಟಿ ರೂ.ಗಳು ರೈತರ ಮೇಲೆ ಅನಾವಶ್ಯಕವಾದ ಸಾಲವನ್ನು ಹೊರಿಸಿದ್ದಾರೆ. ಇದಕ್ಕೆ ಒಂದು COD ತನಿಖೆಯನ್ನಾದರೂ ಮಾಡಿಸಿ, ಇಲ್ಲವೆಂದರೆ ಯಾವುದಾದರೂ ಒಂದು ಕೃಷಿ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಯಿಂದ ಮಾಡಿಸಿ, ಆ ವರದಿಯನ್ನು ತರಿಸಿ, ಯಾವ ರೈತರಿಗೆ ಅನ್ಯಾಯವಾಗಿದೆ, ಅದನ್ನು ಸರಿ ಮಾಡಿ ಕೊಡಿ. ಸಹಕಾರಿ ಕ್ಷೇತ್ರದಲ್ಲಿ ಏನಾಗಿದೆಯೆಂದರೆ, ತಾವು ಕೊಟ್ಟಿರುವಂಥದ್ದು ಅಪೆಕ್ಸ್ ಬ್ಯಾಂಕ್, ಷೆಡ್ಯೂಲ್ ಬ್ಯಾಂಕ್ ದರ್ಜೆಯಲ್ಲಿ ಈ ಬ್ಯಾಂಕ್‌ನಲ್ಲಿ ನೇರವಾಗಿ ಟ್ರ್ಯಾಕ್ಟರ್ ಎಂದರೆ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸಾಲ ಅದು ಎಷ್ಟು? ಬ್ಯಾಂಕ್‌ಗಳು ಟ್ರ್ಯಾಕ್ಟರ್‌ಗಳಿಗೆ ರೇಟ್ ಬರೆಯುವುದು ಬೇಡವೇ? ಎಷ್ಟು ಸಾವಿರ ಕೋಟಿ ರೂಪಾಯಿಗಳು ಮೋಸವಾಗಿರಬಹುದು?

ಅಧ್ಯಕ್ಷರು: ಮಾನ್ಯ ಸಚಿವರೆ ಉತ್ತರ ಹೇಳಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಸಹಕಾರ ಹಾಗೂ ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಚಿವರ ಹೇಳಿಕೆಯನ್ನು ಲಗತ್ತಿಸಿದೆ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಪ್ರಸ್ತಾಪ ಮಾಡಿರುವಂಥದ್ದು, ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಟ್ರ್ಯಾಕ್ಟರ್‌ಗಳಿಗೆ ಸಾಲ ಕೊಡುವಂಥ ಸಂದರ್ಭಗಳಲ್ಲಿ, ಸಾಕಷ್ಟು ಮಧ್ಯವರ್ತಿಗಳ ವ್ಯವಹಾರಗಳು ನಡೆಯುತ್ತದೆನ್ನುವ ವಿಚಾರವನ್ನು ತಿಳಿಸಿದ್ದಾರೆ. ಇದು ಏನಾಗಿದೆಯೆಂದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಷೆಡ್ಯೂಲ್ ಬ್ಯಾಂಕ್‌ಗಳ ಮುಖೇನಾ ಕೃಷಿ ಸಾಲವನ್ನು ವಿತರಣೆ ಮಾಡುತ್ತಿದ್ದೆ, ಟ್ರ್ಯಾಕ್ಟರ್‌ಗಳಿಗೂ ಕೂಡ ಮಾಡುತ್ತಿದೆ. ಅವರು ಮಾಡುವಾಗ ಕೆಲವು ಮಾನದಂಡವನ್ನು ಅನುಸರಿಸುತ್ತಿದ್ದಾರೆ. ಅವರು ರೈತರಾಗಿರಬೇಕು, 6 ಎಕರೆ.. ..

ಅಧ್ಯಕ್ಷರು: ಅದು ಎಲ್ಲಾ ಬೇಡ, ಟ್ರ್ಯಾಕ್ಟರ್ ವಿಚಾರ ಹೇಳಿ.

ಶ್ರೀ.ಕೆ.ಎಸ್.ಪುಟ್ಟಣ್ಣಯ್ಯ: ತಾವು ಸಾಲ ಕೊಡುವ ನೀತಿ ಅಲ್ಲ, excess ಹಣವನ್ನು ಪಡೆದಿದ್ದಾರೆ, ಆ excess ಹಣವನ್ನು ಪಡೆಯುವ ಅಧಿಕಾರವಿಲ್ಲ, original rate ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಗ ೊತ್ತಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015/7.10/45/GG/HS

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಸಾಲ ಕೊಡುವ ನೀತಿಯ ಬಗ್ಗೆ ನಾನು ಹೇಳಲಿಲ್ಲ. Excess ಹಣವನ್ನು ತೆಗೆದುಕೊಂಡಿದ್ದಾರೆ. ಆ ರೀತಿ excess ಹಣವನ್ನು ತೆಗೆದುಕೊಳ್ಳಲು ಅಧಿಕಾರವಿಲ್ಲ. Original rate ಎಷ್ಟು ಎನ್ನುವುದು ರಾಷ್ಟ್ರೀಕೃತ ಬ್ಯಾಂಕಿನವರಿಗೂ ಗೊತ್ತಿಲ್ಲ, ಯಾರಿಗೂ ಗ ೊತ್ತಿಲ್ಲ.

ಅಧ್ಯಕ್ಷರು: ಫ್ಯಾಕ್ಟರಿ ರೇಟ್ ಪ್ರಕಾರ ಕೊಡಬೇಕು, ಅಷ್ಟೇ ಅಲ್ಲವೇ ನೀವು ಹೇಳುತ್ತಿರುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಒಂದೊಂದು ಏಜೆನ್ಸಿಯವರು ರೈತರಿಂದ ಸುಮಾರು 60-70 ಕೋಟಿ ರೂಪಾಯಿಗಳನ್ನು ಹೊಡೆದಿದ್ದಾರೆ. ಅದಕ್ಕಾಗಿ ಸರ್ಕಾರ original rate ಎಷ್ಟು ಎಂದು ಎಲ್ಲ ಕಡೆ ಬೋರ್ಡ್ ಹಾಕಿಸಬೇಕು. Original rate ಎಷ್ಟು ಎಂದು ಗೊತ್ತಿಲ್ಲದೇ ರೈತರಿಗೆ ಮೋಸವಾಗುತ್ತಿದೆ. ಇದು ಏಜೆನ್ಸಿಗಳು ಮಾಡಿರುವ ಅನ್ಯಾಯ. ಇದು ಎರಡನೇ ಬಾರಿ ಇಲ್ಲಿ ಚರ್ಚೆಯಾಗುತ್ತಿರುವುದು. ಮೊದಲನೇ ಬಾರಿ ಚರ್ಚೆಯಾದಾಗ ಕೃಷ್ಣಬೇರೈಗೌಡರು ಈ ಬಗ್ಗೆ ಒಂದು ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಈ ಸದನದಲ್ಲಿ ಹೇಳಿದ್ದರು. ಒಂದೆರಡು ರೂಪಾಯಿಗಳಲ್ಲ, ಸಾವಿರಾರು ಕೋಟಿ ರೂಪಾಯಿಗಳ ಅನ್ಯಾಯವಾಗಿದೆ. ದಯವಿಟ್ಟು ಇದನ್ನು ಅತ್ಯಂತ ಗಂಭೀರವಾಗಿ ಆಲೋಚಿಸಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಹಿರಿಯ ಶಾಸಕರು ಪ್ರಸ್ತಾಪ ಮಾಡಿರುವ ವಿಚಾರದಲ್ಲಿ, ಯಾವುದೇ ರೀತಿ ಲೋಪದೋಷಗಳು ಆಗದ ರೀತಿ, ಟ್ರ್ಯಾಕ್ಟರ್ ತೆಗೆದುಕೊಳ್ಳುವುದಕ್ಕೆ ಕೃಷಿ ಇಲಾಖೆಯಿಂದ ಸರ್ಕಾರ ಕೊಡುವಂಥ ಸಬ್ಸಿಡಿ ಹಣ. . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎನ್. ಚಲುವರಾಯಸ್ವಾಮಿ: ಸಬ್ಸಿಡಿ ಬಗ್ಗೆ ಕೇಳುತ್ತಿಲ್ಲ, ಟ್ರ್ಯಾಕ್ಟರ್‌ಗೆ ರೇಟನ್ನೇ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಹಾಗೆ ತೆಗೆದುಕೊಂಡಿದ್ದರೆ ಆ ಏಜೆನ್ಸಿಗಳಿಂದ ವಾಪಸ್ಸು ವಸೂಲು ಮಾಡುತ್ತೇವೆ ಎಂದು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಅವರು ಏನು ಕೇಳುತ್ತಿದ್ದಾರೆ ಎನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದಕ್ಕೆ ಪೂರಕವಾಗಿಯೇ ಹೇಳುತ್ತಿದ್ದೇನೆ. ಬಹಳ ಹಿಂದಿನಿಂದ ರೈತರು ಟ್ರ್ಯಾಕ್ಟರ್‌ಗಳನ್ನು ಷೆಡ್ಯೂಲ್ಡ್ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಪಿ.ಎಲ್.ಡಿ. ಬ್ಯಾಂಕುಗಳಿಂದ ಸಾಲ ಪಡೆದು ತೆಗೆದುಕೊಳ್ಳುವಂಥಾದ್ದು ನಡೆದುಕೊಂಡು ಬರುತ್ತಿದೆ. ಇದರಲ್ಲಿ ಯಾವುದೇ ರೀತಿಯ ಒತ್ತಡ ಹೇರುವಂಥ ಉದ್ದೇಶವಾಗಲೀ ಅಥವಾ ಆ ರೀತಿಯ ಸೂಚನೆಯಾಗಲೀ ಯಾವುದೇ ಬ್ಯಾಂಕುಗಳಿಂದಾಗಲೀ, ಸಹಕಾರಿ ಸಂಸ್ಥೆಗಳಿಂದಾಗಲೀ ಇರುವುದಿಲ್ಲ. ಅವರು ಹೇಳಿದ ರೀತಿಯಲ್ಲಿ ಕೆಲವು ಮಧ್ಯವರ್ತಿಗಳು ಅಥವಾ ಟ್ರ್ಯಾಕ್ಟರ್ ಏಜೆಂಟ್‌ಗಳು/ಡೀಲರ್‌ಗಳು ಬ್ಯಾಂಕುಗಳ ಮೇಲೆ, ರೈತರ ಮೇಲೆ ಒತ್ತಡ ಹೇರಿ ಇಷ್ಟೇ ಬೆಲೆಗೆ ತೆಗೆದುಕೊಳ್ಳಬೇಕು ಎನ್ನುವ ರೀತಿ ಮಾಡುವುದರಿಂದ ಮಧ್ಯದಲ್ಲಿ ಸಾಕಷ್ಟು ಹಣ ರೈತರಿಗೆ ಮೋಸವಾಗುತ್ತಿದೆ ಎನ್ನುವುದನ್ನು ಅವರು ಹೇಳುತ್ತಿದ್ದಾರೆ. ಯಾವುದೇ ಟ್ರ್ಯಾಕ್ಟರ್ ಕಂಪನಿಯವರು ಟ್ರ್ಯಾಕ್ಟರ್‌ಅನ್ನು ಮಾರಾಟ ಮಾಡಬೇಕಾದರೆ ಇಷ್ಟು ಹೆಚ್.ಪಿ. ಟ್ರ್ಯಾಕ್ಟರ್‌ಗೆ ಇಷ್ಟೇ ರೇಟ್ ಇರಬೇಕು ಎಂದು ಇದೆ. ಸಂಬಂಧಪಟ್ಟಂಥ ಬ್ಯಾಂಕುಗಳು ಮತ್ತು ರೈತರಿಗೂ ಆ ಸೂಚನೆ ಕೊಟ್ಟು ಸಾಲ ಪಡೆಯುವಂಥ ವ್ಯವಸ್ಥೆ ಆಗುತ್ತದೆ. ಆ ರೀತಿ ಯಾವುದಾದರೂ ನಿರ್ದಿಷ್ಟವಾದ ಆರೋಪವಿದ್ದರೆ, ಅಂಥ ಯಾವುದಾದರೂ ಪ್ರಕರಣ ಅವರ ಗಮನದಲ್ಲಿದ್ದರೆ, ಅದನ್ನು ಅವರು ಹೇಳಿದರೆ, ಆ ಬಗ್ಗೆ ತನಿಖೆ ಮಾಡಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ನೀವು ಫ್ಯಾಕ್ಟರಿಗಳಿಂದ ಟ್ರ್ಯಾಕ್ಟರ್ ದರ ಏನು ಎನ್ನುವುದನ್ನು ತರಿಸಿಕೊಳ್ಳಿ. ಆ ದರದ ಪ್ರಕಾರ ರೈತರಿಗೆ ಕೊಡಬೇಕು ಎಂದು ಎಲ್ಲ ಕಡೆ ಬೋರ್ಡ್ ಹಾಕಿಸಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇದನ್ನು ನಿಮಗೆ ಕಳುಹಿಸಿಕೊಡುತ್ತೇನೆ ನೋಡಿ. ನೂರಾರು ಜನ ರೈತರು ಅಂಗದ ಟ್ರ್ಯಾಕ್ಟರ್ ತೆಗೆದುಕೊಂಡು, ಅವುಗಳು ಯಾವುದೇ ಮೂವ್‌ಮೆಂಟ್ ಇಲ್ಲದೇ ಅವರು ಸಂಪೂರ್ಣ ನಾಶವಾಗಿಬಿಟ್ಟಿದ್ದಾರೆ. ಟ್ರ್ಯಾಕ್ಟರ್‌ಗಳು ಅಲ್ಲಲ್ಲೇ ನಿಂತಿವೆ. ರೈತರಿಂದ ಇದಕ್ಕೆ ಹೆಚ್ಚಿನ ಹಣ ವಸೂಲು ಮಾಡುತ್ತಿದ್ದಾರೆ. ಇದಕ್ಕೆ ಏನು ಮಾಡಬೇಕು? ಕೂಡಲೇ ಕ್ರಮ ತೆಗೆದುಕೊಳ್ಳಿ. ಅಂಗದ ಟ್ರ್ಯಾಕ್ಟರ್ ಎಂದು ಇದೆ. ಅದರ ಯಾವ ಅಂಗಾಂಗವೂ ಚೆನ್ನಾಗಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ರೈತರು ಆ ರೀತಿ ಮೋಸ ಹೋಗಿರುವುದರ ಬಗ್ಗೆ ದೂರು ಕೊಟ್ಟರೆ ಅದಕ್ಕೆ ಸಂಬಂಧಪಟ್ಟಂತೆ ಕೇಸ್ ಬುಕ್ ಮಾಡಬಹುದು.

ಶ್ರೀ ಕೆ. ಷಡಕ್ಷರಿ: ಪಿ.ಎಲ್.ಡಿ. ಬ್ಯಾಂಕುಗಳು ಸಾಲ ಕೊಡುವಂಥಾದ್ದಕ್ಕೆ ಒಂದು ಸಮಿತಿ ಇದೆ. ಆ ಸಮಿತಿಗಳು ಆರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಆ ಸಮಿತಿಯಲ್ಲೇ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಾನು ರಾಷ್ಟ್ರೀಕೃತ ಬ್ಯಾಂಕುಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಪಿ.ಎಲ್.ಡಿ. ಅಥವಾ ಸಹಕಾರಿ ಕ್ಷೇತ್ರದ ಬ್ಯಾಂಕುಗಳ ಬಗ್ಗೆ ಅಲ್ಲ. ಟ್ರ್ಯಾಕ್ಟರ್ ತೆಗೆದುಕೊಳ್ಳಲು ಹೆಚ್ಚು ಸಾಲ ಕೊಟ್ಟಿರುವುದು ರಾಷ್ಟ್ರೀಕೃತ ಬ್ಯಾಂಕುಗಳೇ.

ಅಧ್ಯಕ್ಷರು: ಸ್ವಲ್ಪ ತಿಳಿದುಕೊಳ್ಳಿ. ಅವರು ಹೇಳಿದ್ದು ಇಷ್ಟೇನೇ, ಫ್ಯಾಕ್ಟರಿಯಲ್ಲಿ ಏನು ರೇಟ್ ಇದೆ, ಅದರ ಪ್ರಕಾರ ಕೊಡುತ್ತಿಲ್ಲ, ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಬ್ಯಾಂಕರ್ಸ್ ಸಮಿತಿ ಇದೆ. ಈ ದೂರಿನ ಬಗ್ಗೆ ಆ ಸಮಿತಿಗೆ ತಿಳಿಸುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಈ ಬಗ್ಗೆ ತನಿಖೆ ಮಾಡಿಸಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ತನಿಖೆ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಮಾಡುವುದಕ್ಕೆ ಒಂದು ಸಮಿತಿ ಮಾಡಿ, ಅದರಿಂದ ತನಿಖೆ ಮಾಡಿಸಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಈಗಾಗಲೇ ಒಂದು ಸಮಿತಿ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇದನ್ನು ತಮಗೇ ಕಳುಹಿಸಿಕೊಡುತ್ತೇನೆ, ಇದನ್ನು ನೀವೇ ನೋಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಆಯಿತು, ಕಳುಹಿಸಿಕೊಡಿ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಒಂದು ಸಮಿತಿ ಮಾಡಿ ಅದರಿಂದ ತನಿಖೆ ಮಾಡಿ. ವರದಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿ. ರೈತರು ತಮ್ಮ ಕಷ್ಟವನ್ನು ಸರ್ಕಾರದ ಮುಂದೆ ಹೇಳದೇ ಇನ್ಯಾರ ಮುಂದೆ ಹೇಳಬೇಕು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ತಾವು ಹೇಳಿರುವುದನ್ನು ಕಳುಹಿಸಿಕೊಟ್ಟರೆ ಮಾಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಧ್ಯಕ್ಷರೆ, ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ, ಒಂದು ಸಾವಿರ ಕೋಟಿಗೂ ಹೆಚ್ಚು ಹಣ ಅನ್ಯಾಯವಾಗಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಅಧ್ಯಕ್ಷರು: ಆಯಿತು, ಮಾಡುತ್ತೇವೆ ಎಂದು ಹೇಳಿದ್ದಾರಲ್ಲ. ನೀವು ಹೇಳುತ್ತಿರುವುದು ಒಂದು ಪ್ರಕರಣ. ಜನರಲ್‌ಆಗಿ ಸಮಸ್ಯೆ ಇರುವುದು ಏನೆಂದರೆ, ಫ್ಯಾಕ್ಟರಿ ರೇಟ್‌ಗಿಂತ ಜಾಸ್ತಿ ಹಣವನ್ನು ಏಜೆಂಟರು quote ಮಾಡುತ್ತಾರೆ ಎನ್ನುವುದಾಗಿದೆ. ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಿಲ್ಲಿಸುವುದರ ಜೊತೆಗೆ, ಆ ಹಣವನ್ನು ವಾಪಸ್ಸು ಕೊಡಿಸುತ್ತೀರಾ?

ಅಧ್ಯಕ್ಷರು: ಈಗ ಮುಂದಿನ ವಿಷಯ. ಎಂ.ಟಿ.ಕೃಷ್ಣಪ್ಪನವರು.

**ವಿಷಯ:** ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿ ಅಂಬಾಪುರ ಗ್ರಾಮದ ಸರ್ವೆನಂಬರ್ 46ರಲ್ಲಿರುವ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಮಂಜೂರು ಮಾಡಿರುವ ಬಗ್ಗೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿ ಅಂಬಾಪುರ ಗ್ರಾಮದ ಸರ್ವೆನಂಬರ್ 46ರಲ್ಲಿರುವ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ಮಂಜೂರು ಮಾಡಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರು ಹೋಬಳಿ ಅಂಬಾಪುರ ಗ್ರಾಮದ ಸರ್ವೆನಂಬರ್ 46ರಲ್ಲಿರುವ ಜಮೀನು ರಿಸರ್ವ್ ಫಾರೆಸ್ಟ್ ಎಂದು ಇದ್ದರೂ ಸಹ, ಆ ಜಮೀನನ್ನು ಸುಮಾರು 79 ಜನರಿಗೆ ಮಂಜೂರು ಮಾಡಿದ್ದಾರೆ. ಆ ಜಮೀನನ್ನು ರೈತರಿಗೆ ಕೊಟ್ಟಿದ್ದರೆ ಖುಷಿಯಾಗುತ್ತಿತ್ತು. ಅದನ್ನು ಬೇರೆ ಯಾರೋ ವೈಯಕ್ತಿಕವಾಗಿ G.P.A. ಮಾಡಿಕೊಂಡಿದ್ದು, ಅವರು ಅದನ್ನು further sale ಮಾಡಲು ಪ್ಲಾನ್ ಮಾಡಿದ್ದಾರೆ. ಸುಪ್ರೀಂ ಕೋರ್ಟ್

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಒಂದು ನಿರ್ದೇಶನ ಕೊಟ್ಟಿದೆ. 'When the land was included in the reserve forest, the entry in revenue records was of no consequence and further mere Saguvali Chit did not confirm any title on the suit land. This apart from the revenue authority was not competent to deal with the property which is the part of the reserve forest.' This is the Supreme Court judgement. ಇದನ್ನು ಉಲ್ಲಂಘನೆ ಮಾಡಿ ಅಲ್ಲಿಯ ತಹಶೀಲ್ದಾರ್ ಮತ್ತು Land Record Officer, ಈ ಜಮೀನಿಗೆ G.P.A. holderಗೆ ಖಾತೆ ಮಾಡಿಕೊಡುತ್ತಿದ್ದಾರೆ.

ಅಧ್ಯಕ್ಷರು: ಈಗ ಖಾತೆ ಆಗಿದೆಯೋ, ಇಲ್ಲವೋ?

ಶ್ರೀ ಎಂ.ಟಿ. ಕೃಷ್ಣಪ್ಪ: ಇನ್ನೂ ಆಗಿಲ್ಲ, ಮಾಡುತ್ತಿದ್ದಾರೆ.

ಅಧ್ಯಕ್ಷರು: ಈ ಬಗ್ಗೆ ಡಿ.ಸಿ.ಯವರಿಗೆ ತಕ್ಷಣ ಒಂದು ಸೂಚನೆ ಕೊಡಿ.

ಶ್ರೀ ಎಂ.ಟಿ. ಕೃಷ್ಣಪ್ಪ: ನಾನು ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೆ, ಅವರು ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದಾರೆ. ನನಗೆ ಕೊಟ್ಟಿರುವ ಉತ್ತರದಲ್ಲಿ ಏನಿದೆ ಎಂದರೆ, ಒಬ್ಬ ಅಸಿಸ್ಟೆಂಟ್ ಕಮೀಷನರ್ ಎನ್‌ಕ್ವೈರಿ ಮಾಡಿ ಡಿ.ಸಿ.ಗೆ ರಿಪೋರ್ಟ್ ಕೊಟ್ಟಿದ್ದಾರೆ. D.C. has not taken any action. ಈಗ ಡಿ.ಸಿ.ಯವರು ಇನ್ನೊಂದು ಆದೇಶ ಮಾಡಿ ಇನ್ನೊಬ್ಬರು A.C.ಯನ್ನು ಕಳುಹಿಸಿದ್ದಾರೆ. She is a junior. ಹಾಗಾಗಿ, ಇಲ್ಲಿ ಅನ್ಯಾಯವಾಗುತ್ತಿದೆ, ಈ ಪೂರ್ತಿ ಪ್ರಕರಣವನ್ನು ಅಂದರೆ ಒಂದರಿಂದ ಐದರವರೆಗೆ ಇರುವ ಏಕ ವ್ಯಕ್ತಿ ಕೋರಿಕೆ ಪ್ರಕರಣವನ್ನು ರದ್ದು ಮಾಡಬೇಕು, ಯಾವ್ಯಾವ ಅಧಿಕಾರಿಗಳು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟಿನ ವಿರುದ್ಧ ತೀರ್ಮಾನ ಮಾಡಿದ್ದಾರೆ, ಅವರ ಮೇಲೆ ಶಿಸ್ತು ಕ್ರಮ ತೆಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ೆದುಕೊಳ್ಳಬೇಕು. ಪೂರ್ತಿ ಪ್ರಕರಣದ ಬಗ್ಗೆ ತನಿಖೆ ಮಾಡಲು D.V.C. ಯವರಿಗೆ ಆದೇಶ ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆನ್ನುವುದು ನನ್ನ ಒತ್ತಾಯ.

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಹಾಗೆ ಇದರಲ್ಲಿ ಬಹಳ ತಪ್ಪುಗಳಾಗಿವೆ. ಅಲ್ಲಿರುವ ಸುಮಾರು 171 ಎಕರೆ ಜಮೀನಿಗೆ ಸುಮಾರು 225 ಎಕರೆಯನ್ನು ಮಂಜೂರು ಮಾಡಿದ್ದಾರೆ. ಅವರು ಹೇಳಿದ ಹಾಗೆ ಕೆಲವು ಬೇನಾಮಿ ವ್ಯಕ್ತಿಗಳಿಗೂ ಮಂಜೂರು ಮಾಡಿದ್ದಾರೆ. ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಇಲ್ಲದೇ ಇರುವ ಜಮೀನನ್ನು ಮಂಜೂರು ಮಾಡಿದ್ದಾರೆ. ಹೀಗೆ ಎಲ್ಲ ತಪ್ಪುಗಳು ಆಗಿವೆ. ಅದರಲ್ಲಿ ಬೇರೆ ಮಾತಿಲ್ಲ. ಆದರೆ ಇದು ಹಿಂದೆ ಮಂಜೂರಾತಿಯಾಗಿದೆ. ಇತ್ತೀಚೆಗೆ ಏನು ತಪ್ಪಾಗಿದೆ ಎಂದರೆ ಮೋಜಣಿ ಇಲಾಖೆಯವರು ಅವರಿಗೆ ಮೋಜಣಿಯನ್ನು ಸಹ ಮಾಡಿಕೊಡುತ್ತಿದ್ದಾರೆ, ಪೋಡಿ ಮಾಡಿಕೊಡುವ ಹಂತಕ್ಕೆ ಹೋಗಿದ್ದಾರೆ. ತಿಪಟೂರಿನ ಉಪ ವಿಭಾಗ ಾಧಿಕಾರಿಗಳು, ಮೇಲ್ನೋಟಕ್ಕೆ ಇದು ತಪ್ಪಾಗಿದೆ ಎನ್ನುವ ವರದಿಯನ್ನು ಕೊಟ್ಟಿದ್ದಾರೆ. ಪ್ರಕರಣ ಬಹಳ ಗ ಂಭೀರವಾಗಿರುವಂಥಾದ್ದು ಆಗಿರುವುದರಿಂದ ಇನ್ನೊಂದು opinion ತೆಗೆದುಕೊಳ್ಳೋಣ ಎಂದು ಜಿಲ್ಲಾಧಿಕಾರಿಗಳು ಇನ್ನೊಬ್ಬ ಉಪ ವಿಭಾಗಾಧಿಕಾರಿಗಳಿಂದ ವರದಿ ತೆಗೆದುಕೊಳ್ಳಲು ಹೇಳಿದ್ದಾರೆ.

ಅಧ್ಯಕ್ಷರು: ಅವರು I.A.S. ಅಧಿಕಾರಿಯೇ?

ಶ್ರೀ ಕೃಷ್ಣಬೈರೇಗೌಡ: D.C.ಯವರು I.A.S. ಅಧಿಕಾರಿ. A.C.ಯವರು I.A.S. ಅಧಿಕಾರಿಯಲ್ಲ.

ಅಧ್ಯಕ್ಷರು: ಅಂದರೆ ತೀರ್ಮಾನ ಮಾಡುವುದಕ್ಕೆ ಅವರಿಗೆ competence ಇಲ್ಲ. ಇಂಥವು ಅನೇಕ ಇವೆ. ಇವುಗಳ ಬಗ್ಗೆ ಗಮನಹರಿಸಿ, ಸೀರಿಯಸ್‌ಆಗಿ ಅವರಿಗೆ ಹೇಳಿ.

ಶ್ರೀ ಕೃಷ್ಣ ಬೈರೇಗೌಡ: ಅದನ್ನೇ ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಟಿ. ಕೃಷ್ಣಪ್ಪ: D.V.C.ಯಿಂದ ಎನ್‌ಕ್ವೈರಿ ಮಾಡಿಸಿ, not A.C.

ಶ್ರೀ ಕೃಷ್ಣ ಬೈರೇಗೌಡ: ಮಾಡಿಸುತ್ತೇವೆ. ಈಗ ಜಿಲ್ಲಾಧಿಕಾರಿಗಳು ಇನ್ನೊಂದು ವರದಿಯನ್ನು ಕೇಳಿದ್ದಾರೆ. ಯಾವ ಉದ್ದೇಶದಿಂದ ಕೇಳಿದ್ದಾರೆ ಎನ್ನುವ ಬಗ್ಗೆ ನಾವು conclusionಗೆ ಬರುವುದಕ್ಕೆ ಹೋಗ ುವುದಿಲ್ಲ. ಅದರಲ್ಲಿ ಸದುದ್ದೇಶವೂ ಇರಬಹುದು ಅಥವಾ ತಾವು ಹೇಳಿದ ರೀತಿ ಬೇರೆ ಉದ್ದೇಶವೂ ಇರಬಹುದು, ಅದು ನನಗೆ ಗೊತ್ತಿಲ್ಲ. ಆದರೆ ಪ್ರಕರಣ ಬಹಳ ಗಂಭೀರವಾಗಿದೆ. ನಾವು ಬರೀ ಜಿಲ್ಲಾಧಿಕಾರಿಗಳ ಹಂತದಲ್ಲಿ ಅಲ್ಲ, ಮೋಜಣಿ ಇಲಾಖೆಯ ಹಿರಿಯ ಅಧಿಕಾರಿಗಳಿಂದ, ಇಲ್ಲಿಂದ ತನಿಖೆ ಮಾಡಿಸುತ್ತೇವೆ. ಈಗಾಗಲೇ ತಪ್ಪಾಗಿದೆ ಎನ್ನುವುದು ನಮಗೆ ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಕರಣದ ಪರಿಣಾಮ ಬಹಳ ವ್ಯಾಪಕವಾಗಿರುವುದರಿಂದ ಇಲ್ಲಿಂದ ಹಿರಿಯ ಅಧಿಕಾರಿಯಿಂದ ತಕ್ಷಣ ತನಿಖೆ ಮಾಡಿಸಿ, ಅದರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ. ಈಗಾಗಲೇ ಮಂಜೂರಾತಿ ಮಾಡಿರುವುದನ್ನು ರದ್ದು ಮಾಡಬೇಕೆಂದು ತಾವು ಕೋರಿದ್ದೀರಿ. ತಾವು ಕೇಳುತ್ತಿರುವುದು ಸರಿ ಇದೆ. ಹತ್ತು ದಿನಗಳೊಳಗೆ ನಮ್ಮ ಕೇಂದ್ರ ಸ್ಥಾನದಿಂದ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ಅವರಿಂದ ವರದಿ ತೆಗೆದುಕೊಂಡು, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಮಂಜೂರಾತಿ ಮಾಡಿರುವುದನ್ನು ರದ್ದು ಮಾಡಬೇಕು ಎಂಬುದಾಗಿ ತಾವು ಇವೆರಡನ್ನೂ ಕೇಳಿದ್ದೀರಿ. ಈ ಎರಡರ ವಿಚಾರದಲ್ಲಿ ನಾವು ಇಲ್ಲಿಂದಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ನಿಯಮ 69ರ ಮೇರೆಗಿನ ವಿಷಯಗಳ ಚರ್ಚೆ ಮುಗಿಯಿತು. ಈಗ ಗಮನ ಸೆಳೆಯುವ ಸೂಚನೆಗಳು.

**ಗಮನ ಸೆಳೆಯುವ ಸೂಚನೆಗಳು**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಮೊದಲಿಗೆ ರೇವಣ್ಣನವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು: ಹೆಚ್.ಕೆ. ಕುಮಾರಸ್ವಾಮಿಯವರು.

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

(ಮುಂದುವರೆದಿದೆ)

25-11-2015 : 7-20 [46] kkd:hs

1

ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣ ಎಡದಂಡೆ ನಾಲೆಗೆ 14 ದಿನಗಳು ನೀರು ಹರಿಸಲು ಕ್ರಮ ಕೈಗೊಳ್ಳುವ ಕುರಿತು.

ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ): ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣ ಎಡದಂಡೆ ನಾಲೆಗೆ 14 ದಿನಗಳು ನೀರು ಹರಿಸಲು ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು) (ಜಲ ಸಂಪನ್ಮೂಲ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಗುರುಪಾಟೀಲ ಶಿರವಾಳ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಕೊಟ್ಟಿದ್ದಾರೆ. ಆದರೆ, ಅದು ಸಮರ್ಪಕವಾಗಿಲ್ಲ. ನಾರಾಯಣಪುರ ಎಡದಂಡೆ ಕಾಲುವೆಯಿಂದ JBC ಮತ್ತು ಬೇರೆ ಬೇರೆ ಕಾಲುವೆಗಳಿಗೆ ನೀರು ಹರಿಸುವುದನ್ನು ವಾರಾಬಂದಿಯಲ್ಲಿ ಬಿಡುತ್ತಾರೆ. SBC ಅಂದರೆ ಶಹಾಪೂರ ಶಾಖಾ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕಾಲುವೆ ಮತ್ತು ಮುಡುಬುಲ್ ಶಾಖಾ ಕಾಲುವೆಗೆ ಬಂದಾಗ ಅದು ಎರಡಕ್ಕೂ ಅರ್ಧರ್ಧ ಅವಧಿಗೆ ಮಾತ್ರ ಕೊಡುತ್ತಿದ್ದಾರೆ. ಸುಮಾರು 25-30 ವರ್ಷಗಳಿಂದ ನಮ್ಮ ರೈತರು ಶೋಷಣೆಯಲ್ಲಿದ್ದಾರೆ.

ಅಧ್ಯಕ್ಷರು: ನೀವು 14 ದಿನಗಳು ನೀರು ಹರಿಸಲು ಹೇಳಿದ್ದೀರಿ.

ಶ್ರೀ ಗುರುಪಾಟೀಲ ಶಿರವಾಳ: ಹೌದು ಸರ್, ಅದನ್ನೇ ಹೇಳುತ್ತಿದ್ದೇನೆ.

ಅಧ್ಯಕ್ಷರು: ಅದರ ಬಗ್ಗೆ ಏನು ಹೇಳಿದ್ದಾರೆ ಅಲ್ಲಿ?

ಶ್ರೀ ಗುರುಪಾಟೀಲ ಶಿರವಾಳ: ನಿಮ್ಮ ICC meeting ನಲ್ಲಿ ಏನಾಗಿದೆ ಅದರ ಪ್ರಕಾರ ನೀರು ಬಿಡುತ್ತಿದ್ದೇವೆಂದು ಹೇಳಿದ್ದಾರೆ.

ಅಧ್ಯಕ್ಷರು: ಅದನ್ನು ನೀವು ಹೇಳಿದ ಪ್ರಕಾರ ಮಾಡಿರಿ ಎಂದು ಹೇಳಿ.

ಶ್ರೀ ಗುರುಪಾಟೀಲ್ ಶಿರವಾಳ: ಎಲ್ಲಾ ಕಾಲುವೆಗೆ ಯಾವ ರೀತಿಯಾಗಿ ನೀರು ಹರಿಯುತ್ತದೆಯೋ ಅದೇ ರೀತಿ ಎಂಬಿಸಿ ಮತ್ತು ಎಸ್‌ಬಿಸಿ ಕಾಲುವೆಗಳಿಗೆ ನೀರು ಹರಿಯಬೇಕೆಂದು ನನ್ನ ವಾದ ಸರ್.

ಶ್ರೀ ಕೃಷ್ಣ ಬೈರೇಗೌಡ: ಮಾನ್ಯ ಅಧ್ಯಕ್ಷರೆ, ನನಗಿಂತ ಚೆನ್ನಾಗಿ ತಮಗೇ ಗೊತ್ತಿದೆ. ಆ ICC ಯಲ್ಲಿ ಏನು ತೀರ್ಮಾನವಾಗುತ್ತದೆ ಅದನ್ನಷ್ಟೇ ಸರ್ಕಾರ ಅನುಷ್ಠಾನ ಮಾಡಬೇಕು.

ಅಧ್ಯಕ್ಷರು: ಆದರೂ, ಇವರು ಹೇಳಿದ್ದನ್ನು ಗಮನಿಸಿ.

ಶ್ರೀ ಕೃಷ್ಣ ಬೈರೇಗೌಡ: ಅವರ ಮನವಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮತ್ತೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಮಾನ್ಯ ಸದಸ್ಯರ ಮನವಿಯನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾಟೀಲ ಶಿರವಾಳ: ಮಾನ್ಯ ಅಧ್ಯಕ್ಷರೆ, ಇದು ICC meeting ನಲ್ಲಿ ಆದಂಥದ್ದನ್ನೇ ನಾನು ಕೇಳುತ್ತಿದ್ದೇನೆ. ಅದನ್ನು ಬಿಟ್ಟು ನಾನು ಬೇರೆ ಕೇಳುತ್ತಿಲ್ಲ.

ಶ್ರೀ ಕೃಷ್ಣ ಬೈರೇಗೌಡ: ICC ತೀರ್ಮಾನದಂತೆ ಕ್ರಮವಹಿಸುವುದಕ್ಕೆ ಸೂಚನೆ ಕೊಡುತ್ತೇವೆ.

ಶ್ರೀ ಗುರುಪಾಟೀಲ ಶಿರವಾಳ: ಅದರ ಹಾಗೆ ಇದು ಆಗುತ್ತಿಲ್ಲ.

ಅಧ್ಯಕ್ಷರು: ಅವರು ಕೊಡುತ್ತಾರಲ್ಲ.

ಶ್ರೀ ಕೃಷ್ಣ ಬೈರೇಗೌಡ: ಈಗ ಕೊಡುತ್ತೇವೆ. ಈಗ ಸೂಚನೆ ಕೊಡುತ್ತೇವೆಂದು ಹೇಳುತ್ತಿದ್ದೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಆಯಿತು, very good.

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ತಲಾ 5.00 ಕೋಟಿ ರೂ.ಗಳ
ಅನುದಾನ ಮಂಜೂರಾಗಿದ್ದು ಹಣ ಬಿಡುಗಡೆಯಾಗದೆ ಕಾಮಗಾರಿಗಳು
ಪ್ರಾರಂಭವಾಗದಿರುವ ಬಗ್ಗೆ.

ಶ್ರೀ ಎಂ. ರಾಜಣ್ಣ (ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ತಲಾ 5.00 ಕೋಟಿಗಳ ರೂ. ಅನುದಾನ ಮಂಜೂರಾಗಿದ್ದು ಹಣ ಬಿಡುಗಡೆಯಾಗದೆ ಕಾಮಗಾರಿಗಳು ಪ್ರಾರಂಭವಾಗದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು)(ಯೋಜನೆ, ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ಕೊಟ್ಟಾಗ ವಿಶೇಷ ಅನುದಾನದಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಐದೈದು ಕೋಟಿ ರೂಪಾಯಿಗಳ ವಿಶೇಷ package ಅನ್ನು ಘೋಷಿಸಿದ್ದರು. ನಾವೆಲ್ಲ ನಮ್ಮ ಜಿಲ್ಲಾಧಿಕಾರಿಗಳಿಗೆ ಕ್ರಿಯಾಯೋಜನೆ ಪ್ರತಿಯೊಂದನ್ನೂ ಕೊಟ್ಟೂ ಸಹ ನನ್ನ ವಿಧಾನಸಭಾ ಕ್ಷೇತ್ರಕ್ಕೆ ಕೇವಲ 25 ಲಕ್ಷ ರೂಪಾಯಿಗಳಿಗೆ ಮಾತ್ರ ಅನುಮೋದನೆ ಕೊಟ್ಟಿದ್ದಾರೆ. ನಾನು ಜಿಲ್ಲಾಧಿಕಾರಿಯವರನ್ನು ಕೇಳಿದರೆ, ತಾವು ಇದನ್ನು ಸರ್ಕಾರದ ಮಟ್ಟದಲ್ಲಿಯೇ ಚರ್ಚೆ ಮಾಡಬೇಕು. ಕ್ರಿಯಾ ಯೋಜನೆ ಕಳುಹಿಸಿರುವುದಕ್ಕೆ ಇನ್ನೂ ಅನುಮೋದನೆ ಬಂದಿಲ್ಲ ಎಂದು ಹೇಳುತ್ತಾರೆ. ದಯವಿಟ್ಟು ನಮ್ಮ ಕ್ಷೇತ್ರ ಬಹಳಷ್ಟು ಹಿಂದುಳಿದ ಪ್ರದೇಶವಾದ್ದರಿಂದ ನಮಗೆ ಆ ಒಂದು ಅನುಮೋದನೆ ಕೊಡಿಸಿ ಅಭಿವೃದ್ಧಿಗೆ ಸಹಕಾರ ಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಈಗಾಗಲೆ ಅವರಿಗೆ ಉತ್ತರದ ಕಾಪಿಯನ್ನು ಕಳುಹಿಸಿಕೊಟ್ಟಿದ್ದೇವೆ. ಇದು ದಿನಾಂಕ: 8-03-2012ರಲ್ಲಿ ನಡೆದಂಥ ಸಂಪುಟ ಸಭೆಯಲ್ಲಿ ಹೊಸದಾಗಿ ರಚನೆಯಾಗಿರುವಂಥ ಚಿಕ್ಕಬಳ್ಳಾಪುರ ಜಿಲ್ಲೆಗೆ 50 ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಡಬೇಕೆಂದು ತೀರ್ಮಾನ ಕೈಗೊಂಡಿದ್ದಾರೆ. ಅದರಂತೆ ಈಗ 24 ಕೋಟಿ 34 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಅದರಲ್ಲಿ ಈಗಾಗಲೇ ವಿವಿಧ ಹಂತಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಈ 2015-16ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ 18 ಕೋಟಿ 65 ಲಕ್ಷ ರೂಪಾಯಿಗಳ ವಿವಿಧ ಕಾಮಗಾರಿಗಳಿಗೆ ಒಂದು ಪ್ರಸ್ತಾವನೆ ಬಂದಿದೆ. ಅದನ್ನು ದಿನಾಂಕ: 5.11.2015ರಲ್ಲಿ ಒಂದು ಸಭೆ ನಡೆಸಿ ಸದರಿ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ಪರಾಮರ್ಶಿಸಿ, ಕೆಲವೊಂದು ಪೂರಕ ಮಾಹಿತಿಯೊಂದಿಗೆ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಸಲ್ಲಿಸುವಂತೆ ಮತ್ತೆ ವಾಪಸ್ಸು ಕಳುಹಿಸಿದ್ದೇವೆ. ಜಿಲ್ಲಾಧಿಕಾರಿಗಳಿಂದ ಕ್ರಿಯಾಯೋಜನೆ ಪಡೆದುಕೊಂಡು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅದನ್ನು ಅನುಮೋದನೆ ಮಾಡಲು ಕ್ರಮ ಕೈಗೊಳ್ಳಲಾಗ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ುತ್ತದೆ. ಆದರೆ, ಅವರು ಹೇಳುವ ಹಾಗೆ ಆ ಶಾಸಕರಿಗೆ ಐದ್ಯೆದು ಕೋಟಿ ರೂ.ಎಂದು ಹೇಳಿರುವ ವಿಚಾರ ಯಾವುದು ಎನ್ನುವುದರ ಬಗ್ಗೆ ಯಾವುದೇ ರೀತಿಯ ಆದೇಶವಾಗಿಲ್ಲ.

ಅಧ್ಯಕ್ಷರು: ನೋಡಿ, ಇದರಲ್ಲಿ ಮಂಜೂರಾಗಿದ್ದು ಎಂದು ಹೇಳುತ್ತಾರೆ. ಹಣ ಬಿಡುಗಡೆ ಆಗಿದೆಯೋ ಅಥವಾ ಇಲ್ಲವೋ? 5 ಕೋಟಿ ರೂಪಾಯಿ ಮಂಜೂರಾಗಿದೆ ಎಂದು ಹೇಳುತ್ತಾರೆ. ಅದು ಹೌದೇ ಅಥವಾ ಇಲ್ಲವೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಪ್ರತ್ಯೇಕವಾಗಿ ಶಾಸಕರುಗಳಿಗೆ ಐದ್ಯೆದು ಕೋಟಿ ರೂಪಾಯಿಗಳ ಕಾಮಗಾರಿಯನ್ನು ಸೂಚಿಸುವಂಥ ಯಾವುದೇ ಆದೇಶ ಮಾಡಿಲ್ಲ.

ಅಧ್ಯಕ್ಷರು: ಮಂಜೂರಾಗಿಲ್ಲ. O.k.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಸದಸ್ಯರು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಬಳ್ಳಾಪುರಕ್ಕೆ ಬಂದು ಸಭೆಯಲ್ಲಿ ಹೇಳಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ರಾಜಣ್ಣ: ಹೌದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಆದರೆ, ಅದಕ್ಕೆ ಯಾವುದೇ ಆದೇಶ ಆಗಿಲ್ಲ.

ಶ್ರೀ ಜೆ.ಕೆ. ಕೃಷ್ಣಾರೆಡ್ಡಿ: ಆ 24 ಕೋಟಿ ರೂಪಾಯಿಗಳಲ್ಲಿ ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಕೊಟ್ಟಿದೆ ಎಂದು ದಯಮಾಡಿ ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಅದು ಬೇಕಾದರೆ ತರಿಸಿ ಕಳುಹಿಸಿಕೊಡುತ್ತೇವೆ.

ಶ್ರೀ ಎಂ. ರಾಜಣ್ಣ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾಧಿಕಾರಿಯವರು ನಮ್ಮನ್ನೆಲ್ಲ ಕರೆಸಿ ...

ಅಧ್ಯಕ್ಷರು: ರಾಜಣ್ಣನವರೆ, ಮಂಜೂರಾಗಿದ್ದು ಎಂದು ಹೇಳುತ್ತೀರಿ.

ಶ್ರೀ ಎಂ. ರಾಜಣ್ಣ: ಹೌದು ಸರ್.

ಅಧ್ಯಕ್ಷರು: ಮಂಜೂರಾಗಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ.

ಶ್ರೀ ಎಂ. ರಾಜಣ್ಣ: ಮಂಜೂರಾಗಿದೆ ಸರ್.

ಅಧ್ಯಕ್ಷರು: ಆಗಿದ್ದರೆ ತೋರಿಸಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ. ರಾಜಣ್ಣ: ಮಾನ್ಯ ಅಧ್ಯಕ್ಷರೆ, ಈಗ ಕಳುಹಿಸಿರುವ ಪ್ರಸ್ತಾವನೆಗೆ ಸರ್ಕಾರದಿಂದ ಮಂಜೂರು ಕೊಟ್ಟರೆ ಸಾಕು.

ಅಧ್ಯಕ್ಷರು: ನಿಮಗೆ ಮಂಜೂರಾಗಿದ್ದರೆ ಅದರ order ತೋರಿಸಿರಿ. ತೋರಿಸಿದರೆ ಅದರಂತೆ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಅವರು ಒಂದು ಭಾಷಣದಲ್ಲಿ ಹೇಳಿದರು ಎನ್ನುವ ಕಾರಣಕ್ಕೆ ಕ್ರಮ ತೆಗೆದುಕೊಂಡಿದ್ದಾರೆಂದು ಇವರು ಹೇಳುತ್ತಿದ್ದಾರಷ್ಟೆ.

ಅಧ್ಯಕ್ಷರು: ಹೇಳಿದ್ದಾರೆಂದರೆ ಅದು ಮಂಜೂರು ಅಲ್ಲ, ಬಿಡಿ.

ಶ್ರೀ ಜೆ.ಕೆ. ಕೃಷ್ಣಾರೆಡ್ಡಿ: ಮಾನ್ಯ ಮಂತ್ರಿಯವರೆ, ಆ 24 ಕೋಟಿ ರೂಪಾಯಿಗಳು ಯಾವ್ಯಾವ ತಾಲ್ಲೂಕಿಗೆ ಎಂದು ದಯಮಾಡಿ ಕಳುಹಿಸಿಕೊಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಆಯಿತು, ಇಲ್ಲಿ ಪಟ್ಟಿ ಇದೆ. ನಿಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, 24 ಕೋಟಿ ರೂಪಾಯಿಗಳ ಕಾಮಗಾರಿ ಪಟ್ಟಿಯನ್ನು ಆ ಜಿಲ್ಲೆಯ ಎಲ್ಲಾ ಶಾಸಕರಿಗೂ ಬೆಳಗ್ಗೆ ಒಂದೊಂದು ಕಾಪಿಯನ್ನು ಕಳುಹಿಸಿಕೊಡುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಷಯ: ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಚೀಣ್ಯ ಹೋಬಳಿಯ ಸೋಮನಹಳ್ಳಿಯಲ್ಲಿ
ಮೊರಾರ್ಜಿ ವಸತಿ ಶಾಲೆಯ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು
ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಚೀಣ್ಯ ಹೋಬಳಿಯ ಸೋಮನಹಳ್ಳಿಯಲ್ಲಿ ಮೊರಾರ್ಜಿ ವಸತಿ ಶಾಲೆಯ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಿದೆ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರ ಬಂದಿದೆ. ಬಹಳ simple ಆಗಿ ಹೇಳುವುದಾದರೆ, 3 ಬಾರಿ tender ಆಗಿದೆ. ಸೋಮನಹಳ್ಳಿ ಹಿಂದುಳಿದ ವರ್ಗದ ಒಂದು ಶಾಲಾ ಕಟ್ಟಡಕ್ಕೆ ಮೊದಲನೇ ಬಾರಿ 3 ಕೋಟಿ ರೂಪಾಯಿಗಳು, ಎರಡನೇ ಬಾರಿ 4 ಕೋಟಿ ರೂಪಾಯಿಗಳು, ಮೂರನೇ ಬಾರಿ 6 ಕೋಟಿ ರೂಪಾಯಿಗಳ tender ಆಗಿದೆ.

ಅಧ್ಯಕ್ಷರು: ಈಗ ಏನು ಮಾಡಬೇಕೆಂದು ನೇರವಾಗಿ ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ: 6 ಕೋಟಿ ರೂಪಾಯಿಗಳ tender accept ಆಗಿ ಕೆಲಸ ಪ್ರಾರಂಭವಾಗಿ 90% ಆಗಿದೆ. ಒಂದು ರೂಪಾಯಿ ಸಹ payment ಆಗಿಲ್ಲ. ಜೇಷ್ಠತೆ ಆಧಾರದ ಮೇಲೆ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ಒಂದು ರೂಪಾಯಿ ಸಹ ಅವರ ಇಲಾಖೆಯಲ್ಲಿ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಇಲ್ಲವೆಂದು ಹೇಳುತ್ತಾರೆ. Finance Departmentನಲ್ಲಿ reject ಆಗಿದೆ ಎಂದು ಉತ್ತರ ಕೊಡುತ್ತಾರೆ. ಇದು ಇಲಾಖೆಯಿಂದ ಬಹಳ ಅಸಮಾಧಾನವಾದ ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ಮಂತ್ರಿಯವರು Finance Department ನಿಂದ approval ತೆಗೆದುಕೊಂಡು ಹಣ ಬಿಡುಗಡೆ ಮಾಡಬೇಕು. ಮಕ್ಕಳು ಸಣ್ಣಪುಟ್ಟ ಬೇರೆ ಮನೆಯಲ್ಲಿ ಕಳೆದ 5 ವರ್ಷಗಳಿಂದ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದಯಮಾಡಿ payment ಅಗಬೇಕು.

ಅಧ್ಯಕ್ಷರು: ಸರ್ಕಾರದಿಂದ ಯಾರು ಉತ್ತರ ಕೊಡುತ್ತೀರಿ, ಕೊಡಿ. ಯಾರೂ ಇಲ್ಲ. ನಾಳೆ ಉತ್ತರ ಕೊಡಿಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ: ನಾಳೆ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇವೆ.

ಅಧ್ಯಕ್ಷರು: ಆಯಿತು.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಷಯ: ರಾಜ್ಯದಲ್ಲಿ ನಿಗದಿತ ಮದ್ಯ ಮಾರಾಟದ ಗುರಿ ತಲುಪದ ಮದ್ಯದಂಗಡಿ ಮಾಲೀಕರಿಗೆ
ದಂಡ ವಿಧಿಸಿ ಕಿರುಕುಳ ನೀಡುತ್ತಿರುವ ಬಗ್ಗೆ.

ಶ್ರೀ ವಿ. ಸುನಿಲ್ ಕುಮಾರ್ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಿಗದಿತ ಮದ್ಯ ಮಾರಾಟದ ಗುರಿ ತಲುಪದ ಮದ್ಯದಂಗಡಿ ಮಾಲೀಕರಿಗೆ ದಂಡ ವಿಧಿಸಿ ಕಿರುಕುಳ ನೀಡುತ್ತಿರುವ ಬಗ್ಗೆ ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್ (ಅಬಕಾರಿ ಮತ್ತು ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ,

(ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ವಿ. ಸುನಿಲ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಎಲ್ಲಾ wine shop ಗಳಿಗೆ target reach ಆಗಬೇಕೆಂದು dump ಮಾಡುತ್ತಿದ್ದಾರೆ. ದಯಮಾಡಿ ಅದನ್ನು ಮಾಡಬೇಡಿ. ಒಂದು ಕಡೆ ಮದ್ಯ ಮಾರಾಟ ನಿಷೇಧ ಎಂದು ಹೇಳುತ್ತೀರಿ. ಇನ್ನೊಂದು ಕಡೆ target reach ಆಗಬೇಕೆಂದು ದೊಡ್ಡ ಪ್ರಮಾಣದಲ್ಲಿ load ಮಾಡುತ್ತಿದ್ದೀರಿ. ಅದನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ನೀವು ಬೇರೆ ಬೇರೆ ರೀತಿಯಾದ case ಗಳನ್ನು ಎಲ್ಲಾ ಮದ್ಯದ ಅಂಗಡಿಗಳಿಗೆ ಹಾಕುತ್ತಿದ್ದೀರಿ. ಅದನ್ನು ಕೈಬಿಡಬೇಕೆಂದು ನಮ್ಮ ಆಗ್ರಹ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್: ಹಾಗೇನಿಲ್ಲ. ಯಾವ ಮದ್ಯದ ಅಂಗಡಿಗಳಿಗೂ ಇಷ್ಟೇ ಮಾಡಬೇಕೆಂದು ಯಾವುದೇ ನಿಗದಿ ಅಂತೂ ಮಾಡಿಲ್ಲ.

ಅಧ್ಯಕ್ಷರು: ಸರಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ವಿ. ಸುನಿಲ್ ಕುಮಾರ್: ಎಲ್ಲಾ ಅಂಗಡಿಗಳಿಗೂ ಇಷ್ಟೇ ಪ್ರಮಾಣದಲ್ಲಿ ಮಾರಾಟ ಮಾಡಬೇಕೆಂದು ನಿಗದಿ ಮಾಡಿದ್ದಾರೆ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ: ಅಂಗಡಿಗಳಲ್ಲೆಲ್ಲ ಮಾರುತ್ತಾರೆ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್: ದಿನಾಂಕ: 1.4.2003ರಿಂದ ದಿನಾಂಕ: 1-8-2014ರ ವರೆಗೆ ಈ ತರಹ ನಿಗದಿ ಮಾಡಿದ್ದುಂಟು. ಆ ಕಾನೂನನ್ನು ರದ್ದು ಮಾಡಿ ದಿನಾಂಕ: 1.8.2014ರಿಂದ ಈ ನಿಗದಿ ಮಾಡುವುದನ್ನು ರದ್ದುಮಾಡಲಾಗಿದೆ. ಏಕೆಂದರೆ, ಸರಾಯಿ ಮಾರಾಟ ನಿಷೇಧ ಇರುವುದರಿಂದ ಮತ್ತು KSBCL ಘಟಕದಿಂದಲೇ ಈ ಮದ್ಯ ಸರಬರಾಜು ಆಗುತ್ತಿರುವುದರಿಂದ ಇದು ಅನಾವಶ್ಯಕ ಎನ್ನುವ ದೃಷ್ಟಿಯಿಂದ ತೆಗೆದಿದೆ.

ಶ್ರೀ ವಿ. ಸುನಿಲ್ ಕುಮಾರ್: ಆಗಸ್ಟ್‌ನಲ್ಲಿ ರದ್ದು ಮಾಡಿದ್ದೀರಿ ಎಂದು ಹೇಳುತ್ತಿದ್ದೀರಿ. ಬೇರೆ ಕಡೆ ನನಗೆ ಗೊತ್ತಿಲ್ಲ, ನನ್ನ ತಾಲ್ಲೂಕಿನಲ್ಲಿ ಕಳೆದ ತಿಂಗಳು ಕೂಡ target reach ಆಗಬೇಕೆಂದು ನಿಮ್ಮ Inspector ಗಳು ಕೂಡ ಅಲ್ಲಿಗೆ ಬರುತ್ತಿದ್ದಾರೆ.

ಅಧ್ಯಕ್ಷರು: ಈಗ Government level ನಲ್ಲಿ ತೀರ್ಮಾನವಾಗಿದೆ. ಅದರ ವಿರುದ್ಧವಾಗಿ ಯಾರಾದರೂ ನಡೆದುಕೊಂಡಿದ್ದರೆ ಅದನ್ನು ಮಂತ್ರಿಯವರ ಗಮನಕ್ಕೆ ತನ್ನಿ, ಅವರು ಕ್ರಮ ತೆಗ ಿದುಕೊಳ್ಳುತ್ತಾರೆ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್: ಆದ್ದರಿಂದ, ಕೆಲವು ಏನಾಗಿದೆ ಎಂದರೆ, ಸಾರ್ವಜನಿಕರಿಗೆ ಗುಣಮಟ್ಟದ ಮದ್ಯವನ್ನು ಒದಗಿಸಬೇಕು ಹಾಗೂ ರಾಜಸ್ವ ಕ್ರೋಢೀಕರಣದ ಜವಾಬ್ದಾರಿಯೂ ಕೂಡ ನಮ್ಮ ಇಲಾಖೆಯ ಮೇಲಿದೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಅಧ್ಯಕ್ಷರು: ಅದನ್ನೆಲ್ಲ ಕೇಳಿಲ್ಲ, ಬಿಡಿರಿ. ಸಾಕು, ಸುಮ್ಮನಿರಿ. ಸುನಿಲ್ ಕುಮಾರ್‌ರವರೆ, ನೀವು ಹೇಳಿದ ರೀತಿಯಲ್ಲಿ ಏನಾದರೂ ಇದ್ದರೆ ಮಂತ್ರಿಯವರ ಗಮನಕ್ಕೆ ತನ್ನಿ.

ಶ್ರೀ ವಿ. ಸುನಿಲ್ ಕುಮಾರ್: Target fix ಮಾಡಬೇಡಿ ಅಷ್ಟೆ.

ಅಧ್ಯಕ್ಷರು: ಇಲ್ಲ ಎಂದು ಆಗಲೇ ಹೇಳಿದ್ದಾರಲ್ಲ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್: ಬೇರೆ ಬೇರೆ ಕಾರಣಗಳಿಂದ caseಗಳನ್ನು ಹಾಕಿದ್ದಾರೆ. ಉದಾಹರಣೆಗೆ...

ಅಧ್ಯಕ್ಷರು: ಅದು ಬೇಡ ರೀ.

ಶ್ರೀ ವಿ. ಸುನಿಲ್ ಕುಮಾರ್: ನಾನು Case ಕೇಳಲಿಲ್ಲ ಸರ್. Target fix ಮಾಡಬೇಡಿ ಅಷ್ಟೆ.

ಶ್ರೀ ಮನೋಹರ ಹೆಚ್. ತಹಶೀಲ್ದಾರ್: Target ಎಂದೂ ಇಲ್ಲ.

ಅಧ್ಯಕ್ಷರು: Next ಬಿ.ಬಿ. ನಿಂಗಯ್ಯನವರು ಇಲ್ಲ. ಶ್ರೀ ಜಿ.ಎಚ್. ಶ್ರೀನಿವಾಸ್‌ರವರು ಇಲ್ಲ. ಇನ್ನು ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಕೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ(ಮೇಲುಕೋಟೆ): ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿಲ್ಲ. ಏನೂ ಇಲ್ಲ.

ಅಧ್ಯಕ್ಷರು: ನಾನು ಕೊಡಿಸುತ್ತೇನೆ. ಉತ್ತರ ತರಿಸಿ ನಾಳೆ ಕೊಡಿಸುತ್ತೇನೆ. ಇನ್ನು ಶ್ರೀಮತಿ ಶಾರದಾ ಪೂರ್ಯ ನಾಯ್ಕ ಇಲ್ಲ. ಶ್ರೀ ಹೆಚ್.ಸಿ. ಬಾಲಕೃಷ್ಣ ಇಲ್ಲ. ಡಾ: ಎ.ಬಿ. ಮಾಲಕ ರೆಡ್ಡಿಯವರು ಇಲ್ಲ. ಶ್ರೀ ಕೆ.ಎನ್. ಮಂಜುನಾಥಗೌಡ ಮಾತನಾಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಷಯ: ಮಾಲೂರು ತಾಲ್ಲೂಕಿನ ದಿನ್ನಹಳ್ಳಿ, ಅರಮಾಕನಹಳ್ಳಿ, ತಾಳಕುಂಟೆ ಹಾಗೂ ರಾಂಪುರ ಗ್ರಾಮಗಳಲ್ಲಿನ ರೈತರ ಜಮೀನುಗಳಿಗೆ ಎಲ್ಲಾ ರೀತಿಯ ಸರ್ಕಾರಿ ದಾಖಲೆಗಳಿದ್ದರೂ ಸಹ, ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಕೆ.ಎಸ್.ಮಂಜುನಾಥಗೌಡ( ಮಾಲೂರು): ಮಾನ್ಯ ಅಧ್ಯಕ್ಷರೆ, ಮಾಲೂರು ತಾಲ್ಲೂಕಿನ ದಿನ್ನಹಳ್ಳಿ, ಅರಮಾಕನಹಳ್ಳಿ, ತಾಳಕುಂಟೆ ಹಾಗೂ ರಾಂಪುರ ಗ್ರಾಮಗಳಲ್ಲಿನ ರೈತರ ಜಮೀನುಗಳಿಗೆ ಎಲ್ಲಾ ರೀತಿಯ ಸರ್ಕಾರಿ ದಾಖಲೆಗಳಿದ್ದರೂ ಸಹ, ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ,

(ಮಾನ್ಯ ಸಚಿವರ ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಮಾಲೂರು ತಾಲ್ಲೂಕು ದಿನ್ನಹಳ್ಳಿ, ಅರಮಾಕನಹಳ್ಳಿ, ತಾಳಕುಂಟೆ ಈ ಪ್ರದೇಶದಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಸ್ಥಳಗಳಲ್ಲಿ ರೈತರು ವಾಸವಾಗಿ ಇದ್ದಾರೆಂದು ಹೇಳಿ, ಇಲ್ಲಿಯವರೆಗೆ ಯಾರ ಮೇಲೆಯೂ ಕ್ರಮ ಕೈಗೊಂಡಿಲ್ಲ. ತೆರವು ಮಾಡತಕ್ಕಂಥ ಪ್ರಕ್ರಿಯೆ ಕೂಡ ಮಾಡಿಲ್ಲ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015/7-30/47/SMK-SSD

ಶ್ರೀ ಬಿ.ರಮಾನಾಥ ರೈ.ಬಿ. (ಅರಣ್ಯ ಸಚಿವರು) (ಮುಂದು. . .)

ತೆರವು ಮಾಡತಕ್ಕಂಥ ಪ್ರಕ್ರಿಯೆಯನ್ನು ಕೂಡ ಮಾಡಿಲ್ಲ. ಕಂದಾಯ ಇಲಾಖೆಯ ವ್ಯಾಪ್ತಿಗೆ ಸೇರಿರತಕ್ಕಂಥ ಜಾಗ ಎಂದು ಮೌಖಿಕವಾಗಿ ಹೇಳಿದ ಮೇಲೆ ಅವರನ್ನು ಒಕ್ಕಲೆಬ್ಬಿಸಲು ಯಾರೂ ಪ್ರಯತ್ನ ಮಾಡಿಲ್ಲ. ನಾವು ಕಂದಾಯ ಇಲಾಖೆಯ ಜೊತೆ ಸೇರಿ ಕಾನೂನು ಪ್ರಕಾರ ಏನು ಮಾಡಬೇಕಾಗಿದೆ ಅದನ್ನು ಮಾಡುತ್ತೇವೆ. ಅರಣ್ಯ ಇಲಾಖೆಯಿಂದ ಈಗ ಒಕ್ಕಲೆಬ್ಬಿಸುವ ಯಾವುದೇ ಕ್ರಮಕೈಗೊಂಡಿಲ್ಲ. ಸದ್ಯಕ್ಕೆ ಅದನ್ನು ಮಾಡುವುದಿಲ್ಲ.

ಶ್ರೀ ಕೆ.ಎಸ್.ಮಂಜುನಾಥಗೌಡ : ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ನೂರು ವರ್ಷಗಳಿಂದ ಇವರು ಬಂದಿಲ್ಲ, ಆದರೆ ಈಗ 1914ರ ಒಂದು notification ಅನ್ನು ಇಟ್ಟುಕೊಂಡು ಬಂದು ಸರ್ವೆ ಮಾಡುತ್ತೇವೆ...

ಅಧ್ಯಕ್ಷರು: ನೋಡಿ, ಸ್ವಲ್ಪ ತಿಳಿದುಕೊಳ್ಳಿ. Forest Act ಪ್ರಕಾರ 1914ರಲ್ಲಿ ನೋಟಿಫಿಕೇಷನ್ ಆಗಿದ್ದರೆ, ಅವೂ ಸಹ ಅರಣ್ಯ ಎಂದು ಇದೆ. ಅದಕ್ಕೇ ಹೀಗೆ ಮಾಡುತ್ತಾರೆ. ಅದಕ್ಕೇ ನೀವು. . .

ಶ್ರೀ ಕೆ.ಎಸ್.ಮಂಜುನಾಥಗೌಡ : ಇವರು ಬ್ರಿಟೀಷ್ ಕಾಲದ ದಬ್ಬಾಳಿಕೆಯ ನೋಟಿಫಿಕೇಷನ್ ಇಟ್ಟುಕೊಂಡು ..

ಅಧ್ಯಕ್ಷರು: ಸುಮ್ಮನೆ ಕೆಲಸಕ್ಕೆ ಬಾರದ್ದನ್ನು ಮಾತನಾಡಬೇಡಿ.

ಶ್ರೀ ಕೆ.ಎಸ್.ಮಂಜುನಾಥಗೌಡ : ನಮ್ಮ ಸರ್ಕಾರ ನಿರ್ಧಾರ ಮಾಡಿರುವುದನ್ನು ನಾವು ಒಪ್ಪಬೇಕು.

ಅಧ್ಯಕ್ಷರು: ರೀ ಸ್ವಾಮಿ, ಸ್ವಲ್ಪ ಹೇಳುವುದನ್ನು ಕೇಳಿ, ತಿಳಿದುಕೊಳ್ಳಿ. ನಮ್ಮ ಕಾನೂನು ಬಂದಿದ್ದೇ 1964ರಲ್ಲಿ. ನಮ್ಮ ಕಾಲದಲ್ಲಿಯೇ ಹೇಳಿಕೊಂಡು ಬಿಟ್ಟಿದ್ದೇವೆ. ಅದಕ್ಕೇ ಈ ರೀತಿ deemed forest

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮತ್ತು ಇವನ್ನೆಲ್ಲ ಮಾಡುತ್ತಿದ್ದಾರೆ. ನೀವು ಸಧ್ಯಕ್ಕೆ ಏನು ಮಾಡಬೇಕೆಂದರೆ, ಆ ಪಾರಂಪರಿಕ ಅರಣ್ಯ ಕಾನೂನು ಇದೆಯಲ್ಲ, ಆ ಕಾನೂನಿನ ಪ್ರಕಾರ ಎಲ್ಲರೂ ಒಂದು ಅರ್ಜಿ ಕೊಟ್ಟು endorsement ಇಟ್ಟುಕೊಂಡುಬಿಡಿ.

ಶ್ರೀ ಕೆ.ಎಸ್.ಮಂಜುನಾಥಗೌಡ :ಅದನ್ನು ಈಗಾಗಲೇ ಮಾಡುವಂತೆ ಹೇಳಿದ್ದೇನೆ.

ಅಧ್ಯಕ್ಷರು: ಯಾರು ಅರ್ಜಿ ಕೊಟ್ಟು endorsement ಇಟ್ಟುಕೊಳ್ಳುತ್ತಾರೆ ಅವರನ್ನು evict ಮಾಡುವುದಕ್ಕೆ ಬರುವುದಿಲ್ಲ. ಅಂತಿಮ ತೀರ್ಮಾನವಾಗುವವರೆಗೆ ಯಾರಾದರೂ ನಿಮ್ಮನ್ನು evict ಮಾಡುವುದಕ್ಕೆ ಬಂದರೆ ಪೊಲೀಸ್‌ಗೆ ಕಂಪ್ಲೇಂಟ್ ಕೊಡಿ. ಅವರ ಮೇಲೆ ಪೊಲೀಸರು ಕ್ರಮ ತೆಗ ಿದುಕೊಳ್ಳುತ್ತಾರೆ.

ಶ್ರೀ ಕೆ.ಎಸ್.ಮಂಜುನಾಥಗೌಡ : ಮಾನ್ಯ ಅಧ್ಯಕ್ಷರೆ, ಅವರು ಈಗಾಗಲೇ ಸರ್ವೆ ಮಾಡುವುದಕ್ಕೆ ಬಂದಿದ್ದರು. ಅದಕ್ಕೇ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: Very good. ಆಯಿತು.

ಶ್ರೀ ಬಿ.ರಮಾನಾಥ ರೈ.ಬಿ. (ಅರಣ್ಯ ಸಚಿವರು) : ಕಂದಾಯ ಇಲಾಖೆಯ ಮಂಜೂರಾತಿಯಾಗಿದೆ ಎಂದು ಮೌಖಿಕವಾಗಿ ಹೇಳಿದನ್ನು ಕೇಳಿ ತಿಳಿದುಕೊಂಡ ಮೇಲೆ ಯಾರೂ ಯಾವುದೇ ಕ್ರಮವನ್ನು ಮಾಡಿಲ್ಲ. ಅರಣ್ಯ ಇಲಾಖೆಯಿಂದ ಯಾವುದೇ case ಸಹ ಹಾಕಿಲ್ಲ.

ಶ್ರೀ ಕೆ.ಎಸ್.ಮಂಜುನಾಥಗೌಡ :ಧನ್ಯವಾದಗಳು.

ಅಧ್ಯಕ್ಷರು: ಶ್ರೀ ಸಾ.ರಾ.ಮಹೇಶ್ ನೀವು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

| | |
|---|---|
| ವಿಷಯ : | ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ. --- |

ಶ್ರೀ ಸಾ.ರಾ.ಮಹೇಶ್ (ಕೆ.ಆರ್.ನಗರ) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಅವಧಿಯಲ್ಲಿಯೇ ನಾನು ನಾಲ್ಕನೇ ಬಾರಿ ಅವರಿಗೆ ಮನವಿ ಮಾಡಿದ್ದೇನೆ. ಆದರೆ ಇನ್ನೂ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿಲ್ಲ. ನಮ್ಮಲ್ಲಿ 13 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು: ಈಗ ಏನು ಆಗಬೇಕೆಂದು ಹೇಳಿ.

ಶ್ರೀ ಸಾ.ರಾ.ಮಹೇಶ್ : ದಯಮಾಡಿ ಈ ಸಕ್ಕರೆ ಕಾರ್ಖಾನೆಯನ್ನು ಬೇಗ ಪ್ರಾರಂಭ ಮಾಡಿಸಿಕೊಡಬೇಕು. ಅಲ್ಲಿಯವರೆಗೂ ನಮ್ಮ ರೈತರು ಏನು ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಹೊಡೆಯುತ್ತಿದ್ದಾರೆ ಅದರ transportation chargeಅನ್ನು ಸರ್ಕಾರ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ನಾಲ್ಕು ಬಾರಿ ಮತ್ತು ಶಾಸಕರ ಕೋರಿಕೆಯ ಮೇರೆಗೆ ಮತ್ತೊಂದು ಬಾರಿ ಎಂದರೆ ಐದನೆಯ ಬಾರಿ ಲೀಸ್ ಕೊಡುವುದಕ್ಕೆ ಟೆಂಡರ್ ಕರೆದಿದ್ದೆವು. ಆದರೆ ಐದು ಬಾರಿಯೂ ಯಾರೂ tenderನಲ್ಲಿ participate ಮಾಡದೇ ಇದ್ದಿದ್ದರಿಂದ ಲೀಸ್ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದು ನಾಲ್ಕು ತಾಲ್ಲೂಕು ವ್ಯಾಪ್ತಿಗೆ ಬರುತ್ತದೆ. ಸಹಕಾರಿ ಇಲಾಖೆಯಿಂದ ಅದನ್ನು ಪುನ: ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಆ ಭಾಗದ ಎಲ್ಲಾ ಶಾಸಕರನ್ನು ಒಳಗೊಂಡಂತೆ, ರೈತ ಪ್ರತಿನಿಧಿಗಳೂ ಸೇರಿದಂತೆ ಸಭೆ ನಡೆಸಿ ಮನವರಿಕೆ ಮಾಡಿಕೊಟ್ಟಿದ್ದೇವೆ. ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ಹೋಗಿ ಅಲ್ಲಿ ಒತ್ತಾಯ ಮಾಡಬೇಕೆಂದು ತೀರ್ಮಾನವಾಯಿತು. ಅಲ್ಲಿಯೂ ಕೂಡ ಒಂದು ಪ್ರಯತ್ನ ನಡೆದಿದೆ. ಆದರೆ ಸಹಕಾರ ಇಲಾಖೆಯಿಂದ ಅದನ್ನು ಮುಂದುವರೆಸುವ ಪರಿಸ್ಥಿತಿಯಲ್ಲಿ ಆ ಕಾರ್ಖಾನೆ ಇಲ್ಲದೇ ಇರುವುದರಿಂದ ನಾವು ಅದನ್ನು ಲೀಸ್‌ನಲ್ಲಿ ನಡೆಸಬೇಕೆಂದಿದ್ದೆವು. ಹಿಂದೆ 30 ವರ್ಷಕ್ಕೆ ಲೀಸ್‌ಗೆ ಬೇರೆ ಫ್ಯಾಕ್ಟರಿಗಳನ್ನೆಲ್ಲ ಕೊಡುತ್ತಿದ್ದೆವು. ಇದನ್ನು ಅವರ ಕೋರಿಕೆಯ ಮೇರೆಗೆ 35 ವರ್ಷಕ್ಕೆ extend ಮಾಡಿ, ಅವರು ಕೇಳುವಂತಹ ಎಲ್ಲಾ tender conditionsಗೆ ರಿಯಾಯಿತಿ ಕೊಟ್ಟು ಕರೆದಾಗ ಸಹ ಯಾರೂ ಬಂದಿಲ್ಲ. ಆದ್ದರಿಂದ ಆ ಕಾರ್ಖಾನೆ ವ್ಯಾಪ್ತಿಯಲ್ಲಿರುವ ಕಬ್ಬನ್ನು ಬೇರೆ ಕಾರ್ಖಾನೆಗಳಿಗೆ ಮಾರಾಟ ಮಾಡುವುದಕ್ಕೆ ಮುಕ್ತ ಅವಕಾಶ ಕೊಡಲಾಗಿದೆ. ಆ ಕಬ್ಬನ್ನು ಅವರು ಬೇರೆ ಕಾರ್ಖಾನೆಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಅವರ ಇಂದಿನ ಪ್ರಶ್ನೆ ರೈತರಿಗೆ transportation costಅನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ನಾವು ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ. ಈ ಭಾಗದ ಕಬ್ಬನ್ನು ಬೇರೆ ಕಾರ್ಖಾನೆಗಳಿಗೆ ಕೊಡುವ ಬಗ್ಗೆ ಯಾವುದೇ ಒಪ್ಪಂದ/ಕರಾರು ಮಾಡಿಕೊಂಡಿರದೇ ಇರುವುದರಿಂದ transportation cost ಅನ್ನು ನಮ್ಮ ಕಡೆಯಿಂದ ಕೊಡುವುದಕ್ಕೆ ಅವಕಾಶವಿಲ್ಲ. ಅದನ್ನು ಪುನರಾರಂಭ ಮಾಡಿಸುವ ವಿಚಾರದಲ್ಲಿ ನಾವು ಮುಕ್ತವಾಗಿದ್ದೇವೆ. ಸರ್ಕಾರದ ಸಹಕಾರ ಇಲಾಖೆಯಿಂದ ಆಗುವುದಿಲ್ಲ. ಅದನ್ನು ಬೇರೆ ರೀತಿಯಲ್ಲಿ, ಅವರು ಯಾವ ರೀತಿಯಲ್ಲಿ. . .

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಮಂತ್ರಿಗಳೇ, ಕಬ್ಬನ್ನು ಕಟಾವು ಮಾಡುವುದು, ಸರಬರಾಜು ಮಾಡುವುದು, ಸರ್ಕಾರದ್ದು ಮತ್ತು ನಮ್ಮೆಲ್ಲರ ಕರ್ತವ್ಯ. ಆ ಭಾಗದಲ್ಲಿ ಫ್ಯಾಕ್ಟರಿ ಪ್ರಾರಂಭವಾಗಿಲ್ಲ. ಅದನ್ನು ನೀವು ಲೀಸ್‌ಗೆ ಕೊಡುವುದಕ್ಕೆ ಆಗಿಲ್ಲ. ಬೇರೆಯವರು ತೆಗೆದುಕೊಳ್ಳುತ್ತಿಲ್ಲ. ಈಗ ಕಬ್ಬನ್ನು ಬೆಳೆದಿದ್ದಾರೆ. ಆ ಕಬ್ಬನ್ನು ಅಕ್ಕ ಪಕ್ಕದ ಕಾರ್ಖಾನೆಗಳಿಗೆ ಸಾಗಿಸತಕ್ಕಂಥ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕು. ಆ ಫ್ಯಾಕ್ಟರಿಯವರು ತೆಗೆದುಕೊಳ್ಳುವುದಕ್ಕೆ ಸ್ವಲ್ಪ ಹಿಂದೆ ಮುಂದೆ ನೋಡುತ್ತಿರುವುದರಿಂದ transportation subsidyಯನ್ನು ಸರ್ಕಾರ ಕೊಡಬೇಕು. ಹಿಂದೆ ಬೇಕಾದಷ್ಟು ಈ ರೀತಿ ಮಾಡಿದ್ದಾರೆ. ಮಾಡಿಕೊಡಿ.

ಅಧ್ಯಕ್ಷರು: ಮಂತ್ರಿಗಳೇ, ಪರಿಶೀಲನೆ ಮಾಡುತ್ತೇವೆ ಎಂದು ಬಂದು ಮಾತು ಹೇಳಿ. ಇದು ಆಗುತ್ತದೆ ಅಥವಾ ಆಗುವುದಿಲ್ಲ ಎಂದು ಹೇಳಿ.

ಶ್ರೀ ಎಂ.ಟಿ.ಕೃಷ್ಣಪ್ಪ: ದಯವಿಟ್ಟು ಪರಿಶೀಲನೆ ಮಾಡುತ್ತೇವೆ ಎಂದು ಹೇಳಬೇಡಿ. ನೀವು . . .

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : Transportation cost bear ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಎಂ.ಟಿ.ಕೃಷ್ಣಪ್ಪ: ನೀವು ಪರಿಶೀಲನೆ ಮಾಡುತ್ತೇವೆಂದು ಹೇಳಬೇಡಿ. ಆ ಭಾಗದ . . .

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಗೊತ್ತಿದೆ. ಈಗ ಅವರು. . .

ಶ್ರೀ ಎಂ.ಟಿ.ಕೃಷ್ಣಪ್ಪ: ಮಾನ್ಯ ಸಚಿವರೆ, ಒಂದು ನಿಮಿಷ. . .ನೀವೂ ಅದೇ ಭಾಗದವರು.

(ಗೊಂದಲ)

ಅಧ್ಯಕ್ಷರು: ರೀ ಕೃಷ್ಣಪ್ಪನವರೆ, ಸ್ವಲ್ಪ ತಾಳಿ. ಇದು ಆಗುತ್ತದೆಯೇ ಇಲ್ಲವೇ ಎಂದು ಹೇಳಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ :ಇದು ಆಗುವುದಿಲ್ಲ ಸರ್. Transportation cost ಕೊಡುವುದಕ್ಕೆ ಬರುವುದಿಲ್ಲ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಸರಿ ಮತ್ತೆ ಬಿಡಿ.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಕೇಳಿ. ನನ್ನದೊಂದು request ಇದೆ. ನೀವು ಆ ಕಾರ್ಖಾನೆಯನ್ನು ಸಹಕಾರ ಇಲಾಖೆಯಿಂದ ನಡೆಸಬೇಕಾಗಿತ್ತು. ನಿಮಗೆ ನಡೆಸುವುದಕ್ಕೆ ಆಗ ುವುದಿಲ್ಲವೆಂದರೆ ... ಬನ್ನಾರಿಯಮ್ಮನ್ ಸಕ್ಕರೆ ಕಾರ್ಖಾನೆ 120 ಕಿ.ಮಿ. ದೂರದಲ್ಲಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಸಹಕಾರಿ ಕಾರ್ಖಾನೆ ನಡೆಸುವುದು ಸರ್ಕಾರದ ಕೆಲಸವಲ್ಲ. ಅದನ್ನು ಸಹಕಾರಿ ಸಂಸ್ಥೆಯವರು ನಡೆಸಬೇಕು. ಅಲ್ಲಿಯ ಸಹಕಾರಿ ಸಂಸ್ಥೆಯವರು ನಡೆಸುವುದಕ್ಕೆ ಆಗ ದೇ, 30 ಕೋಟಿ ರೂಪಾಯಿಗಳನ್ನು ನಷ್ಟ ಮಾಡಿ ಆ ಆಡಳಿತ ಮಂಡಳಿ ರದ್ದಾಗಿ ಹಿಂದೆ 2006ರಲ್ಲಿ ಅವರ ಪಕ್ಷದ ಆಡಳಿತದಲ್ಲಿ ಇದ್ದ ಸಂದರ್ಭಧಲ್ಲಿ ಬೇರೆಯವರಿಗೆ ಲೀಸ್‌ಗೆ ಕೊಟ್ಟು, ಆ ಲೀಸ್ ತೆಗ ದುಕೊಂಡವನಿಗೂ ನಡೆಸಲು ಆಗದೆ ಮಧ್ಯಂತರದಲ್ಲಿ ಆ ಫ್ಯಾಕ್ಟರಿಯನ್ನು ಬಿಟ್ಟು ಹೋಗಿ. .

ಅಧ್ಯಕ್ಷರು: ಈಗ limited purpose ಇದೆ. Transportation cost ಕೊಡುತ್ತೀರೋ ಇಲ್ಲವೋ ಹೇಳಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಈಗ ನಮಗೆ ಒಂದೇ ಮಾರ್ಗ ಇರುವುದು. ಅದನ್ನು ವಿಲೇವಾರಿ ಮಾಡಿ ಬೇರೆಯವರ ಮುಖಾಂತರ ಮಾಡಿಸಬೇಕು.

ಅಧ್ಯಕ್ಷರು: ಈಗ ಸಧ್ಯಕ್ಕೆ ಏನು ಮಾಡಬೇಕು ಅದನ್ನು ಹೇಳಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಈಗ ಸದ್ಯಕ್ಕೆ ಬೇರೆ ಕಾರ್ಖಾನೆಯವರು ಕಬ್ಬನ್ನು ತೆಗೆದುಕೊಳ್ಳುತ್ತಿದ್ದಾರೆ. ಕಬ್ಬನ್ನು ಅಲ್ಲಿ ಕೊಡಬೇಕು.

ಶ್ರೀ ಸಾ.ರಾ.ಮಹೇಶ್: ನಮಗೆ ಬನ್ನಾರಿಅಮ್ಮನ್ ಕಾರ್ಖಾನೆ 120 ಕಿ.ಮಿ.ದೂರದಲ್ಲಿದೆ. ಇವರು ಅಲ್ಲಿಗೆ ಕಬ್ಬು ಹೊಡೆಯುವುದಕ್ಕೆ permission ಕೊಟ್ಟಿದ್ದಾರೆ. ಪಕ್ಕದಲ್ಲಿ, 60 ಕಿ.ಮಿ. ದೂರದಲ್ಲಿ ಐ.ಸಿ.ಎಲ್. ಕಾರ್ಖಾನೆಯಿದೆ. ಅಲ್ಲಿಗೆ ಕೊಡಬಹುದಿತ್ತು.

ಅಧ್ಯಕ್ಷರು: ನೋಡಿ, alternative ಮಾಡಿ ಕೊಡಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ನಾವು ಮುಕ್ತವಾಗಿದ್ದೇವೆ. ಆ ಫ್ಯಾಕ್ಟರಿಯವರು ತೆಗೆದುಕೊಳ್ಳುವುದಾದರೆ ಅವರಿಗೇ ಕೊಡಲಿ.

ಅಧ್ಯಕ್ಷರು: ನೋಡಿ, ಬದಲಾವಣೆ ಮಾಡಿ.

ಶ್ರೀ ಸಾ.ರಾ.ಮಹೇಶ್: ಅವರೆಲ್ಲರೂ ಬನ್ನಾರಿಅಮ್ಮನ್ ಕಾರ್ಖಾನೆಗೆ ಕೊಡಬೇಕೆಂದು ನೀವು ಆದೇಶ ಮಾಡಿಬಿಟ್ಟಿದ್ದೀರಲ್ಲ. ಐ.ಸಿ.ಎಲ್.ಗೆ ಕೊಡಿಸಿ. 60 ಕಿ.ಮಿ. ದೂರದಲ್ಲಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಅದು ಹೇಗೆ ಆಗುತ್ತದೆ ಮಾನ್ಯ ಅಧ್ಯಕ್ಷರೆ ಎಂದರೆ, ಆ ಫ್ಯಾಕ್ಟರಿಗೆ ಐದು ಲಕ್ಷ.. ಕೆ.ಆರ್.ಪೆಟೆಯಲ್ಲಿ ಒಂದು. . .

ಅಧ್ಯಕ್ಷರು: ನೋಡಿ, ಭಾಷಣ ಬೇಡ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ :ಭಾಷಣ ಅಲ್ಲ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು: ಅವರು ಅದರ ಬದಲಿಗೆ 60 ಕಿ.ಮಿ. ದೂರದಲ್ಲಿರುವ ಫ್ಯಾಕ್ಟರಿಗೆ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಅವರು ತೆಗೆದುಕೊಳ್ಳಬೇಕಲ್ಲ.

ಶ್ರೀ ಸಾ.ರಾ.ಮಹೇಶ್ : ಆಗ transportation ಕಡಿಮೆಯಾಗುತ್ತದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಸರ್ಕಾರವೇ ಎಲ್ಲಾ ತೀರ್ಮಾನ ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ ಮಾನ್ಯ ಅಧ್ಯಕ್ಷರೆ.

ಶ್ರೀ ಸಾ.ರಾ.ಮಹೇಶ್ : ಬನ್ನಾರಿಅಮ್ಮನ್ ಕಾರ್ಖಾನೆಗೆ ಕೊಡಿ ಎಂದು ಇವರೇ ಆದೇಶ ಮಾಡಿರುವುದು.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಸ್ವಲ್ಪ ಇರಿ. ನಾವೇನೂ ಮಾಡಿಲ್ಲ. ಅಲ್ಲಿ ಏನಾಗಿದೆ ಎಂದರೆ ಕೆ.ಆರ್.ಪೇಟೆಯಲ್ಲಿ ಪಕ್ಕದಲ್ಲಿ ಕಾರ್ಖಾನೆ ಇದೆ. ಅವರಿಗೆ agreement ಕಬ್ಬು ಐದು ಲಕ್ಷ ಟನ್ ಇದೆ. ಅವರಿಗೆ ಆ agreement ಮಾಡಿಕೊಂಡಿರುವ ಕಬ್ಬನ್ನು ಸರಬರಾಜು ಮಾಡಬೇಕೆಂದು ಅವರಿಗೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕಡ್ಡಾಯವಿದೆ. ಅವರ capacity ಎಷ್ಟು ಇದೆಯೋ ಅಷ್ಟನ್ನು ಅವರು ಮಾಡುತ್ತಾರೆ. ಹೆಚ್ಚುವರಿಯಾಗಿ ಮಾಡುವ ಶಕ್ತಿ ಅವರಿಗಿಲ್ಲ.

ಅಧ್ಯಕ್ಷರು: ಅವರ ಪ್ರಕಾರ ಸರ್ಕಾರ ಒಪ್ಪಿಗೆ ಕೊಟ್ಟರೆ ಹೇಗಾದರೂ ನಾವು ಅವರಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಕೊಡಲಿ. ಇವರು ಅವರ ಜೊತೆ ಮಾತನಾಡಿ ಮಾಡುವುದಾದರೆ ಬೇಕಾದರೆ ಅವರನ್ನೂ ಕರೆದು ಒಂದು ಸಭೆ ಮಾಡುತ್ತೇನೆ.

ಅಧ್ಯಕ್ಷರು: ಸಭೆಯೂ ಬೇಡ ಎಂಥದ್ದೂ ಬೇಡ. ಆ ಜನರು ಕಬ್ಬು ಕೊಡುವುದಕ್ಕೆ ಬರುತ್ತಾರೆ. ನಿಮಗೆ ಅವಕಾಶವಿದ್ದರೆ ಖರೀದಿ ಮಾಡಿ ಎಂದು ಒಂದು circular ಹೊರಡಿಸಿ.

ಶ್ರೀ ಸಾ.ರಾ.ಮಹೇಶ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಜಿಲ್ಲಾಧಿಕಾರಿಗಳು Sugar Commissionerಗೆ letter ಹಾಕಿದ್ದಾರೆ. ಈ ಫ್ಯಾಕ್ಟರಿ ಕಬ್ಬನ್ನೆಲ್ಲ ಬನ್ನಾರಿ ಅಮ್ಮನ್ ಕಾರ್ಖಾನೆಗೇ ಕೊಡಬೇಕೆಂದು ಪತ್ರ ಹಾಕಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಅವರಿಗೆ ಎಲ್ಲಾ ಗೊತ್ತಿದೆ.

ಅಧ್ಯಕ್ಷರು: ಆಯಿತು. ನೀವು ಡಿ.ಸಿ.ಗೆ ಹೇಳಿ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ : ಆಗಬಹುದು.

ಅಧ್ಯಕ್ಷರು: ಈಗ ಸುರೇಶ್‌ರವರೇ ತಾವು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

| | |
|---|---|
| ವಿಷಯ : | ತುಮಕೂರು ತಾಲ್ಲೂಕು ಡಿ.ಕೊರಟಗೆರೆ ಗ್ರಾಮದ ಸರ್ಕಾರಿ ಗೋಮಾಳ ಸರ್ವೆ ನಂ.84ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ದಲಿತರಿಗೆ ಮೀಸಲಿಟ್ಟ 33 ಗುಂಟೆ ಜಮೀನನ್ನು ಒತ್ತುವರಿದಾರರಿಂದ ತೆರವುಗೊಳಿಸುವ ಬಗ್ಗೆ.<br>--- |

ಶ್ರೀ ಬಿ.ಸುರೇಶ್‌ಗೌಡ (ತುಮಕೂರು ಗ್ರಾಮೀಣ) : ಮಾನ್ಯ ಅಧ್ಯಕ್ಷರೆ, ತುಮಕೂರು ತಾಲ್ಲೂಕು ಡಿ.ಕೊರಟಗೆರೆ ಗ್ರಾಮದ ಸರ್ಕಾರಿ ಗೋಮಾಳ ಸರ್ವೆ ನಂ.84ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ದಲಿತರಿಗೆ ಮೀಸಲಿಟ್ಟ 33 ಗುಂಟೆ ಜಮೀನನ್ನು ಒತ್ತುವರಿದಾರರಿಂದ ತೆರವುಗೊಳಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು, ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ಶ್ರೀ ಬಿ.ಸುರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಉತ್ತರದಲ್ಲಿ ಡಿ.ಕೊರಟಗೆರೆ ಗ್ರಾಮದಲ್ಲಿ ಯಾವುದೇ ಸರ್ಕಾರಿ ಗೋಮಾಳ ಒತ್ತುವರಿಯಾಗಿಲ್ಲ ಎಂದು ಕೊಟ್ಟಿದ್ದಾರೆ. ಆದರೆ ಅಲ್ಲಿ ಗೋಮಾಳದ ಏನು 11 ಎಕರೆ 15 ಗುಂಟೆ ಖರಾಬು ಇತ್ತು ಅದರಲ್ಲಿ ಒಟ್ಟು 11 ಎಕರೆ ಬೇರೆಯವರಿಗೆ allot ಮಾಡಿದ್ದಾರೆ. ಈ ದಲಿತ್ ಕಾಲೋನಿಯ 30 ಗುಂಟೆ ಜಮೀನು ಏನಿದೆ ಅಲ್ಲಿ ಅವರು 35 ವರ್ಷಗಳಿಂದ ಮನೆ ಕಟ್ಟಿಕೊಂಡಿದ್ದಾರೆ. ಯಾರೋ ಒಬ್ಬರು ಬಂದು ಅವರಿಗೆ ದಂಕಿ ಹಾಕುತ್ತಾರೆ. ಅಲ್ಲಿಗೆ SCPಯ



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಒಂದು ಸಿಮೆಂಟ್ ರಸ್ತೆ ಕೊಟ್ಟಿದ್ದೇವೆ. ಅದನ್ನು ಮಾಡುವುದಕ್ಕೆ ಬಿಡುತ್ತಿಲ್ಲ. ಅಲ್ಲಿ ಮಚ್ಚು ಹಿಡಿದು ಗೂಂಡಾಗಿರಿ ಮಾಡುತ್ತಿದ್ದಾರೆ. ಅವರ ರಕ್ಷಣೆ ಮಾಡಬೇಕು.

ಅಧ್ಯಕ್ಷರು: ಸ್ವಾಮಿ, ಈಗ ಏನಾಗಬೇಕೆಂದು ಹೇಳಿ.

ಶ್ರೀ ಬಿ.ಸುರೇಶ್‌ಗೌಡ : ಅವರು ಸರಿಯಾಗಿ ಉತ್ತರ ಕೊಟ್ಟಿಲ್ಲ. ಅವರು ಒತ್ತುವರಿಯಾಗಿಲ್ಲವೆಂದು ಹೇಳಿದ್ದಾರೆ. ಹಾಗಿದ್ದರೆ ಏಕೆ ಅವನು ದಲಿತರ ಕಾಲೋನಿಗೆ ಬಂದು ಜಮೀನು ಮಂಜೂರಾಗಿರುವವರಿಗೆ ಮಚ್ಚು ಹಿಡಿದು ದಂಕಿ ಹಾಕುತ್ತಾನೆ? ಆ ದಲಿತರಿಗೆ ರಕ್ಷಣೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಕೃಷ್ಣ ಭೈರೇಗೌಡ: ಅದರಲ್ಲಿ ದಲಿತ ಕುಟುಂಬಗಳಿಗೆ ನಿವೇಶನಕ್ಕೆ ಮಂಜೂರಾಗಿರುವುದು 33 ಗುಂಟೆ. ಆ 33 ಗುಂಟೆ ಒತ್ತುವರಿಯಾಗಿದೆಯೇ ಎಂದು ಅವರು ಕೇಳಿದ್ದರು. ನಾವು ಆ 33 ಗುಂಟೆ ಆಗಿಲ್ಲ ಎನ್ನುವುದನ್ನು ಹೇಳಿದ್ದೇವೆ. ಒಟ್ಟು ಅದು 11 ಎಕರೆ ಇದ್ದೆ. ಬಹುಶ: ಅದರಲ್ಲಿ ಒತ್ತುವರಿಯಾಗಿದೆ ಎಂದು ಅವರು ಈಗ ಹೇಳುತ್ತಿದ್ದಾರೆ. ಅದನ್ನೂ ಸಹ ತಾವು ತನಿಖೆ ಮಾಡಿಸುತ್ತೇವೆ.

ಅಧ್ಯಕ್ಷರು: ತಕ್ಷಣ ಮಾಡಿಸಿ.

ಶ್ರೀ ಕೃಷ್ಣ ಭೈರೇಗೌಡ: ನೀವು ಕೇಳಿರುವುದು ಆಶ್ರಯ ಮನೆಗಳಿಗೆ ಏನು 33 ಗುಂಟೆ ಕೊಟ್ಟಿದ್ದೀರಿ ಅದು ಒತ್ತುವರಿಯಾಗಿದೆಯೇ ಎಂದು ತಾವು ಕೇಳಿರುವುದು.

ಶ್ರೀ ಬಿ.ಸುರೇಶ್‌ಗೌಡ : ಅದನ್ನೇ ನಾವು ಹೇಳಿದ್ದು. ತಹಶೀಲ್ದಾರ್ ಮತ್ತು Revenue Inspector ಸಹ ಹೋಗಿ spot inspection ಮಾಡಿದ್ದಾರೆ. 10 ಗುಂಟೆ ಇನ್ನೂ extra ಇದೆ. ಆ ದಲಿತರ ಕಾಲೋನಿಗೆ ಕೊಟ್ಟಿರುವುದು ಖರಾಬು 22 ಗುಂಟೆ ಎಂದು ಹೇಳಿದ್ದಾರೆ. ಆ ಖರಾಬ್ ಜಮೀನಿನಲ್ಲಿ ಅವರು 35 ವರ್ಷಗಳಿಂದ ಮನೆ ಕಟ್ಟಿಕೊಂಡಿದ್ದಾರೆ. ಅಲ್ಲಿ ಹೋಗಿ SCP ಕೆಲಸ . . .

ಅಧ್ಯಕ್ಷರು: ರೀ ಸ್ವಾಮಿ, ಈಗ ..

ಶ್ರೀ ಬಿ.ಸುರೇಶ್‌ಗೌಡ : ನಾನು ಒಂದೇ ನಿಮಿಷದಲ್ಲಿ ಹೇಳಿಬಿಡುತ್ತೇನೆ ಮಾನ್ಯ ಅಧ್ಯಕ್ಷರೆ. ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ. ಒಂದೇ ನಿಮಿಷದಲ್ಲಿ ಏನು ಆಗಬೇಕೆಂದು ಹೇಳಿಬಿಡುತ್ತೇನೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ಚರ್ಚೆಗೆ ಅವಕಾಶವಿಲ್ಲ.

ಶ್ರೀ ಬಿ.ಸುರೇಶ್‌ಗೌಡ: ಸರ್, ಒಂದೇ ನಿಮಿಷದಲ್ಲಿ ಏನು ಆಗಬೇಕೆಂದು ಹೇಳಿಬಿಡುತ್ತೇನೆ.

(ಮುಂದು . . .)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25.11.2015 7.40 (48) KS:SSD

ಅಧ್ಯಕ್ಷರು:- ಒಂದು ನಿಮಿಷ ಇರಿ. ನಾನು ಹೇಳುವುದನ್ನು ದಯವಿಟ್ಟು ಕೇಳಿ. ಅವರು ಖರಾಬು ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದು ಅದು ಗ್ರಾಮಠಾಣ ಆಗಿದ್ದರೆ ಅವರಿಗೆ ಹಕ್ಕುಪತ್ರ ಕೊಡುವುದಕ್ಕೆ ಅವಕಾಶ ಇದೆ. ಆದ್ದರಿಂದ, ಪಂಚಾಯಿತಿಯಿಂದ resolution ಮಾಡಿ ಅರ್ಜಿ ಕೊಡಿಸಿ.

ಶ್ರೀ ಬಿ.ಸುರೇಶ್‌ಗೌಡ:- ಮಾನ್ಯ ಸಚಿವರ ಮುಖಾಂತರ ತಹಸೀಲ್ದಾರ್‌ರವರಿಗೆ ಆದೇಶ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಆಯಿತು. ಸಂಬಂಧಪಟ್ಟವರಿಗೆ ಆದೇಶ ಮಾಡಿ.

ಶ್ರೀ ಬಿ.ಸುರೇಶ್‌ಗೌಡ:- ಅಲ್ಲಿರುವವರಿಗೆ ರಕ್ಷಣೆ ಕೊಡಬೇಕು ಹಾಗೆಯೇ ಅಲ್ಲಿರುವವರನ್ನು ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು. ಅಲ್ಲಿರುವವರ ಕಡೆಯಿಂದ 94(ಸಿ) ಅರ್ಜಿ ಹಾಕಿಸಲಾಗುತ್ತದೆ. ಆದ್ದರಿಂದ, ಅವರಿಗೆ ಹಕ್ಕು ಪತ್ರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:- ಯಾರಿಗೆ ಹಕ್ಕು ಪತ್ರ ಕೊಡಬೇಕು? ಅಂದರೆ, 33 ಎಕರೆ ಪ್ರದೇಶದಲ್ಲಿರುವವರಿಗೆ ಕೊಡಬೇಕೇ?

ಶ್ರೀ ಬಿ.ಸುರೇಶ್ ಗೌಡ:- ಕಳೆದ 35 ವರ್ಷಗಳಿಂದ ಅಲ್ಲಿ ವಾಸವಾಗಿರುವ ದಲಿತರಿಗೆ ಮಾತ್ರ ಹಕ್ಕು ಪತ್ರ ಕೊಡಬೇಕೆ ಹೊರತು ಬೇರೆಯವರಿಗೆ ಅಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು:- ಈಗ ಗ್ರಾಮಠಾಣದಲ್ಲಿ ಹಕ್ಕು ಪತ್ರಕೊಡುವುದಕ್ಕೆ ಸರ್ಕಾರದ ಕಡೆಯಿಂದ ಈಗಾಗಲೇ ಸುತ್ತೋಲೆ ಹೋಗಿದೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, 94(ಸಿ)ಯಲ್ಲಿ ಖರಾಬ್ ಲ್ಯಾಂಡ್‌ಗೆ ಕೊಡಬಹುದು.

ಅಧ್ಯಕ್ಷರು:- ಅದರ ಪ್ರಕಾರ ಕೊಡಿ.

ಶ್ರೀ ಕೃಷ್ಣ ಬೈರೇಗೌಡ:- ಆಯಿತು. ಮಾನ್ಯ ಶಾಸಕರಿಗೆ ಹೇಳುವುದೇನೆಂದರೆ, 94(ಸಿ) ಅರ್ಜಿಯನ್ನು ನಾಳೆಯೇ ಹಾಕಿಸಿ ಎಂದು ಹೇಳುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಬಿ.ಸುರೇಶ್‌ಗೌಡ:- ತಮ್ಮಿಂದ ತಹಸೀಲ್ದಾರ್‌ರವರಿಗೆ ಆದೇಶ ಹೋಗಬೇಕು.

ಅಧ್ಯಕ್ಷರು:- ಮೊದಲು ಅರ್ಜಿ ಹಾಕಿಸಿ.

ಶ್ರೀ ಕೃಷ್ಣ ಬೈರೇಗೌಡ:- 3,63,000 ಜನ ಈಗಾಗಲೇ ಅರ್ಜಿ ಹಾಕಿದ್ದಾರೆ.

ಶ್ರೀ ಬಿ.ಸುರೇಶ್‌ಗೌಡ:- ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಅಲ್ಲಿರುವವರಿಗೆ ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಪೊಲೀಸ್‌ನವರನ್ನು ಅಲ್ಲಿಗೆ ಕಳುಹಿಸಿ ರಕ್ಷಣೆ ಕೊಡಿಸಿ.

ಶ್ರೀ ಕೃಷ್ಣ ಬೈರೇಗೌಡ:- ಅವರಿಗೆ ಹೇಳಿ ಅರ್ಜಿ ಹಾಕಿಸಿ ಎಂದು ಮಾನ್ಯ ಸದಸ್ಯರಲ್ಲಿ ನನ್ನ ಮನವಿ.

ಶ್ರೀ ಬಿ.ಸುರೇಶ್ ಗೌಡ:- ಅರ್ಜಿ ಹಾಕಿಸುತ್ತೇವೆ. ಆದರೆ, ಅಲ್ಲಿರುವವರಿಗೆ ರಕ್ಷಣೆ ಕೊಡಿ ಎಂದು ಹೇಳುತ್ತಿದ್ದೇನೆ. ಅಲ್ಲಿಗೆ ಬಂದು ಅಲ್ಲಿರುವವರ ಮೇಲೆ ದಮ್ಕಿ ಹಾಕುವಂಥ ಕೆಲಸ ಆಗುತ್ತಿದೆ. ಆದ್ದರಿಂದ, ಯಾರು ದಮ್ಕಿ ಹಾಕುತ್ತಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಕೆಲಸ ಆಗಬೇಕು.

ಅಧ್ಯಕ್ಷರು:- ಪೊಲೀಸ್‌ನವರಿಗೆ ದೂರು ಕೊಡಿ.

ಶ್ರೀ ಬಿ.ಸುರೇಶ್ ಗೌಡ:- ಪೊಲೀಸ್‌ನವರಿಗೆ ದೂರು ಕೊಟ್ಟಿದ್ದೇವೆ. ಆದರೆ, ಅವರ ಜೊತೆಯಲ್ಲಿ ಪೊಲೀಸ್‌ನವರು ಸಹ ಶಾಮೀಲಾಗಿದ್ದಾರೆ. ಆದ್ದರಿಂದ, ಮಾನ್ಯ ಸಚಿವರಲ್ಲಿ ನಾನು request ಮಾಡುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಸಚಿವರೇ, ಈ ವಿಷಯವನ್ನು ಅಲ್ಲಿನ ಎಸ್.ಪಿ.ಯವರಿಗೆ ಹೇಳಿ.

ಶ್ರೀ ಕೃಷ್ಣ ಬೈರೇಗೌಡ:- ಹೇಳುತ್ತೇವೆ.

ಅಧ್ಯಕ್ಷರು:- ಮುಂದಿನ ಗಮನಸೆಳೆಯುವ ಸೂಚನೆ ಮಾನ್ಯ ಹೆಚ್.ಎಸ್.ಶಿವಶಂಕರ್‌ರವರದು ಅವರು ಇಲ್ಲ. ಮಾನ್ಯ ನಾರಾಯಣಗೌಡರವರೆ, ತಾವು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ವಿಷಯ:- ಕೆ.ಆರ್.ಪೇಟೆ ತಾಲ್ಲೂಕು, ಬೂಕನಕೆರೆ ಹೋಬಳಿ ಬಣ್ಣೇನಹಳ್ಳಿ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 129 ಎಕರೆ ಪ್ರದೇಶದಲ್ಲಿ ಫೇವರೀಚ್ ಕಂಪನಿಯ ಮೆಗಾ ಫುಡ್‌ಪಾರ್ಕ್ ನಿರ್ಮಾಣ ಮಾಡಿರುವ ಜಮೀನಿನಲ್ಲಿ ಕೈಗಾರಿಕೆಯ ನಿರ್ಮಾಣ ಕಾಮಗಾರಿಯು ಇನ್ನು ಪ್ರಾರಂಭವಾಗದೇ ಇರುವುದರ ಬಗ್ಗೆ

---------

ಶ್ರೀ ನಾರಾಯಣ ಗೌಡ (ಕೃಷ್ಣರಾಜಪೇಟೆ :- ಕೆ.ಆರ್.ಪೇಟೆ ತಾಲ್ಲೂಕು, ಬೂಕನಕೆರೆ ಹೋಬಳಿ ಬಣ್ಣೇನಹಳ್ಳಿ ಗ್ರಾಮದ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 129 ಎಕರೆ ಪ್ರದೇಶದಲ್ಲಿ ಫೇವರೀಚ್ ಕಂಪನಿಯ ಮೆಗಾ ಫುಡ್‌ಪಾರ್ಕ್ ನಿರ್ಮಾಣ ಮಾಡಲು ಮಂಜೂರಾತಿ ನೀಡಿ ಸದರಿ ಕಂಪನಿಗೆ ಜಮೀನನ್ನು ಹಸ್ತಾಂತರಿಸಿ, ಕಳೆದ ಆಗಸ್ಟ್-2014ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳು ಬಂದು ಶಂಕುಸ್ಥಾಪನೆ ಮಾಡಿರುತ್ತಾರೆ. ಸದರಿ ಕೈಗಾರಿಕೆಯ ನಿರ್ಮಾಣ ಕಾಮಗಾರಿಯು ಇನ್ನು ಪ್ರಾರಂಭವಾಗದೇ ಇರುವುದರ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)(ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ.)

ಅಧ್ಯಕ್ಷರು:- ಜಮೀನು ಕೊಟ್ಟು ಎಷ್ಟು ವರ್ಷವಾಗಿದೆ.

ಶ್ರೀ ನಾರಾಯಣ ಗೌಡ:- ಜಮೀನು ಕೊಟ್ಟು ಸುಮಾರು 2 ವರ್ಷಗಳಾಗುತ್ತಾ ಬಂದಿದೆ.

ಅಧ್ಯಕ್ಷರು:- Allot ಮಾಡುವಾಗ ಕೆಲವು ಕಂಡಿಷನ್‌ಗಳನ್ನು ಹಾಕಿರುತ್ತಾರೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ನಾರಾಯಣ ಗೌಡ:- 24 ತಿಂಗಳಲ್ಲಿ ಸದರಿ ಜಾಗದಲ್ಲಿ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬೇಕೆಂದು ಕಂಡಿಷನ್ ಹಾಕಿದ್ದಾರೆ.

ಅಧ್ಯಕ್ಷರು:- ಮಾಡಿಲ್ಲವೆಂದರೆ ಜಮೀನನ್ನು ವಾಪಸು ತೆಗೆದುಕೊಳ್ಳಿ.

ಶ್ರೀ ನಾರಾಯಣ ಗೌಡ:- ಆದರೆ, ಇವರು ಕೊಟ್ಟಿರುವ ಉತ್ತರದಲ್ಲಿ 36 ತಿಂಗಳುಗಳ ಕಾಲಮಿತಿ ಇದೆ ಎಂದು ಇಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಈಗಾಗಲೇ ಎರಡು ವರ್ಷ ಆಗಿದ್ದರೂ ಸಹ ಇಲ್ಲಿಯವರೆಗೆ ಏನು ಸಹ ಮಾಡಿಲ್ಲ.

ಅಧ್ಯಕ್ಷರು:- ನಾನು ಹೇಳುವುದನ್ನು ಕೇಳಿ. ಸೈಟ್ ಅಲಾಟ್ ಮಾಡುವಾಗ ಕಂಡಿಷನ್ ಹಾಕಿರುತ್ತಾರೆ.

ಶ್ರೀ ನಾರಾಯಣ ಗೌಡ:- ಕಂಡಿಷನ್ ಹಾಕಿದ್ದಾರೆ.

ಅಧ್ಯಕ್ಷರು:- ಏನು ಕಂಡಿಷನ್ ಹಾಕಿದ್ದಾರೆಂದು ನಿಮಗೆ ಗೊತ್ತಿದೆಯೇ?

ಶ್ರೀ ನಾರಾಯಣ ಗೌಡ:- 24 ತಿಂಗಳಲ್ಲಿ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬೇಕೆಂದು ಕಂಡಿಷನ್ ಇದೆ. ಆದರೆ, ಇವರು ಕೊಟ್ಟಿರುವ ಉತ್ತರದಲ್ಲಿ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಸಾಕಷ್ಟು ಜಮೀನಿನಲ್ಲಿ ಇದೇ ರೀತಿಯಾಗಿದೆ.

ಅಧ್ಯಕ್ಷರು:- ಈ ರೀತಿಯಾಗಿ ಬಹಳ ಇವೆ. ಮಾನ್ಯ ಬಸವರಾಜ್ ರಾಯರೆಡ್ಡಿಯವರು ಇಲ್ಲಿಲ್ಲ. ಅವರು ಒಂದು ಸಾರಿ ಚರ್ಚೆ ಮಾಡುವ ಅವಧಿಯಲ್ಲಿ ಸುಮಾರು ಐದಾರು ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕೆ ಪ್ರಾರಂಭ ಮಾಡಲು ಜಮೀನು ತೆಗೆದುಕೊಂಡಿದ್ದರೂ ಸಹ ಸುಮಾರು 10-15 ವರ್ಷಗಳಾದರೂ ಇನ್ನೂ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿಲ್ಲವೆಂದು ಹೇಳಿದ್ದರು. ಈ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೆ. ಆದರೆ, ನನಗೆ ಇನ್ನೂ ಉತ್ತರ ಕೊಟ್ಟಿಲ್ಲ. ಮಾನ್ಯ ಸಚಿವರೇ, ಅಲ್ಲಿ ಏನಾಗಿದೆ ಎಂದು ನೋಡಿ ಕ್ರಮ ತೆಗೆದುಕೊಳ್ಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಇದು ಕೈಗಾರಿಕೆ ಇಲಾಖೆಗೆ ಬರುತ್ತದೆ. ಆದ್ದರಿಂದ, ಈ ಬಗ್ಗೆ ಅವರಿಗೆ ಹೇಳಿ ಸಂಬಂಧಪಟ್ಟವರು ಮಂಜೂರಾತಿ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಾರೆಯೇ ಎಂಬ ಬಗ್ಗೆ ತನಿಖೆ ಮಾಡಿಸುತ್ತೇವೆ.

ಶ್ರೀ ಕೆ.ಎಸ್.ಮಂಜುನಾಥಗೌಡ:- ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗುತ್ತದೆ ಎಂದರೆ, ಮತ್ತೆ renewal ಮಾಡಿಬಿಡುತ್ತಾರೆ. ಅಂದರೆ, ಮೊದಲು ಎರಡು ವರ್ಷ ಎಂದು ಅನುಮತಿ ಕೊಟ್ಟು ಆನಂತರ renewal ಮಾಡಿಕೊಡುತ್ತಾರೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ನಮ್ಮಲ್ಲಿಯೂ ಸಹ ಫುಡ್ ಪಾರ್ಕ್ ಆಗಿದೆ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಅದು ಬೇರೆ ಮತ್ತು ಇದು ಬೇರೆ.

ಶ್ರೀ ಕೆ.ಎಸ್.ಮಂಜುನಾಥಗೌಡ:- ಮಾನ್ಯ ಅಧ್ಯಕ್ಷರೆ, ಎರಡು ಲಕ್ಷಕ್ಕೆ ಜಮೀನನ್ನು ತೆಗೆದುಕೊಂಡು ಆನಂತರ ಒಂದು ಕೋಟಿ ರೂಪಾಯಿಗೆ ಮಾರಾಟ ಮಾಡುತ್ತಾರೆ. ಏನು ಕಂಡಿಷನ್ ಹಾಕಿರುತ್ತಾರೆಯೋ.

ಅಧ್ಯಕ್ಷರು:- ಕೆಲಸಕ್ಕೆ ಬಾರದೆ ಇರುವುದನ್ನು ಮಾತನಾಡಬೇಡಿ.

ಶ್ರೀ ಕೆ.ಎಸ್.ಮಂಜುನಾಥಗೌಡ:- ನಡೆಯುತ್ತಿರುವ ವಿಷಯವನ್ನು ಮಾನ್ಯ ಸಚಿವರಿಗೆ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ನಾರಾಯಣ ಗೌಡ:- ಮಾನ್ಯ ಅಧ್ಯಕ್ಷರೆ, ಇಡೀ ಜಿಲ್ಲೆಯಲ್ಲಿ ಈ ಬಗ್ಗೆ ಚರ್ಚೆ ಆಗುತ್ತಿದೆ. ಇವರು ಜಮೀನನ್ನು ಮಾರಿಕೊಂಡು..

ಅಧ್ಯಕ್ಷರು:- ಮಾನ್ಯ ನಾರಾಯಣ ಗೌಡರೆ, ಒಂದು ನಿಮಿಷ ಇರಿ. ಎರಡು ವರ್ಷಗಳಲ್ಲಿ ಮಾಡಬೇಕೆಂದು ತಾವು ಈಗಾಗಲೇ ಹೇಳಿದ್ದೀರಿ. ಆ ಕಂಡಿಷನ್ ಪ್ರಕಾರ ನಡೆದುಕೊಳ್ಳದಿದ್ದರೆ ಆ ಜಮೀನನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಂಜೂರಾತಿ ಕಂಷನ್ ಉಲ್ಲಂಘನೆ ಆಗಿದೆಯೇ ಎಂಬ ಬಗ್ಗೆ ಕೈಗಾರಿಕಾ ಇಲಾಖೆಯಿಂದ ತನಿಖೆ ಮಾಡಿಸುತ್ತೇವೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು:- ಮಾನ್ಯ ನಾರಾಯಣ ಗೌಡರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಮ್ಮ ಹತ್ತಿರ ಇರುವ ದಾಖಲೆಗಳನ್ನು ಅವರಿಗೆ ಕಳುಹಿಸಿಕೊಡಿ.

ಶ್ರೀ ನಾರಾಯಣ ಗೌಡ:- ನನ್ನ ಹತ್ತಿರ ಇರುವ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:- ಆಯಿತು. ಮುಂದಿನ ಗಮನಸೆಳೆಯುವ ಸೂಚನೆ ಮಾನ್ಯ ಶ್ರೀ ಎಸ್.ಭೀಮಾ ನಾಯ್ಕ್‌ರವರು ಇದೆ. ಆದರೆ, ಅವರಿಲ್ಲ. ಮುಂದಿನದು ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು ಇದೆ. ಅವರು ಸಹ ಇಲ್ಲ. ಗಮನಸೆಳೆಯುವ ಸೂಚನೆ ಇಲ್ಲಿಗೆ ಮುಕ್ತಾಯವಾಯಿತು. ಈಗ ಶೂನ್ಯವೇಳೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**ಅಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು(ಶೂನ್ಯವೇಳೆ)**

ಅಧ್ಯಕ್ಷರು:- ಮಾನ್ಯ ಜಗದೀಶ್ ಶೆಟ್ಟರ್‌ರವರದು ಇದೆ. ಅವರಿಲ್ಲ. ಮಾನ್ಯ ಸುನೀಲ್ ಕುಮಾರ್‌ರವರೆ ತಾವು ಕೇಳಿ.

ವಿಷಯ:- **ದೇಶದಲ್ಲಿ ಐಸಿಸ್ ಸಂಭಾವ್ಯ ದಾಳಿ ಬಗ್ಗೆ ರಾಜ್ಯದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ.**

*********

ಶ್ರೀ ವಿ.ಸುನೀಲ್ ಕುಮಾರ್:- ದೇಶದಲ್ಲಿ ಐಸಿಸ್ ಸಂಭಾವ್ಯ ದಾಳಿ ಬಗ್ಗೆ ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದ್ದು, ಈ ಬಗ್ಗೆ ಕಟ್ಟೆಚ್ಚರ ವಹಿಸುವಂತೆ ಎಲ್ಲಾ ರಾಜ್ಯಗಳಿಗೆ ಸಂದೇಶ ರವಾನಿಸಿರುವ ಬಗ್ಗೆ ಈಗಾಗಲೇ ಪತ್ರಿಕಾ ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಈ ಕುರಿತು ರಾಜ್ಯದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್(ಸಹಕಾರ ಇಲಾಖೆ)( ಮಾನ್ಯ ಗೃಹ ಇಲಾಖೆಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಐಸಿಸ್ ದಾಳಿಯ ಬಗ್ಗೆ ಕೇಳಿದ್ದಾರೆ.

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಶ್ರೀ ವಿ.ಸುನೀಲ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮೂರು ಜನ ಯುವಕರು ಐಸಿಸ್ ನಲ್ಲಿ ತರಬೇತಿ ಪಡೆದು ಅಲ್ಲಿ ಹತ್ಯೆ ಆಗಿದ್ದಾರೆಂಬ ಸುದ್ದಿ ಗೊತ್ತಾಗಿದೆ. ಹಿಂದಿನ incident ಗಳಲ್ಲಿಯೂ ಕೂಡ ಇದಕ್ಕೆ ಕರ್ನಾಟಕ ಒಂದು ಕೇಂದ್ರ ಎನ್ನತಕ್ಕಂಥ ಮಾಹಿತಿಗಳು ಬಹಳ ದೊಡ್ಡ ಪ್ರಮಾಣದಲ್ಲಿ ಬರುತ್ತಿತ್ತು. ಸಂಭಾವಿಯ ದಾಳಿ ಆಗುತ್ತದೆ ಎಂಬ ಎಚ್ಚರಿಕೆಯನ್ನು ಕೇಂದ್ರ ಸರ್ಕಾರ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ಕೊಟ್ಟಿರುವಂಥ ಹಿನ್ನಲೆ ಇರುವುದರಿಂದ ವಿಶೇಷವಾದಂತ ಎಚ್ಚರಿಕೆಯನ್ನು ವಹಿಸಬೇಕು. ನಮ್ಮ ರಾಜ್ಯದಲ್ಲಿ ಆ ರೀತಿಯಾದ ಯಾವುದೇ ಘಟನೆಗಳು ನಡೆಯದಂತೆ ಗುಪ್ತಚರ ಇಲಾಖೆಯನ್ನು ಚುರುಕುಗೊಳಿಸುವುದರ ಜೊತೆಗೆ ನಮ್ಮ ರಾಜ್ಯದಲ್ಲಿ ಆ ರೀತಿಯಾದ ಯುವಕರು ಇದ್ದರೆ ತಕ್ಷಣ ಅದರ ಬಗ್ಗೆ ಎಚ್ಚರಿಕೆಯನ್ನು ಸರ್ಕಾರ ವಹಿಸಬೇಕೆಂಬ ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಸಚಿವರೇ, Yes ಎಂದು ಹೇಳಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ರಾಷ್ಟ್ರ ಮತ್ತು ರಾಜ್ಯ ಗುಪ್ತಚರ ಇಲಾಖೆಗಳೊಂದಿಗೆ ಸತತ ಸಂಪರ್ಕದಲ್ಲಿಟ್ಟುಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಅಧ್ಯಕ್ಷರು:- ಅವರ ಸಲಹೆಯನ್ನು ಗಂಭೀರವಾಗಿ ತೆಗೆದುಕೊಂಡು ಪರಿಹರಿಸುತ್ತೇನೆಂದು ಹೇಳಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:- ಆಯಿತು.

ಅಧ್ಯಕ್ಷರು:- ಮುಂದಿನ ವಿಷಯ ಮಾನ್ಯ ಕೋನರೆಡ್ಡಿಯವರದು ಇದೆ. ಆದರೆ, ಅವರಿಲ್ಲ. ಮಾನ್ಯ ರವಿಕಾಮತ್‌ರವರು ಸಹ ಇಲ್ಲ. ಮಾನ್ಯ ಕೃಷ್ಣಾರೆಡ್ಡಿಯವರೇ ತಾವು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ / Uncorrected - Not for Publication.

ವಿಷಯ:- **ರೊನೋ ಚಂಡಮಾರುತದಿಂದ ನಷ್ಟವಾಗಿರುವುದಕ್ಕೆ ಪರಿಹಾರ ಕೊಡುವ ಬಗ್ಗೆ.**

*******

ಶ್ರೀ ಎಂ.ಕೃಷ್ಣಾರೆಡ್ಡಿ(ಚಿಂತಾಮಣಿ):- ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಕಳೆದ 15 ದಿವಸಗಳಿಂದ ರೊನೋ ಚಂಡಮಾರುತದ ಅಬ್ಬರದಿಂದ 925 ಮನೆಗಳು ಈಗಾಗಲೇ ಬಿದ್ದು ಹೋಗಿವೆ ಹಾಗಿಯೇ ಅಪರಾವದಂಥ ರಾಗಿ, ಟೊಮೋಟೊ ಬೆಳೆ ನಷ್ಟವಾಗಿದೆ. ಈಗಾಗಲೇ ಮನೆಗಳು ಬಿದ್ದು ಹೋಗಿರುವುದರಿಂದ ಸಂಬಂಧಪಟ್ಟವರಿಗೆ ಪುನರ್ವಸತಿ ಕಲ್ಪಿಸಬೇಕು ಹಾಗೆಯೇ ಟೊಮೋಟೊ ಹಾಗೂ ರಾಗಿ ಬೆಳೆಗೆ ಪರಿಹಾರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು)(ಮಾನ್ಯ ಕಂದಾಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, **(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ನಿಯಮಗಳ ಪ್ರಕಾರ ಮನೆಗಳು ಬಿದ್ದು ಹೋಗಿರುವುದಕ್ಕೆ ಮೊದಲಿಗೆ ಸಂಬಂಧಪಟ್ಟವರಿಗೆ ಪರ್ಯಾಯ ವ್ಯವಸ್ಥೆ ಮತ್ತು ಪರಿಹಾರ ಕೊಡುವುದಕ್ಕೆ ಅವಕಾಶ ಇದೆ. ಆದ್ದರಿಂದ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ತಕ್ಷಣ ಅದನ್ನು ಕಾರ್ಯಾರಂಭ ಮಾಡುವುದಕ್ಕೆ ಹೇಳುತ್ತೇನೆ.

ಅಧ್ಯಕ್ಷರು:- ಆಯಿತು. ಮಾನ್ಯ ಮುನಿಸ್ವಾಮಪ್ಪನವರೇ ತಾವು ಕೇಳಿ. ಅವರು ಇಲ್ಲ. ಮತ್ತೆ ಮಾನ್ಯ ಕೆ.ಎಸ್.ಬಾಲಕೃಷ್ಣರವರು ಮತ್ತು ಮತ್ತು ಕೆ.ಎಂ.ಶಿವಲಿಂಗೇಗೌಡರು ಮಾನ್ಯ ಗುರುಪಾಟಿಲ್ ಶಿರವಾಳರವರು ಹಾಗೂ ಮಾನ್ಯ ಕೆ.ಶಿವಮೂರ್ತಿರವರು ಇಲ್ಲ. ಮಾನ್ಯ ಪಿ.ರಾಜೀವ್‌ರವರೇ ತಾವು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. /Uncorrected - Not for Publication.

ವಿಷಯ:- **ಟಿ.ಸಿ.ಯಿಂದ ಬೆಂಕಿ ಹತ್ತಿಕೊಂಡಿದ್ದರಿಂದ ಕಬ್ಬು ಬೆಳೆ ನಷ್ಟವಾಗಿರುವ ಬಗ್ಗೆ.**

******

ಶ್ರೀ ಪಿ.ರಾಜೀವ್(ಕುಡಚಿ):- ಮಾನ್ಯ ಸಭಾಧ್ಯಕ್ಷರೆ, ನನ್ನ ಕ್ಷೇತ್ರದ ಸಿದ್ದಾಪುರ ಗ್ರಾಮದಲ್ಲಿ ದಶರತಿ ಯಳಗೌಡ ಮತ್ತು ಇತರರಿಗೆ ಸೇರಿದ ಜಮೀನಿನ ಫಸಲಿಗೆ ಟಿ.ಸಿ.ಗೆ ಬೆಂಕಿ ಹಚ್ಚಿಕೊಂಡಿದ್ದರಿಂದ ಸುಮಾರು 840ಟನ್‌ಗಳಷ್ಟು ಕಬ್ಬು ಸುಟ್ಟು ಹೋಗಿ ಸುಮಾರು 21 ಲಕ್ಷ ರೂಪಾಯಿ ನಷ್ಟವಾಗಿದೆ. ಸಂಬಂಧಪಟ್ಟವರು ಬಡ ಕುಟುಂಬದವರಾಗಿರುವುದರಿಂದ ಅವರಿಗೆ ಪರಿಹಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಷಯಕ್ಕೆ ಸರ್ಕಾರದ ಕಡೆಯಿಂದ ಉತ್ತರ ಬಂದಿಲ್ಲ.

ಶ್ರೀ ಕೃಷ್ಣ ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಅವರ ವಿಷಯಕ್ಕೆ ನಾನು ಈಗಾಗಲೇ ಉತ್ತರ ಹೇಳುತ್ತೇನೆ. ಅಲ್ಲಿ ಆಗಿರುವ ನಷ್ಟಕ್ಕೆ ಪರಿಹಾರ ಕೇಳಿದ್ದಾರೆ. SDRF and NDRF ಮಾನದಂಡಗಳ ಪ್ರಕಾರ ಇದು ಪರಿಹಾರಕ್ಕೆ ಅನ್ವಯಿಸುವುದಿಲ್ಲ. ಆದರೆ, ಕೃಷಿ ಇಲಾಖೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಸೂಚನೆ ಕೊಟ್ಟು ಪರಿಹಾರ ಕೊಡುವುದಕ್ಕೆ ಅವಕಾಶ ಇದ್ದಲ್ಲಿ ಇದನ್ನು ಪರಿಗಣಿಸಬೇಕೆಂದು ಹೇಳಿ ಎರಡು ಇಲಾಖೆಯವರಿಗೆ ನಾನು ಸೂಚನೆ ಕೊಡುತ್ತೇನೆ.

ಅಧ್ಯಕ್ಷರು:- ಆಯಿತು. ಮಾನ್ಯ ನಾರಾಯಣ ಗೌಡರು, ಮಾನ್ಯ ಬಿ.ಆರ್.ಪಾಟೀಲ್, ಮಾನ್ಯ ಹೆಚ್.ಡಿ.ರೇವಣ್ಣರವರು ಇಲ್ಲ. ಮುಂದಿನದು ಮಾನ್ಯ ಎಂ.ಟಿ.ಕೃಷ್ಣಪ್ಪನವರದು ಇದೆ ತಾವು ಕೇಳಿ.

ವಿಷಯ:- **ತೊರೇಮಾವಿನಹಳ್ಳಿ ಗ್ರಾಮದಲ್ಲಿರುವ ಸಹಕಾರಿ ಸಂಘದ ಚುನಾವಣೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ.**

*******

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಎಂ.ಟಿ.ಕೃಷ್ಣಪ್ಪ(ತುರುವೇಕೆರೆ):- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ತೊರೇಮಾವಿನಹಳ್ಳಿ ಎಂಬ ಗ್ರಾಮದಲ್ಲಿರುವ ಸಹಕಾರ ಸಂಘಕ್ಕೆ ನಡೆದಿರುವ ಚುನಾವಣೆಯಲ್ಲಿ ದುರುಪಯೋಗ ಆಗಿದೆ. ಮತದಾರರ ಬೈಲಾವನ್ನು ಉಲ್ಲಂಘನೆ ಮಾಡಿ ಬೇರೆ ಬೇರೆ ಊರುಗಳಿಂದ ಮತದಾರರನ್ನು ಕರೆದುಕೊಂಡು ಬಂದು ವೋಟು ಹಾಕಿಸಿದ್ದಾರೆ. ಅದು A.R. ಹತ್ತಿರ dispute ಆಗಿದೆ. ಆದರೆ, ಅದು ನಮಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ನಿಮಗೆ ಬರದೆ ಇದ್ದರೂ ಪರವಾಗಿಲ್ಲ, ಇದನ್ನು ವಜಾ ಮಾಡಿಕೊಡಿ ಎಂದು ಹೇಳಿದರೂ ಸಹ ಮಾಡುತ್ತಿಲ್ಲ. Political influence ಮೇಲೆ ಪ್ರತಿ ತಿಂಗಳು ಈ ಕೇಸ್ ಅನ್ನು postpone ಮಾಡಿಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು:- ಇದನ್ನು ಬೇಗ ತೀರ್ಮಾನ ಮಾಡುವುದಕ್ಕೆ ಹೇಳಿ.

ಶ್ರೀ ಎಂ.ಟಿ.ಕೃಷ್ಣಪ್ಪ:- ಇವರು ಅವರನ್ನು transfer ಮಾಡಿದರು. ಆದರೂ ಸಹ ಆ ಮನುಷ್ಯ ಕೆಎಟಿ ಯಿಂದ..

ಅಧ್ಯಕ್ಷರು:- ಈಗ ಏನು ಆಗಬೇಕು ಅಷ್ಟನ್ನು ಮಾತ್ರ ಹೇಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್( ಸಹಕಾರ ಮತ್ತು ಸಕ್ಕರೆ ಸಚಿವರು):- ಮಾನ್ಯ ಅಧ್ಯಕ್ಷರೆ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಮಾನ್ಯ ಸದಸ್ಯರು ಹೇಳಿದಂತೆ ಚುನಾವಣೆ ತಕರಾರು ಅರ್ಜಿ ಈಗ Assistant Registrar ಮುಂದೆ ನಡೆಯುತ್ತಿದೆ. ಇದು ವಿಚಾರಣೆ ಹಂತದಲ್ಲಿದ್ದು ಇನ್ನು ಒಂದು ತಿಂಗಳೊಳಗೆ ಅದನ್ನು ಪೂರ್ಣಗೊಳಿಸಿಕೊಡುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ:- ಅಂಥ ಅಧಿಕಾರಿಗಳಿಗೆ ದಯಮಾಡಿ executive post ಕೊಡಬೇಡಿ. ಅಂಥವರನ್ನು ಕಛೇರಿಗೆ ಹಾಕಿಕೊಳ್ಳಿ. ಅಂಥ ಭ್ರಷ್ಟರನ್ನು ಇಟ್ಟುಕೊಂಡು ಏನು ಮಾಡಬೇಕು. Just dismiss ಮಾಡಿ. ಆತ favor ಮಾಡುವುದಕ್ಕೆ ಹೋಗುವುದು ಬೇಡ. ಇರುವ ಅರ್ಜಿಯನ್ನು ವಜಾ

ತಿದ್ದುಪಡಿಯಾಗದ -ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಮಾಡುವುದಕ್ಕೆ ಏನು ತೊಂದರೆ? ದಯಮಾಡಿ ಆತನನ್ನು ವರ್ಗಾವಣೆ ಮಾಡಿ ನಿಮ್ಮ head officeಗೆ ಹಾಕಿಕೊಳ್ಳಿ.

ಅಧ್ಯಕ್ಷರು:- ಆಯಿತು. ಮುಂದಿನದು ಮಾನ್ಯ ಎಂ.ಜೆ.ಅಪ್ಪಾಜಿರವರು ಇದೆ. ತಾವು ಕೇಳಿ.

**ವಿಷಯ:- ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ ಕಾರ್ಮಿಕರ ಬಗ್ಗೆ.**

******

ಶ್ರೀ ಎಂ.ಜೆ.ಅಪ್ಪಾಜಿ(ಭದ್ರಾವತಿ):- ಮಾನ್ಯ ಅಧ್ಯಕ್ಷರೆ, ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್‌ನ ಕಾರ್ಮಿಕರ ಬಗ್ಗೆ ಮಾನ್ಯ ಸಚಿರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ್ ನಾಯ್ಕ್(ಕಾರ್ಮಿಕ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

ಮೈಸೂರು ಪೇಪರ್ ಮಿಲ್ಸ್‌ನಲ್ಲಿ 1100 ಕಾರ್ಮಿಕರನ್ನು ರಜದ ಮೇಲೆ ಕಳುಹಿಸಿರುವುದು ಗಮನಕ್ಕೆ ಬಂದಿದೆ. ಇತ್ತೀಚೆಗೆ ನಮ್ಮ ಕಾರ್ಮಿಕ ಆಯುಕ್ತರಿಗೆ ಈ ಬಗ್ಗೆ ಅರ್ಜಿ ಕೊಟ್ಟಿದ್ದಾರೆ. ಈ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

(ಮುಂದು)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

25-11-2015-7-50(49)-YBG-VR

ಶ್ರೀ ಎಂ.ಜೆ.ಅಪ್ಪಾಜಿ: ಮಾನ್ಯ ಅಧ್ಯಕ್ಷರೆ, ಈ ವಿಚಾರವಾಗಿ ಮಾನ್ಯ ಮಂತ್ರಿಗಳ ಹೇಳಿಕೆ ಏನು ಇದೆ ಎಂದರೆ, ದಿನಾಂಕ: 21-11-2015 ಕ್ಕೆ ಮಾನ್ಯ ಎಂ.ಡಿ.ಯವರಿಗೆ ರಜೆ ಮೇಲೆ ಹೋಗಿ ಎಂದು ಹೇಳಿದ್ದಾರೆ. ಕಾರಣ ಏನು ಕೊಟ್ಟಿದ್ದಾರೆಂದರೆ, ಎಂ.ಪಿ.ಎಂ. ನಲ್ಲಿ ಎರಡು ಬಾಯಿಲರ್‌ಗಳು ಇತ್ತು.

ಅಧ್ಯಕ್ಷರು: ಈಗ ಏನು ಮಾಡಬೇಕು ಹೇಳಿ, ಕಾರ್ಮಿಕರ ಏನು ರಕ್ಷಣೆ.

ಶ್ರೀ ಎಂ.ಜೆ.ಅಪ್ಪಾಜಿ: ಕಾರ್ಮಿಕರ ರಕ್ಷಣೆಗೆ ಬಂದು ಅವರಿಗೆ ಯಾವುದೆ ರೀತಿಯ ಅನ್ಯಾಯವಾಗದ ರೀತಿಯಲ್ಲಿ ಸರ್ಕಾರ ಸಹಾಯ ಮಾಡಬೇಕು.

ಅಧ್ಯಕ್ಷರು: ಕಾನೂನು ಪ್ರಕಾರ ಏನು ಇದೆ ಅದನ್ನು ಮಾಡಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: ಅವರು recent ಆಗಿ ಕೊಟ್ಟಿದ್ದಾರೆ.

ಅಧ್ಯಕ್ಷರು: Report ತರಿಸಿಕೊಳ್ಳಿ.

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: ಕಾನೂನಿನಲ್ಲಿ ಏನು ಅವಕಾಶ ಇದೆ ಅದರಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಜೆ.ಅಪ್ಪಾಜಿ: ತಾತ್ಕಾಲಿಕವಾಗಿ ಅವರನ್ನು ರಜೆ ಮೇಲೆ ಹೋಗಿ ಎಂದು ಏನು ಹೇಳಿದ್ದಾರೆ, ಅದನ್ನಾದರೂ ಸರ್ಕಾರ ತಡೆಹಿಡಿದು, ಅದನ್ನು ರದ್ದು ಮಾಡಿ ತದನಂತರ ಸರ್ಕಾರ decision ತೆಗೆದುಕೊಳ್ಳಬೇಕು.

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರು ಅದರ ಬಗ್ಗೆ ಬಹಳ ನೇರವಾಗಿ ಮಾತನಾಡಿ..

ಅಧ್ಯಕ್ಷರು: ಸಂಬಂಧಪಟ್ಟವರನ್ನು ಕರೆಸಿ. ರಜೆ ಕೊಡುವುದಕ್ಕೆ ರೂಲ್‌ನಲ್ಲಿ ಅವಕಾಶ ಇದೆಯಾ?

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: ನಾಳೆಯೆ ಕರೆಸಿ examine ಮಾಡುತ್ತೇನೆ.



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಅಧ್ಯಕ್ಷರು: ನಾಳೆ examine ಮಾಡಿ, ಬೇಕಾದರೆ ಹೇಳಿಕೆ ಕೊಡಿ. ಏನು ಹೇಳಿ ಅಪ್ಪಾಜಿಯವರೆ?

ಶ್ರೀ ಎಂ.ಜೆ.ಅಪ್ಪಾಜಿ: ಮೊನ್ನೆ 16ನೇ ತಾರೀಖು ಒಂದು ಮಿಟಿಂಗ್ ನಡೆದಿತ್ತು. ಯಾವುದೆ ವಿಚಾರಗಳು ಬಂದಾಗ ನಮ್ಮ ಗಮನಕ್ಕೆ ತಂದು ಮಾಡಬೇಕೆಂದು ಮಾನ್ಯ ಜಿಲ್ಲಾ ಮಂತ್ರಿಗಳು ಹೇಳಿದಾಗ ನಾನು ಆ ಸಂದರ್ಭದಲ್ಲಿದ್ದೆ. ಜಿಲ್ಲಾ ಮಂತ್ರಿಗಳು ಅವರಿಗೆ ಹೇಳಿದರು. ಏನಾದರೂ ಮಾಡುವುದಕ್ಕೆ ಮುಂಚೆ, ರಾತ್ರಿ 12 ಗಂಟೆಗೆ ಮೆಮೋ ಹಾಕಿ ಗೊಂದಲ ಮಾಡುವುದು ಬೇಡ ನಮ್ಮ ಗಮನಕ್ಕೂ ತನ್ನಿ ಏನು ಆಗಬೇಕೆಂದು ಹೇಳಿ ಸರ್ಕಾರದ ವತಿಯಿಂದ ನಾವೆಲ್ಲರೂ ಸೇರಿ ಮಾಡೋಣವೆಂದರೆ, ಇವತ್ತು ಪೇಪರ್‌ನಲ್ಲಿ ಏನು ಇದೆ ಎಂದರೆ, ಬೇಸತ್ತು ರಜೆ ಕೇಳಿದ್ದಾರೆಂದು ಇದೆ. ನನಗನಿಸುತ್ತದೆ, ಕೆಲಸ ಮಾಡುವುದಕ್ಕೆ ಹೋಗದೆ ಹರ್ಷಗುಪ್ತರವರು ಹೋಗಿರುವುದು, ಬೇಸತ್ತು ಹೊಗಿರುವುದು ಅಲ್ಲ. ಒಬ್ಬ ಅಧಿಕಾರಿ ಏನು ಮಾಡಬೇಕು ಅದನ್ನು ಮಾಡದೆ ಜನರಿಗೆ..

ಅಧ್ಯಕ್ಷರು: ಅದು ಬೇಡ ಕಾರ್ಮಿಕರ ವಿಚಾರ ಹೇಳಿ. ಅವರು ಏನು ಹೇಳಿದ್ದಾರೆ, ಅದನ್ನು ಮಂತ್ರಿಗಳು ತರಿಸಿಕೊಳ್ಳಿ.

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ್ ನಾಯಕ್: ಕಾರ್ಮಿಕರ ಬಗ್ಗೆ ಅವರು ಶೂನ್ಯವೇಳೆಯಲ್ಲಿ ಏನು ಗಮನವನ್ನು ಸೆಳೆದಿದ್ದಾರೆ ನಾನು ಅದಕ್ಕೆ ಸೂಚನೆಯನ್ನು ಕೊಡುತ್ತೇನೆ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

: ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು:

ವಿಷಯ: ಬೆಳೆ ಹಾನಿಯ ಬಗ್ಗೆ ಪರಿಹಾರ ಕೊಡುವುದು.

----

ಶ್ರೀ ಎಂ.ರಾಜಣ್ಣ(ಶಿಡ್ಲಘಟ್ಟ): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಸತತವಾಗಿ 15 ದಿವಸಗಳ ಮಳೆಯಿಂದ ಎಷ್ಟು ಎಕರೆ ಬೆಳೆ ಹಾನಿಯಾಗಿದೆ ಎಂದು ಕೇಳಿದ್ದೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಮೂರು ದಿವಸಗಳಿಂದ ಪ್ರತಿಯೊಂದು ಪಂಚಾಯತಿಗಳಿಗೆ ಭೇಟಿ ಕೊಟ್ಟಾಗ 15000 ಹೆಕ್ಟೇರ್ ಏನು ಬೆಳೆ ಬೆಳೆದು ನಿಂತಿತ್ತು ಅದು ಸಂಪೂರ್ಣವಾಗಿ ನಾಶವಾಗಿ ಇವತ್ತು ಬಹಳಷ್ಟು ರೈತರು ಕಂಗಾಲಾಗಿದ್ದಾರೆ. ಇವತ್ತು ರಾಗಿ, ಜೋಳ, ಟೋಮೆಟೋ ಎಲ್ಲಾ ಸಂಪೂರ್ಣ ಹಾಳಾಗಿ ಹೋಗಿದೆ.

ಅಧ್ಯಕ್ಷರು: Statement ನಲ್ಲಿ ಏನು ಕೊಟ್ಟಿದ್ದಾರೆ. ಪರಿಹಾರ ಕೊಟ್ಟಿದ್ದಾರೋ ಇಲ್ಲವೋ?

ಶ್ರೀ ಎಂ.ರಾಜಣ್ಣ: ಅದು ಎಲ್ಲಾ ಹೋಗಿದೆ ಎಂದು, ಪರಿಹಾರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಸರಿ, ಮತ್ತೆ ಈಗ ಏನು?

ಶ್ರೀ ಎಂ.ರಾಜಣ್ಣ: ಶಿಡ್ಲಘಟ್ಟ ಕ್ಷೇತ್ರಕ್ಕೆ ಒಂದು ವಿಶೇಷ ಪ್ಯಾಕೇಜ್ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು): ಅಧ್ಯಕ್ಷರೆ, ತಮಗೂ ಗೊತ್ತಿದೆ, ನಾವು ಯಾವುದು ವಿಶೇಷ ಪ್ಯಾಕೇಜ್ ಎಲ್ಲಿಂದ ಕೊಡೋಣ, ಯಾವುದು ಇಲ್ಲ.

ಅಧ್ಯಕ್ಷರು: ಯಾವುದು ಪ್ಯಾಕೇಜ್ ಇಲ್ಲ. ಆಯಿತು. ಮಾನ್ಯ ಬಣಕಾರವರು ಕೇಳಿ.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

: ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು :

ವಿಷಯ: ಚಿರತೆಯನ್ನು ಹಿಡಿಯುವ ಬಗ್ಗೆ:

-----

ಶ್ರೀ ಯು.ಬಿ.ಬಣಕಾರ್( ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರಿಗೆ ಮತ್ತು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಎರಡು ಬೋನ್‌ಗಳನ್ನು ಇಟ್ಟಿದ್ದಾರೆ, ಒಂದು ಚಿರತೆ ನಿನ್ನೆ ಸಿಕ್ಕಿದೆ. ಅವರು ತಮ್ಮ ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು: ಆಯಿತು. ಮಾನ್ಯ ಸಿ.ಟಿ.ರವಿಯವರು, ಇಲ್ಲ. ಶೂನ್ಯವೇಳೆ ಇಲ್ಲಿಗೆ ಮುಕ್ತಾಯವಾಯಿತು. ಈಗ ಸದನವನ್ನು ಮುಂದೂಡಿ ನಾಳೆ ಪುನ: 11.00 ಗಂಟೆಗೆ ಸೇರುವುದು.

( ಸದನವು 7 ಗಂಟೆ 54 ನಿಮಿಷಕ್ಕೆ ಮುಕ್ತಾಯವಾಗಿ ದಿನಾಂಕ: 26-11-2015 ರಂದು ಬೆಳಗ್ಗೆ ಪುನ: 11.00 ಗಂಟೆಗೆ ಸಮಾವೇಶಗೊಳ್ಳುವುದು.)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.